ವಿಶೇಷಾಂಕ

ಪ್ರಭಾತ



PRABHATH KANNADA WEEKLY, MANGALORE.



1939

Regd. No. M. 3247.

ಈ ಸಂಚಿಕೆಯ ಬೆಲೆ ಎಂಟಾಣೆ.

ANNUAL

Memory of the Great Guru



Srimath Bhuvanendra Thirtha
IS CHERISHED BY THOUSANDS OF DEVOTEES—BECAUSE, HE TAUGHT THE ART OF HEALING ALONG WITH PHILOSOHPY!

BHUVANENDRA PRODUCTS LIMITED

The leading Ayurvedic concern of the district is just perpetuating the memory of the Great Guru by supplying all kinds of Ayurvedic Medicines, prepared scientifically and packed in up-to-date style.

Just write & get a Catologue:—

Read it and you find that you need something from it!

Bhuvanendra Products, Ltd.,
KATAPADY, S. K.
BRANCH:—KUMTA (N. K.)

ಶ್ರೀಮತ್ ಭುವನೇಂದ್ರ ತೀರ್ಥರು ಪಾರಮಾರ್ಥಿಕ ವಿಚಾರಗಳೊಡನೆ
— ಅಮೂಲ್ಯ ಚಿಕಿತ್ಸಾ ಸೇವೆಯನ್ನೂ ಕಲಿಸಿದರು —
ಆ ಮಹಾ ಗುರುವನ್ನು ಸಾವಿರಾರು ಶಿಷ್ಯರು ಇಂದೂ ಸ್ಮರಿಸುತ್ತಿರುವರು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

(ಬ್ರಾಂಚ್:—ಕುಮಟಾ, ಉತ್ತರ ಕನ್ನಡ ಜಿಲ್ಲೆ.)

ಇವರು ಸದ್ಗುರುವಿನ ಸ್ಮರಣೆಯು ಚಿರಸ್ಥಾಯಿಯೆನಿಸುವಂತೆ, ಅವರ ವರಪ್ರಸಾದದ ಬಲದಿಂದ, ಆಯುರ್ವೇದಿಕ್ ಸಂಸ್ಥೆಯನ್ನು ನಡೆಸುತ್ತಿರುವರು. ಇದು ಜಿಲ್ಲೆಯ ಪ್ರಾಮುಖ್ಯ ಆಯುರ್ವೇದಿಕ್ ಸಂಸ್ಥೆ!

ಶಾಸ್ತ್ರೋಕ್ತವಾದ ಆಯುರ್ವೇದಿಕ್ ಔಷಧಗಳು, ತೈಲಗಳು, ಘೃತಗಳು, ಆಸವ-ಅರಿಷ್ಟಗಳು, ಲೇಹ್ಯಗಳು—ಎಲ್ಲವೂ ಈ ಸಂಸ್ಥೆಯಲ್ಲಿ ನಿಮಗೆ ಬೇಕಾದಂತೆ ದೊರೆವುವು.

ಕೆಟಲಾಗಿಗೆ ಬರೆಯಿರಿ:— ನಿಮಗೆ ಬೇಕಾದುದನ್ನು ತರಿಸಿಕೊಳ್ಳಿ



ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು?

ಉಪಾಧ್ಯಾಯರೇ? ವರ್ತಕರೇ? ಆರಂಭಗಾರರೇ? ಅಥವಾ ಚದುರಂಗ ಆಡುವವರೇ?

ನೀವು ಯಾರಾದರೂ ಸರಿ

ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ,

ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ.

ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸ್ ನಂಬ್ರ ೫೧೦,

ಪಾರ್ಕ್ ಟೌನ್, ಮದರಾಸು.

S. N. Mariappah,
Managing Director.

ಕೈ ಮಗ್ಗಗಳಲ್ಲಿ ತಯಾರಾದ ಅತ್ಯುತ್ತಮ ಸೀರೆಗಳು.

ಹೊಸ ಹೊಸ ಅಂಚುಗಳು! **ಗಟ್ಟಿ ರಂಗು!**



ಜಿಲ್ಲೆಯಲ್ಲೆಲ್ಲಾ ಸಾವಿರಾರು ಮನೆಗಳಲ್ಲಿ ನಿತ್ಯೋಪಯೋಗದಲ್ಲಿವೆ.

ಬಾಳಿಕೆ—ಬಣ್ಣ ಅಂದಗಳಿಗೆ ಹೆಸರಾಗಿವೆ.

ಮಂಗಳೂರಿನ ಮತ್ತು ಇತರ ಮುಖ್ಯ ಜವುಳಿ ವ್ಯಾಪಾರಸ್ಥರಲ್ಲಿ ದೊರೆಯುವುದು.

ತಯಾರಿಸುವವರು:

ಪಿ. ಎ. ಪೈ ಬ್ರದರ್ಸ್, ಉಡುಪಿ, ದ. ಕನ್ನಡ.

NAGARKARS BANK, LTD., MANGALORE.

THE RATES OF INTEREST ON DEPOSITS FROM 1—1—1939 ARE AS FOLLOWS:

FIXED DEPOSITS:

3 months	3 % p. a.
6 or 9 months	3½% p. a.
12 or 24 months	4½% p. a.

(Interest payable every quarter.)

SAVINGS BANK DEPOSITS AT 3⅛% p. a.

CURRENT ACCONT DEPOSITS:

2% p. a. from 1st January to 30th June, and
1% p. a. from 1st July to 31st December.

Drafts on Bombay and other places issued and Cheques collected on VERY LIBERAL TERMS.

All sorts of Banking business transacted and every facility given to constituents.

Particulars on application.

Mangalore,
20—1—1939.

Nagar Keshava Shenoi, B. A.
Secretary.



ಶ್ರೀ ಗೋಕರ್ಣ ಮಠಾಧೀಶ ಶ್ರೀಮತ್ ಇಂದಿರಾಕಾಂತ ತೀರ್ಥರೂ ಅವರ ಶಿಷ್ಯರಾದ ಶ್ರೀಮತ್ ಕಮಲಾನಾಥರವರೂ.

ಪ್ರಭಾತ ವಾರಪತ್ರಿಕೆ
ವಾರ್ಷಿಕ ಚಂದಾ ರೂ. 1-8-0
ಅಂಚೆ ವೆಚ್ಚ ಸೇರಿ ರೂ. 2-5-0
ಬಿಡಿ ಸಂಚಿಕೆ ಅರ್ಧಾಣೆ.


ಪ್ರಭಾತ

ಪ್ರಭಾತ ದೈನಂದಿನ ಪತ್ರಿಕೆ.
ವಾರ್ಷಿಕ ಚಂದಾ ರೂ. 5-0-0
ಅಂಚೆ ವೆಚ್ಚ ಸಹಿತ ರೂ. 9-0-0
ಬಿಡಿ ಸಂಚಿಕೆ ಕಾಲಾಣೆ.

PRABHATH ANNUAL 1939 ಪ್ರಭಾತ ವಿಶೇಷಾಂಕ

ಕರ್ಣಾಟಕ ಏಕೀಕರಣ.

ಇನ್ನೂ ಕೈಗೂಡದಿರುವ ಕಾರಣಗಳೇನು?



ಲೇಖಕರು: ಶ್ರೀ ಶಂ. ಭಾ. ಜೋಶಿ, ಧಾರವಾಡ

ಏಕೀಕರಣ ವಿಷಯದಲ್ಲಿ ಚಿಂತಾಮಗ್ನರಾಗಿರುವರೇ?

ಬಂಗಾಲವು ಭಗ್ನವಾದುದು ೧೯೦೫ರಲ್ಲಿ; ಕೂಡಲೆ ಉಗ್ರ ಆಂದೋಲನವು ಆರಂಭವಾಯಿತು. ಬಂಗಾಲಿಗಳೆಲ್ಲರೂ ಮನೆಗೆ ಬೆಂಕಿ ಬಿದ್ದಂತೆ ಆಕ್ರೋಶವನ್ನಾರಂಭಿಸಿದರು. ಲಾರ್ಡ ಮೋರ್ಲೆ ಸಾಹೇಬರು, ಬಂಗಾಲವನ್ನೆಂದಿಗೂ ಕೂಡಿಸಲಿಕ್ಕಾಗುವುದಿಲ್ಲವೆಂದೂ, ತಮ್ಮ ಈ ಕೃತಿಯು ವಜ್ರಲೇಪವೆಂದೂ ಸಾರಿದರು. ಆದರೆ ಬಂಗಾಲದ ತರುಣರು ಬ್ರಿಟಿಷ ಸರಕಾರಕ್ಕೆ ಸ್ವಸ್ಥವಾಗಿ ಇರಗೊಡಲಿಲ್ಲ. ಬ್ರಿಟಿಷ ಸಿಂಹದ ಮೀಸೆ ಕಿತ್ತುವ ಸಾಹಸಕ್ಕೂ ಬಂಗಾಲಿಗಳು ಹಿಂಜರಿಯಲಿಲ್ಲ. ಕೊನೆಗೆ ಲಾರ್ಡ ಹಾರ್ಡಿಂಜರ ಕಾಲಕ್ಕೆ ೧೯೧೧ರಲ್ಲಿ ಭಗ್ನ ಬಂಗಾಲವು ಸಂಲಗ್ನವಾಯಿತು! ಬರಿ ಏಳು ವರುಷಗಳ ಹೋರಾಟದಲ್ಲಿ ಬಂಗಾಲಿಗಳು ತಮ್ಮ ಏಕೀಕರಣವನ್ನು ಸಾಧಿಸಿಕೊಂಡರು

ಆದರೆ ಅವರು ಮಾಡಿದ ಸ್ವಾರ್ಥತ್ಯಾಗಕ್ಕೆ ಎಣಿಕೆಯಿಲ್ಲ! ಅರ್ಪಿಸಿದ ಬಲಿದಾನಕ್ಕೆ ಸರಿದೊರೆಯಿಲ್ಲ! ರಾಜಕಾರಣದೊಳಗಿನ ಭೇದಾಭೇದಗಳು ಅವರ ಏಕೀಕರಣಕ್ಕೆ ಅಡ್ಡಬರಲಿಲ್ಲ. ಮಂದ ಪಕ್ಷ, ಉಗ್ರಪಕ್ಷದವರೆಲ್ಲ ಸೇರಿ ಒಕ್ಕೊರಲಿನಿಂದ 'ಭಗ್ನ ಬಂಗಾಲವು ಸಂಲಗ್ನವಾಗಲೇ ಬೇಕು' ಎಂದು ಆರ್ಭಟಿಯ ವೀರಗರ್ಜನೆಯನ್ನು ಮಾಡಿದರು. ಮಾತನಾಡಿದಂತೆ ಮಾಡಿ ತೋರುವುದಕ್ಕಾಗಿ ಮನೆಮಾರುಗಳನ್ನೂ ಹಲವರು ತೊರೆದರು.

ಉರಿಯಾದವರು ತಮ್ಮ ಪ್ರಾಂತೀಕರಣದ ಚಳವಳಿಯನ್ನು ಆರಂಭಿಸಿದ ಸುಮಾರಿಗೇ (ಮುಂದೆ ಬೇಗನೆ) ಕರ್ಣಾಟಕ ಏಕೀಕರಣ ಚಳವಳಿಗೂ ಆರಂಭವಾಯಿತು. ಉರಿಯಾದವರ ಕನಸು ನನಸಾಯಿತು. ಕರ್ಣಾಟರು ಇನ್ನೂ ಕನವರಿಸುತ್ತಲೆ ಇದ್ದಾರೆ! ಉರಿಯದವರಲ್ಲಿದ್ದ ರಾಜಕಾರಣ ಕೌಶಲ್ಯವೆ ಅವರ ಈ ಫಲಸಿದ್ಧಿಗೆ ಕಾರಣ. ಅಲ್ಲಿಯ ಏಕೀಕರಣವಾದಿಗಳು ಸೈಮನ್ ಕಮೀಶನ್ನಿಗೆ ಬಹಿಷ್ಕರಿಸಲಿಲ್ಲ. ಅಥವಾ ಅಲ್ಲಿಯ ರಾಷ್ಟ್ರೀಯ ಪಕ್ಷದ ಧುರೀಣರು ತಾವು ಅಸಹಕಾರದಲ್ಲಿ ಧುಮುಕಿದರೂ ಏಕೀಕರಣವಾದಿಗಳಿಗೆ ಅವರು ಸೈಮನ್ ಕಮೀಶನಿನ ಎದುರು ತಮ್ಮ ಪಕ್ಷವನ್ನು ಮಂಡಿಸುವುದಕ್ಕಾಗಿ ಹೋಗುವಾಗ ಅವರ ಕಾಲು ಹಿಡಿದು ಹಿಂದೆ ಎಳೆಯಲಿಲ್ಲ. ಇತ್ತ ರಾಷ್ಟ್ರೀಯ ಆಂದೋಲನವೂ ನಡೆದಿತ್ತು, ಅತ್ತ ಉರಿಯಾದ ಪ್ರಾಂತೀಕರಣಕ್ಕಾಗಿ ಬ್ರಿಟಿಷ ಸರಕಾರದ ಮೇಲಧಿಕಾರಿಗಳ ಮನವೊಲಿಸುವುದೂ ಸಾಗಿತ್ತು. ಇವೆರಡೂ ಕೆಲಸಗಳನ್ನು ನಡೆಯಿಸಿದವರು (ಅಥವಾ ಮುಖ್ಯವಾಗಿ ಅಲ್ಲಿಯ ರಾಷ್ಟ್ರೀಯ ಮುಖಂಡರು ರಾಜನಿಷ್ಟ ಪಕ್ಷದ ಪ್ರಾಂತೀಕರಣವಾದಿಗಳಿಗೆ) ರಾಷ್ಟ್ರದ್ರೋಹಿಗಳೆಂದು ತುಚ್ಛೀಕರಿಸುವ ಆತ್ಮಘಾತಕ ಕಾರ್ಯವನ್ನು ಮಾಡಲಿಲ್ಲ. ದೇಶಭಕ್ತ ಬಿ. ದಾಸರಂತಹ ರಾಷ್ಟ್ರೀಯ ವೀರರು, ತಾವು ಅಸಹಕಾರದಲ್ಲಿ ಹೋರಾಡುವಾಗಲೇ ಅತ್ತ ಸರಕಾರ ದರ್ಬಾರುಗಳಲ್ಲಿ ಪ್ರಾಂತೀಕರಣಕ್ಕಾಗಿ ಕೆಲಸ ನಡೆಯಿಸಿದವರಿಗೂ ತಮ್ಮ ಆಂತರಿಕ ಸಹಾನುಭೂತಿಯನ್ನು ತೋರಿಸುತ್ತಿದ್ದರೆಂದು ನಾನು ಕೇಳಿದ್ದೇನೆ.

ಆ ಕೇಳಿಕೆಯ ಮಾತಾದರೂ ಏತಕ್ಕೆ? ಈಗ ಆಂಧ್ರರ ಅಂದೋಲನದಲ್ಲಿ ದೇಶಭಕ್ತ ಪಟ್ಟಾಭಿ ಸೀತಾರಾಮಯ್ಯರವರಂತಹ ತತ್ವನಿಷ್ಟ ಅಸಹಕಾರಿಗಳೆಂದು ಹೆಸರಾದ ವೀರರು ನಡೆಯಿಸಿರುವುದೇನು? ಭಾರತಮಂತ್ರಿಗಳಲ್ಲಿ ತಮಗೆ ಶಿಷ್ಟಮಂಡಲವನ್ನು ಒಯ್ಯುವುದಕ್ಕೆ ಆಗುವುದಿಲ್ಲ. ಆದುದರಿಂದ ಅವರು ಇನ್ನುಳಿದ ರಾಜನಿಷ್ಟ ಪಂಗಡದವರನ್ನು ಮೆಲ್ಲಗೆ ಈ ಕೆಲಸಕ್ಕಾಗಿ ಮುಂದೂಡುವ ಎತ್ತುಗಡೆ ನಡೆಯಿಸಿರಲಿಲ್ಲವೆ? ಶ್ರೀ. ಪಟ್ಟಾಭಿಯವರು ಶ್ರೀ. ರಾಜಗೋಪಾಲಾಚಾರ್ಯರಿಗೆ ತಡೆಗಟ್ಟಿ ನಿಂತುಕೊಳ್ಳದಿದ್ದರೆ ಮದರಾಸ ಸರಕಾರವು ಹೀಗೆ ಬಾಗಿ ಆಂಧ್ರದ ಪ್ರಾಂತೀಕರಣಕ್ಕೆ ಅನುಕೂಲವಾಗುತ್ತಲೆ ಇರಲಿಲ್ಲ.

ಆದರೆ ಕರ್ಣಾಟಕದಲ್ಲೇನು? ಎಲ್ಲವೂ ವಿಪರೀತ! ಕಂಡುದನ್ನಾಡಿದರೆ ಕೆಂಡದಂತಹ ಸಿಟ್ಟು! ಕರ್ಣಾಟದ ಏಕೀಕರಣದ ಚಳವಳಿಗೆ ಆರಂಭವಾಗಿ ಈಗ ೨೦ ವರುಷಗಳು ಸಂದು ಹೋದುವು! ಬಂಗಾಲಿಗಳ ಇಮ್ಮಡಿ ಕಾಲಾವಧಿ ಹಿಡಿದರೂ 'ಏಕೀಕರಣವು ವ್ಯವಹಾರ್ಯವೆ?' ಎಂಬ ಸಂದೇಹ ರಾಕ್ಷಸನು ನಮ್ಮ ನಾಡಿಗರ ಹಿಡಿದ ತಲೆಯನ್ನು ಇನ್ನೂ ಬಿಡಲೇ ಒಲ್ಲ! ಈ ಒಬ್ಬ ರಕ್ಕಸನನ್ನು ಹೊರದೂಡುವ ಕೆಲಸವು ಇನ್ನೂ ಆಗಿಲ್ಲ! ಬ್ರಿಟಿಷರ ಮನವರಿಕೆ ಮಾಡಿಕೊಡುವ ಕೆಲಸವು ಇನ್ನೂ ಎಲ್ಲೋ ಹಾಗೆ ಬಿದ್ದುಕೊಂಡಿದೆ!

'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ' ಎಂಬುದೊಂದು ಗಾದೆ ನಮ್ಮಲ್ಲಿದೆ. ನಮ್ಮ ಮುಂದಾಳುಗಳಲ್ಲಿ ೪-೬ ಜನಗಳನ್ನು ಬಿಟ್ಟರೆ ಹಿರಿಯರೆಂಬುವವರಿಗೆ ಈಗ ಏಕೀಕರಣವು ಬೇಡವಾಗಿಲ್ಲವಾದರೂ ಈಗ ಆಗಲೇ ಬೇಕೆಂಬ ಹಟವು ಮೂರ್ಖತನದ್ದೆಂದು ಎನಿಸುತ್ತಿದೆ. ಹಿಂದಕ್ಕೆ ವಿರೋಧವೇ ಇದ್ದಿತು. ಆದರೆ ಈಗ ವಿರೋಧಿಸಿದರೆ ತಮ್ಮ ಮುಂದಾಳುತನವೇ ಹೋದೀತೆಂಬ ಹೆದರಿಕೆಯುಂಟಾಗುವಂತಹ ಪರಿಸ್ಥಿತಿಯಿದ್ದುದರಿಂದ ಆಡುವ ಮಾತಿನಲ್ಲಿ ಮೇಲ್ಕಾಣಿಸಿದಂತೆ ಮಾರ್ಪಾಟಾಗಿದೆ.


ಬರಿ ಮುಖಂಡರ ಮೇಲೆಯೆ ತಪ್ಪು ಹೊರೆಯಿಸುವುದರಲ್ಲಿ ಹುರುಳಿಲ್ಲ. ಎಂತಹ ಜನಗಳೊ ಅಂತಹ ಮುಂದಾಳುಗಳು, ಬೇಡಿಕೆ ಇದ್ದಂತಹ ಸರಕು ಪೇಟೆಯಲ್ಲಿ ಬರುತ್ತಿರುತ್ತದೆ. ಇವೆಲ್ಲ ಸಂಗತಿಗಳನ್ನು ವಿಸ್ತಾರವಾಗಿ ವಿವೇಚಿಸುತ್ತ ಹೋದರೆ ಹನುಮನ ಬಾಲ ಸುಮ್ಮನೆ ಬೆಳೆದೀತು. ಕೆಲವು ಮುಖ್ಯ ಸಂಗತಿಗಳನ್ನು ಸೂಚಿಸುವುದೇ ಲೇಸು.

೧. ಏಕೀಕರಣವು ಇನ್ನೂ 'ಪಕ್ಷಾತೀತ' ಪ್ರಶ್ನೆಯಾಗಿಲ್ಲ. ಆರಂಭದಲ್ಲಿ ಇದು ಕೇವಲ ಕೆಲವೊಂದು ವ್ಯಕ್ತಿಗಳ ಕೂಗು ಎಂದು ಹೀಯಾಳಿಸಲ್ಪಡುತ್ತಿತ್ತು. ಇದು ಆಲೂರ ಕಡಪಾಗಳ ಹುಚ್ಚು ಎಂದು ತಿಳಿಯಲ್ಪಟ್ಟಿತ್ತು. ಅಲ್ಲದೆ ಕನ್ನಡ ಅಭಿಮಾನ, ಏಕೀಕರಣದ ಬಗ್ಗೆ ಮಾತುಗಳೆಂದರೆ ರಾಷ್ಟ್ರೀಯ ಚಳವಳಿಗೆ ಅಡ್ಡ ಬರುವ ಸಂಗತಿಗಳೆಂದು ನಿಂದಿಸಿದ ಪುಣ್ಯಾತ್ಮರುಂಟು.

'ಕ್ಷನ' ಬಾಯಿಂದ ಬಂದ ಮಾತನ್ನು ವಿರೋಧಿಸುವುದಕ್ಕೆ ಪಣ ತೊಟ್ಟಯನು, ಕ್ಷನು ಏಕೀಕರಣವು ಬೇಕೆನ್ನುತ್ತಲೆ ಅದು ಬೇಡವೆಂದು ಕೂಗುವುದು ಯನ ಕರ್ತವೇ ಆಗುತ್ತದೆ!

ಕೆಲವು ವರ್ಷಗಳ ಹಿಂದೆ ವ್ಯಕ್ತಿಯ ಪ್ರಶ್ನೆಯಾಗಿದ್ದ ಏಕೀಕರಣವು ಈಗ ಕೆಲವೊಂದು ಪಕ್ಷದ ಪ್ರಶ್ನೆಯಾಗುವ ಹಾದಿಯಲ್ಲಿದೆ. ಆದರೂ ಪಕ್ಷಾಂಧತೆಯ ನಂಜಿನ ದುಷ್ಪರಿಣಾಮಗಳು ಏಕೀಕರಣದ ಸಮಸ್ಯೆಗೆ ಅನುಭವಿಸುವುದು ತಪ್ಪಿಲ್ಲ. ಬ್ರಾಹ್ಮಣೇತರರು ಏಕೀಕರಣ ಬೇಕೆಂದರೆ ಬ್ರಾಹ್ಮಣರು ಬೇಡವೆನ್ನುವರು.! ಬ್ರಾಹ್ಮಣರಿಗೆ ಅದು ಅವಶ್ಯವೆನಿಸಿದಾಗ ಬ್ರಾಹ್ಮಣೇತರರಿಗೆ ಬೇಡ! ಕಾಂಗ್ರೆಸಿಗೆ ಬೇಕಾದಾಗ ಕಾಂಗ್ರೆಸಿನಿಂದ ಬಹಿಷ್ಕೃತರಿಗೆ ಬೇಡ! ಬಹಿಷ್ಕೃತರಿಗೆ ಬೇಕಾದಾಗ ಕಾಂಗ್ರೆಸೂಗಳಿಗೆ ಬೇಡ! ಅಂತೂ ಏಕೀಕರಣದ ದುರ್ದೈವ ತಪ್ಪಿಲ್ಲ!

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಸಮಸ್ಯೆ ಬಂದಾಗ ಅವರಲ್ಲಿ ಒಳಭೇದಗಳೇ ಉಳಿಯುವುದಿಲ್ಲ. ಆದರೆ ನಮ್ಮ ದನ*ಗಳಿಗೆ ಬ್ರಿಟಿಷರ ಆ ದೂರದೃಷ್ಟಿ ಎಲ್ಲಿ? ನಮ್ಮಲ್ಲಿರುವುದು ದುರದೃಷ್ಟವೊಂದೆ!



೨. ನಮ್ಮ ದುರದೃಷ್ಟದ ಮುಖ್ಯ ಕಾರಣವೆಂದರೆ ನಮ್ಮ ಅಲ್ಪದೃಷ್ಟಿ. ನಮ್ಮ 'ಜಾತಿ'ಯ ಹೊರಗೆ ನಮ್ಮ ವಿಚಾರಗಳೇ ಹರಿಯುವುದಿಲ್ಲ. ಇನ್ನೂ ಕೆಲವು ಜಾತಿಗಳು ಬಹಳ ಉದಾರದೃಷ್ಟಿಯುಳ್ಳವುಗಳಾಗಿರುವುದರಿಂದ ಅದೂ ಒಂದು ತೊಂದರೆಯೇ ಆಗಿದೆ! ತಮ್ಮ ಜಾತಿಯ ವಿಚಾರ ಮೊದಲು; ಅದು ಮುಗಿದೊಡನೆ ಒಮ್ಮೆಲೆ ಭರತಖಂಡ ಕೆಲವರಿಗೆ; ಇನ್ನು ಕೆಲವರು ಒಮ್ಮೆಲೆ ಮಾನವ ಕೋಟಿಯ ಕಲ್ಯಾಣಕ್ಕೆ ಹಾರಿಬಿಡುವರು ಇವರಿಗೆ ತಮ್ಮ ಜಾತಿ ಆದೊಡನೆ ನಡುವೆ ತಮ್ಮ ಪ್ರಾಂತವೆಂಬುದೊಂದು ಮೆಟ್ಟಲು ಇದ್ದ ಅರಿವು—ಇರುವುದೆಂಬ ಅರಿವು ಸ್ವಲ್ಪವೂ ಇದ್ದಂತೆ ತೋರುವುದಿಲ್ಲ.

೩. ಕರ್ಣಾಟಕದಲ್ಲಿ ತಲೆತಲಾಂತರಗಳಿಂದ ನೆಲಸಿಕೊಂಡಿದ್ದೂ ಕನ್ನಡ ಗಂಧವೂ ಸೋಂಕದಂತೆ 'ನಿರ್ಲಿಪ್ತ'ರಾಗುವುದರಲ್ಲೆ ಹೆಮ್ಮೆಬಡುವ, ಉಂಡ ಮನೆಗೆ ಎರಡು ಬಗೆವ ಉಪಕಾರಿಗೇಡಿಗಳು ಇನ್ನೊಂದು ಕಾರಣ. ಕರ್ಣಾಟದಲ್ಲಿ ಹುಟ್ಟಿ ಬೆಳೆದು, ಇಲ್ಲಿಯೇ ಮನೆಮಾರುಗಳಿದ್ದು ಅವರ ನಾಳಿನ ಸಂತತಿಗೂ ಈ ನಾಡೇ ಮುಖ್ಯಾಧಾರವಾಗಿದ್ದು ತಾವು ಕನ್ನಡಿಗರೆಂದುಕೊಳ್ಳಲು ಸಂಕೋಚಪಡುವ 'ಮನುಷ್ಯರು'(?) ನಮ್ಮ ನಾಡಿನಲ್ಲಿದ್ದಾರೆ!

೪. ಭಾರತಸೇವೆಯ ತಿಳಿಗೇಡಿತನದ ಕಲ್ಪನೆ ನಾಲ್ಕನೆಯ ಕಾರಣವು. 'ಭಾರತ' ಎಂಬುದೊಂದು ಸ್ವತಂತ್ರ ವಸ್ತುವಿಲ್ಲ. ಎಲ್ಲ ಪ್ರಾಂತಗಳು ಸೇರಿ ಭಾರತವಾಗಿದೆ. ಆದುದರಿಂದ ಭಾರತದ ಏಳ್ಗೆಯೆಂಬುದು ಪ್ರಾಂತದ ಏಳ್ಗೆಯಿಂದ ಭಿನ್ನವಾಗಿಲ್ಲ. ಪ್ರತಿಯೊಂದು ಪ್ರಾಂತವು ಮುಂದೆ ಬಂದರೆ ಇಡಿ ಭಾರತದೇಶವು ಮುಂದೆ ಬಂದಂತಾಗುವುದು.

ಒಂದು ನಾಡು—ಏಳ್ಗೆಯನ್ನು ಹೊಂದಬೇಕಾದರೆ ಅಲ್ಲಿಯ ಜನಸಾಮಾನ್ಯರು ಸುಸಂಸ್ಕೃತರಾಗಬೇಕಾಗುತ್ತದೆ. ಜನಸಾಮಾನ್ಯರು ಸುಧಾರಿಸಬೇಕಾಗಿದ್ದರೆ ಆ ಪ್ರಾಂತದ ಭಾಷೆಯೇ ಅಲ್ಲಿಯ ಪ್ರಧಾನ ಭಾಷೆಯಾಗಬೇಕಾಗುತ್ತದೆ. ಒಂದು ಪ್ರಾಂತದ ಪ್ರಾಣವಾಯುವೆಂದರೆ ಅಲ್ಲಿಯ ಭಾಷೆ. ಆ ಭಾಷೆಯ ಮುಖಾಂತರ ಅಲ್ಲಿಯ ಜನಸಾಮಾನ್ಯರನ್ನು ಮುಂದಕ್ಕೆ ತರಲು ಹವಣಿಸುವುದೇ ನಿಜವಾದ ಭಾರತಸೇವೆ. ಜನಸಾಮಾನ್ಯರಿಗೆ ಮೊದಲು ಅವರ ಭಾಷೆಯ ಅರಿವೇ ಇಲ್ಲದಿರುವಾಗ ಹಿಂದೀ ಮೊದಲಾದ ಭಾಷೆಗಳ ಹೊರೆಯನ್ನು ಅವರ ಮೇಲೆ ಹೊರಿಸುವುದೆಂದರೆ 'ನೀರಿಳಿಯದ ಗಂಟಲೊಳಗೆ ಕಡಬು ತುರುಕಿದಂತೆಯೇ' ಸರಿ.

ದೇಶದ ಸ್ವಾತಂತ್ರ್ಯಕ್ಕಾಗಿ ಬೇಕಾದ ಸ್ವಾರ್ಥಕ್ಕೆ ಸಿದ್ಧರಾದ ಅಥವಾ ಸಿದ್ಧರಾಗಬೇಕೆನ್ನುವ ಧೀಮಂತರು ತಮ್ಮ ಪ್ರಾಂತದ ಜನಸಾಮಾನ್ಯರನ್ನು ಸುಸಂಸ್ಕೃತರನ್ನಾಗಿ ಮಾಡುವುದಕ್ಕಾಗಿ ಆ ಜನಗಳ ಭಾಷೆಯನ್ನು ಸ್ವೀಕರಿಸಲಿಕ್ಕೆ ಹಿಂಜರಿಯುತ್ತಿರುವ ದೃಶ್ಯವನ್ನು ನಾನು ಹಲವೆಡೆಗಳಲ್ಲಿ ಕಣ್ಣಾರೆ ಕಂಡಿದ್ದೇನೆ! ಈ ಜನಗಳಿಗೆ ನಿಜವಾದ ಸ್ವಾತಂತ್ರ್ಯ, ಸಂಸ್ಕೃತಿಗಳ ಕಲ್ಪನೆಯಿಲ್ಲದುದರ ಪರಿಣಾಮವಿದು. ಗುಂಜಿ ಬಂಗಾರಕ್ಕೆ ಬಡಿದಾಡುವವ ತೊಲೆಯ ಲೆಕ್ಕವನ್ನು ಮರೆತು ನಡೆದಂತೆ ತಲೆಯಿಲ್ಲದ ವ್ಯವಹಾರ ಸಾಗಿದೆ. ಇದು ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವನ್ನು ಯಾರಿಗಾಗಿ ದೊರಕಿಸುವುದು? ಒಂದು ಪ್ರಾಂತವು ತನ್ನ ಸಂಸ್ಕೃತಿ, ತನ್ನ ಭಾಷೆ, ತನ್ನ ವೈಶಿಷ್ಟ್ಯ, ಸ್ವತ್ವ ಇದನ್ನೇ ಕಳೆದುಕೊಂಡ ಬಳಿಕ ಆ ಸ್ವಾತಂತ್ರ್ಯ ಯಾರಿಗೆ? ಫಿರ್ದೂಸಿಗೆ ಆತನ ಅರಸನು ಸಲ್ಲಿಸಿದ ಹೊನ್ನಿನ ಹಾಗೆಯೆ! ಒಂದು ಪ್ರಾಂತವು ಎಂದರೆ ಆ ಪ್ರಾಂತದ ಜನಸಾಮಾನ್ಯರು(ಮೇಲಣ ವರ್ಗದವರು ಹೇಗೂ ಎಲ್ಲಿಯೂ ಕೂಡಿಕೊಳ್ಳುವರು, ತಮ್ಮ ಹಿತ ಸಾಧಿಸಿಕೊಳ್ಳುವರು) ತಮ್ಮ ಸಂಸ್ಕೃತಿಗೆ ಎರವಾಗಿ ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿದರೆ ಆ ಪ್ರಮಾಣದಲ್ಲಿ ಅದು ಹಿಂದೂ ದೇಶದ ಹಾನಿಯೆ ಅಲ್ಲವೊ?

ಕರ್ಣಾಟಕರನ್ನು ಆರೇ, ಮಲಯಾಳ, ತೆಲುಗು, ತಮಿಳು ನಾಡುಗಳಿಗೆ ಹಂಚಿದೆವೆಂದು ಭಾವಿಸಿದರೆ ಈ ನಾಡಿನ ಆಯಾ ಭಾಗದ ಜನಸಾಮಾನ್ಯರ ಪಾಡೇನು? ಒಂದರಗಳಿಗೆ ಯೋಚಿಸಿದರೆ ಯಾವ ಸಹೃದಯನ ಎದೆಯೂ ತುಂಬಿ ಬಾರದೆ ಇರದು. ಮಾನವಕುಟುಂಬದ ಹಿತಕ್ಕಾಗಿ ಹಂಬಲಿಸುವ ಪುಣ್ಯಾತ್ಮನು ಮನೆಯಲ್ಲಿಯ ಮಕ್ಕಳು ಮರಿಗಳನ್ನೇ ಮರೆತು ಹೊರಟಂತೆ ಸ್ಥಿತಿಯಿದೆ!

ಆದುದರಿಂದ ಭಾರತಧ ಹಿತಕ್ಕೆ ಪೋಷಕವಾಗುವಂತಹ ಪ್ರಾಂತಿಕ ಚಳವಳಗಳನ್ನು ಮಾಡುವುದು, ಅದರ ಏಳ್ಗೆಗಾಗಿ ಹೆಣಗುವುದು ಇದುವೆ ನಿಜವಾದ ಹಿಂದೂದೇಶದ ಸೇವೆ—ರಾಷ್ಟ್ರಸೇವೆ ಎಂಬ ನಂಬುಗೆಯು ನಮ್ಮಲ್ಲಿ ಬೇರೂರದೆ ಏಕೀಕರಣವು ಕೈಗೂಡಲಾರದು.

*ಅಕ್ಷರ ಸಂಯೋಜಕನು 'ಜ' ಅಕ್ಷರಗಳು ತೀರಿದ್ದರಿಂದ 'ದ' ಹಾಕಿದ್ದಾನೆ. ಕ್ಷಮಿಸಿ. ಇಲ್ಲಿ 'ದ' 'ಜ' ಎಂದು ಓದಬೇಕಾಗಿ ಕೈಮುಗಿದು ಬೇಡುವೆ.

ಭಾರತ ನೃತ್ಯ

ಲೇಖಕರು: ಡಾ| ವಿ. ರಾಘವನ್

ನಮ್ಮ ಭಾರತವರ್ಷದ ನಾಟ್ಯಕಲೆಯೆಂದರೆ, ಅತಿ ಪುರಾತನವಾದುದು. ಮೊಹೆಂಜೊದಾರೊ, ಹರಪ ಮುಂತಾದೆಡೆಗಳಲ್ಲಿ ದೊರಕಿದ ಪುರಾತನ ಅವಶೇಷಗಳೊಂದರಲ್ಲಿ, ಸ್ತ್ರೀಯೊಬ್ಬಳು ತೀಳಲಯ ಬದ್ಧವಾಗಿ ನರ್ತಿಸುವುದು ಕೆತ್ತಲ್ಪಟ್ಟದೆ. ಪ್ರಾತಃಕಾಲವೆಂದರೆ, ಉಮಾದೇವಿಯ ನರ್ತನವೆಂದು ಋಗ್ವೇದದ ಹೇಳಿಕೆಯಿದೆ; ತದನಂತರದ ವೈದಿಕ ಸಾಹಿತ್ಯದಲ್ಲಿ, ನೃತ್ತ ಗೀತ ವದಿತ ಎಂಬ ಮೂದೆರವಾದ ನಾಟ್ಯಗಳ ನಿರ್ದೇಶವಿದೆ. ಸಂಸ್ಕೃತ ವ್ಯಾಕರಣಕಾರರಾದ ಪಾಣಿನಿ, ತನ್ನ ಸಂಸ್ಕೃತ ವ್ಯಾಕರಣವನ್ನು ಬರೆಯುವ ಸಮಯಕ್ಕೆ ನಾಟ್ಯಕಲೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಿತ್ತಂತೆ. ನಾಟ್ಯಲಕ್ಷಣ ಗ್ರಂಥವಾದ ಭರತನಾಟ್ಯ ಶಾಸ್ತ್ರವು ಅತಿ ಪುರಾತನವಾದುದೆಂಬುದು ಪ್ರಸಿದ್ಧವಷ್ಟೆ. ಆದರೆ ತತ್ಪೂರ್ವದಲ್ಲೂ, ನಾಟ್ಯಲಕ್ಷಣ ಗ್ರಂಥಗಳಿದ್ದುವು ಎಂಬುದು ಇದೀಗ ತಿಳಿದುಬಂದಿದೆ. ಅಭಿನವಗುಪ್ತನೇ ಮುಂತಾದ ವ್ಯಾಖ್ಯಾನಕಾರರ ಗ್ರಂಥಗಳೂ ಇದೀಗ ಬೆಳಕಿಗೆ ಬರುತ್ತಲೂ ಇವೆ.

ನಮ್ಮ ಕಲೆಯನ್ನು ಅಭ್ಯಾಸಿಸುವುವಕ್ಕೆ, ಅದರ ಪುನರುಜ್ಜೀವನಕ್ಕೆ, ಸಾಧಕಗಳು ಈ ಗ್ರಂಥಗಳು ಮಾತ್ರವೇ ಅಲ್ಲ. ಚಿದಂಬರ ದೇವಾಲಯುವನ್ನೊಮ್ಮೆ ಈಕ್ಷಿಸಿರಿ. ಲಕ್ಷಣ ಸಮನ್ವಿತವಾದ ನೃತ್ಯದ ವಿವಿಧ ಚಿತ್ರಗಳನ್ನು, ಅದರ ಗೋಪುರಗಳಲ್ಲಿ ಕಾಣಬಹುದು. ತಂಜಾವೂರಿನ ದೇವಾಲಯದಲ್ಲಿ, ಚೋಳರ ಈ ವಿಧದ ಕೆತ್ತನೆಯ ಚಿತ್ರಗಳು ಹಲವಿವೆ. ಆದರೆ ಈ ಎಲ್ಲ ಚಿತ್ರಗಳು, ಶಿಲ್ಪಗಳು, ಒಂದೊಂದು ಭಾವವನ್ನು ಮಾತ್ರವೇ ತೋರಿಸುವುದಲ್ಲದೆ ವಿವಿಧ ರಸಭಾವ ಪ್ರದರ್ಶನಗಳನ್ನಲ್ಲ. ನಾಟ್ಯವೆಂದರೆ, ಚಲನ ಪ್ರಕೃತಿಯಾದುದು. ವಿವಿಧ ಹಾವಗಳ ಭಾವಗಳ, ಭಂಗಿಗಳ ಪ್ರದರ್ಶನವೇ ನಾಟ್ಯದ ಜೀವಾಳ.

ನಮ್ಮ ನಾಟ್ಯದ ಅವಶೇಷವಾಗಿ ಉತ್ತರ ದೇಶವು ನಮಗೆ ಸಾಮಾನ್ಯವಾಗಿ ಏನನ್ನೂ ಕೊಡಲಾರದು. ನಮ್ಮ ದಕ್ಷಿಣ ಪ್ರದೇಶದಲ್ಲಿ ಕಂಡು ಬರುವವು ಉತ್ತರದಲ್ಲಿ ಕಾಣಲಸಾಧ್ಯ. ಮುಖ್ಯವಾಗಿ ಕೇರಳೀಯರಲ್ಲಿ ಪ್ರಚಲಿತವಾಗಿರುವ ನೃತ್ಯ ವಿಧಾನಗಳನ್ನಂತೂ, ಇಷ್ಟೇ ಎನ್ನಲು ಅಸಾಧ್ಯವೇ ಸರಿ. ಅವುಗಳಲ್ಲೂ ಕಥಕ್ಕಳಿಯು ಅತಿಪ್ರಾಮುಖ್ಯವಾದುದು. ಇವರ ಪುನರುಜ್ಜೀವನಕ್ಕೋಸ್ಕರ ಶ್ರೀ| ರುವನ್ನಿ ಮೆನನ್‌ರವರೂ, ಕವಿ ವಳ್ಳತ್ತೋಳ್‌ರವರೂ ತಮ್ಮ ಜೀವನವನ್ನೇ ಮೀಸಲಾಗಿಟ್ಟಿರುವುದು ಸಂತೋಷದ ಸಂಗತಿ. ಕಥಕ್ಕಳಿಯನ್ನು ಮೂಕನಾಟ್ಯವೆನ್ನಬಹುದು. ವಿವಿಧ ಅಂಗವಿನ್ಯಾಸಗಳಿಂದಲೂ, ಮೊಗದಲ್ಲಿ ತೋರುವ ಹಾವಭಾವಗಳಿಂದಲೂ ಪಾತ್ರಧಾರಿಗಳ ಸಂಭಾಷಣವು. ನೇಪಥ್ಯರುವವರು ಸಂಗೀತ ಮೂಲಕವಾಗಿ, ಸಂಭಾಷಣೆಯನ್ನು ಪ್ರೇಕ್ಷಕರಿಗೆ ತಿಳಿಸುತ್ತಾರೆ.



'ಮೋಹಿನಿ ಭಸ್ಮಾಸುರ' ಚಿತ್ರದಲ್ಲಿ ಶ್ರೀಮತಿ ಪುಷ್ಪವಲ್ಲಿ ಎಂಬ ನಟಿಯ ಒಂದು ನೃತ್ಯಭಂಗಿ (ಮೋಹಿನಿಯ ಪಾತ್ರದಲ್ಲಿ)



ನೃತ್ಯಕಲಾ ಪ್ರವೀಣ ಉದಯ ಶಂಕರರು ಶ್ರೀಮತಿ ಸಿಮ್ಕಿಯೊಡನೆ


ಕಥಕ್ಕಳಿಯ ಅನಂತರ ಪ್ರಾಚೀನ ಕಾಲದ ಲಾಸ್ಯವನ್ನು ಹೋಲುವ ನಾಚೇ ಪ್ರಧಾನವಾದುದು. ಕೆಲಕೆಲವಂಶಗಳಲ್ಲಿ, ಈ ನಾಚು, ಕಥಕ್ಕಳಿಗಿಂತಲೂ ಮಿಗಿಲೆಂದೆನಿಸಿಕೊಂಡಿದೆ. ಕಥಕ್ಕಳಿ, ಒಂದು ದೊಡ್ಡದಾದ ಇಡೀ ಕಥೆಯ ಪ್ರತಿಬಿಂಬ; ನಾಚು ಅಂತಲ. ಅದು ಕಥೆಯೊಂದರ ಭಾಗವನ್ನಷ್ಟನ್ನೇ ಚಿತ್ರಿಸುವುದು. ಕಥಕ್ಕಳಿ ಪೂರ್ಣ ಮಹಾಕಾವ್ಯಗಳಿಗೆ ಸಂಬಂಧಿಸಿದುದಾದರೆ, ನಾಚು ಒಂದು ಗೀತ ಕಾವ್ಯ. ಈ ಕಥಕ್ಕಳಿಯನ್ನೇ ಕನ್ನಡಿಗರು ಯಕ್ಷಗಾನವೆನ್ನುವುದು. ಯಕ್ಷಗಾನದಲ್ಲಿ, ಸಂಭಾಷಣವು ಮಾತಿನ ಮೂಲಕವಾಗಿದೆ ಎಂಬುದಿಷ್ಟೆ ಯಕ್ಷಗಾನಕ್ಕೂ ಕಥಕ್ಕಳಿಗೂ ಇರುವ ಮುಖ್ಯ ಭೇದವು. ಆದರೆ ಪ್ರಕೃತದ ಅದರಲ್ಲಿಯ ಅಭಿನಯುವು ಅಷ್ಟೊಂದು ತೃಪ್ತಿಕರವಾಗಿಲ್ಲ.

ಆಂಧ್ರನಾಡಿನ ಕುಸಿವುಡಿ ಎಂಬ ಗ್ರಾಮದಲ್ಲೂ ತಂಜಾವೂರಿನ ಒಂದೆರಡೆಡೆಗಳಲ್ಲೂ, ಇನ್ನೊಂದು ವಿಧವಾದ ನಾಟ್ಯವು ಪ್ರಚಾರದಲ್ಲಿದೆ. ಪ್ರತಿವರ್ಷವೂ ವಸಂತಕಾಲದಲ್ಲಿ, ಬ್ರಾಹ್ಮಣರು ಇದನ್ನು ಅಭಿನಯಿಸುವರು. ಇದನ್ನು ಸರಿಯಾಗಿ ತಿಳಿದವರೆಂದರೆ, ಶ್ರೀ| ಭರತಂ ನಲ್ಲೂರು ನಾರಾಯಣ ಸ್ವಾಮಿ ಅಯ್ಯರರು. ನಾಟ್ಯಕಲಾಪ್ರೇಮಿಗಳೆಲ್ಲರೂ ಈ ಮಹನೀಯರ ಪರಿಚಯುವನ್ನು ಮಾಡಿ ಕೊಳ್ಳಬೇಕಾಗಿ ಕೋರುತ್ತೇವೆ.

ಭಾರತನೃತ್ಯದಲ್ಲಿ ನೃತ್ತವೆಂದು, ನೃತ್ಯವೆಂದೆರಡು ವಿಧ. ನೃತ್ತವೆಂದರೆ ಲಯಬದ್ಧವಾದ ಬರೇ ನರ್ತನ. ನೃತ್ಯವಾದರಂತಲ್ಲ, ಅದರಲ್ಲಿ ಅಂಗವಿನ್ಯಾಸಗಳಿಂದ, ಮುಖದ ವಿವಿಧ ಹಾವಭಾವಗಳಿಂದ, ಅಭಿನಯಪೂರ್ವಕವಾಗಿ, ರಸಭಾವಗಳನ್ನು ಹೊರಸೂಸುತ್ತಿರಬೇಕು. ಮುಖದಲ್ಲಿ ತೋರುವ ಭಾವಭಂಗಿಗಳಿಂದ, ಶರೀರದ ಇತರ,ಭಾಗಗಳ ವಿನ್ಯಾಸಗಳಿಂದ ಸೊಗಸಾಗಿ, ರಸಭಾವಗಳ ಪ್ರದರ್ಶನಕ್ಕೆಡೆಯಿದೆ.

ಕೆಲಗಾಲದಿಂದ ಕಥಕ್ಕಳಿಯೂ, ನಾಚೂ ಉತ್ಕರ್ಷ ಸ್ಥಿತಿಗೇರುತ್ತಿವೆ. ವಂಗೀಯರಾದ ಶ್ರೀ| ಉದಯಶಂಕರರೂ, ಶ್ರೀಮತಿ ಮೇನಕಾ ಅವರೂ, ಭಾರತ ನಾಟ್ಯದ ಶ್ರೇಷ್ಠತೆಯನ್ನು ಪರರಾಷ್ಟ್ರಗಳಿಗೆ ತೋರುತ್ತಿದ್ದಾರೆ. ಆದಿಯಲ್ಲಿ, ಭಾರತ ನಾಟ್ಯದ ವಿಷಯದಲ್ಲಿ ಅವರಿಗಿದ್ದ ಜ್ಞಾನವು ಅತ್ಯಲ್ಪ; ಅದರಿಂದಾಗಿ, ಭಾರತ ನಾಟ್ಯದ ಬಗ್ಗೆ ಅವರಲ್ಲಿ ತಿರಸ್ಕಾರವೂ ಹೇಯಬುದ್ಧಿಯೂ ಇದ್ದುವು. ಆದರಿಂದ, ಲಕ್ಷಣ ರಹಿತವಾದ ತಮ್ಮದೇ ಆದ ಒಂದು ವಿಧದ ನಾಟ್ಯವನ್ನು ಕಲ್ಪಿಸಿಕೊಂಡರೂ ಏನು? ಅದು ಫಲಕಾರಿಯಾಗದೇ ಹೋಯಿತು. ಮೇನಕಾ, ಉದಯಶಂಕರರು ತಮ್ಮ ಅಮೋಘವಾದ ನಾಟ್ಯಪ್ರಯೋಗಗಳಿಂದ, ಈ ಕಲ್ಪಿತ ನಾಟ್ಯವನ್ನು ಕಡೆಗಣಿಸಿಯೇ ಬಿಟ್ಟರು.

ಆದರೇನು? ಹಾಗೆ ನಾಟ್ಯಕಲೆಯಲ್ಲಿ ಪಾಂಡಿತ್ಯವನ್ನು ಹೊಂದುವುದು ಅಷ್ಟೊಂದು ಸುಲಭಸಾಧ್ಯವಾಗಿದೆಯೆ? ತಾಳ್ಮೆಯಿಂದ, ಸಹನೆಯಿಂದ, ಧೈರ್ಯದಿಂದ ಮುಂದುವರಿದರೇನೇ ಕಲಾಜೀವನದಲ್ಲಿ ಯಶಸ್ಸು. ಆದರೆ, ನಮ್ಮ ಪರಿಸ್ಥಿತಿಯೂ ನಮಗೆ ಒಂದಿಷ್ಟು ಪ್ರತಿಕೂಲವೇ ಆಗಿದೆ. ನಮ್ಮಲ್ಲಿ, ಭಾರತನಾಟ್ಯ ಕಲೆಯನ್ನು ಕಲಿಸುವ ಸಂಸ್ಥೆಗಳು ಸಾಕಷ್ಟಿಲ್ಲ. ಅದರಿಂದಾಗಿ ಈ ಕಲೆಯನ್ನಾಭ್ಯಸಿಸಬೇಕೆಂಬ ಉತ್ಕಟೇಚ್ಛೆಯುಳ್ಳವರಿಗೂ ಸೌಲಭ್ಯವಿಲ್ಲದಾಗಿ ಹೋಗುತ್ತಿದೆ. ಆದರೂ ಈ ಊನಗಳು ಬೇಗನೇ ಮಾಯವಾಗುವ ಲಕ್ಷಣಗಳು ಕಾಣುತ್ತಿವೆ. ಹೇಗಿದ್ದರೂ, ಭಾರತವು ಎಡರುಗಳನ್ನೆಲ್ಲವನ್ನೂ ಇದಿರಿಸಿ ಧೈರ್ಯದಿಂದ ಮುಂದೊತ್ತಿ ಶ್ರೇಷ್ಠವಾದ ನಮ್ಮೀ ಭಾರತನಾಟ್ಯ ಕಲೆಯನ್ನು ಪುನರುಜ್ಜೀವನಗೊಳಿಸಲಿ! ಇನ್ನೊಮ್ಮೆ ಅದು ಬೆಳಕನ್ನು ಕಾಣುವಂತಾಗಲಿ!



ಚಟ್ಣಿ

ಲೇಖಕರು: ಎಮ್. ವಿ. ಪ್ರಭು,
ಎಮ್. ಎ. ಎಲ್. ಟಿ.

"ಚಟ್ನಿ" ಎಷ್ಟು ಬಗೆ ಇದೆ? ಹತ್ತೆಂಟು ವಿಧದ ಚಟ್ನಿಯನ್ನು ಶ್ರೀ। ಎಮ್. ವಾಸುದೇವ ಪ್ರಭು ಎಮ್. ಎ. ಎಲ್. ಟಿ., ಇವರು ಬೆರಸಿ ಇಲ್ಲಿ ಉಣಿಸುತ್ತಾರೆ. ಈ 'ಬೆರಕೆ'ಯಿಂದ ಆರೋಗ್ಯ ಕೆಡದೆಂದು ತೋರುತ್ತದೆ. ನಗರದ ರಸ್ತೆಗಳಲ್ಲಿ 'ಚಟ್ನಿ' ಶಾಲೆಯೊಳಗೆ 'ಚಟ್ನಿ', ಬಾಟ್ಲಿವಾಲರ ಚಟ್ನಿ,—ಒಟ್ಟು ಈ 'ಚಟ್ನಿಗಳು' ಬಲು ರುಚಿಕರವಾಗಿವೆಯೆಂದು ಓದಿಯೇ ಅನುಭವದಿಂದ ತಿಳಿಯಬೇಕು.

ಪ್ರಭಾತದ ಪ್ರಭೆಯಿಂದ ಇಡ್ಲಿ ಚಟ್ಣಿಯ ನೆನಪಾಯಿತು. ರಥೋತ್ಸವದ ಸಮಯವಾದುದರಿಂದ ಪ್ರಭಾತಕ್ಕೆ ಅನುಗುಣವಾದ ಅನೇಕ ಇಡ್ಲಿ ಲೇಖನಗಳು ಸಂಪಾದಕರ ಕೈಗೆ ಬರಬಹುದು. ಅವುಗಳ ಒಟ್ಟಿಗೆ ನಮ್ಮದೊಂದು ಚಟ್ಣಿಯೂ ಇದ್ದರೆ, ಲೇಖನಗಳ ರುಚಿಯು ಅಲ್ಪ ಸ್ವಲ್ಪ ಹೆಚ್ಚಾಗಬಹುದೆಂದೆಣಿಸಿ ಚಟ್ಣಿಯನ್ನು ತಯಾರಿಸುವುದರಲ್ಲಿದ್ದೇನೆ.

ಈಗ ನಮ್ಮ ಚಟ್ಣಿಯನ್ನು ತಯಾರಿಸುವುದರಲ್ಲಿ ನಾನೇನೂ ಹೆಚ್ಚು ಶ್ರಮಪಡಬೇಕೆಂದಿಲ್ಲ. ಆ ಚಟ್ಣಿಯು ಇತರರಿಂದ ತಯಾರಿಸಲ್ಪಡುತ್ತಾ ಇದೆ. ಯಾವ ಆಫೀಸಿನಲ್ಲಿಯೇ ಆಗಲಿ; ಮೇಲಾಧಿಕಾರಿಯೊಬ್ಬರನ್ನುಳಿದು ಬಾಕಿ ಉಳಿದವರಿಗೆಲ್ಲ ಬೆನ್ನಿನ ಮೂಳೆಗಳು ಮುರಿಯುವಷ್ಟು ಭಾರದ ಕೆಲಸ. ರಜೆ ಇರುವುದು ಕೇಲೆಂಡರಿನಲ್ಲಿ ಮಾತ್ರ; ಕೆಲಸಕ್ಕಲ್ಲ. ಇಂತಹ ವಿರಾಮವಿಲ್ಲದ ಕೆಲಸದಿಂದ ಕೆಲಸಗಾರರು ಚಟ್ಣಿಯಾಗುವುದರಲ್ಲಿ ಆಶ್ಚರ್ಯವೇನು? ಕೆಲಸ ಮಾಡುವವರಿಗೆ ಅಲ್ಪ ಸ್ವಲ್ಪ ವಿರಾಮವನ್ನೊದಗಿಸಿದರೆ, ಅವರೆಲ್ಲ ಆಲಸಿಗಳಾಗಿ ಸುಮ್ಮನೆ ಹಾಳಾಗಬಹುದೆಂಬ ಹೆದರಿಕೆಯಿಂದ ಅಧಿಕಾರಿಗಳಿಗೆಲ್ಲ ರಾತ್ರಿಯಲ್ಲಿ ನಿದ್ರೆಯು ಸಹ ಹತ್ತುವುದಿಲ್ಲವಂತೆ.

ಉತ್ಸಹದ ಸಮಯದಲ್ಲಿ ನಮ್ಮ ಪಟ್ಟಣವು ಒಂದು ದೊಡ್ಡ ನಗರವೇ ಆಗುತ್ತದೆ. ಮೊನ್ನೆ ನಡೆದ ಮೈದಾನಿನ ಉತ್ಸವದಲ್ಲಿ ನೀವೆಲ್ಲ ಇದನ್ನು ಕಣ್ಣಾರೆ ಕಂಡಿರಬಹುದು. ಅಲ್ಲಿ ಸೇರಿದ ಜನ ಸಂಖ್ಯೆ ಎಷ್ಟು? ಆ ನೋಟವನ್ನು ನೋಡಲಿಕ್ಕೆ ಬಂದ ಹೆಂಗುಸರು ಮಕ್ಕಳೆಷ್ಟು! ಉತ್ಸವದ ಸಮಯದಲ್ಲೆಲ್ಲಾ ಹೀಗೆಯೇ. ಗಂಡಸರ ಸಂಖ್ಯೆಯ ಆರರಷ್ಟು ಹೆಂಗಸರು ಮತ್ತು ಮಕ್ಕಳು. ಆ ಗುಂಪಿನಲ್ಲಿ ಸಿಕ್ಕಿಬಿದ್ದ ಇವರಲ್ಲಿ ಹಲವರು ಚಟ್ಣಿ. ಇದರ ಅನುಭವವು ಎಷ್ಟು ಸಲ ದೊರಕಿದರೂ, ಜಾತ್ರೆಯ ಸಮಯದಲ್ಲಿ ಮುಂದಾಳುಗಳಾಗಿ ಬರುವ ಕ್ರಮವನ್ನು ನಮ್ಮ ಹೆಂಗಸರು ಬಿಟ್ಟುಬಿಡುವ ಹಾಗಿಲ್ಲ.

ನಮ್ಮ ಹೆಂಗುಸರಿಗೆ ಭಕ್ತಿಯು ಹೆಚ್ಚು; ಆದುದರಿಂದ ಶ್ರೀ ರಾಮ, ಗಣಪತಿ, ಸರಸ್ವತಿ ಇತ್ಯಾದಿ ದೇವತೆಗಳಿಂದಲಂಕೃತವಾದ ನೆಲಗಡಲೆಯ ಅಂಗಡಿಗಳಿಂದ, ಆ ದೇವತೆಗಳ ಪ್ರಸಾದವನ್ನು ಮುಕ್ಕಾಲು, ಅರ್ಧಾಣೆ, ಒಂದಾಣೆ ದಕ್ಷಿಣೆ ಕೊಟ್ಟು ಪಡೆದುಕೊಂಡು, ಕಂಕುಳಲ್ಲಿಯೆ ಅದನ್ನು ಇಟ್ಟುಕೊಂಡು, ಸದಾ ಆ ಪ್ರಸಾದವನ್ನು ಜಗಿಯುತ್ತಾ ಇರುವರು. ನೆಲದಲ್ಲಿಯೇ ಕೂತುಕೊಂಡು ನೆಲಕಡಲೆ ಜಗಿಯುವುದರಿಂದ ವಿಶೇಷ ಸದ್ದಿಲ್ಲದೆ ನೆಲಗಡಲೆಯ ಚಟ್ಣಿಯಾಗುವುದು.

ಇನ್ನು ಪಟ್ಟಣದಲ್ಲಾಗುವ ವಿಶೇಷ ಚಟ್ಣಿಯಾವುದೆಂದರೆ ಹಣದ ಚಟ್ಣಿ. ಪಟ್ಟಣಗಳಲೆಲ್ಲ ಗಾಳಿಗೂ ಬೆಲೆಯಿದೆ, ನೀರಿಗೂ ಬೆಲೆಯಿದೆ. ಮನೆಯ ಕಿಟಕಿಗಳಿಂದ ಗಾಳಿಯ ಸಂಚಾರವು ಸರಿಯಾಗಿ ಆಗದಿರುವುದರಿಂದ ಇಲೆಕ್ಟ್ರಿಕ್ ಬೀಸಣಿಗೆಗಳ ಗಾಳಿಗೆ ಬೆಲೆ. ಹಾಲಿನಲ್ಲಿರುವ ನೀರಿಗೂ ಬೆಲೆ ಕೊಡದಿದ್ದರೆ ಹಾಲು ಸಿಗುವಂತಿಲ್ಲ. ಇನ್ನು ಕೂತು ಏಳಲಿಕ್ಕೂ ಹಣವನ್ನು ವೆಚ್ಚ ಮಾಡಬೇಕು. ಸಿಟಿ ಬಸ್ಸಿನಲ್ಲಿ ಕೂತುಕೊಂಡು ನೋಡಿರಿ; ಏಳುವ ಮುಂಚೆ ಹಣವನ್ನು ಕೊಡಲೇಬೇಕು. ಇನ್ನು ಆಹಾರ, ಉಪಾಹಾರ, ಫಲಾಹಾರ ಇತ್ಯಾದಿಗಳಿಗೆ ಹಣವನ್ನು ಸುರಿಸಬೇಕು. ಒಟ್ಟಾರೆ ಹಣದ ಚಟ್ಣಿ, ಖರ್ಚುಮಾಡುವವನದೂ!

ವಿದ್ಯಾಭ್ಯಾಸದ ವಿಷಯವನ್ನು ಪರೀಕ್ಷಿಸುವ; ಈಚೆಗೆ ಹೆಣ್ಣು ಮಕ್ಕಳಿಗೂ, ಗಂಡು ಮಕ್ಕಳಷ್ಟೆ ವಿದ್ಯೆಯು ಅವಶ್ಯವಾದುದರಿಂದ ಖರ್ಚು ಇಮ್ಮಡಿಯಾಗಿದೆ. ವಿದ್ಯಾಭ್ಯಾಸದಲ್ಲಿ ಊಟಕ್ಕೂ ಹಣ, ಹಾಸ್ಟೆಲ್ ಫಿ; ಪಾಠಕ್ಕೂ ಹಣ, ಸ್ಕೂಲ್ ಫಿ; ಆಟಕ್ಕೂ ಹಣ, ಗೇಮ್ ಫಿ; ಓದುವಿಕೆಗೂ ಹಣ, ಲೈಬ್ರೆರಿ ಫಿ; ಪರೀಕ್ಷೆಗೂ ಹಣ, ಎಕ್ಸಾಮಿನೇಶನ್ ಫಿ; ಸಾಲದೆ ಸಿನೇಮಕಲ್ಲದಿದ್ದರೆ ಕುಡಿಯುವ ಕಾಫಿಯ ಫಿ. ಇಷ್ಟೆಲ್ಲಾ ಫೀಸ್ ಕೊಡುವಾಗ ಅದನ್ನು ಕೊಡುವವರು ಚಟ್ಣಿ. ವಿಲಾಯತಿಯ ವಿದ್ಯಾಭ್ಯಾಸವೆಂದರಂತೂ ಹಣದ ಮಳೆಯನ್ನೆ ಸುರಿಸಬೇಕು. ಇಂಥವರದು ಪೂರ್ಣ ಚಟ್ಣಿ.

ಇದಲ್ಲದೆ ಪಟ್ಟಣಿಗರಿಗೆ ಕಾರನ್ನು ತರಿಸುವುದರಲ್ಲಿ ಪ್ರೀತಿ. ಆ ಸುಖಕ್ಕೋಸ್ಕರ ಎಷ್ಟೋ ಹಣವನ್ನು ಕಾರಲಿಕ್ಕೆ ಸಿದ್ಧರಿರುತ್ತಾರೆ. ಕಾರಿನ ಪ್ರಯೋಜನ ಮಾತ್ರ ಬೇರೆಯವರಿಗೆ! ಮಾಲಕನ ಕೆಲಸವು ಅವುದೆಂದರೆ ಬೇಕಾದ ರಿಪೇರಿ ಮತ್ತು ಪೆಟ್ರೋಲಿನ ವಿಲೇವಾರಿ; ಸವಾರಿ ಮಾತ್ರ ಹೆಂಗುಸರಿಗೆ, ಇಷ್ಟ ಮಿತ್ರರಿಗೆ, ಮದುವೆ ಮನೆಯವರಿಗೆ. ವರ್ಷದಲ್ಲಿ ಒಂದೆರಡು ಸಲ ಅದರಲ್ಲಿ ಸವಾರಿ ಮಾಡಿದ ಮಾಲಕನು ಬಹಳ ಪುಣ್ಯವಂತನೆಂದು ಗಣಿಸಲ್ಪಡಬೇಕು.

ಪುಸ್ತಕದ ಚಟ್ಣಿಯ ವಿಷಯ ಎರಡು ಮಾತು. ಪುಸ್ತಕ ಭಂಡಾರದಿಂದ ಮಕ್ಕಳ ಕೈಗೆ ಇಳಿದ ಪುಸ್ತಕವನ್ನು ನೋಡಬೇಕು. ಅವುಗಳಲ್ಲಿದ್ದ ಕೆಲವು ಪುಟಗಳು ಅದೃಶ್ಯ. ಉಳಿದವುಗಳು ಯುದ್ಧಕ್ಕೆ ಹೋಗಿ ಮರಳಿದ ವೀರರಂತೆ! ಒಟ್ಟಾರೆ ಹೇಳುವುದಾದರೆ ಇದೊಂದು ಬಗೆಯ ಚಟ್ಣಿ. ಪುಸ್ತಕವನ್ನು ಕೊಡುವಾಗ 'ಹೀಗೆಯೇ ಓದಿದರೆ ಸಾಲದು; ಓದಿದ್ದನ್ನು ಚೆನ್ನಾಗಿ ಜಗಿಯಬೇಕು' ಎಂಬ ಅಲಂಕಾರದ ಮಾತುಗಳನ್ನು ಉಪಾಧ್ಯಾಯರು ಪ್ರಯೋಗಿಸುವುದುಂಟು. ಹುಡುಗರಿಗೆ ಅದರ ಅರ್ಥವು ತಿಳಿಯುವುದಿಲ್ಲ. ಅವರು ಜಗಿಯುವುದೆಂದರೆ ಒಂದೇ ವಿಧದಲ್ಲಿ; ನೆಲಗಡಲೆಯನ್ನು ಜಗಿದ ಹಾಗೆ. ಆದುದರಿಂದ ಪುಸ್ತಕಗಳ ಚಟ್ಣಿಯಾಗುವುದು.

ಆದರೆ ಇಲ್ಲಿ ಈ ಪುಸ್ತಕಗಳ ಚರಿತ್ರೆಯು ಕೊನೆಗಾಣುವುದಿಲ್ಲ. ಇಂತಹ ಹರಕು ಮುರುಕು ಪುಸ್ತಕಗಳಿಗೂ ಗಿರಾಕಿಗಳಿದ್ದಾರೆ. ಅವರು ಆರೆಂದರೆ ನಮ್ಮ 'ಬಾಟ್ಲೀವಾಲ'ರು. ಇಂತಹ ನೆಲಗಡಲೆ ಸ್ವರೂಪವನ್ನು ತಾಳಿದ ಪುಸ್ತಕಗಳನ್ನು ಅವರು ರಾಶಿಯಾಗಿ ಕೊಂಡುಕೊಂಡು, ಅವುಗಳಿಗೆ ಬೇಕಾದ ಚಿಕಿತ್ಸೆಯನ್ನು ಮಾಡಿ ಅವುಗಳಿಗೊಂದು ಪುನರ್ಜನ್ಮವನ್ನು ಕೊಡುತ್ತಾರೆ. ಹೊಸ ಬ್ಯಾಂಡು, ಹೊಸ ರೂಪ. ಪುಸ್ತಕ ಹೊಸತು. ಈ ಆಸ್ಪತ್ರೆಯಲ್ಲಿ ಒಂದರ ತಲೆ ಇನ್ನೊಂದಕ್ಕೆ ಹೋಗುವುದುಂಟು. ಕೌಂಟ್ ಓಫ್ ಮೋಂಟಿಕ್ರಿಸ್ಟೋವಿನ ತಲೆಯು ಲೂತರನ ಸರ್ಮನ್ನುಗಳಿಗೂ, ಷೇಕ್ಸ್‌ಪಿಯರನ ಕ್ಲಿಯೊಪೇಟ್ರಾ ಎಂಟನಿಯಿಂದ ಡಿವೋರ್ಸ್ ಹೊಂದಿ ರೋಬಿನ್‌ಸನ್ ಕ್ರೂಸೋವಿನೊಡನೆ ಸೇರುವುದೂ ಇದೆ. ಐದಾರು ಪುಸ್ತಕಗಳ ಬೇರೆ ಬೇರೆ ಪುಟಗಳು (ತಲೆ ಕೆಳಗೆ ಕಾಲು ಮೇಲಾಗಿ) ಹೊಸ ಬೈಂಡಿನಿಂದ ಬಂಧಿಸಲ್ಪಟ್ಟು ಒಂದು ಬಗೆಯ ಚಟ್ಣಿ ಪುಸ್ತಕವಾಗುವುದು. ಇದನ್ನು ಪಡಕೊಂಡವರು ಒಂದು ಜಾತಿಯ ಎನ್‌ಸ್ಯಾಕ್ಲೋಪೇಡಿಯವನ್ನು ಕೊಂಡಂತೆಯೆ. ಕ್ರಯವೂ ಹೆಚ್ಚಿಲ್ಲ; ದರ ಅರ್ಧ; ಎಂದರೆ ಅರ್ಧಾಣೆ. ನೆಲಗಡಲೆಗೆ ಪಾವಾಣೆ; ನೆಲಗಡಲೆ ಪುಸ್ತಕಗಳಿಗೆ ಅರ್ಧಾಣೆ. ನಿಮ್ಮಾಣೆ!

ಪುಸ್ತಕಗಳ ಮಾತು ಬರುವಾಗ ಅವುಗಳನ್ನೋದುವವರ ವಿಷಯವೂ ಒಂದು ಮಾತು ಹೇಳಬೇಕಾಗಿದೆ. ಅದೇನಂದರೆ: ಪರೀಕ್ಷೆಯೆಂಬ ರಣರಂಗಕ್ಕೆ ನಾವು ಪ್ರತಿ ವರ್ಷವೂ ನೂರಾರು ಹೊಸ ಅಥವಾ ಹಳೆಯ ವೀರರನ್ನು ಕಳುಹಿಸುತ್ತಿದ್ದೇವೆ. ಅವರಿಗೊಂದು ಸಿಲೆಕ್ಶನ್ ಪರೀಕ್ಷೆಯನ್ನೂ ಮಾಡುತ್ತೇವೆ; ಯುದ್ಧಕ್ಕೆ ಶಕ್ತಿಯಿರುವವರಾರೆಂಬುದನ್ನು ಕಂಡು ಹಿಡಿಯಲಿಕ್ಕೆ. ಇಷ್ಟು ಜಾಗ್ರತೆಯನ್ನು ನಾವು ತೆಗೆದುಕೊಂಡರೂ, ನಾವು ಕಳುಹಿಸಿದ ರಣವೀರರಲ್ಲಿ ಅರ್ಧಾಂಶವನ್ನು ಪರೀಕ್ಷಕರು ಚಟ್ಣಿ ಮಾಡುತ್ತಾರೆ.

ಪರೀಕ್ಷಕರು ಸಹ ಮನುಷ್ಯರು. ಅವರಿಗೂ ಚಟ್ಣಿಯ ಮೇಲೆ ಪ್ರೀತಿಯಿದೆ. ಬೇರೆ ಯಾವ ಸಾಧನಗಳೂ ಅವರಿಗೆ ದೊರಕುವುದಿಲ್ಲವಾದುದರಿಂದ, ಪರೀಕ್ಷೆಗೆ ಬಂದವರನ್ನು ಹಿಡಿದು ಅವರು ಚಟ್ಣಿಯನ್ನು ಮಾಡುತ್ತಾರೆ.

ನಾವು ಹೇಳಿದ ಅನೇಕ ಭಾಷಣಗಳಲ್ಲಿ ಚಟ್ಣಿಯ ಗುಣವು ವಿಶೇಷವಾಗಿದೆ. ಹಲವು ವಿಧದ ಖಾರದ ವಸ್ತುಗಳೂ ಉಪ್ಪು ಮತ್ತು ಹುಳಿ ಪದಾರ್ಥಗಳೂ ಒಟ್ಟು ಸೇರಿ ಒಂದು ಬಹಳ ರುಚಿಕರವಾದ ಚಟ್ಣಿಯಾಗುತ್ತಧೆ. ಆ ಚಟ್ಣಿಯನ್ನು ಸ್ವಲ್ಪ ಸ್ವಲ್ಪ ಮನಸ್ಸಿನಲ್ಲಿ ಇಟ್ಟುಕೊಂಟು ನಾವು ಓದುವಂತಹ ಅಥವಾ ನೋಡುವಂತಹ, ಅಥವಾ ಲೋಕದಲ್ಲಿ ನಡೆಯುವಂತಹ ವಿಷಯಗಳಿಗೆ ಅದನ್ನು ಹಚ್ಚಿದರೆ ಇಡ್ಲಿ ಮತ್ತು ಚಟ್ಣಿಯನ್ನು ತಿಂದಷ್ಟು ಫಲಕಾರಿಯಾಗುವುದು. ಏಕೆಂದರೆ ಭಾಷಣಗಳೆಲ್ಲವೂ ನಮ್ಮ ಮೆಲ್ಲಿನ್ಸ್ ಫೂಡ್‌ನಂತೆ ಮಾನಸಿಕ ಆಹಾರ. ನಿಜವಾಗಿ ದೇಹದ ಆರೋಗ್ಯವನ್ನು ಹೆಚ್ಚು ಮಾಡುವಂತಹ ಆಹಾರಗಳು ಎಲ್ಲಿಯೊ ಅದೃಶ್ಯವಾಗಿ ಹೋಗಿರುವ ಕಾಲದಲ್ಲಿ, ಇಂತಹ ಚಟ್ಣಿ ಭಾಷಣಗಳಾದರೂ ನಮಗೆ ದೊರಕಿ ಮನಸ್ಸನ್ನು ಪುಷ್ಟೀಕರಿಸಬಹುದೆಂಬ ಉದ್ದೇಶದಿಂದ ಈ ಚಟ್ಣಿ ಲೇಖನವನ್ನು ಬರೆದಿರುತ್ತೇನೆ.

ದಕ್ಷಿಣ ಅಮೇರಿಕದ ಮುಂದಿನ ಹೋರಾಟ



ಲೇಖಕರು: ಶ್ರೀ ಕೆ. ವಾಸುದೇವ ಕಿಣಿ, ಬಿ. ಎ. ಎಲ್. ಟಿ.

ಹತ್ತೊಂಬತ್ತನೆಯ ಶತಮಾನದಲ್ಲಿ ಯುರೋಪಿನ ಹಲವು ರಾಷ್ಟ್ರಗಳು ಆಫ್ರಿಕವನ್ನು ನುಂಗಿಬಿಟ್ಟವು. ಇಪ್ಪತ್ತನೆಯ ಶತಮಾನದಲ್ಲಿ ದಕ್ಷಿಣ ಅಮೇರಿಕವನ್ನು ನುಂಗಿಬಿಡಲು ಹಲವು ರಾಷ್ಟ್ರಗಳು ಅನೇಕ ರೀತಿಯಲ್ಲಿ ಸನ್ನಾಹಗಳನ್ನೆಲ್ಲಾ ಶೀಘ್ರವಾಗಿ ನಡಿಸುತ್ತವೆ. ಈ ಕಾರ್ಯದಲ್ಲಿ ಜರ್ಮನರೂ, ಇಟಲಿಯವರೂ, ಜಪಾನಿಯರೂ ಬಹಳ ತ್ವರೆಪಟ್ಟುಕೊಂಡು ಮುಂದೊತ್ತಿರುವರು. ಮೊದಲು ವ್ಯಾಪಾರ, ವ್ಯಾಪಾರದಹಿಂದೆಯೇ ಧ್ವಜ; ಇದು ಯುರೋಪಿನ ರಾಷ್ಟ್ರಗಳ ಧರ್ಮ ಮಾರ್ಗ. ದಕ್ಷಿಣ ಅಮೇರಿಕದಲ್ಲಿ ಜರ್ಮನರು ತಮ್ಮ ಆರ್ಥಿಕೋನ್ನತಿಗೆ ಯಾವ ಜಾಲವನ್ನು ಬೀಸಿರುವರೆಂದು ಕೆಳಗೆ ವಿವರಿಸಿದೆ. ಸ್ವಸ್ತಿಕಾಧ್ವಜವು ಎಂದು ಬರಲಿರುವುದೆಂದು ಹೇಳಲಾಗುವುದಿಲ್ಲ. ಸಂಯುಕ್ತ ಅಮೇರಿಕವು ಇದನ್ನು ತಡೆಯಲು ವಿಶ್ವಪ್ರಯತ್ನ ಮಾಡುತ್ತಿದೆ.

ಇತ್ತೀಚೆಗೆ ಜರ್ಮನಿಯು ಹಿಟ್ಲರರ ಹೊಸ ಧೋರಣೆಯ ದೆಸೆಯಿಂದ ನವಚೇತನವನ್ನು ಹೊಂದಿ ಜರ್ಮನ್ ಜನಾಂಗವು ಒಂದಾಗಬೇಕೆಂದೂ, ಜರ್ಮನಿಯು ಜಗತ್ತಿನ ಮಾರ್ಕೆಟನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದೂ ನಿರ್ಧರಿಸಿದೆ. ಈ ಉದ್ದೇಶದಿಂದ ಜರ್ಮನರು ಮೊದಲು ಯುರೋಪಿನಲ್ಲಿ ವ್ಯಾಪಿಸಿಕೊಂಡು ಆಸ್ಟ್ರಿಯಾ, ಸುಡೆಟನ್ ಪ್ರಾಂತ್ಯವನ್ನೂ, ಉತ್ತರದಲ್ಲಿರುವ ಮೆಮಲ್ ಬಂದರನ್ನೂ, ದಕ್ಷಿಣದಲ್ಲಿ ಉಕ್ರೇನ್ ಪ್ರಾಂತ್ಯವನ್ನೂ, ಸ್ವಿಟ್ಜರ್‌ಲೆಂಡ್ ದೇಶವನ್ನೂ ತಮ್ಮ ಅಧೀನ ತಂದು ಮತ್ತೆ ವಸಾಹತುಗಳನ್ನು ಕೇಳಲು ಸಿದ್ಧತೆಗಳನ್ನು ಮಾಡುತ್ತಿರುವರು. ಪಾಶ್ಚಾತ್ಯ ದೇಶಗಳಲ್ಲಿ ಬ್ರಿಟನೂ, ಜರ್ಮನಿಯೂ ಕೈಗಾರಿಕೆಯ ಸಾಮಾನುಗಳಿಗೆ ಪ್ರಖ್ಯಾತಿಪಟ್ಟ ದೇಶಗಳು. ಪೂರ್ವದಲ್ಲಿ ಜಪಾನು. ಈ ಮೂರು ರಾಷ್ಟ್ರಗಳೂ ಜಗತ್ತಿನ ವ್ಯಾಪಾರವನ್ನೆಲ್ಲಾ ತಮ್ಮ ಸ್ವಾಧೀನಮಾಡಿಕೊಳ್ಳಲು ಬಹು ಪೇಚಾಡುತ್ತಿವೆ. ಈ ದೇಶಗಳಿಗೆಲ್ಲಾ ಕಚ್ಚಾ ಸಾಮಾನುಗಳು ಬೇಕಾಗಿವೆ. ಇವನ್ನು ಪಡೆಯಲು ಅವುಗಳಿಗೆ ವಸಾಹತುಗಳು ಬೇಕು. ವಸಾಹತುಗಳ ಜನರಿಗೆ ತಮ್ಮ ಕೈಗಾರಿಕೆಯ ಸಾಮಾನುಗಳನ್ನು ಮಾರಿ ಅವರ ಕಚ್ಚಾಸಾಮಾನುಗಳನ್ನು ಇವರು ಕೊಂಡುಕೊಳ್ಳ ಬಹುದಾಗಿದೆ. ಇವುಗಳನ್ನು ಸಂಪಾದಿಸಲು ಕಠಿಣ ಸ್ಪರ್ಧೆಯು ಇವರೊಳಗೆ ನಡೆಯುತ್ತದೆ. ಅಮೇರಿಕದ ಸಂಯುಕ್ತ ರಾಷ್ಟ್ರಗಳೂ ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತವೆ. ಇಂಡಿಯಾ, ಚೀನಾ, ಆಫ್ರಿಕಾ, ದಕ್ಷಿಣ ಅಮೇರಿಕಾ— ಈ ಪ್ರಾಂತ್ಯಗಳಲ್ಲಿ ಕಚ್ಚಾ ಸಾಮಾನುಗಳು ಪುಷ್ಕಳವಾಗಿ ದೊರಕುತ್ತವೆ. ಜರ್ಮನಿಗೆ ಆಫ್ರಿಕದ ವಸಾಹತುಗಳು ನಷ್ಟವಾಗಿವೆ. ಆದ್ದರಿಂದ ಅದು ಇತ್ತೀಚೆಗೆ ದಕ್ಷಿಣ ಅಮೇರಿಕದ ಕಡೆಗೆ ತನ್ನ ದೃಷ್ಟಿಯನ್ನು ತಿರುಗಿಸಿದೆ.

ದಕ್ಷಿಣ ಅಮೇರಿಕವನ್ನು ಯುರೋಪಿಯನ್ ಜನರು ಕಂಡುಹಿಡಿದಾಗ ಅಲ್ಲಿ 'ಇಂಡಿಯನ್ಸ್' ಎಂಬ ಜನರು ವಾಸಿಸಿದ್ದರು. ಇವರಲ್ಲಿ 'ಇಂಕಾನ್' ಎಂಬವರು ಬಹಳ ನಾಗರಿಕತೆಯನ್ನು ಹೊಂದಿದ್ದರು. ಈಗಿನ 'ಇಂಡಿಯನ್ಸ್' ಜನರಲ್ಲಿ ಹೆಚ್ಚುಪಾಲು ಬಹಳ ಹಿಂದುಳಿದು, ಅನಾಗರಿಕರಾಗಿ, ಅಭಿವೃದ್ಧಿಗೆ ಇನ್ನೂ ಬರಲಿಲ್ಲ. ಇವರನ್ನು ಬಿಟ್ಟರೆ ಉಳಿದವರೆಲ್ಲಾ ದಕ್ಷಿಣ ಅಮೇರಿಕದಲ್ಲಿ ಈಗಿರುವ ನಾಗರಿಕ ಜನಾಂಗಗಳು. ಕೆಲವು ಶತಮಾನಗಳ ಹಿಂದೆ ಇಲ್ಲಿ ಬಂದು ನೆಲಸಿದ ಪೋರ್ಚುಗೀಸ್ ಮತ್ತು ಸ್ಪೆನಿಷ್ ಸಂತತಿಯವರಾಗಿರುವರು. ಬ್ರೆಜಿಲಿನಲ್ಲಿ ಜನರು ಪೋರ್ಚುಗೀಸ್ ಭಾಷೆಯನ್ನಾಡುವರು. ಉಳಿದ ಹೆಚ್ಚು ಭಾಗಗಳಲ್ಲಿ ಸ್ಪೆನಿಷ್ ಭಾಷೆಯು ಪ್ರಚಾರದಲ್ಲಿರುವುದು. ಕೆಲವು ವರ್ಷಗಳ ಇತ್ತೀಚೆಗೆ ಯುರೋಪ್ ಖಂಡದಿಂದ ಮುಖ್ಯವಾಗಿ ಇಟಲಿ ದೇಶದಿಂದ ಅಸಂಖ್ಯಾತರಾದ ಜನರು ಬಂದು ದಕ್ಷಿಣ ಭಾಗದ ಸಮಶೀತೋಷ್ಣ ಪ್ರದೇಶಗಳಲ್ಲಿ ನೆಲೆಸಿರುವರು. ದಕ್ಷಿಣ ಅಮೇರಿಕದ ದೇಶಗಳಲ್ಲೆಲ್ಲಾ ಸ್ವತಂತ್ರ ಪ್ರಜಾಧಿಪತ್ಯ ಸರಕಾರವಿದೆ.

ಇಟಲಿಯರ ಹೆಜ್ಜೆಗಳನ್ನು ಅನುಸರಿಸಿ ಜರ್ಮನರು ಈಗೀಗ ಬಹು ಸಂಖ್ಯೆಯಲ್ಲಿ ದಕ್ಷಿಣ ಅಮೇರಿಕವನ್ನು ಪ್ರವೇಶಿಸಿರುವರು. ಇವರು ಲೆಟಿನ್ ಅಮೇರಿಕದಲ್ಲಿ ಹಿಂದೆ ಯಾರೂ ಪ್ರವೇಶಿಸದ ಪ್ರಾಂತ್ಯಗಳನ್ನು ಹೊಕ್ಕು ತಮ್ಮ ವ್ಯಾಪಾರವನ್ನು ಅಭಿವೃದ್ಧಿಗೊಳಿಸುತ್ತಾರೆ. ಪ್ರತಿ ಒಬ್ಬ ಜರ್ಮನನು ಒಂದು ಅಡ್ಡ ಕಸಬನ್ನು ಕೈಕೊಂಡು ಅದರಿಂದ ಲಾಭಗಳಿಸುತ್ತಾನೆ. ಅವನು ಚಿಟ್ಟೆ ಹುಳುಗಳನ್ನೂ ಉರಗಗಳನ್ನೂ ವಿಧವಿಧದ ಕಲ್ಲುಗಳನ್ನೂ ಗಿಡ ಮೂಲಿಕೆಗಳನ್ನೂ ಸಂಗ್ರಹಿಸಿ ತನ್ನ ಜೀವನ ಸಾಗಿಸುತ್ತಾನೆ. ಫೋಟೋಗಳನ್ನು ತೆಗೆಯುವುದೂ ಅವನದೊಂದು ಕಸಬು. ಅವನು ಆ ಪ್ರಾಂತ್ಯದ ಚರಿತ್ರೆಯನ್ನೂ, ಪ್ರಾಚೀನ ವಸ್ತುಶಾಸ್ತ್ರವನ್ನೂ, ಮನುಷ್ಯ ವಿಜ್ಞಾನವನ್ನೂ ಕಲಿಯುತ್ತಾನೆ. ಅವನು ದೇಶೀಯ ದಂತ ಕಥೆಗಳನ್ನೂ, ಪದ್ಯಗಳನ್ನೂ ಸಂಗ್ರಹಿಸುತ್ತಾನೆ.

ಕೂಬಾ, ಮೆಕ್ಸಿಕೊ, ಮತ್ತು ಪನಾಮಾ ಪ್ರದೇಶಗಳನ್ನು ಬಿಟ್ಟರೆ ಉಳಿದ ಲೆಟಿನ್ ಅಮೇರಿಕದಲ್ಲಿ ಅಮೇರಿಕನರಿಗಿಂತಲೂ ಹೆಚ್ಚು ಜರ್ಮನರ ಸಂಖ್ಯೆಯಿರುವುದು. ಅರ್ಜೆಂಟಿನದಲ್ಲಿಯೇ 100,000 ಜರ್ಮನರು ವಾಸಿಸಿರುವರು. ದಕ್ಷಿಣ ಚಿಲ್ಲಿಯಲ್ಲಿ ಅವರೇ ಮುಖ್ಯ ಫಲಗಳ ತೋಟಗಾರರು. ಸಾಧಾರಣ ಅರ್ಧ ಚಿಲ್ಲಿಯಲ್ಲಿ ಜರ್ಮನ್ ಭಾಷೆಯೇ ಜನಪ್ರಿಯವಾಗುತ್ತಿದೆ. ಲೆಟಿನ್ ಅಮೇರಿಕದ ಎಲ್ಲಾ ಭಾಗಗಳಲ್ಲಿ ಜರ್ಮನರ ಕಟ್ಲೇರಿ ಅಂಗಡಿಗಳು ತುಂಬಿವೆ. ಹಾಗೆಯೇ ಸಂಗೀತ ಉಪಕರಣಗಳ ಮಳಿಗೆಗಳೂ, ಛಾಪಖಾನೆಗಳೂ, ಕೆತ್ತನೆ ಕೆಲಸದ ಸಂಸ್ಥೆಗಳೂ ಸ್ಥಾಪಿತವಾಗಿವೆ. ಚಿತ್ರಕಲೆಯ ಮತ್ತು ರಸಾಯನಿಕ ಕೈಗಾರಿಕೆಗಳನ್ನೂ ಅವರು ಹೊರಡಿಸಿರುವರು. ವ್ಯವಸಾಯಿಕ ಮತ್ತು ವಿದ್ಯುಚ್ಛಕ್ತಿಯ ಯಂತ್ರ ಸಾಮಗ್ರಿಗಳನ್ನು ಅವರು ಅಗ್ಗವಾಗಿ ಮಾರುತ್ತಿರುವರು. ಎಲ್ಲೆಲ್ಲಿಯೂ ಜರ್ಮನರ ಅಗ್ಗವಾದ ಒಪೆಲ್ ಮತ್ತು ಓಕ್ ಕಾರುಗಳೂ ಜನಪ್ರಿಯವಾಗಿವೆ. ಮಧ್ಯ ಅಮೇರಿಕದಲ್ಲೂ, ಬ್ರೆಜೀಲಿನಲ್ಲಿಯೂ ಜರ್ಮನರೇ ಮುಖ್ಯ ಕಾಫಿ ತೋಟಗಾರರು. ಜರ್ಮನರು ಸಾವಿರಾರು ಸಾರಾಯಿ ಬಟ್ಟಿಗಳನ್ನು ಹೊರಡಿಸಿರುವರು. ಮೆಕ್ಸಿಕೊ, ಪೇರು, ಬ್ರೆಜೀಲ್, ಮತ್ತು ಇನ್ನಿತರ ಪ್ರದೇಶಗಳಲ್ಲಿ ನೇಯಿಗೆ ಕಾರಖಾನೆಗಳನೇಕವು ಜರ್ಮನರದೇ ಆಗಿವೆ. ಆಂಡೀಸ್ ಪರ್ವತಗಳ ಗೆಡ್ರೊಡಿಪಾಸ್ಕೊ ಎಂಬ ಉನ್ನತ ಪ್ರದೇಶದಲ್ಲಿ ಜರ್ಮನರು ಒಂದು ಬಣ್ಣ ಮಾಡುವ ಕಾರಖಾನೆಯನ್ನು ಇಟ್ಟಿರುವರು. ಜರ್ಮನರ ಗಿಲ್ಡರ್ ಮಿಸ್ಟರ್ ಎಂಬ ಹೆಸರಿನ ಸಿಡಿಮದ್ದು ಗುಂಡುಗಳ ಒಂದು ಕಾರಖಾನೆಯು ಪೇರುವಿನಲ್ಲಿ ಸ್ಥಾಪಿತವಾಗಿದೆ. ಹುಗೋಸ್ಟಿನ್ಸ್ ಎಂಬ ಜರ್ಮನರು ಆರ್ಜೆಂಟಿನದಲ್ಲಿ ಎಣ್ಣೆಯದೊಂದು ಪ್ರಾಂತ್ಯವನ್ನು ಕ್ರಯಕ್ಕೆ ಪಡೆದಿರುವರು. ಬ್ರೆಜಿಲಿನಲ್ಲಿ ಜರ್ಮನರು ತಾಮ್ರದ ಮತ್ತು ನಿಕ್ಕೆಲಿನ ಗನಿಗಳನ್ನು ವಶಪಡಿಸಿಕೊಂಡಿರುವರು.



ಮುಸಲನಿ ಮತ್ತು ಹಿಟ್ಲರ್.
ಇವರ ಪ್ರಭಾವವು ದಕ್ಷಿಣ ಅಮೇರಿಕದಲ್ಲಿ ಬೀರತೊಡಗಿವೆ.

ದಕ್ಷಿಣ ಅಮೇರಿಕದಲ್ಲಿ ಜರ್ಮನರ ವ್ಯಾಪಾರವು ಅತಿರೇಕವಾಗಿ ಅಭಿವೃದ್ಧಿಗೊಂಡಿದೆ. ಮಧ್ಯ ಅಮೇರಿಕದಲ್ಲೇ ಅವರ ವ್ಯಾಪಾರವು 500 ಪಾಲು ಹೆಚ್ಚಿದೆ. ನಿಕರಾಗುವಾದವರು ಬ್ರಿಟಿಷರೊಡನೆ ವ್ಯಾಪಾರವನ್ನು ಬಿಟ್ಟು ಜರ್ಮನರೊಡನೆಯೂ, ಇಟಲಿಯನರೊಡನೆಯೂ ವಹಿವಾಟನ್ನು ನಡೆಸುತ್ತಾರೆ. ಮೆಕ್ಸಿಕೋ ದೇಶದವರು ತಮ್ಮ ಎಣ್ಣೆಯನ್ನು ಜರ್ಮನರಿಗೆ ಕೊಟ್ಟು ಅವರಿಂದ ಯಂತ್ರ ಸಾಮಗ್ರಿಗಳನ್ನು

ಪಡೆದುಕೊಳ್ಳಲು ಸಿದ್ಧತೆಮಾಡಿರುವರು. ಹೆಚ್ಚಾಗಿ ಜರ್ಮನರು ಲೆಟಿನ್ ಅಮೇರಿಕದ ಕಚ್ಚಾ ಸಾಮಾನುಗಳನ್ನು ಪಡೆದು ಬದಲಾಗಿ ತಮ್ಮ ಯಂತ್ರ ಉಪಕರಣಗಳನ್ನು ಕೊಟ್ಟು ವಹಿವಾಟು ನಡೆಸುತ್ತಾರೆ.

ಜರ್ಮನರ ವ್ಯಾಪಾರವು ಬಹಳ ರಭಸದಿಂದ ಸಾಗುತ್ತದೆ. ಅವರು ತಮ್ಮ ಪ್ರಚಂಡವಾದ ಪ್ರಚಾರಕಾರ್ಯದಿಂದಲೇ ತಮ್ಮ ವ್ಯಾಪಾರವನ್ನು ಬಲಪಡಿಸಿಕೊಂಡಿರುವರು. ಪ್ರಚಾರಕಾರ್ಯವು ಕ್ರಮವಾಗಿ ಸಾಗಲು ಅವರು ಉತ್ತಮವಾದ ಏರ್ಪಾಡು ಮಾಡಿರುವರು. ವರ್ತಮಾನ ಪ್ರಚಾರವು ಮೊದಲನೆಯ ಉಪಾಯ. ಸರಕಾರದ ಅಧೀನವಿರುವ ಜರ್ಮನ್ ನ್ಯೂಸ್ ಏಜೆನ್ಸಿಯು 'ಹೆಲ್ ಸರ್ವಿಸ್'ನ ಸಹಾಯದಿಂದ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ಸರ್ತಿ ಪ್ರಕಾರ ಸುದ್ದಿಗಳನ್ನು ಬ್ರಾಡ್‌ಕಾಸ್ಟ್ ಮಾಡುತ್ತದೆ. ಸುದ್ದಿ ತಿಳಿಯಬೇಕಾದವರು ಒಂದು ರೇಡಿಯೋ ಸೆಟ್ಟನ್ನು ಸ್ಥಾಪಿಸಿದರಾಯಿತು. ವಾರ್ತೆಯು ರೇಡಿಯೋ ಮುಖಾಂತರ ಬಂದು ಸ್ವಯಂಚಾಲಕವಾಗಿ ಬರೆದು ಬಿಡುತ್ತದೆ. ರೇಡಿಯೋ ಸೆಟ್ಟುಗಳನ್ನು ಸೀಮನ್ಸ್ ಕಂಪೆನಿಯವರು ಬಹು ಕಮ್ಮಿ ದರದಲ್ಲಿ ವಿಕ್ರಯಿಸುತ್ತಾರೆ. ನಾಜಿಗಳನ್ನು ಹೊಗಳಿ ಫ್ರೆಂಚರನ್ನೂ, ಬ್ರಿಟಿಷರನ್ನೂ, ರಷ್ಯನರನ್ನೂ ನಿಂದಿಸಿ ಹೆಚ್ಚಾಗಿ ವಾರ್ತೆಯು ಹಬ್ಬುತ್ತದೆ. ಯುನೈಟೆಡ್ ಸ್ಟೇಟ್ಸಿನಿಂದ ಬರುವ ವಾರ್ತೆಯೆಲ್ಲಾ 'ಗುಲ್ಲಿನ ಪ್ರಜಾಧಿಪತ್ಯದ' ಸುದ್ದಿಯೆಂದೂ, ಯಹೂದ್ಯರ ಪ್ರೇರಣೆಯ ಮತ್ತು ಅವರ ಧನಸಹಾಯದ ಸುದ್ದಿಯೆಂದೂ ಪ್ರಚಾರಕಾರ್ಯವು ನಡೆಯುತ್ತದೆ. ವರ್ತಮಾನವೆಲ್ಲಾ ಹಿಟ್ಲರ್, ಮುಸ್ಸೋಲಿನಿ, ಜನರಲ್ ಫ್ರೆಂಕೊ ಮೊದಲಾದ ಸರ್ವಾಧಿಕಾರಿಗಳನ್ನು ಕೊಂಡಾಡಿ ಬರುವಂತಹದು.



ಜನರಲ್ ಫ್ರಾಂಕೋ.
ಹಿಟ್ಲರ್-ಮುಸಲಿನಿಗಳ ಬೆಂಬಲದಿಂದ
ಸ್ಪೈನಿನಲ್ಲಿ ಕ್ರೌರ್ಯ ನಡೆಸುತ್ತಿದ್ದಾನೆ.

ಜರ್ಮನರು ಜನಪ್ರಿಯರಾಗಲು ಬಹು ಪ್ರಯತ್ನಪಡುತ್ತಾರೆ. ಸಮುದ್ರ ಪ್ರಯಾಣಕ್ಕಾಗಿ ಅತ್ಯಾಧುನಿಕ ಜರ್ಮನ್ ನಾವೆಗಳನ್ನಿಟ್ಟಿರುವರು. ಹಲವು ಅಮೇರಿಕನ್ ಮತ್ತು ಬ್ರಿಟಿಷ್ ಕಂಪೆನಿಗಳು ಇದರ ದೆಸೆಯಿಂದ ದಿವಾಳಿಯಾದುವು ವಿಹಾರಕ್ಕೂ, ಉಲ್ಲಾಸಕ್ಕೂ, ಸುಖಸಂತೋಷಕ್ಕೂ ಎಲ್ಲಾ ಏರ್ಪಾಡು ಮಾಡಿರುವ ಹಡಗುಗಳನ್ನು ಅವರಿಟ್ಟಿರುವರು. ರಿಯೊ-ಡಿ-ಜೆನೀರೋ ಎಂಬ ಅಮೇರಿಕದ ನಗರದಿಂದ ಬರ್ಲಿನಿಗೆ ಹಪ್ತೆಗೆ ಎರಡು ಸರ್ವಿಸುಗಳಿವೆ. ಇತ್ತೀಚೆಗೆ ದೈನಿಕ ವಿಮಾನಗಳ ಚಲನವಿದೆ. ಖಂಡದ ಒಳ ಭಾಗಗಳಲ್ಲಿ ಸಂಚಾರಮಾಡಲು ವಿಮಾನಗಳ ಹಲವು ಸರ್ವಿಸುಗಳನ್ನು ತೆರೆಯಲು ಸಿದ್ಧತೆಗಳಾಗುತ್ತವೆ. ಸ್ವಸ್ತಿಕಾ ಧ್ವಜದ ವಿಮಾನಗಳಲ್ಲಿ ಪ್ರಯಾಣ ಮಾಡುವುದು 'ಸುರಕ್ಷಿತವೆಂದು ಜನರಲ್ಲಿ ನಂಬಿಕೆ ಹುಟ್ಟಿದೆ.

ಹಿಟ್ಲರ್ ಸರಕಾರದ ಪ್ರಚಾರಕಾರ್ಯವನ್ನು ಮಾಡಿ, ಜರ್ಮನ್ ವ್ಯಾಪಾರವನ್ನೂ, ಜರ್ಮನರ ವಾರ್ತೆಗಳನ್ನೂ, ಜರ್ಮನರ ವೈಮಾನಿಕ ಕಲೆಯನ್ನೂ, ಜರ್ಮನರ ನಾಜಿ ತತ್ವಗಳನ್ನೂ, ಪ್ರಸರಿಸಲು ಏಜಂಟರನ್ನು ತರಬೇತು ಮಾಡಲು ಬರ್ಲಿನ್ ನಗರದಲ್ಲಿ ಒಂದು ಸಂಸ್ಥೆಯೇ ಇದೆ. ಈ ವಿದ್ಯಾರ್ಥಿಗಳಿಗೆ ಪೋರ್ಚುಗೀಸ್, ಸ್ಪೆನಿಷ್, ಮತ್ತು ಹಿಸ್ಪೆನಿಕ್ ಭಾಷೆಗಳನ್ನೂ, ವ್ಯಾಪಾರಮಾಡುವ ಕ್ರಮಗಳನ್ನೂ ಬೋಧಿಸುತ್ತಾರೆ. ಇಂತಹ ವಿದ್ಯಾಭ್ಯಾಸವು ಮುಗಿದೊಡನೆ ಆರು ತಿಂಗಳು ಅವರನ್ನು ನಾಜಿಮತದ ಶಿಕ್ಷಣವನ್ನು ಕೊಟ್ಟು ಬೊಲ್ಶೆವಿಕರನ್ನೂ, ಪ್ರಜಾಧಿಪತ್ಯ ಸರಕಾರಗಳನ್ನೂ ನಿಂದಿಸುವ ಬೋಧನೆಯು ನಡೆಯುತ್ತದೆ. ಬ್ರಿಟಿಷ್ ಮತ್ತು ಅಮೇರಿಕನರ ವ್ಯಾಪಾರ ಕ್ರಮಗಳನ್ನು ಛೋದಿಸುವ ಕ್ರಮಗಳನ್ನು ಅವರಿಗೆ ಹೇಳಿಕೊಡುತ್ತಾರೆ. ಈ ಶಿಕ್ಷಣ ಮುಗಿದು ತೇರ್ಗಡೆ ಹೊಂದಿದವರಿಗೆ ಮಾತ್ರ ದಕ್ಷಿಣ ಅಮೇರಿಕಕ್ಕೆ ಕಳುಹಿಸಿ ಅವರಿಗೆ ಎಲ್ಲಾ ತರದ ಸೌಕರ್ಯಗಳನ್ನೂ, ಅನುಕೂಲತೆಗಳನ್ನೂ ಒದಗಿಸಿ ಕೊಡುತ್ತಾರೆ. ಇವರು ಹೋದಲ್ಲೆಲ್ಲಾ ಯುವಕ ಸಂಘಗಳನ್ನು ಸ್ಥಾಪಿಸಿ ಸಾಂಗ್ರಾಮಿಕ ಯುಕ್ತಿಗಳ ಪ್ರದರ್ಶನಗಳನ್ನು ಆಗಾಗ್ಗೆ ಏರ್ಪಡಿಸುತ್ತಾರೆ. ಇವರೆಲ್ಲಾ ನಾಜಿ ತತ್ವಗಳಿಗೆ ವಿರೋಧವಾಗಿ ನಡೆಯದಂತೆ ಗುಪ್ತಚಾರರ ಬಲು ಉಗ್ರ ಶಿಸ್ತಿನ ಶಿಬಂದಿಯು ಕೂಡ ವ್ಯವಸ್ಥೆಗೊಂಡಿದೆ.

ದಕ್ಷಿಣ ಅಮೇರಿಕದಲ್ಲೂ ಜರ್ಮನರ ಐಕ್ಯಕ್ಕಾಗಿ ಯಹೂದ್ಯರ ಪೀಡನೆಯು ನಡೆಯುತ್ತದೆ. ಅಲ್ಲಿಯೂ ಯಹೂದ್ಯರ ಜಾಡನೆಯು ಬಹಳ ರಭಸದಿಂದ ನೆರವೇರುತ್ತದೆ. ನಾಜಿ ಜರ್ಮನರು ತಮ್ಮ ತತ್ವಗಳನ್ನು ಸ್ಥಳೀಯ ಸರಕಾರಗಳಿಗೂ, ದೇಶಿಯ ಜನರಿಗೂ ಬೋಧಿಸಿ ಅವನ್ನು ಸ್ವೀಕರಿಸಲು ಪ್ರೇರೇಪಿಸುತ್ತಾರೆ. ಇದಕ್ಕಾಗಿ ದಿನದಲ್ಲಿ 16ಗಂಟೆ ಬರ್ಲಿನಿನಿಂದ ನಾಜಗಳ ವಾರ್ತೆಯೇ ಎಲ್ಲೆಡೆಗಳಲ್ಲಿಯೂ ರೇಡಿಯೋ ಮುಖಾಂತರ ಹರಡುತ್ತದೆ. ನಾಜಿ ಧ್ಯೇಯದ ವಿದ್ಯಾಬೋಧಕ ಚಲನಚಿತ್ರಗಳನ್ನೂ ಅವರು ಪ್ರದರ್ಶನಕ್ಕಾಗಿ ಧರ್ಮಾರ್ಥವಾಗಿ ಕಳುಹಿಸಿಕೊಡುತ್ತಾರೆ. ದೇಶಿಯ ಬರಹಗಾರರಿಗೆ ಅವರು ಧನಸಹಾಯವನ್ನು ಮಾಡಿ ಅವರೂ ನಾಜಿ ಮತವನ್ನು ಹೊಗಳಿ ಬರೆಯುವಂತೆ ಮಾಡುತ್ತಾರೆ. ಜರ್ಮನಿಗೆ ಹೋಗಿ ಕಲಿಯುವ ವಿದ್ಯಾರ್ಥಿಗಳಿಗೆ ವೇತನವನ್ನೂ, ಪ್ರಯಾಣದ ಖರ್ಚನ್ನೂ ಜರ್ಮನರು ಕೊಡುತ್ತಾರೆ. ಹಲವರು ಜರ್ಮನಿಗೆ ಹೋಗಿ ನೌಕಾ ಮತ್ತು ಸೈನ್ಯದ ಯುದ್ಧ ಕ್ರಮದಲ್ಲಿ ತರಬೇತು ಪಡೆಯುತ್ತಾರೆ.



ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷ ರೂಸ್‌ವೆಲ್ಟರು

ಹೀಗೆ ಜರ್ಮನರು ಅಸಾಮಾನ್ಯವಾದ ತಮ್ಮ ಜಾಲವನ್ನು ತಮ್ಮ ಆರ್ಥಿಕೋನ್ನತಿಗಾಗಿ ದಕ್ಷಿಣ ಅಮೇರಿಕದಲ್ಲಿ ಬೀಸಿರುವರು. ಇದರ ದೆಸೆಯಿಂದ ಬ್ರಿಟನಿನ ವ್ಯಾಪಾರಕ್ಕೆ ತುಂಬಾ ಹಾನಿಯುಂಟಾಗುವ ಸಂಭವವಿದೆ. ಅಮೇರಿಕದವರಿಗೂ ಈಗ ಇದು ತಿಳಿದುಬಂದಿದೆ. ಮೊನ್ನೆ ತಾನೇ ಅವರು ಲೀಮಾ ನಗರದಲ್ಲಿ ಒಟ್ಟುಕೂಡಿ ಪರಿಷತ್ತಿನಲ್ಲಿ ತಮ್ಮ ಭದ್ರತೆಗೆ ಕುಂದು ಬಾರದಂತೆ ಹೊರಗಿನ ದೇಶದವರು ರಾಜಕೀಯ ವಿಚಾರಗಳಲ್ಲಿ ಕೈಹಾಕದಂತೆ ಜಾಗ್ರತೆ ನೋಡಿಕೊಳ್ಳಲು ನಿರ್ಧರಿಸಿರುವರು. ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷರಾದ ರೂಸ್‌ವೆಲ್ಟರು 'ಮನ್ರೋ' ತತ್ವವನ್ನು ಪರಿಪಾಲಿಸಲು ತಾವು ಸಿದ್ಧರೆಂದು ಭರವಸೆ ಕೊಟ್ಟಿರುವರು. ದಕ್ಷಿಣ ಅಮೇರಿಕದಲ್ಲಿ ಜಪಾನರ ಪ್ರದೇಶವೂ ಇದಕ್ಕೊಂದು ಪ್ರಬಲವಾದ ಕಾರಣವಾಗಿದೆ. ಇವೆಲ್ಲಾ ವಿದ್ಯಮಾನಗಳನ್ನು ನೋಡುವಾಗ ದಕ್ಷಿಣ ಅಮೇರಿಕದ ಭವಿಷ್ಯವು ನೆಟ್ಟಗಿಲ್ಲವೆಂದು ಎನಿಸುತ್ತದೆ.

('ರೀಡರ್ಸ್ ಡಿಜಿಸ್ಟ್' ಪತ್ರಿಕೆಯ ಆಧಾರದಿಂದ ಬರೆದುದು.)



ಬಾಮಿಯನ್ ತಪ್ಪಲಲ್ಲಿ ಬುದ್ಧನ ಪ್ರತಿಮೆ ಕೆರೆವಿರುವ ಗುಡ್ಡಗಳು. ಇವು ಕೆಲವು ನೂರು ಅಡಿಗಳಷ್ಟು ಎತ್ತರವಿವೆ. ಈ ಚಿತ್ರದ ಎಡಪಾರ್ಶ್ವದಲ್ಲಿ ಕಪ್ಪಗೆ ಕಾಣುತ್ತಿರುವುದು ಮಹಾಬುದ್ಧನ ಶಿಲಾಪ್ರತಿಮೆಗಳಲ್ಲಿ ಒಂದು.

ಮಹಾ ಬುದ್ಧನ ತಪ್ಪಲು

ಬಾಮಿಯನರ ಉನ್ನತ ಮೂರ್ತಿಗಳು.

ಅಫ್ಘಾನದ ರಾಜಧಾನಿಯಾದ ಕಾಬೂಲನ್ನು ಬಿಟ್ಟು ಮುಂದುವರಿದರೆ, ವಾಯುವ್ಯ ದಿಕ್ಕಿನತ್ತ ಸರಿಯುವ ಒಂದು ಹಳೆಯ ಮಾರ್ಗವು ಘೋರ್ಬೆಂದ ಕಣಿವೆಯ ಮೂಲಕ ಸಾಗುತ್ತದೆ. ಏರುತ್ತ ಏರುತ್ತ ದಾರಿಯು ಬಂಡೆಕಲ್ಲುಗಳಿಂದ ಇಕ್ಕಟ್ಟಾಗಿದ್ದು ಘೋರ್ಬೆಂಡ್ ನದಿಯತ್ತ ಕಡೆ ಸರಿಯುವುದು. ಬಹು ಪ್ರಯಾಸಪಟ್ಟರೆ ಸುತ್ತುಸುತ್ತಾಗಿ ಕಾಲಿನ ಮೂಲಕ ೧೨,೦೦೦ ಎತ್ತರದ ಶಿಖರ ಕಣಿವೆಯ ಕಡೆಗೆ ಸಾಗಬಹುದು. ಇಲ್ಲಿಂದ ಹಿಮಾಚ್ಛಾದಿತವಾದ ಹಿಂದು ಕುಶ್ ಪರ್ವತಾವಳಿಯ ದೃಶ್ಯವು ಉತ್ತರಕ್ಕೆ ಕಾಣಬಹುದು. ನೈಋತ್ಯಕ್ಕೆ ತುಹಿಬಾಬಾ ಪರ್ವತ ಮಾಲೆಯ ನೋಟ ಸಿಗುವುದು. ಕೆಳಗಡೆ ಮಹಾಬುದ್ಧನ ಕಣಿವೆಯಾದ ಬಾಮಿಯಾನ ತಪ್ಪಲೂ ಕಾಣಬರುವುದು.

ಈ ಕಡೆಗೆ ಯಾತ್ರಾರ್ಥಿಗಳಾಗಿ ಬರುವ ಎಲ್ಲೆಡೆಯ ಜನರಿಗೂ ಈ ತಪ್ಪಲು ಬಹು ಮನೋಹರವಾಗಿ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ತನ್ನ ಪ್ರಭಾವವನ್ನು ಬೀರುತ್ತದೆ. ಗುಲ್ಗುಲೆ ನಗರದ ಮತ್ತು ಜೋಹಕ ನಗರದ ಪ್ರಾಸಾದದ ಭಗ್ನಾವಶೇಷಗಳು ಪ್ರಾಚೀನ ಕಾಲದ ಗತವೈಭವಗಳನ್ನು ಸೂಚಿಸುತ್ತಿವೆ.

ಸುಮಾರು ೧೮೦೦ ವರ್ಷಗಳ ಹಿಂದೆ ಭಾರತೀಯ ಯಾತ್ರಿಕರು ಇಲ್ಲಿಗೆ ಬಂದು ಇಲ್ಲಿಯ ದೃಶ್ಯವಿಶೇಷಗಳಿಂದ ಮನಸೋತವರಾಗಿ ಮಹಾಬುದ್ಧನ ಸ್ಮರಣಾರ್ಥವಾಗಿ ಸ್ಮಾರಕವನ್ನು ನೆಲೆಗೊಳಿಸಲು ನಿಶ್ಚೈಸಿದರು. ಅವರು ೧೭೦ ಮತ್ತು ೧೨೦ ಅಡಿ ಎತ್ತರವಾದ ಎರಡು ಕಲ್ಲಿನ ನೆಟ್ಟಗಿನ ಬುದ್ಧಮೂರ್ತಿಗಳನ್ನು ಕೊರೆದು ಕೆತ್ತಿದರು. ಸುತ್ತುಮುತ್ತಲೂ ಬೌದ್ಧಸನ್ಯಾಸಿಗಳ ನಿವಾಸಗಳನ್ನು ಕೊರೆದು ಮಾಡಿಕೊಂಡು ತಮ್ಮ ಧರ್ಮ ತತ್ವಪ್ರಚಾರಕರಾಗಿ ಅಲ್ಲಿ ನೆಲಸಿದರು.

ಸುತ್ತುಸುತ್ತಾಗಿ ಕೊರೆಯಲ್ಪಟ್ಟ ಕೊಠಡಿಗಳು, ದಾರಿಗಳು, ಮೆಟ್ಟಲುಗಳು, ಸಿದ್ಧವಾಗಿ ಅವುಗಳ ಮೂಲಕ ದೊಡ್ಡ ಶಿಲಾಮೂರ್ತಿಯ ಮೇಲ್ಭಾಗಕ್ಕೆ ಹತ್ತಿಹೋಗುವ ಏರ್ಪಾಡಿದೆ.

ಈಗ ಶೂನ್ಯವಾಗಿರುವ ನಿವಾಸಗಳು ಭಿತ್ತಿಚಿತ್ರಗಳು—ಕೆಲವೆಲ್ಲ ಈಗ ಭಗ್ನವಾಗಿದ್ದರೂ, ಆ ಬುದ್ಧನ ಮಹಾ ಮೂರ್ತಿಗಳು, ಇವೆಲ್ಲ ಒಂದು ಕಾಲದಲ್ಲಿ ಅಫ್ಘಾನಸ್ಥಾನದಲ್ಲಿದ್ದ ಬುದ್ಧನ ಮಹತ್ವದ ಕುರುಹುಗಳಾಗಿವೆ.

ಸಾಹಿತ್ಯದಲ್ಲಿ ವಿಷಾದ.

ಲೇಖಕರು: ಬಿ. ಶಂಕರಭಟ್ಟ, ವಿದ್ವಾನ್.

ನಮ್ಮ ಸಾಹಿತ್ಯವನ್ನು ಅಂದಿನಿಂದ ಇಂದಿನ ತನಕ ಪರೀಕ್ಷಿಸುತ್ತಾ ಬಂದರೆ ಒಂದು ತರದ ವಿಷಾದದ ಭಾವನೆಯು ಹೆಚ್ಚಾಗುತ್ತಾ ಬರುವುದನ್ನು ಕಾಣಬಹುದು. ಕಾವ್ಯ, ನಾಟಕ, ಉಪನ್ಯಾಸ, ಕಥೆ ಮೊದಲಾದ ಸಾಹಿತ್ಯದ ವಿವಿಧ ಭಾಗಗಳಲ್ಲಿಯೂ ಕೂಡ ಒಂದು ರೀತಿಯ ವಿಷಾದದ ಹೊಳಪು ಹೊಳೆಯುವುದು. ಸಂಸ್ಕೃತ ಸಾಹಿತ್ಯದಲ್ಲಿ ವಿಷಾದಾಂತ ನಾಟಕಗಳು ಕಡಿಮೆಯೆಂದು ಹೇಳುವರು.

ಅದು ಹೇಗೂ ಇರಲಿ. ಸುಖಾಂತ ಕಾವ್ಯಗಳಿಗಿಂತಲೂ ದುಃಖಾಂತ ನಾಟಕಗಳೇ ನಮ್ಮ ಹೃದಯದಲ್ಲಿ ಹೆಚ್ಚಾದ ಪ್ರಭಾವವನ್ನು ಬೀರುವುವು. ಸುಖಾಂತ ನಾಟಕಗಳು ಮಕ್ಕಳ ಆಟದಂತೆಯೂ, ದುಃಖಾಂತ ನಾಟಕಗಳು ವಿಚಾರವಂತರ ಆಳವಾದ ವಿಚಾರಗಳಂತೆಯೂ ಇವೆ. ವಿಷಾದಾಂತ ನಾಟಕಗಳು ಹೆಚ್ಚಾಗಿ ಪ್ರಭಾವವನ್ನು ಬೀರಲು ಇನ್ನೊಂದು ಕಾರಣವೂ ಇದೆ. ಹುಟ್ಟು ಸಾವುಗಳಿಂದ ಕೂಡಿದ ಈ ಸಂಸಾರದಲ್ಲಿ ವಿಶುದ್ಧ ಸುಖವು ಮನುಷ್ಯನಿಗೆ ಎಂದೂ ದೊರೆಯುವದಿಲ್ಲ. ಆದ ಕಾರಣ ಸುಮ್ಮನೇ ಸುಖವನ್ನು ಕಲ್ಪಿಸಿಕೊಳ್ಳುವುದು ವ್ಯರ್ಥವಾಗಿದೆ. ಇಂದು ಸುಖ ಜೀವನವು ಪ್ರಪಂಚದಲ್ಲೆಲ್ಲಾ ದುರ್ಲಭವಾಗುತ್ತಾ ಬರುತ್ತಿದೆ. ಅದರಲ್ಲಿಯೂ ನಮ್ಮ ದೇಶದಲ್ಲಿ ಸಹಳ ಅಪರೂಪವಾಗಿದೆ.

ದೇಶದ ಪರಿಸ್ಥಿತಿಗೆ ತಕ್ಕಂತೆ ಸಾಹಿತ್ಯವೂ ಹುಟ್ಟುವುದು. ಇಂದು ನಮ್ಮ ಜೀವನವು ರಾಗದ್ವೇಷ, ಭಯ ಲಜ್ಜೆಗಳಿಂದ ತುಂಬಿ, ಅನೇಕ ಸಮಯದಿಂದ ಕೆಲವು ವಿಧದ ಸ್ವಾತಂತ್ರ್ಯಗಳಿಲ್ಲದೆ ನಮ್ಮಲ್ಲಿ ಒಂದು ರೀತಿಯ ವಿಷಾದ ಛಾಯೆಯು ಎಲ್ಲೆಡೆಯೂ ಹಬ್ಬಿಕೊಂಡಿದೆ. ಆದ ಕಾರಣವೇ ನಮ್ಮ ಸಾಹಿತ್ಯವೂ ಅದನ್ನನುಸರಿಸಿಯೇ ಹುಟ್ಟುವುದು. ನಮ್ಮ ಜೀವನದಲ್ಲಿ ಹರಡಿಕೊಂಡಿರುವ ವಿಷಾದವು ನಮ್ಮ ಸಾಹಿತ್ಯದಲ್ಲಿಯೂ ಒಡೆದು ಕಾಣುವುದು. ಪ್ರಾಚೀನ ಸಂಸ್ಕೃತ ಸಾಹಿತ್ಯದ ಕಾಲದಲ್ಲಿ ನಮ್ಮ ದೇಶದಲ್ಲಿ ಇಂತಹ ವಿಷಾದದ ಹೆಸರಿದ್ದಿಲ್ಲ. ಸಾಹಿತಿಗಳೆಲ್ಲಾ ರಾಜರ ಆಶ್ರಯ ಹೊಂದಿ ಸುಖದಿಂದಿದ್ದರು. ಆದುದರಿಂದ ಅದರಿಂದುಂಟಾದ ಸಾಹಿತ್ಯವೂ ಅವರ ಜೀವನದಂತೆ ಸುಖಾಂತವಾಗಿಯೇ ಆಯಿತು. ವಿಷಾದಾಂತ ನಾಟಕಗಳು ಸಂಸ್ಕೃತ ಸಾಹಿತ್ಯದಲ್ಲಿ ಕಡಿಮೆಯಾಗಲೂ ಇದೇ ಮುಖ್ಯ ಕಾರಣ. ಸಂಸ್ಕೃತ ಸಾಹಿತ್ಯದಲ್ಲಿ ಸುಖದುಃಖಗಳೆರಡೂ ಸಮನಾಗಿ ಚರ್ಚಿಸಲ್ಪಟ್ಟಿದ್ದರೂ ಸುಖವಾದಕ್ಕೇ ಪ್ರಧಾನ್ಯತೆಯು ಅವುಗಳಲ್ಲಿ ಒಡೆದು ಕಾಣುವುದು. ದುಃಖಾಂತ ಸಾಹಿತ್ಯವು ವಿಚಾರಶೀಲರಿಗೆ ಮಾತ್ರ ಸೊಗಸಾಗಿ ತೋರುವುದು; ಸಾಧಾರಣ ಜನರಿಗೆ ಅದು ಅಷ್ಟು ರುಚಿಸುವುದಿಲ್ಲ. ಆದಕಾರಣ ಜನಸಾಮಾನ್ಯಕ್ಕಾಗಿರುವ ಸಾಹಿತ್ಯವು ದುಃಖಾಂತವಾಗಿರುವುದು ಅಷ್ಟು ಒಳ್ಳೆಯದಲ್ಲ. ಹೀಗೇ ಇನ್ನೂ ಕೆಲಕಾಲದ ವರೆಗೆ ನಮ್ಮ ಸಾಹಿತ್ಯದಲ್ಲಿ ವಿಷಾದದ ಹೊಳಪು ಹೆಚ್ಚುತ್ತಾ ಹೋದರೆ ವಿಷಾದದಲ್ಲೇ ರಸ ಸೌಂದರ್ಯಗಳು ಪ್ರತಿಬಿಂಬಿಸಲ್ಪಡುತ್ತಾ ನಡೆದರೆ, ಜನರಿಗೆ ಸುಖವಾದದಿಂದ ತುಂಬಿದ ಸಾಹಿತ್ಯದಲ್ಲಿ ಪ್ರೇಮವೂ ಕಡಿಮೆಯಾಗುತ್ತಾ ಹೋಗುವುದು.

ಇಂದಿನ ನಮ್ಮ ಸಾಹಿತ್ಯದಂತೆಯೇ ಕಳೆದ ಮಹಾಯುದ್ಧದ ಮೊದಲ್ಗೊಂಡು ಯೂರೋಪಿನ ಸಾಹಿತ್ಯದಲ್ಲಿ ಎಲ್ಲೆಲ್ಲಿಯೂ ವಿಷಾದದ ರೇಖೆಯು ಕಾಣುವುದು. ವರ್ತಮಾನ ಸಭ್ಯತೆಯು ಯೂರೋಪಿನಲ್ಲಿ ಪರಾಕಾಷ್ಟತೆಯನ್ನು ಹೊಂದಿದೆ ಎಂದು ಅಲ್ಲಿನವರು ಹೇಳುವರು. ಆದರೆ ಭೋಗಲಾಲಸೆ, ಭೋಗಸಾಮಗ್ರಿಗಳು, ಬೌದ್ಧಿಕ ಚಮತ್ಕಾರಗಳು ಇವುಗಳಿಗಾಗಿ ಹಾತೊರೆಯುತ್ತಾ ಇದ್ದು ಇವುಗಳು ಸಿಕ್ಕಿದವರಿಗೆ ಸಿಕ್ಕಿ ಉಳಿದವರು ನಿರಾಶರಾಗುವ ಒಂದು ದೃಶ್ಯವು ನಮಗೆ ಕಾಣುವುದು. ಅಲ್ಲಿ ವಿಷಾದವೂ ಒಡೆದು ಕಾಣುವುದು. ಇದರಿಂದಾಗಿ ಅಲ್ಲಿಯ ಸಾಹಿತ್ಯದಲ್ಲಿಯೂ ದುಃಖಾಂತ ಸಾಹಿತ್ಯದ ವೃದ್ಧಿಯಾಗುತ್ತಾ ಬರುತ್ತಿದೆ. ಆಧುನಿಕವಾದ ಎಲ್ಲಾ ಸುಖಸಾಮಗ್ರಿಗಳು ಪಾಶ್ಚಿಮಾತ್ಯರಿಗಿದ್ದರೂ ಅವರು ಅದರಿಂದ ಸುಖಶಾಂತಿಗಳನ್ನು ಹೊಂದಲಿಲ್ಲ, ಮತ್ತು ಹೊಂದುತ್ತಿಲ್ಲ. ಅವುಗಳಿಂದಾಗಿಯೇ ಅವರಲ್ಲಿ ವಿಷಾದವು ಹರಡತೊಡಗಿತು. ಆ ವಿಷಾದವು ಅವರ ಸಾಹಿತ್ಯದಲ್ಲಿ ಒಡೆದು ಮೂಡತೊಡಗಿತು. ಪಾಶ್ಚಿಮಾತ್ಯ ವಿದ್ವಾಂಸರೊಬ್ಬರು ಈ ವಿಷಾದ ರೇಖೆಯ ವಿಷಯವಾಗಿ ಚರ್ಚಿಸುತ್ತಾ ಇದಕ್ಕೆ ಆರು ಕಾರಣಗಳನ್ನು ತೋರಿಸಿರುವರು. ಅವರು ಹೇಳುವಂತೆ ಅಲ್ಲಿನ ಜನತೆಯಲ್ಲಿ ಒಂದು ರೀತಿಯ ಭಯವೂ ನಿರಾಶೆಯೂ ತುಂಬಿಕೊಂಡಿದೆ. ಅವುಗಳಲ್ಲಿ ಶಾರೀರಕ, ಮಾನಸಿಕ, ರಾಜನೈತಿಕ, ಆರ್ಥಿಕ, ಐತಿಹಾಸಿಕ, ನೈತಿಕವೆಂಬ ಆರು ಭೇದಗಳನ್ನು ಆ ವಿದ್ವಾಂಸರು ಹೇಳುವರು.

ಮೊದಲು ಶಾರೀರಕ ಭಯವೇನೆಂದು ನೋಡುವ. ಶರೀರ ಶಾಸ್ತ್ರವೇತ್ತರ ಮತದಂತೆ ಮನುಷ್ಯಜಾತಿಯು ಶರೀರದ ವಿಷಯದಲ್ಲಿ ದಿನದಿನಕ್ಕೆ ಅವನತಿಗಿಳಿಯುತ್ತಾ ಬರುತ್ತಿದೆ, ಎಂದರೆ ಯಾರು ಶರೀರದಿಂದ ಉತ್ತಮರಾಗಿರುವರೋ ಅವರಿಗೆ ಮಕ್ಕಳೇ ಕಡಿಮೆ. ನಿರ್ಬಲರಿಗೆ ಸಂತಾನವು ಅಧಿಕವಾಗಿ ಕಾಣುವುದು. ತಂದೆಗಿಂತ ಮಗನು ನಿರ್ಬಲನು. ಪ್ರಪಂಚದಲ್ಲಿ ಕಡಿಮೆ ಮಕ್ಕಳಿರುವ ಸಣ್ಣ ಸಂಸಾರಗಳೇ ಇದ್ದ ಮಟ್ಟಿಗೆ ಉತ್ತಮವಾಗಿ ಕಾಣುವವು. ಅಧಿಕ ಮಕ್ಕಳಿಂದ ತುಂಬಿದ ಸಂಸಾರವು ಒಂದಿಲ್ಲೊಂದು ಶಾರೀರಕ ಕಷ್ಟದಿಂದ ಪೀಡಿತವಾಗಿರುವುದನ್ನು ಕಾಣಬಹುದು. ನಮ್ಮ ದೇಶದಲ್ಲಿ ಇವಕ್ಕೆ ಅನೇಕ ನಿದರ್ಶನಗಳು ಎಲ್ಲೆಲ್ಲಿಯೂ ಕಾಣಸಿಗುತ್ತವೆ. ಅಂತಹ ದೊಡ್ಡ ಸಂಸಾರದಲ್ಲಿ ಆರ್ಥಿಕ ಇಲ್ಲವೇ ಆರೋಗ್ಯ ವಿಷಯವಾದ ವಿಷಾದವು ಹಬ್ಬಿರುವುದು. ಎಲ್ಲಾ ರೀತಿಯಿಂದಲೂ ಸುಖಶಾಂತಿಗಳಿಂದ ಕೂಡಿದ ಇಂತಹ ಸಂಸಾರವು ಎಲ್ಲಿ ಹುಡುಕಿದರೂ ಸಿಕ್ಕುವುದು ಅಪರೂಪ. ಇಂತಹ ಕುಟುಂಬದಿಂದ ಹುಟ್ಟುವ ಸಾಹಿತ್ಯವು ವಿಷಾದಾಂತವಲ್ಲದೆ ಹೇಗೆ ತಾನೆ ಸುಖಾಂತವಾಗುವುದು?

ಎರಡನೆಯದು ಮಾನಸಿಕ ಭಯ. ವಿದ್ವಾಂಸರ ಮೂಲಕ ಸಭ್ಯತೆಯ ವಿಕಾಸವು ಆಗುವುದೆಂಬುದರಲ್ಲಿ ಸಂದೇಹವಿಲ್ಲ. ಮಾನವ ಸಮಾಜದ ಉನ್ನತಿಯೂ ಸಂಸ್ಕೃತಿಯೂ ಮಹಾತ್ಮರ ಆತ್ಮೋತ್ಸರ್ಗ, ಅಧ್ಯವಸಾಯ, ಪರಿಶ್ರಮ ಇವುಗಳನ್ನು ಅನುಸರಿಸಿಕೊಂಡಿದೆ. ಎಷ್ಟರ ವರೆಗೆ ವಿಶೃಂಖಲತೆಯು ನಮ್ಮ ಸಮಾಜದಲ್ಲಿ ಉಂಟಾಗುವುದಿಲ್ಲವೋ ಅಷ್ಟರ ವರೆಗೆ ನಮ್ಮ ಸಭ್ಯತೆಯಿಂದ ನಾವು ಲಾಭ ಹೊಂದಬಹುದು. ಶೃಂಖಲತೆಯ ಆವೇಶದಲ್ಲಿ ಮಾನವ ಸಮಾಜವು ಪಾಶವಿಕ ರೂಪವನ್ನು ಹೊಂದುವುದು. ವಿಶೃಂಖಲತೆಯು ನಮ್ಮ ಸಮಾಜಕ್ಕೆ ಅಂಟಿಕೊಂಡಾಗ ಅದರ ವಿದ್ಯಾ ಬುದ್ಧಿ, ಧರ್ಮ ಕರ್ಮ, ಸಂಸ್ಕೃತಿ ಎಲ್ಲಾ ನಾಶವಾಗುವುದು. ಆಗ ಮಾನವ ಸಮಾಜವು ಒಂದು ಭೀಭತ್ಸ ರೂಪಕ್ಕೆ ತಿರುಗುವುದು. ಯುದ್ಧಕಾಲದಲ್ಲಿ ಯೂರೋಪಿನಲ್ಲಿ ಈ ವಿಶೃಂಖಲತೆಯು ಸಮಾಜದಲ್ಲಿ ರಾಜ್ಯವಾಳುತ್ತಿತ್ತು. ವಿಶೃಂಖಲತೆಯ ಎದುರಾಗಿ ಆ ಕಾಲದಲ್ಲಿ ಯಾವ ಶಕ್ತಿಯೂ ನಿಲ್ಲಲು ಸಮರ್ಥವಾಗಲಿಲ್ಲ. ಯಾವ ಮುಂದಾಳುವಿನ ಬುದ್ಧಿಶಕ್ತಿಯೂ ಇದನ್ನು ತಡೆಯಲು ಸಮರ್ಥವಾಗಲಿಲ್ಲ. ಎಲ್ಲರೂ ವಿಶೃಂಖಲತೆಯ ರಾಜ್ಯದಲ್ಲಿ ಅದಕ್ಕೆ ದಾಸರಾಗಿ ತಮ್ಮ ಮನಸ್ಸಿಗೆ ವಿರುದ್ಧವಾಗಿ ಕೆಲಸಮಾಡಬೇಕಾಗಿತ್ತು. ಧರ್ಮಾಚಾರ್ಯರೂ ಕೂಡ ಈಶ್ವರ ಪೂಜೆಗೂ ಧರ್ಮಪ್ರಚಾರಕ್ಕೂ ತಿಲಾಂಜಲಿ ಇತ್ತು ವಿಶೃಂಖಲತೆಗೊಳಗಾಗಬೇಕಾಯಿತು. ಈ ರೀತಿಯಲ್ಲಿ ಪ್ರತಿಯೊಬ್ಬನಿಗೂ ಮಾನಸಿಕ ಬಲವಿಲ್ಲದೆ ಹೋಯಿತು. ಆ ಕಾಲವಲ್ಲಿ ಹುಟ್ಟಿದ ಸಾಹಿತ್ಯವೂ ಕೂಡ ಮಾನಸಿಕ ಭಯದಿಂದಾಗಿ ವಿಷಾದಾಂತ ಉಳ್ಳದ್ದಾಗಿಯೇ ಪರಿಣಮಿಸಿತು.

ಮೂರನೆಯ ಭಯವೇ ರಾಜನೈತಿಕ ಭಯ. ಎಲ್ಲಕ್ಕಿಂತಲೂ ಇದು ಕಠಿಣವಾದುದು. ಇಂದು ಅದು ನಮ್ಮ ದೇಶದಲ್ಲಿ ಮುಖ್ಯವಾಗಿದೆ. ಸಂಸ್ಕೃತ ಸಾಹಿತ್ಯದ ಉನ್ನತಿಯ ಕಾಲದಲ್ಲಿ ರಾಜನೈತಿಕ ಭಯವೆಂಬುದೇ ಇರಲಿಲ್ಲ. ಆದ ಕಾರಣ ಆ ಕಾಲದ ನಮ್ಮ ಸಾಹಿತ್ಯವೂ ಸುಖಾಂತ ಉಳ್ಳದ್ದಾಗಿಯೇ ಹೆಚ್ಚಾಗಿ ರಚನೆಯಾಯಿತು. ಇಂದಾದರೆ ನಮಗೆ ಸ್ವಾತಂತ್ರ್ಯವಿಲ್ಲ. ಸಾಹಿತ್ಯದ ಕಡೆ ನಮ್ಮ ಸರಕಾರಗಳ ಗಮನವೂ ಇಲ್ಲ. ಜನತೆಯು ಸುಖಶಾಂತಿಗಳಿಲ್ಲದೆ ನರಳುತ್ತಿದೆ. ಇಂತಹ ವಿಷಾದದ ಸ್ಥಿತಿಯಲ್ಲಿ ಸಾಹಿತ್ಯವೂ ಅದಕ್ಕೆ ತಕ್ಕಂತೆಯೇ ಸೃಷ್ಟಿಸಲ್ಪಡುವುದು. ಜನತೆಯಲ್ಲಿನ ರಾಜನೈತಿಕ ಭಯದ ಪ್ರಭಾವವು ಸಾಹಿತ್ಯದ ಮೇಲೆಯೂ ಬೀಳುವುದು.

ಇನ್ನು ಆರ್ಥಿಕ ಭಯ. ಪ್ರಾಚೀನ ಭಾರತದಲ್ಲಾದರೆ ಸಾಹಿತಿಗಳಿಗೆ ಆರ್ಥಿಕ ಭಯವೆಂಬುದೇ ಇರಲಿಲ್ಲವೆನ್ನಬೇಕಾಗುವುದು. ರಾಜರ ಆಶ್ರಯದಲ್ಲಿದ್ದು ಸಾಹಿತ್ಯ ಸೃಷ್ಟಿಯ ಒಂದೇ ಕಾರ್ಯವನ್ನವರು ಮಾಡುತ್ತಿದ್ದರು. ಇಂದಿನ ಸಾಹಿತಿಗಳಂತೆ ಹೊಟ್ಟೆಗಾಗಿ ಅವರು ದುಡಿಯಬೇಕಾಗಿದ್ದಿಲ್ಲ. ದುಡ್ಡಿನ ಅಡಚಣೆ ನಮ್ಮಲ್ಲಿ ಮಾತ್ರವಲ್ಲ. ಪ್ರಪಂಚದಲ್ಲೆಲ್ಲಾ ಭೀಕರವಾಗುತ್ತಾ ಬರುತ್ತಿದೆ. ಜನತೆಯ ಈ ಆರ್ಥಿಕ ದುಃಸ್ಥಿತಿಯ ಪ್ರಭಾವವು ಸಾಹಿತ್ಯದಲ್ಲೂ ತೋರಿ ಬರುವುದು. ಜನಜೀವನವನ್ನು ಚಿತ್ರಿಸುವ ಸಾಹಿತ್ಯದಲ್ಲಂತೂ ಈ ಆರ್ಥಿಕ ಭಯವು ಒಡೆದು ಕಾಣುವುದು.

ಇನ್ನು ಐತಿಹಾಸಿಕ ಭಯವೇನೆಂದು ನೋಡುವ. ಪ್ರಪಂಚದಲ್ಲಿ ಪ್ರತಿಯೊಂದು ದೇಶವೂ ಪ್ರತಿಯೊಂದು ಜನಾಂಗವೂ ಒಮ್ಮೆ ಉನ್ನತಿಯ ಮೆಟ್ಟಲನ್ನೇರುವುದು, ಹಾಗೆಯೇ ಅವನತಿಗಿಳಿಯುವುದು. ಇದು ವಿಧಿನಿಯಮ. ಇದನ್ನು ತಡೆಯುವುದು ಸಾಧ್ಯವಿಲ್ಲ. ಹಿಂದಿನ ಕಾಲದಲ್ಲಿಯೂ ಈ ನಿಯಮದಂತೆ ಅನೇಕ ಜಾತಿಗಳ ಉದ್ಧಾರ ಮತ್ತು ಪತನವು ಆಗಿಯೇ ಇದೆ. ಇಂದಿನ ಪಾಶ್ಚಿಮಾತ್ಯ ಸಭ್ಯತೆಯೂ ಇದರಿಂದ ಉಳಿದುಕೊಳ್ಳಲಾರದು. ಈ ಸಭ್ಯತೆಯ ಸಮಾಧಿಯು ಬೇಗನೆ ಆಗಲಿದೆ ಎನ್ನುವವರು ಯೂರೋಪಿನಲ್ಲಿ ಹೆಚ್ಚುತ್ತಾ ಬರುವರು. ಇದೂ ಒಂದು ಭಯ. ಇದರ ಪ್ರಭಾವವೂ ಸಾಹಿತ್ಯದಲ್ಲಿ ತೋರಿ ಬರುವುದು.

ನೈತಿಕ ದೃಷ್ಟಿಯಿಂದ ಪ್ರಪಂಚದ ಪ್ರತಿಯೊಂದು ಸಮಾಜವೂ ಅವನತಿಗಿಳಿಯುತ್ತಾ ಬರುವುದನ್ನು ಕಾಣಬಹುದು. ನಮ್ಮಲ್ಲಿ ಕೆಲವು ಸಮಾಜಗಳಲ್ಲಂತೂ ನೈತಿಕ ಅವನತಿಯು ಎಂದೋ ಆಗಿ ಹೋಗಿದೆ ಎನ್ನಬೇಕು. ಧರ್ಮದ ವಿಷಯದಲ್ಲಿ ಪ್ರತಿಯೊಂದು ಸಮಾಜದಲ್ಲೂ ಶ್ರದ್ಧೆಯು ದಿನದಿನಕ್ಕೆ ಕಡಮೆಯಾಗುತ್ತಾ ಬರುತ್ತಿದೆ. ಭವಿಷ್ಯದಲ್ಲಿ ಧರ್ಮವೆಂಬುದೇ ಉಳಿಯಲಾರದೆಂಬಂತೆ ಈಗಿನ ಪರಿಸ್ಥಿತಿಯನ್ನು ನೋಡುವಾಗ ಹೇಳಬೇಕಾಗುತ್ತದೆ. ಈ ನೈತಿಕ ಅವನತಿಯು ಸಾಹಿತ್ಯದಲ್ಲೂ ತೋರಿಬರುವುದು. ಅಧಾರ್ಮಿಕ ಸಾಹಿತ್ಯವು ವೃದ್ಧಿಯಾಗುವುದು. ಇದೂ ಸಾಹಿತ್ಯದಲ್ಲಿ ಒಂದು ವಿಷಾದ ಹೊಳಪು.

ಪ್ರಪಂಚದ ಪರಿಸ್ಥಿತಿಗೆ ತಕ್ಕಂತೆ ಸಾಹಿತ್ಯವೂ ಸೃಷ್ಟಿಯಾಗುವುದು ಮತ್ತು ಇಂದಿನ ಸಾಹಿತ್ಯವು ವಿಷಾದದಿಂದ ತುಂಬಿರುವುದು ಎಂಬುದು ಮೇಲಿನ ವಿಚಾರಗಳಿಂದ ಗೊತ್ತಾಗುವುದು.

*ರಾಜ್ಯದ ಕಾರ್ಯ.

★

ಲೇಖಕರು: ಶ್ರೀ. ಕೆ. ವಿ. ಕೆ.

ಅರ್ಥಿಕ ಸಮಸ್ಯೆಗಳೂ ಸಾಮಾಜಿಕ ಸಮಸ್ಯೆಗಳೂ ಕೂಡಿ ನಮ್ಮ ಈಗಿನ ಜೀವನದಲ್ಲಿ, ಸರಕಾರದ ಕಾರ್ಯಭಾಗ ವಹಿವಾಟುಗಳಲ್ಲಿ ರೂಪ ಬದಲಾಯಿಸಿದೆ. ಸಮಾಜದ ಎಲ್ಲಾ ಸದಸ್ಯರ ಹಿತಚಿಂತನೆಯೇ ಮುಖ್ಯವಾದುದು ಎಂದು ಈಗಿನ ಸರಕಾರಗಳು ಅರಿತುಕೊಳ್ಳಬೇಕಾದ ವಿಷಯವು.

ಸರಕಾರವು ಮಾಡಬೇಕಾದುದೇನು? ಈ ವಿಚಾರವಾಗಿ ಹಲವು ಮತಗಳಿವೆ. ಇತ್ತೀಚೆಗೆ ಸರಕಾರವು ಕೆಲವೆಡೆಗಳಲ್ಲಿ ಎಲ್ಲಾ ಜನರ ಚಟುವಟಿಕೆಗಳಲ್ಲಿ ಕೈ ಹಾಕಲು ಪ್ರಾರಂಭಿಸಿದೆ. ಸರಕಾರವು ಯಾವ ಪ್ರಸಂಗದಲ್ಲಿ ಭಾಗವಹಿಸಬಹುದು; ಯಾವ ಚಟುವಟಿಕೆಗೆ ಬೆಂಬಲ ಕೊಡಬಹುದು; ಯಾವ ರೀತಿಯಲ್ಲಿ ಜನಹಿತ ಸಾಧನೆ ಮಾಡಬಹುದು; ಎಂದು ನಾವು ತಿಳಿದುಕೊಳ್ಳುವುದು ಅಗತ್ಯ.

ಪೂರ್ವದಲ್ಲಿ ರಾಜ್ಯದಲ್ಲಿ ನೆಮ್ಮದಿ ಭಂಗವಾಗದಂತೆ ನೋಡುವುದೂ, ಪರರಾಜ್ಯಗಳ ಧಾಳಿಯಿಂದ ಪ್ರಾಂತ್ಯವನ್ನು ರಕ್ಷಿಸುವುದೂ, ಸರಕಾರದ ಮುಖ್ಯ ಕಾರ್ಯಗಳಾಗಿದ್ದವು. ಅದರೆ ಈಗ ಸರಕಾರದ ಕಾರ್ಯಕಲಾಪಗಳಲ್ಲಿ ಬದಲಾವಣೆಗಳು ತೋರಿಬರುತ್ತವೆ. ಸಮಾಜ ಸುಖಕ್ಕಾಗಿ, ಜನಜೀವನಕ್ಕಾಗಿ, ಸ್ವಾತಂತ್ರ್ಯಕ್ಕಾಗಿ, ಆಸ್ತಿ ಪಾಸ್ತಿ ರಕ್ಷಣೆಗಾಗಿ ರಾಜ್ಯವು ಹೆಣಗಾಡಬೇಕು. ವ್ಯಕ್ತಿಯ ಜೀವನಕ್ಕಾಗಿ ಮಾತ್ರವಲ್ಲದೆ ಜನಾಂಗ ಸೇವೆಗಾಗಿ ರಾಜ್ಯವು ಪ್ರಯತ್ನಿಸಬೇಕು. ದಾರಿದ್ರ್ಯ, ರೋಗರುಜೆ, ಅಮಾನುಷತೆ, ಅಜ್ಞಾನ ಇವುಗಳೆಲ್ಲವನ್ನು ಹೋಗಲಾಡಿಸಲು ಕೆಲಸ ಮಾಡುವುದು ರಾಜ್ಯದ ಧರ್ಮವು. ಹಿಂದೆ ವ್ಯಕ್ತಿಗಳೂ ಸಂಘಗಳೂ ಮಾಡುತ್ತಿರುವ ಅನೇಕ ಕಾರ್ಯಗಳನ್ನು ಸರಕಾರವೇ ನಿರ್ವಹಿಸಲು ಪ್ರಾರಂಭಿಸಿದೆ. ಮಕ್ಕಳ ವಿದ್ಯಾಭ್ಯಾಸ, ಬಡವರಿಗೂ ನಿರ್ಗತಿಕರಿಗೂ ಸಹಾಯ, ನೀತಿ ಧರ್ಮ ಪ್ರೋತ್ಸಾಹ, ಇವೆಲ್ಲ ಸರಕಾರದ ಕಾರ್ಯಗಳಾಗಿ ಪರಿಣಮಿಸಿವೆ. ಪುರಜನಸಮುದಾಯದ ಯೋಗಕ್ಷೇಮ ನೋಡಿಕೊಳ್ಳುವುದು ರಾಜ್ಯದ ಧರ್ಮವು. ಸರ್ವ ವಿಧಗಳಲ್ಲಿ ವೃದ್ಧಿ ಹೊಂದಲು ಬೇಕಾಗುವ ಸಂಧಿಗಳನ್ನು ಒದಗಿಸಿಕೊಟ್ಟು ಜೀವನಕ್ಕೆ ಅಗತ್ಯವಿರುವ ಎಲ್ಲಾ ವಸ್ತುಗಳನ್ನು ಕೊಡುವ ಜವಾಬ್ದಾರಿಯನ್ನು ಅರ್ವಾಚೀನ ರಾಜ್ಯವು ವಹಿಸಿದೆ.

ಮನುಷ್ಯನ ಸಂಕಷ್ಟಗಳನ್ನು ಆದಷ್ಟು ನಿವಾರಿಸಿ ಸಮಾಜದಲ್ಲಿ ಬೇರೂರಿದ ಅಸಮಾನತ್ವವನ್ನು ನಿರ್ನಾಮ ಮಾಡುವ ಪ್ರಯತ್ನಗಳನ್ನು ಕೆಲವು ಸರಕಾರಗಳು ಮಾಡುತ್ತಿವೆ. ಸಮಾಜಕ್ಕೆ ಹಿತವಾಗುವಂತೆಯೂ ರಾಜ್ಯದ ನೆಮ್ಮದಿಗೆ ಅಪಾಯವಾಗದಂತೆಯೂ, ಪ್ರತಿ ವ್ಯಕ್ತಿಯ ಸ್ವಂತ ಸ್ವಾತಂತ್ರ್ಯವು ದೊರಕುವಂತೆಯೂ ಮಾಡುವುದು ರಾಜ್ಯದ ಧರ್ಮವಾಗಿದೆ.

ಸರಕಾರದ ಕಾರ್ಯಭಾಗದ ಕುರಿತು ಎರಡು ಅಭಿಪ್ರಾಯಗಳಿವೆ; ಪ್ರತಿ ವ್ಯಕ್ತಿಯು ಸರಕಾರದಿಂದ ಸಹಾಯ ಕೋರದೆ ಸ್ವಾವಲಂಬನೆಯಿಂದ ತನ್ನ ಅಭಿವೃದ್ಧಿ ಮಾಡಿಕೊಳ್ಳಬೇಕೆಂಬ ವ್ಯಕ್ತಿ ವಾದವೊಂದು. ರಾಜ್ಯವು ಸಮಾಜ ಚಟುವಟಿಕೆಗಳ ವ್ಯವಹಾರ ಕ್ಷೇತ್ರದ ಗೋಜಿಗೆ ಹೋಗಬಾರದೆಂದು ವ್ಯಕ್ತಿವಾದಿಗಳು ವಾದಿಸುತ್ತಾರೆ. ಈ ತತ್ವಕ್ಕೆ ಉದಾಸೀನನೀತಿ ಎನ್ನಬಹುದು; ಎಂದರೆ ಸರಕಾರವು ವ್ಯಕ್ತಿಗಳ ಚಟುವಟಿಕೆಗಳಲ್ಲಿ ತಲೆ ಹಾಕಬಾರದೆಂಬುದೇ ಈ ತತ್ವದ ಅಡಿಗಟ್ಟು. ಮುಖ್ಯವಾಗಿ ವ್ಯಾಪಾರ ವಹಿವಾಟುಗಳಲ್ಲಿ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡುವುದೂ, ಗಿರಣಿಗಳ ಕಾನೂನು ಮಾಡುವುದೂ, ಕೆಲಸಗಾರರ ಕೂಲಿಯನ್ನು ನಿಷ್ಕರ್ಷಿಸುವುದೂ, ಅವರ ಮನಸ್ಸಿಗೊಪ್ಪಿದ ವಿಷಯಗಳು. ಪ್ರತಿಯೊಬ್ಬನನ್ನೂ ತನ್ನ ಹಿತ ಸಾಧನೆಗೆ ಬಿಟ್ಟರೆ, ಸಮಾಜ ಹಿತವೊದಗುವದೆಂದು ಅವರು ವಾದಿಸುತ್ತಾರೆ. ಮಿತಿ ಇಲ್ಲದ ಸ್ಪರ್ಧೆ ಇರಬೇಕೆಂದು ಅವರು ಘೋಷಿಸುತ್ತಾರೆ. ಆದರೆ ಈ ಸಿದ್ಧಾಂತವು ಪರಿಣಾಮದಲ್ಲಿ ಕೆಡುಕನ್ನು ತಂದೊಡ್ಡುತ್ತದೆ. ಏಕೆಂದರೆ ಸ್ಪರ್ಧೆಯ ದೆಸೆಯಿಂದ ಅಬಲನು ಬಲಹೀನನಾಗಿ ಸಮಾಜಸುಖವು ಭಂಗವಾಗುತ್ತದೆ. ವ್ಯಕ್ತಿಗಳನ್ನು ಅವರಷ್ಟಕ್ಕೆ ಬಿಟ್ಟ ಪಕ್ಷಕ್ಕೆ, ತಮ್ಮ ಜನಗಳಿಂದ ತಮಗೇ ಕೆಡುಕು ಸಂಭವಿಸಿ, ಸಮಾಜಕ್ಕೂ ತೊಂದರೆಯಾಗಬಹುದು. ಈ ಕಾರಣದಿಂದಲೇ ತೊಡಕಾದ ಇಂದಿನ ಜೀವನದಲ್ಲಿ ಸರಕಾರದ ಕಾಯಿದೆಗಳ ಅಗತ್ಯ ತೋರುತ್ತದೆ.

ವ್ಯಕ್ತಿವಾದವು ಮೆಲ್ಲನೆ ಸಮತಾವಾದ ಪ್ರಭೆಯಿಂದ ಮಾಯವಾಗುತ್ತ ಬಂದಿದೆ. ಸಮತಾವಾದಿಗಳು ಉದಾಸೀನನೀತಿವಾದವನ್ನು ಪೂರ್ಣವಾಗಿ ನಿರಾಕರಿಸುತ್ತಾರೆ. ಅವರ ಅಭಿಪ್ರಾಯದಂತೆ ಉದಾಸೀನ ನೀತಿವಾದವು ಸಮಾಜದ ಅವನತಿಗೆ ಕಾರಣವು. ಸಮತಾವಾದಿಗಳು ಸರಕಾರವು ರಾಜಕೀಯ ವಿಷಯಗಳನ್ನು ಮಾತ್ರವಲ್ಲ ಆರ್ಥಿಕ ವಿಚಾರಗಳನ್ನೂ ವಹಿಸಿಕೊಳ್ಳಬೇಕೆನ್ನುತ್ತಾರೆ. ವ್ಯಕ್ತಿವಾದಿಗಳ ತತ್ವದಿಂದ ಹಣವಿದ್ದವರಿಗೆ ಲಾಭವಲ್ಲದೆ ಬಡವರಿಗಿಲ್ಲ. ಅಮಿತವಾದ ಸ್ಪರ್ಧೆಯ ತತ್ವದಲ್ಲಿ ಅವರಿಗೆ ಏನೂ ಸಂತೋಷವಿಲ್ಲ. ವ್ಯವಹಾರ ಕ್ಷೇತ್ರಕ್ಕೆ ಪ್ರಜಾಸತ್ತೆಯ ತತ್ವಗಳನ್ನು ಜಾರಿಗೆ ತಂದು ಸಮತಾವಾದದಿಂದ ಸಮಾಜಕ್ಕೆ ಹಿತಸಾಧನೆಯಾಗುವುದು ಎಂದು ಅವರು ಅನ್ನುತ್ತಾರೆ. ವ್ಯಕ್ತಿ ಸ್ಥಿತಿಯು ಪೂರ್ಣ ಮಾರ್ಪಾಟಾಗಬೇಕೆಂಬುದೇ ಸಮತಾವಾದಿಗಳ [illegible].

ಸಮತಾವಾದವು ಅನೇಕ ರೂಪಗಳಲ್ಲಿದೆ. [illegible] ಸರಕಾರ ಸಮತವಾದವು. ಜಮೀನು, ಗನಿಗಳು, ಕಾರ್ಖಾನೆಗಳು, ಮಾರ್ಗಗಳು, ಕಾಡುಗಳು ಇವೆಲ್ಲಾ ಉತ್ಪತ್ತಿಯ ಕಾರಣಗಳು. ಇವೆಲ್ಲಾ ಸರಕಾರದ ಅಧೀನವಿರಬೇಕೆಂದು ಸಮತಾವಾದಿಗಳ ಹೇಳಿಕೆಯಾಗಿದೆ. ಇಂತಹ ಸಮತಾವಾದೀ ಸರಕಾರವನ್ನು ಶಾಂತರೀತಿಯಿಂದ ನಿಧಾನವಾಗಿ ಸ್ಥಾಪಿಸಬೇಕೆಂದು ಅವರು ಅನ್ನುತ್ತಾರೆ. ಕೂಲಿ ವರ್ಗದವರ ಸಲುವಾಗಿ ಸಮಾಜದಲ್ಲಿರುವ ಭೇದಗಳು ನಿರ್ಮೂಲವಾಗುವ ವರೆಗೆ ಸಂಘವಾದಿಗಳೆಂಬ ತೀವ್ರ ಸಮತಾವಾದಿಗಳು ಬಲಾತ್ಕಾರದಿಂದಲೇ ಸರಕಾರ ನಡೆಸಬೇಕೆನ್ನುತ್ತಾರೆ. ಸಂಘವಾದಿಗಳ ಅಭಿಪ್ರಾಯದಂತೆ ಉತ್ಪನ್ನವೆಲ್ಲಾ ಸಾರ್ವಜನಿಕವಾಗಿರಬೇಕು. ಪ್ರತಿ ವ್ಯಕ್ತಿಯು ತನ್ನ ಶಕ್ತಿಗೆ ಅನುಗುಣವಾಗಿ ದುಡಿಯಬೇಕು. ಹಾಗೆ ದುಡಿದುದಕ್ಕೆ ಅವನ ಅವಶ್ಯಕತೆಗೆ ಬೇಕಾದಂತೆ ಕೂಲಿ ಕೊಡಬೇಕೆನ್ನುತ್ತಾರೆ. ಸೋವಿಯಟ್ ರಷ್ಯ ದೇಶದಲ್ಲಿ ಈ ಪದ್ಧತಿಯನ್ನು ಸ್ಥಾಪಿಸಲು ಪ್ರಯತ್ನವಾಗಿದೆ. ರಷ್ಯ ದೇಶಕ್ಕೀಗ ಅಸಾಮಾನ್ಯ ಶಕ್ತಿ ದೊರಕಿದೆ ಎಂಬದು ಮಹತ್ವದ ವಿಚಾರವು. ಜಪಾನು, ಜರ್ಮನಿ ದೇಶಗಳಿಂದ ಸೋಲನ್ನು ಪಡೆದು ನರಳಿದ ರಷ್ಯವು ಈಗ ಅದೇ ರಾಜ್ಯಗಳ ಮೇಲೆ ಕತ್ತಿ ಕಟ್ಟಿ ನಿಲ್ಲುವಂತಿದೆ. ಇದು ಅನೇಕರಲ್ಲಿ ಆಶ್ಚರ್ಯವನ್ನುಂಟುಮಾಡುವುದು. ಇದು ಸಾಮಾನ್ಯ ಸಾಹಸ ಕಾರ್ಯವಲ್ಲ. ಇಂತಹ ಅದ್ಭುತ ಶಕ್ತಿಗೆ ಸೋವಿಯಟ್ ಸರಕಾರವೇ ಕಾರಣವಾಗಿದೆ. ಸಮತಾವಾದ ಬಲ್ಲ ಅನೇಕ ವಿಜ್ಞಾನಿಗಳು ಅದನ್ನು ಖಂಡಿಸುತ್ತಾರೆ. ಲಾಭವಿಲ್ಲದೆ ಉತ್ಪನ್ನ ಮಾಡುವುದೆಂದರೆ ನಂಬಲಾಗದ ವಿಷಯವು; ಸರಕಾರವು ರಾಜಕೀಯ ಮತ್ತು ಅರ್ಥಿಕ ವಿಚಾರಗಳೆರಡನ್ನು ಸಮರ್ಥತೆಯಿಂದ ನಡೆಸುವುದು ಅಸಂಭವವೆಂದು ಹಲವು ವಿವೇಚನಾಶಕ್ತರ ಅಭಿಪ್ರಾಯವು. ಸಮತಾವಾದವು ಒಂದು ತರದ ನೌಕರಶಾಹಿಯನ್ನು ಸ್ಥಾಪಿಸುತ್ತ ಅನಿಷ್ಟ ಪರಿಣಾಮಗಳಿಗೆ ಹೇತುವಾಗುವುದೆಂದು ಅವರು ಸಾರುತ್ತಾರೆ. ಜನಸಮುದಾಯಕ್ಕೆ ಲಾಭ ಹೆಚ್ಚು ಸಿಗಬೇಕೆಂಬ ಆಸೆಯಿಂದ ವ್ಯಕ್ತಿಯು ಸ್ವಾತಂತ್ರ್ಯವನ್ನು ಮುರಿದು ಜನಜೀವನದಲ್ಲಿ ಸರಕಾರ ಆಜ್ಞೆಗಳಿಗೆನೇ ತಲೆ ಬಗ್ಗಿಸಬೇಕಾಗುತ್ತದೆ.

ಪ್ರಜಾಸತ್ತೆಯ ಸರಕಾರವಿದ್ದ ರಾಜ್ಯಗಳಲ್ಲಿ ಈ ಹಲವು ತತ್ವಗಳನ್ನು ಒಂದು ತರದ ಒಡಂಬಡಿಕೆಗೆ ತಂದು ರಾಜಕೀಯ ಸಂಗತಿಗಳಲ್ಲಿ ಏರ್ಪಡಿಸಿದಂತೆಯೇ ಅರ್ಥಿಕ ವಿಷಯಗಳಲ್ಲಿಯೂ, ಸಮಯೋಚಿತ ಸಮಾನತ್ವ ಕೊಟ್ಟರೆ ನಿಜವಾದ ಪ್ರಜಾಸತ್ತೆ ಸರಕಾರ ನಡೆದು ರಾಜಶಾಸನಾನುರೂಪ ಅಭಿವೃದ್ಧಿಯಾಗುವುದು ಎಂದು ವಿಚಾರಶೀಲರ ಅಭಿಪ್ರಾಯವು. ಇತ್ತೀಚೆಗೆ ವ್ಯಕ್ತಿವಾದಿಗಳಿಗೂ ಸಮಾಜವಾದಿಗಳಿಗೂ ಹೆಚ್ಚು ಭೇದಾಭಿಪ್ರಾಯವಿರುವುದಿಲ್ಲ. ಎರಡು ಪಕ್ಷದವರಿಗೂ ಉದಾಸೀನ ನೀತಿ ತತ್ವದಲ್ಲಿ ನಂಬಿಕೆ ಕೆಟ್ಟಿದೆ. ಜನ ಸಮುದಾಯದ ಹಿತಕ್ಕಾಗಿ ಸಮಾಜವು ಆದಷ್ಟು ಹೆಚ್ಚು ಜನತೆಯ ಅಧೀನವಿರಬೇಕೆಂದು ಪ್ರಯತ್ನಿಸಬೇಕು. ಸಾಮುದಾಯಿಕ ತತ್ವವು ಈ ಅಭಿಪ್ರಾಯಗಳಿಂದ ಜನ್ಮವೆತ್ತಿದೆ. ಸಾರ್ವಜನಿಕ ಮತ್ತು ಖಾಸಗಿ ಒಡೆತನದಲ್ಲಿ ಅವರಿಗೆ ಭೇದ ಕಾಣುವುದಿಲ್ಲ. ಅನುಭವದಿಂದಲೇ ಪಾಠ ಕಲಿಯಬೇಕೆಂದು ಅವರು ಹೇಳುವರು. ಜನ ಹಿತಕ್ಕಾಗಿಯೂ, ಸಮಾಜದ ನೆಮ್ಮದಿಗೂ ಬಾಧಕ ಬಾರದಂತೆ ನಿಧಾನವಾಗಿ ಬದಲಾವಣೆಗಳನ್ನು ತರಬೇಕೆಂದು ಅವರು ಸೂಚಿಸುತ್ತಾರೆ.

ಯುರೋಪಿನ ಮಹಾ ಯುದ್ಧದ ಮೊದಲ್ಗೊಂಡು ಈ ತತ್ವವು ದೇಶಗಳ ಶಾಸನಗಳಲ್ಲಿ ಪ್ರಬಲ ಭಾಗವಹಿಸಿದಂತೆ ಸ್ಪಷ್ಟ ತೋರುತ್ತದೆ. ಈ ಕಾಲದಲ್ಲಿ ಉದಾಸೀನ ನೀತಿ ನಿರ್ನಾಮವಾಗಿ ಸಮತಾವಾದವು ಸಾವಧಾನದಿಂದ ಎಲ್ಲಾ ಸರಕಾರಗಳಿಂದಲೂ ಅಂಗೀಕೃತವಾಗುತ್ತ ಬರುತ್ತದೆ.

ಅರ್ಥಿಕ ಸಮಸ್ಯೆಗಳೂ, ಸಾಮಾಜಿಕ ಸಮಸ್ಯೆಗಳೂ ಕೂಡಿ ನಮ್ಮ ಈಗಿನ ಜೀವನದಲ್ಲಿ ಸರಕಾರದ ಕಾರ್ಯಭಾಗ ವಹಿವಾಟುಗಳಲ್ಲಿ ರೂಪ ಬದಲಾಯಿಸಿದೆ. ಸಮಾಜದ ಎಲ್ಲಾ ಸದಸ್ಯರ ಹಿತಚಿಂತನೆಯೇ ಮುಖ್ಯವಾದುದು ಎಂಬುದಿದು ಈಗಿನ ಸರಕಾರಗಳು ಅರಿತುಕೊಳ್ಳಬೇಕಾದ ವಿಷಯವು.

*ಈ ಲೇಖದಲ್ಲಿ ಉಪಯೋಗಿಸಿದ ಕೆಲವು ಪಾರಿಭಾಷಿಕ ಪದಗಳ ಆಂಗ್ಲ ಸಮಾನಾರ್ಥಕಗಳು ಹೀಗಿವೆ:— ರಾಜ್ಯ =State; ಕಾರ್ಯ= Function; ವ್ಯಕ್ತಿವಾದ= Individualism; ಸಮತಾವಾದ= Socialism; ಸಂಘವಾದ= Communism; ಉದಾಸೀನ ನೀತಿ= *Laissez-Faire* .

ಕಾಸರಗೋಡು ಕರ್ಣಾಟಕಕ್ಕೋ ಕೇರಳಕ್ಕೋ?

★

ಲೇಖಕರು: ಶ್ರೀ। ಬೇಕಲ ರಾಮನಾಯಕ

೧೭ನೆಯ ಶತಮಾನದ ಆರಂಭದಿಂದ ಕನ್ನಡವು ನೀಲೇಶ್ವರದ ವರೆಗೆ ಹಬ್ಬಿದ್ದಿತೆಂಬುದಕ್ಕೆ ಯಾವ ಸಂಶಯವೂ ಇಲ್ಲ.... ಇಂಗ್ಲೀಷರಿಗಿಂತ ಮೊದಲೇ ನೀಲೇಶ್ವರ ತಾಲೂಕು ಕನ್ನಡದ ಅಧೀನವಾಗಿದ್ದಿತು. ಕವಾಯಿ ಹೊಳೆಯ ವರೆಗಿನ ಭಾಗದಲ್ಲಿ ಕನ್ನಡ ಜನರು, ಕನ್ನಡ ಭಾಷೆ, ಕನ್ನಡ ಸಂಸ್ಕೃತಿಯು ನೆಲೆಗೊಂಡು ೩ ಶತಮಾನಗಳಿಗಿಂತಲೂ ಹೆಚ್ಚಾಗಿ ಹೋಯಿತು. ಚಾರಿತ್ರಿಕ ಆಧಾರವು ಇಲ್ಲಿದೆ.

ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸಬೇಕೆಂಬ ಚಳವಳವು ತೀವ್ರವಾಗಿ ಸಾಗುತ್ತಿದೆಯಷ್ಟೆ. ಮಲಬಾರಿನಿಂದ ಹಲವು ಜಾತಗಳು ಕಾಸರಗೋಡಿಗೆ ಬಂದು ಆವೇಶಯುಕ್ತವಾದ ಭಾಷಣಗಳನ್ನು ಕೊಟ್ಟು ಕಾಸರಗೋಡನ್ನು ಮಲಬಾರಿಗೆ ಸೇರಿಸುವೆವೆಂಬ ಪ್ರತಿಜ್ಞೆಯನ್ನು ತೊಟ್ಟುಹೋಗಿವೆ. ಸರಕಾರಕ್ಕೂ ಮೇಲೆ ಮೇಲೆ ಆಗ್ರಹಪೂರ್ವಕವಾದ ಮನವಿಗಳೂ ಹೋಗುತ್ತಿವೆಯಂತೆ. ಮಲೆಯಾಳಿ ಬಂಧುಗಳ ಈ ಔದ್ಧತ್ಯದಿಂದ ಕನ್ನಡಿಗರಾದರೂ ತಮ್ಮ ಪ್ರಾಂತರಕ್ಷಣೆಗಾಗಿ ಹೋರಾಡಬೇಕಾದುದು ಅನಿವಾರ್ಯವಾಗಿ. ಆದರೆ, ಇದರಿಂದ ಕನ್ನಡ ಮಲೆಯಾಳಿಗಳೊಳಗೆ ಇದುವರೆಗೆ ಇದ್ದ ಪ್ರೇಮಭಾವವು ನಶಿಸಿ ದ್ವೇಷವು ಉತ್ಪನ್ನವಾಗುವ ಸಂಭವಗಳು ಕಂಡುಬರುತ್ತಿವೆ. ಮಲೆಯಾಳದ ಚಳವಳಗಾರರಲ್ಲಿ ಕೆಲವರಂತೂ ಪ್ರಾಂತವಿಸ್ತಾರ ಭ್ರಾಂತರಾಗಿ ಹೋಗಿರುತ್ತಾರೆ. ಕಾಸರಗೋಡು ಕಡೆಯಲ್ಲಿ ಈ ತೊಡಕಿನ ಪ್ರಶ್ನೆಯು ಕೇಳಿಸದ ದಿನವೇ ಇಲ್ಲ. ಕನ್ನಡದ ನೀರನ್ನು ಕುಡಿದು ಕನ್ನಡಕ್ಕೇ ಎದುರು ನಿಲ್ಲುವ ಈ ಬಂಧುಗಳ ಧಾರ್ಷ್ಟ್ಯವು ಯಾವ ಕಾಲಕ್ಕೂ ಉಚಿತವೆನಿಸದು. ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಐಕಮತ್ಯದಿಂದ ದುಡಿಯಬೇಕಾದ ಈ ಕಾಲದಲ್ಲಂತೂ ಕನ್ನಡ ಮಲೆಯಾಳಗಳೊಳಗಿನ ಅಂತಃಕಲಹವು ಸರ್ವಥಾ ಯೋಗ್ಯವಲ್ಲ. ಆದುದರಿಂದ ಈ ಘರ್ಷಣೆಯಿಂದ ಕಿಡಿಯೆದ್ದು ದ್ವೇಷಾಗ್ನಿಯು ಪ್ರಬಲಿಸುವ ಮೊದಲೇ ಇತ್ತಂಡದವರೂ ವಿವೇಕದಿಂದ ಈ ವಿವಾದವನ್ನು ತೀರಿಸಿಕೊಳ್ಳುವುದು ವಿಹಿತವು.



ಕೇರಳವು ಯಾವುದು? ಪರಶುರಾಮನು ಗೋಕರ್ಣದಿಂದ ಕನ್ಯಾಕುಮಾರಿ ವರೆಗಿನ ಭೂಭಾಗವನ್ನು ಸಮುದ್ರರಾಜನಿಂದ ಪಡೆದು ಆ ಭಾಗಕ್ಕೆಲ್ಲಾ ಸ್ಥೂಲವಾಗಿ ಕೇರಳವೆಂದು ಹೆಸರಿಟ್ಟನು. ಬಳಿಕ ಗೋಕರ್ಣದಿಂದ ಸೀತಾನದಿಯ ವರೆಗೆ ಹೈಗ (ಉತ್ತರ ಕನ್ನಡ)ವೆಂದೂ ಸೀತಾನದಿಯಿಂದ ಪಯಸ್ವಿನೀ ನದಿಯ ವರೆಗೆ ತೌಳವವೆಂದೂ, ಪಯಸ್ವಿನಿಯಿಂದ ಪುದು ಪಟ್ಟಣದ ವರೆಗೆ ಕೂಪರಾಜ್ಯ(ಮಲೆಯಾಳ)ವೆಂದೂ, ಪುದು ಪಟ್ಟಣದಿಂದ ಕನ್ನೇಟಿ ವರೆಗೆ ಕೇರಳರಾಜ್ಯ(ಕೊಚ್ಚಿ)ವೆಂದೂ, ಕನ್ನೇಟಿಯಿಂದ ಕನ್ಯಾಕುಮಾರಿ ವರೆಗೆ ಮೂಷಿಕರಾಜ್ಯ (ತಿರುವಾಂಕೂರು)ವೆಂದೂ ನಾಲ್ಕು ವಿಭಾಗಗಳನ್ನು ಮಾಡಿದನು. ಹೀಗೆ ಪುದು ಪಟ್ಟಣದಿಂದ ಕನ್ನೇಟಿ ವರೆಗಿರುವ ಕೊಚ್ಚಿಯೇ ನಿಜವಾದ ಕೇರಳವಾದರೂ ಕಾಲಕ್ರಮದಲ್ಲಿ ಕೂಪ ಕೇರಳ ಮೂಷಿಕ ರಾಜ್ಯ ಪರಿವೃತವಾದ ಪ್ರಾಂತವೆಲ್ಲವನ್ನೂ ಕೇರಳವೆಂದೇ ಕರೆಯುವ ರೂಢಿಯಾಯಿತು. ಇದರ ಉತ್ತರ ಗಡಿಯು ಪಯಸ್ವಿನೀ (ಚಂದ್ರಗಿರಿ) ನದಿಯಾಗಿತ್ತು.

ಕ್ರಿ. ಪೂ. ೨೦೦ರಿಂದ ಕ್ರಿ. ಶ. ೬೦೦ ವರೆಗೆ ಹೈಗ ತೌಳವ ಮತ್ತು ಮೈಸೂರಿನ ಪಶ್ಚಿಮ ಭಾಗವನ್ನು ಕದಂಬರು ಆಳುತ್ತಿದ್ದರು. ಇವರ ರಾಜ್ಯದಲ್ಲಿ ಕನ್ನಡ ತುಳು ಭಾಷೆಗಳು ತುಂಬಾ ಪ್ರಚಾರದಲ್ಲಿದ್ದುವು. ಇದೇ ವಂಶದ ಮಯೂರವರ್ಮ ಚರಿತ್ರೆಯಲ್ಲಿ ಗೋಕರ್ಣದಿಂದ ಪಯಸ್ವಿನಿಯ ವರೆಗೆ ಅವನ ರಾಜ್ಯವು ವಿಸ್ತರಿಸಿತ್ತೆಂಬ ಉಲ್ಲೇಖವಿದೆ. ಇದೇ ವಂಶಕ್ಕೆ ಸೇರಿದ ಕುಂಬಳೆ (ಮಾಯಂಪಾಡಿ) ರಾಜರ ರಾಜ್ಯವು ದಕ್ಷಿಣದಲ್ಲಿ ಪಯಸ್ವಿನಿಯ ವರೆಗೆ ವ್ಯಾಪಿಸಿತ್ತೆಂದು ವೇಲಾಪುರ ಮಾಹಾತ್ಮ್ಯವು ಸ್ಪಷ್ಟವಾಗಿ ಹೇಳುತ್ತಿದೆ. ಮಾಯಂಪಾಡಿ ರಾಜರು ರಾಜ್ಯ ತುಳುವು.

ಕ್ರಿ. ಶ. [illegible]ರಲ್ಲಿ ಆಳಿದ ಚಾಲುಕ್ಯ ಅರಸನಾದ ಎರಡನೇ ಕೀರ್ತಿವರ್ಮನು ಬರಸಿದ ಕನ್ನಡ ಬರಹದ ಒಂದು ಶಿಲಾಶಾಸನವು ಕಾಸರಗೋಡು ತಾಲೂಕಿನ ಆದೂರು ದೇವಸ್ಥಾನದಲ್ಲಿ ಈಗಲೂ ಇದೆ.

ತೌಳವನ್ನು ಆಳಿದ ಸಂತರ [illegible] ರಾಷ್ಟ್ರಕೂಟರು, ಆಳುಪರು, ವಿಜಯನಗರದ ರಾಯರು ಮೊದಲಾದ ರಾಜರ ಕಾಲದಲ್ಲಿಯೂ ತುಳುನಾಡಿನ ದಕ್ಷಿಣಗಡಿಯು ಪಯಸ್ವಿನಿಯೇ ಆಗಿದ್ದಿತು ಎಂಬುದು ಚರಿತ್ರೆ ನೋಡಿದವರೆಲ್ಲರಿಗೂ ತಿಳಿದ ಸಂಗತಿಯಾಗಿದೆ.

ಕ್ರಿ. ಶ. ೧೫೧೪ರಲ್ಲಿ ತುಳುನಾಡಿನ ಕರಾವಳಿಯನ್ನು ಸಂದರ್ಶಿಸಿದ ಡುರ್ತೆಬಾರ ಬೋಸನೆಂಬ ಪೋರ್ಚುಗೀಸ ಪ್ರವಾಸಿಯು 'ತುಳುನಾಡು ಹೊನ್ನಾವರದಿಂದ ದಕ್ಷಿಣಕ್ಕೆ ಪಯಸ್ವಿನಿಯ ವರೆಗೆ ವ್ಯಾಪಿಸಿದೆ.— ಪಯಸ್ವಿನಿಯ ದಕ್ಷಿಣ ಭಾಗವು ಮಲೆಯಾಳ ಅರಸರ ಕೈಯಲ್ಲಿದೆ' ಎಂದು ಬರೆದಿಟ್ಟಿದ್ದಾನೆ.

ಹೀಗೆ ಪರಶುರಾಮನ ಕಾಲದಿಂದ ಪದಿನಾರನೇ ಶತಮಾನದ ಆರಂಭದ ವರೆಗೂ ಕನ್ನಡ ನಾಡಿನ ದಕ್ಷಿಣ ಗಡಿಯು ಪಯಸ್ವಿನೀ (ಚಂದ್ರಗಿರಿ) ನದಿಯೇ ಆಗಿತ್ತೆಂಬುದು ನಿರ್ವಿವಾದವು. ಮಲೆಯಾಳಿಗಳು ಕೂಡ ಆ ಮೇರೆಯನ್ನು ಅನುಸರಿಸಿಕೊಂಡೇ ಇರುತ್ತಿದ್ದರು. ಅಂದಿನ ಮಲೆಯಾಳಿಗಳಿಗೆ ಚಂದ್ರಗಿರಿ ನದಿಯನ್ನು ದಾಟುವುದು ನಿಷಿದ್ಧವಾಗಿದ್ದಿತು. ಚಂದ್ರಗಿರಿ ನದಿಯನ್ನು ದಾಟಿದ ಮಲೆಯಾಳಿಗಳಿಗೆ ಜಾತಿಬಹಿಷ್ಕಾರವಾಗುತ್ತಿದ್ದಿತು. ಇಂಥ ಒಂದು ರೂಢಿಯು ನೆಲೆಗೊಳ್ಳಬೇಕಾದರೆ ಆ ಗಡಿಯ ವಿಷಯ ಎಷ್ಟು ನಿಷ್ಕರ್ಷಾಭಿಪ್ರಾಯವಿದ್ದಿರಬೇಕೆಂದು ನಾವು ಊಹಿಸಿಕೊಳ್ಳಬಹುದು. ಹೀಗೆ ಪುರಾಣ ಇತಿಹಾಸಗಳಿಂದ ನಿರ್ದಿಷ್ಟವಾದ ಒಂದು ಮೇರೆಯನ್ನು ಮೀರಿ ನಮ್ಮ ಮಲೆಯಾಳಿ ಬಂಧುಗಳು ಈಗ ಸಂಪೂರ್ಣ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಬೇಕೆಂದು ಛಲಹಿಡಿಯುವುದರಲ್ಲಿ ಅವರ ಪ್ರಾಂತವಿಸ್ತಾರ ಲಾಲಸೆಯೊಂದೇ ವ್ಯಕ್ತವಾಗುತ್ತಿದೆಯಲ್ಲದೆ ನ್ಯಾಯವೇನೂ ತೋರುವುದಿಲ್ಲ.

ಹದಿನೇಳನೇ ಶತಮಾನದ ಆರಂಭದಲ್ಲಿ ಕನ್ನಡ ಸೀಮೆಯು ದಕ್ಷಿಣದಲ್ಲಿ ವಿಸ್ತರಿಸುತ್ತಾ ಬಂದಿತು. ಕ್ರಿ. ಶ. ೧೬೦೮ರಲ್ಲಿ ಇಕ್ಕೇರಿಯ ಹಿರಿಯ ವೆಂಕಟಪ್ಪ ನಾಯಕನು ತನ್ನ ಅತುಲಪರಾಕ್ರಮದಿಂದ ಮಹಾಸೈನ್ಯದೊಡನೆ ಪಯಸ್ವಿನೀ ನದಿಯನ್ನು ದಾಟಿ ಚಂದ್ರಗಿರಿ, ಫಣಿಯಾಲ, ಕುಂಡಂಕುಯಿ, ಬಂದ್ಯಡ್ಕ ಮೊದಲಾದ ಭಾಗಗಳನ್ನು ಜಯಿಸಿ ಅಲ್ಲೆಲ್ಲಾ ಬಲವಾದ ಕೋಟೆ ಕೊತ್ತಳಗಳನ್ನು ಕಟ್ಟಿಸಿದನು. ಅಂದಿನಿಂದ ಕೇರಳದ ಗಡಿಯು ಚಂದ್ರಗಿರಿಯನ್ನು ಬಿಟ್ಟು ಇನ್ನೂ ದಕ್ಷಿಣಕ್ಕೆ ಸರಿ

ಯಿತು. ಹಿರಿಯ ವೆಂಕಟಪ್ಪನ ಆ ಕೋಟೆಗಳು ಅದಕ್ಕೆ ಸಾಕ್ಷಿಯಾಗಿ ಇಂದಿಗೂ ನಿಂತಿವೆ. 1657ರಲ್ಲಿ ಶಿವಪ್ಪನಾಯಕನು ಇನ್ನೂ ದಕ್ಷಿಣಕ್ಕೆ ಮುಂದರಿಸಿ ಬೇಕಲ, ಚಿತ್ತಾರಿ, ಹೊಸದುರ್ಗಗಳನ್ನು ಜಯಿಸಿ ಅಲ್ಲಲ್ಲಿ ಮಹಾದುರ್ಗಗಳನ್ನು ಕಟ್ಟಿಸಿ ಕೊತ್ತಲನಾಡು ಅರಸನ ಸ್ವಾಧೀನವಿದ್ದ 'ಅಲವತ್ತನಾಡು ಪಡುವನ್ನಾಡುಗಳನ್ನು ಗೆದ್ದು ಅವನಿಂದ ಕಪ್ಪ ಪಡೆದನು. ಅದು ಮೊದಲು ದಕ್ಷಿಣ ಕನ್ನಡದ ಗಡಿಯು ಕವಾಯಿ ನದಿಯಾಯಿತು. ಹಾಗೆಯೇ ಮಲೆಯಾಳಿಗಳು ತಮ್ಮ ಕಟ್ಟುಗಳನ್ನು ಬದಲಾಯಿಸಬೇಕಾಗಿ ಬಂದುದರಿಂದ ಚಂದ್ರಗಿರಿ ನದಿಯ ಬದಲು ಕವಾಯಿ ಹೊಳೆಯನ್ನು ದಾಟಿದರೆ ಬಹಿಷ್ಕಾರವೆಂದು ಕಟ್ಟುಮಾಡಿದರು. ಹಾಗೂ ಕವಾಯಿ ಹೊಳೆಯೇ ಮಲೆಯಾಳದ ಉತ್ತರ ಗಡಿಯೆಂದು ಒಪ್ಪಿಕೊಂಡರು. ಈಗಲೂ ಸಂಪ್ರದಾಯವಂತರಾದ ಮಲೆಯಾಳಿಗಳು ಮುಖ್ಯವಾಗಿ ಸ್ತ್ರೀಯರು ಕವಾಯಿ ಹೊಳೆಯನ್ನು ದಾಟರಂತೆ.

ಅನಂತರ ಬಂದ ಹೈದರ್ ಆಲಿಯ ಕಾಲದಲ್ಲಿಯೂ ಇದೇ ರೀತಿಯಿತ್ತು. ಕ್ರಿ. ಶ. 1765ರಲ್ಲಿ ಮಲೆಯಾಳದ ಅರಸರು ಮಹಮ್ಮದೀಯರನ್ನು ಬಹಳವಾಗಿ ಪೀಡಿಸುತ್ತಾರೆಂದು ತಿಳಿದು ಹೈದರ್ ಆಲಿ ಕಣ್ಣಾನೂರಿಗೆ ಹೋಗಿ ಮಲೆಯಾಳ ರಾಜರನ್ನು ಸೋಲಿಸಿ ಮಹಮ್ಮದೀಯರ ಕಷ್ಟಗಳನ್ನು ಪರಿಹರಿಸಿದನು.

ಟಿಪ್ಪುಸುಲ್ತಾನನ ಕಾಲದಲ್ಲಿ ಬೇಕಲವು ಹಲವು ತುಕ್ಕಡಿಗಳನ್ನು ಒಳಗೊಂಡ ಒಂದು ತಾಲೂಕಾಗಿದ್ದಿತು. ಬೇಕಲ ಕೋಟೆಯು ಹುಜೂರಾಗಿದ್ದಿತು. ಹೇಗೂ ಕವಾಯಿ ಹೊಳೆಯ ವರೆಗಿನ ಭಾಗವೆಲ್ಲವೂ ಕನ್ನಡಕ್ಕೆ ಸೇರಿ ಕರ್ಣಾಟ ಸಮ್ರಾಟನ ಅಧೀನವಿದ್ದಿತ್ತು. ಹುಜೂರು ಭಾಷೆಯು ಕನ್ನಡವಾಗಿದ್ದಿತು. ಕ್ರಿ. ಶ. 1799ರಲ್ಲಿ ಇಂಗ್ಲಿಷರು ಟಿಪ್ಪುವಿನ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವಾಗ ಕೊಡಿಯಾಲ, ಬೇಕಲ, ನೀಲೇಶ್ವರ, ಕಾರ್ಕಳ, ಬಾರ್ಕೂರು, ಕುಶಾಲಪುರ, ಬಟ್ಕಲ, ಗೆರಸಪ್ಪೆ, ಹೊನ್ನಾವರ, ಮಿರ್ಜಾನ್, ಅಂಕೋಲಾ, ಪಂಚಮಹಾಲ, ಸದಾಶಿವಗಡ, ಬಿಳಿಗಿಯೇ ಮೊದಲಾದ 14 ತಾಲೂಕುಗಳನ್ನು ಪಡೆದರು. ಹೊನ್ನಾವರದಿಂದ ನೀಲೇಶ್ವರದ ವರೆಗಿನ ಈ ತಾಲೂಕುಗಳನ್ನು ಒಳಗೊಂಡ ಭಾಗವನ್ನು ಇಂಗ್ಲಿಷರು ಉತ್ತರಕನ್ನಡ ದಕ್ಷಿಣಕನ್ನಡ ಜಿಲ್ಲೆಗಳೆಂದು ವಿಭಾಗಿಸಿದರು. ಹೇಗೂ 17ನೆಯ ಶತಮಾನದ ಆರಂಭದಿಂದ ಕನ್ನಡವು ನೀಲೇಶ್ವರದ ವರೆಗೆ ಹಬ್ಬಿದ್ದಿತ್ತೆಂಬುವಕ್ಕೆ ಯಾವ ಸಂಶಯವೂ ಇಲ್ಲ. ಇಂಗ್ಲಿಷರು 'ವಿಭಜಿಸಿ ಆಳುವ' ಸೂತ್ರವನ್ನನುಸರಿಸಿ ಮಲೆಯಾಳ ಕನ್ನಡಗಳನ್ನು ಒಟ್ಟುಕೂಡಿಸಿ ಜಿಲ್ಲೆಯಾಗಿ ಮಾಡಿದರು ಎಂದು ಆಕ್ಷೇಪವೆತ್ತುವುದಕ್ಕೂ ಆಸ್ಪದವಿಲ್ಲ. ಏಕೆಂದರೆ, ಇಂಗ್ಲಿಷರಿಗಿಂತ ಮೊದಲೇ ನೀಲೇಶ್ವರ ತಾಲೂಕು ಕನ್ನಡದ ಅಧೀನವಾಗಿದ್ದಿತು. ಹೀಗೆ ಕವಾಯಿ ಹೊಳೆಯ ವರೆಗಿನ ಭಾಗದಲ್ಲಿ ಕನ್ನಡ ಜನರು, ಕನ್ನಡ ಭಾಷೆ, ಕನ್ನಡ ಸಂಸ್ಕೃತಿಯು ನೆಲೆಗೊಂಡು ಮೂರು ಶತಮಾನಗಳಿಗಿಂತಲೂ ಹೆಚ್ಚಾಗಿ ಹೋಯಿತು. ಪರಿಣಾಮವಾಗಿ ಕವಾಯಿಯಿಂದ ಚಂದ್ರಗಿರಿ ವರೆಗಿನ ಮಲೆಯಾಳಿ ಬಂಧುಗಳು ಮಾತೃಭಾಷೆಯೊಂದರಲ್ಲಿ ಅಲ್ಲದೆ ವೇಷಭೂಷಣಗಳಲ್ಲಿ ನಡೆನುಡಿಗಳಲ್ಲಿ ಸಂಸ್ಕೃತಿಯಲ್ಲಿ ಕನ್ನಡಿಗರೇ ಆಗಿಹೋಗಿರುತ್ತಾರೆ. ಎಷ್ಟೋ ಮಂದಿ ಕನ್ನಡವನ್ನು ಚೆನ್ನಾಗಿ ಬಲ್ಲವರಾಗಿಯೂ ಇರುತ್ತಾರೆ. ಯಾವುದೊಂದು ಗಡಿನಾಡಿನಲ್ಲಿಯೂ ಈ ತರದ ಚರ್ಚೆಯು ಇದ್ದೇ ಇರುವುದು. ಕನ್ನಡ ಮಲೆಯಾಳಗಳ ಈ ಗಡಿನಾಡಿನಲ್ಲಿಯೂ ಇದು ಅನಿವಾರ್ಯವೆ.

ದ. ಕನ್ನಡ ಜಿಲ್ಲೆಯಲ್ಲಿ ಹಲವು ಭಾಷೆಗಳು ರೂಢಿಯಲ್ಲಿರುವುದು ನಮ್ಮ ದೌರ್ಭಾಗ್ಯ. ಕನ್ನಡ ಜಿಲ್ಲೆಯಲ್ಲಿ ಅನೇಕರ ಮನೆಮಾತು ತುಳು, ಕೊಂಕಣಿಯಾಗಿದೆ. ಮಲೆಯಾಳವನ್ನು ಆಡುವವರೂ ಇದ್ದಾರೆ. ಹೆಚ್ಚು ಮಂದಿ ಆಡುವ ಭಾಷೆಯೇ ಜಿಲ್ಲೆಯ ಭಾಷೆಯಾಗಬೇಕೆಂದು ಹೇಳುವ ನಮ್ಮ ಮಲೆಯಾಳಿ ಬಂಧುಗಳ ಹೇಳಿಕೆಯಂತೆ ದ. ಕನ್ನಡ ಜಿಲ್ಲೆಯಲ್ಲಿ ತುಳುವೇ ವ್ಯಾವಹಾರಿಕ ಭಾಷೆಯಾಗಬೇಕು. ಆದರೆ ಕನ್ನಡದಂಥ ಸಂಸ್ಕೃತವಾದ ಭಾಷೆಯನ್ನು ಬಿಟ್ಟು ತುಳುವನ್ನು ವ್ಯಾವಹಾರಿಕ ಶಿಕ್ಷಣ ಮಾಧ್ಯಮ ಭಾಷೆಯನ್ನಾಗಿ ಮಾಡುವುದರಲ್ಲಿ ಅರ್ಥವಿಲ್ಲ. ಮಲೆಯಾಳಿ ಭಾಷೆ ತುಳುವಿನ ಅರ್ಧಾಂಶದಷ್ಟೂ ಇಲ್ಲ. ತುಳುವೇ ಕನ್ನಡದಲ್ಲಿ ಬೆರೆತುಹೋದ ಮೇಲೆ ಅದರ ಅರ್ಧಾಂಶಕ್ಕಿಂತ ಕಡಿಮೆಯಾದ ಮಲೆಯಾಳವು ಬೊಬ್ಬಿಡುವುದರಲ್ಲಿ ಹುರುಳಿಲ್ಲ. ಅದೂ ಅಲ್ಲದೆ ಕವಾಯಿಯಿಂದ ಚಂದ್ರಗಿರಿ ವರೆಗಿನ ಗಡಿನಾಡುಗಳ ಮಲೆಯಾಳ ಭಾಷೆಯು ಶುದ್ಧವಲ್ಲ. ಕಾಸರಗೋಡು ತಾಲೂಕಿನ ಮಾಪಿಳ್ಳೆಯರ ಮಲೆಯಾಳವು ತೀರ ಭಿನ್ನವಾಗಿದೆ. ಮಲೆಯಾಳದಲ್ಲಿ ಜಾತಿಕಟ್ಟುಗಳ ಬಿಗುವು ಬಹು ಬಲವಾಗಿರುವುದರಿಂದಲೂ ಹೊಂಡುಕುಳಿಯ ದೆಸೆಯಿಂದಲೂ ಕೆಳಜಾತಿಯ ಮಲೆಯಾಳಿಗಳು ಮೇಲ್ಜಾತಿಯವರ ತಿರಸ್ಕಾರ ತಾತ್ಸಾರಗಳನ್ನು ಸಹಿಸದೆ ಕನ್ನಡಕ್ಕೆ ಓಡಿ ಬಂದು ಇಲ್ಲಿ ಕನ್ನಡಿಗರೊಡನೆ ಸುಖವಾಗಿ ನೆಲಸುತ್ತಾರೆ. ಆದುದರಿಂದಲೇ ಅವರ ಸಂಖ್ಯೆಯು ಕನ್ನಡದಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಕಾಸರಗೋಡು ತಾಲೂಕಿನ ಹೆಚ್ಚಿನ ಮಲೆಯಾಳಿಗಳು ಮುಖ್ಯವಾಗಿ ಕೆಳಜಾತಿಯವರು ಮಲಬಾರಿಗೆ ಸೇರಲು ಇಚ್ಛಿಸುವುದಿಲ್ಲ. ಕಾಸರಗೋಡು ಹೊಸದುರ್ಗದ ಕೋರ್ಟು ಕಚೇರಿಗಳಲ್ಲಿ ಕನ್ನಡ ಮಲೆಯಾಳ ಎರಡು ಭಾಷೆಗಳ ಸೌಕರ್ಯವೂ ಇದೆ. ಕನ್ನಡ ಶಾಲೆಗಳೂ ಮಲೆಯಾಳ ಶಾಲೆಗಳೂ ಬೇರೆ ಬೇರೆ ಇವೆ. ಚಂದ್ರಗಿರಿಯಿಂದ ಹೊಸದುರ್ಗ ವರೆಗಿನ ಎಲ್ಲಾ ಸೀಮೆ ದೇವಸ್ಥಾನಗಳಲ್ಲಿಯೂ ಭೂತಸ್ಥಾನಗಳಲ್ಲಿಯೂ ಕನ್ನಡಿಗರೂ ಮಲೆಯಾಳಿಗಳೂ ಸೇರದೆ, ಜಾತ್ರೆ ಕೋಲಗಳು ಇಂದಿಗೂ ನಡಿಯುವುದಿಲ್ಲ.

ಒಟ್ಟಾರೆ ಮೇಲೆ, ಪುರಾತನ ಕಾಲದಿಂದಲೂ ನಡೆದು ಬಂದು ಕರ್ಣಾಟಕದ ಧರ್ಮ, ಸಾಹಿತ್ಯ, ಸಂಗೀತ, ಶಿಲ್ಪ, ಕಲಾಕೌಶಲ್ಯಾದಿಗಳ ಸಂಸ್ಕೃತಿಯು ಸ್ಥಿರವಾಗಿ ನೆಲೆಗೊಂಡ ಸಂಪೂರ್ಣ ಕಾಸರಗೋಡು ಸಹಿತವಾದ ಈಗಿನ ದಕ್ಷಿಣ ಕನ್ನಡದ ವಿಭಾಗವು ಐತಿಹಾಸಿಕ ದೃಷ್ಟಿಯಿಂದಲಾಗಲಿ (ಕರ್ಣಾಟಕ ಸಂಸ್ಕೃತಿಯು ಇನ್ನೊಂದು ಲೇಖಕ್ಕೆ ವಿಷಯವಾದುದರಿಂದ ಅದನ್ನಿಲ್ಲಿ ಪ್ರಸ್ತಾಪಿಸುವುದಿಲ್ಲ.) ಇನ್ನಾವ ದೃಷ್ಟಿಯಿಂದಲೇ ಆಗಲಿ ಸರ್ವಸಮ್ಮತವಾದುದೆಂದು ವಿಚಾರಿಗಳು ಒಪ್ಪದಿರಲಾರರು. ಹೀಗಿರುತ್ತ ನಮ್ಮ ಮಲೆಯಾಳಿ ಬಂಧುಗಳು ಈಗ ಸಮಗ್ರ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಬೇಕೆಂದು ಗುಲ್ಲೆಬ್ಬಿಸುತ್ತಿರುವುದು ನಿಷ್ಪ್ರಯೋಜಕವೂ ನಿರರ್ಥಕವೂ ಆಗಿದೆ.



ಲೇಖಕರು: ಶ್ರೀ ಎಂ. ಎಸ್. ಜೋಶಿ, ಶಿರೋಮಣಿ, ವಿದ್ವಾನ್

ರಾವಣ

ಏನೋ ಅಲ್ಪ ವಿಚಾರ ನ್ಯೂನತೆಯಿಂದ ರಾವಣನು ಸೋತ; ರಾಮು ಗೆದ್ದು ಸೋತ; ರಾಮನು ವಿಚಾರವಿಲ್ಲದೆ ಹೆಂಡತಿಯನ್ನು ಕಳಕೊಂಡ; ಆ ಶೋಕದಲ್ಲಿ ಬಹುಕಾಲ ನರಳಿದ. ರಾವಣ ವಿಚಾರ ನ್ಯೂನತೆಯ ಮೂಲಕ ಪರಮಾತ್ಮನಲ್ಲಿಗೆ ಏರಿ ಬಿಟ್ಟ. ಹೀಗೆ ನೋಡಿದರೆ ಹೆಂಡತಿ ಕಳಕೊಂಡ ರಾಮನೋ ಜಾಣ? ರಾವಣನೋ ಜಾಣ?
ಇಂದು ರಾವಣನ ಅನುಕರಣೆಯಾಗುತ್ತಿದೆ! ಎಲ್ಲಿ? ಹೇಗೆ?
ಈ ಲೇಖನವನ್ನೋದಿರಿ!



ರಾವಣ

ಇದೀಗ ನೂತನ ಯುಗ. ಇಂದಿನ ಸಂಸ್ಕೃತಿ ಪಾಶ್ಚಾತ್ಯ, ಹೊಸತು. ಇಂತಹ ಕಾಲದಲ್ಲೂ 'ಅವ ರಾವಣ' 'ಇವ ರಾವಣ ಸನ್ಯಾಸಿ' ಎಂದು ರಾಮಾಯಣ ಓದಿದವರೂ, ಓದದಿದ್ದವರೂ ಹೇಳುತ್ತಿದ್ದಾರೆ. ಇಂತಿರುವ ಅಭಿಪ್ರಾಯ ನಮ್ಮ ರಾವಣನಲ್ಲಿ. ಕವಿಯೊಬ್ಬನಿಗೆ ರಾಮರಾವಣರ ಯುದ್ಧವು "ರಾಮ ರಾವಣಯೋರ್ಯುದ್ಧಂ ರಾಮ ರಾಮರಾವಣಯೋರಿವ" ಎಂದು ಅನನ್ವೋಪಮೆಯಿಂದ ವರ್ಣಿಸಬೇಕಾಗಿ ಬಂದಿದೆ. ಇಂತಿರಲು ರಾವಣನು ಸಾಮಾನ್ಯನಲ್ಲ ಅವನು ಸಾಹಸಿ ಇರಬೇಕು. ಅಯ್ಯೋ! ಹೀಗಿರಲು ಅವನ ಚರಿತ್ರೆಯನ್ನು ತಿಳಿಯದಿರಲು ಸಾಧ್ಯವಿದೆಯೇ? ತಿಳಿಯಬೇಕಾದರೆ ದೊಡ್ಡ ರಾಮಾಯಣ ಓದಬೇಕು. ತಲೆ ಹಣ್ಣು ಮಾಡಬೇಕು. ಒಂದು ದಿನದ ಕೆಲಸದಿಂದ ಮುಗಿಯುವ ಹಾಗಿಲ್ಲ; ಹಾಗಾದರೆ ಇವನ ಚರಿತ್ರೆಯನ್ನು ನಾವು ತಿಳಿಯಬೇಡವೇ? ಹಾಗೆ ಬಿಟ್ಟು ಬಿಡುವುದೇ? ಅದೆಂದೂ ಆಗದು, ಮನಸು ಒಪ್ಪುವ ಹಾಗಿಲ್ಲ; ಶಾಂತಿಯೇ ಉಂಟಾಗದು.

ರಾಮಾಯಣದಲ್ಲಿ ರಾಮ ದೇವರು. ವಿಷ್ಣುವಿನ ಅವತಾರ. ದೇವರ ಸಮಸ್ತ ಕರ್ಮಗಳೂ ಸ್ತುತ್ಯ, ಮಾನವನಿಗೆ ದೈವ ಕರ್ಮವನ್ನು ನಿರೂಪಿಸಲು ಅಧಿಕಾರವಿಲ್ಲ; ಶಕ್ತಿ ಇಲ್ಲ. ದೇವರು ಮನೋವಾಕ್ಕಾಯಗಳಿಗೆ ಸಿಲುಕದ ಮೂರ್ತಿ. ಸಗುಣ, ನಿರಾಕಾರ. ನಮಗೆ ಲೋಕದಲ್ಲಿ ವಿಚಾರ ಕರ್ಮಗಳಿಗೆ ಮಾತ್ರ ಅಧಿಕಾರ. ಮತ್ತೆಲ್ಲೂ ಇಲ್ಲ. ಈ ಕಾಣುವುದೆಲ್ಲಾ ದೈವ ಸಂಕಲ್ಪದವು. ನಾವು ಅದರಲ್ಲಿ ಅಡಗಿದ್ದೇವೆ. ಆದ್ದರಿಂದ ಅವನನ್ನು ನೋಡಿ ಒಳ್ಳೆಯವನೆಂದೂ ಕೆಟ್ಟವನೆಂದೂ ನಾವು ಹೇಳುವುದು ಯುಕ್ತವಲ್ಲ. ನಾವಿರುವುದು ಭೂಲೋಕದಲ್ಲಿ; ಮರ್ತ್ಯಲೋಕದಲ್ಲಿ, ಹೇಗಿದ್ದರೂ ನಮ್ಮ ಬುದ್ಧಿ ಮನಸ್ಸುಗಳು ಕಾಲದೇಶ ವಿಷಯಗಳನ್ನು ಸ್ವತಂತ್ರವಾಗಿ ಚಿಂತಿಸುವುದಕ್ಕೆ, ದೇವರು ಸರ್ವಾಂತರ್ಯಾಮಿಯು. ಅವನ ಇಚ್ಛೆಯ ವಿನಾ ಒಂದೂ ಫಲಿಸುವ ಹಾಗಿಲ್ಲ. ನಾವು ಮಾಡುವುದು ಒಂದೂ ಇಲ್ಲ. ಎಲ್ಲಾ ಅವನ ಕೃತ್ಯ. ದೈವ ಪ್ರೇರಣೆಯಲ್ಲಿ ಅಡಗಿಹೋದ ನಮಗೆ ಒಳ್ಳೆಯದೇನಿದೆ? ಕೆಟ್ಟದೇನಿದೆ? ಸಂಸಾರ ಬದ್ಧರು ಮನುಷ್ಯರು. ಈ ಹುಟ್ಟು ಸಾವು ಎಲ್ಲಾ ಅವನ ಪ್ರೇರಣೆಯಿಂದ. ಪ್ರಪಂಚವೇ ಒಂದು ಆಟ. ನಾವೆಲ್ಲಾ ಬೊಂಬೆಗಳು. ಇಲ್ಲವೇ ವೇಷಭೂತರು. ವೇಷದಲ್ಲಿ ಒಳ್ಳೆಯದಾವುದು? ಕೆಟ್ಟದಾವುದು? ಎಂಬುದು ತಿಳಿಯತಕ್ಕ ವಿಷಯ. ಹಾಗಿರಲು ನಿರೂಪಣೆಗೆ ಕೈಯೂರಬೇಕಾಗುತ್ತದೆ. ನಿರೂಪಣೆ ಮಾಡುವಾಗ ದೇವರನ್ನು ಸ್ಪರ್ಶಿಸಬಾರದು. ರಾಮನು ದೇವರು. ದೇವರಿಗೆ ಜಯ ಯಶಸ್ಸುಗಳೆಲ್ಲಾ ಸ್ವತಃಸ್ಸಿದ್ಧ. ಮತ್ತೇಕೆ ಅವನ ವಿಷಯದಲ್ಲಿ ಹೊಗಳಿಕೆ ಮತ್ತು ತೆಗಳಿಕೆ?

ನಾರಾಯಣನು ಅವತರಿಸಿ ರಾವಣನನ್ನು ಕೊಂದನು. ರಾವಣನು ಭೂಲೋಕದವ; ಸಿಂಹಳ ದ್ವೀಪದವ; ರಾವಣನಿಗಾಗಿ ದೇವರು ಜನ್ಮವೆತ್ತಬೇಕಾಯಿತು. ಹೀಗಿರಲು ರಾಮಾಯಣದ ಕಥಾನಾಯಕನು ಯಾರು? ಅದು ನಮಗೆ ಬೇಕಾಗಿದೆ. ಅದಕ್ಕೆ ಕೈಹಾಕ್ಕೋಣ! ಏಕನೂ ಸರ್ವಲೋಕ ನಾಯಕನೂ ಎನಿಸಿದವನು ನಾರಾಯಣನು. ಅವನು ನಾಯಕನಾದರೆ ಏನು ರುಚಿ! ಎಂತಹ ಸಾರಸ್ಯ! ದೇವರು ಜನ್ಮವನ್ನು ಹೊಂದಿ ಬರುವಂತೆ ಮಾಡಿದ ಯಾವ ಮಹಾಪುರುಷನಿರುವನೋ ಅವನೇ ನಾಯಕನಾಗಲು ಅರ್ಹ.

ಬಲದಿಂದ ಪರಾಕ್ರಮದಿಂದ ಸರ್ವತೋಮುಖವಾದ ಜಯವನ್ನು ಹೊಂದಿದವ ರಾವಣ. ಅವನನ್ನು ಪ್ರತಿಭಟಿಸಲಾಗಿ ಹುಟ್ಟಿದ್ದು ದೇವರು. ಹೀಗೆ ಕತೆ ಹೇಳುತ್ತದೆ. ಈ ರೀತಿಯಿಂದ ನೋಡುವಾಗ ಕಥಾನಾಯಕನಾಗುವುದು ರಾವಣ. ವೈದಿಕ ಪಕ್ಷದವರು ಕರ್ಮಕ್ಕೆ ದೈವಸಂಕಲ್ಪವನ್ನು ಹೇಳುತಿದ್ದಾರೆ. ಹಾಗಿದ್ದರೂ ಕರ್ಮ ಕರ್ತೃತ್ವ ನಮ್ಮಲ್ಲಿ; ದೇವರಲ್ಲಿಲ್ಲ. ದೇವರನ್ನು ಕರ್ತೃವಾಗಿ ಸ್ವೀಕರಿಸಿದರೆ ನಮ್ಮ ಯಾವ ಕರ್ಮ ವಿಚಾರಗಳಲ್ಲೂ ಕರ್ತೃತ್ವವು ಅವನಿಗೆ ಹೇಳಬೇಕಾಗುವುದು. ಲೌಕಿಕರಾದ ನಾವು ವಿಚಾರ ಸಕಲ ಕರ್ಮಗಳಲ್ಲೂ ನಮನ್ನೇ ಕಂಡುಕೊಳ್ಳುತ್ತೇವೆ. ನೋಡುತ್ತೇವೆ. ರಾಮಾಯಣದಲ್ಲಿ ಆದ್ಯಂತವಾಗಿ ದೈವ ಲೀಲೆಯೇ ಕಾಣಬರುವುದು. ಅದು ಲೋಕದ ಎಲ್ಲೆಡೆಯಲ್ಲೂ ಕಾಣಬರುತ್ತದೆ. ಆದ್ದರಿಂದ ದೇವರಿಗೆ ನಾಯಕನನ್ನಾಗಿ ಎಣಿಸಬಹುದೇ? ಎಣಿಸಿದರೂ ಸಾಮಂಜಸ್ಯವೇ? ಲಲಿತವೇ? ಹೃದ್ಯವೇ? ಆ ದೈವಲೀಲೆಗೆ ಕಾರಣಭೂತನಾದ ಆ ಆದಿ ಪುರುಷನನ್ನು ನಾಯಕನನ್ನಾಗಿ ಮಾಡುವುದು ಯುಕ್ತ. ಆದುದರಿಂದ ಆದಿಕಾವ್ಯವಾದ ರಾಮಾಯಣದಲ್ಲಿ ಕಥಾನಾಯಕನು ರಾಮನಲ್ಲ. ರಾವಣ. ರಾವಣನ ವಿಜಯವನ್ನೇ ಮೊದಲಾಗಿ ಕಾಣುವೆವು. ರಾವಣನಿಗಾಗಿ ರಾಮ ಹುಟ್ಟಿದ ಎಂದು ಕತೆಯು ಹೇಳಿದ ಮೇಲೆ ಅವನೇ ಕಥಾನಾಯಕ.

ರಾವಣನು 'ದೇವರನ್ನು ಭೂಮಿಯಲ್ಲಿ ನಮ್ಮೊಂದಿಗೆ ಸೇರಿಸಿದ. ರಾವಣನನ್ನು ಕಾಣಲಾಗಿಯೇ ಅಯೋಧ್ಯೆಯಲ್ಲಿ ರಾಮ ರೂಪವನ್ನು ಹೊಂದು ಜನ್ಮವೆತ್ತಿದ. ಭಾರತ ವರ್ಷದ ಬಡಗು ಸೀಮೆಯಿಂದ ದೇವರನ್ನು ತೆಂಕು ಸೀಮೆಯ ತುತ್ತ ತುದಿಗೆ ಸೆಳೆದು ತಂದ. ತನ್ನ ರಾಜ್ಯಕ್ಕೆ ತನ್ನ ರಾಜಧಾನಿಗೆ ದೇವರನ್ನು ದಾಟಿಸಿದ. ನುಗ್ಗ ಬಿಟ್ಟ. ಕಡೆಗೆ ದೇವರಲ್ಲೇ ಸೇರಿಕೊಂಡ. ಹೀಗೆಲ್ಲಾ ರಾಮಾಯಣದ ಕಥೆ. ಇಂತಾದರೂ ನಾಯಕನಾರು?

ತಪೋಬಲದಿಂದ ದೇವರೊಂದಿಗೆ ಸೇರಿದವರನ್ನು ಹೊಗಳುತ್ತೇವೆ. ಉದ್ಯಮದಿಂದ ಐಶ್ವರ್ಯವನ್ನು ಗಳಿಸಿಕೊಂಡವರನ್ನು ಪೂಜಿಸುತ್ತೇವೆ. ಇವರಿಂದ ಘನತೆಯುಳ್ಳವ ರಾವಣ. ಅವರಲ್ಲಿರುವ ಆ ದೈವಾನುಭೂತಿಗೆ ಯಾರಿಗೂ ಅವಕಾಶವಿಲ್ಲ. ಅದು ಅವರ ಮನೆಯ ಸೊತ್ತು ಇಲ್ಲವೇ ದೀಪ. ಬೇರೆಯವರಿಗೆ ಉಪಯೋಗಕ್ಕೆ ಬೀಳುವ ಹಾಗಿಲ್ಲ. ರಾವಣನು ದೈವಾನುಭೂತಿಯನ್ನು ಪಡೆದುದು ಜನರಿಗೆಲ್ಲಾ ದೇವರನ್ನು ಕಾಣುವಂತೆ ಮಾಡಿಯೇ. ಇಡೀ ಭಾರತವರ್ಷದವರಿಗೆ ದೇವರ ಸಂದರ್ಶನೆ ಮಾಡಿಸಿದ. ಕೊನೆಗೆ ಅವನಲ್ಲಿ ಲೀನನಾದ. ನಿತ್ಯಾನಂದವನ್ನು ಪಡೆದ. ಇಂತಹ ರಾವಣ ಶ್ಲಾಘ್ಯನೋ? ನಿಂದ್ಯನೋ?

ರಾವಣ ರಾಮನ ಪೆಟ್ಟು ತಿಂದು ಸತ್ತ. ಇದರಿಂದ ಅವನ ಶ್ರೇಷ್ಠತೆಗೆ ಆವ ಕೊರತೆಯೂ, ಅಳಿವೂ ಇಲ್ಲ. ರಾಮನು ಜಯವಂತನಾದುದು ಸರಿ. ಆದರೆ, ಲೋಕದಲ್ಲಿ ಜಯವನ್ನು ಹೊಂದಿದವರು ಸ್ತುತ್ಯರು. ಅಪಜಯವನ್ನು ಹೊಂದಿದವರು ನಿಂದ್ಯರು. ಎಂಬೀ ಪಕ್ಷಕ್ಕೆ ಓಟು ಸಿಗುವುದೆಂದು ನಾನೆಂದೂ ನಂಬಲಾರೆ. ಏಸುವನ್ನು ಕೊಲೆಮಾಡಿದವರು ಏಸುಗಿಂತ ಪೂಜ್ಯರೋ? ನೆಪೋಲಿಯನನ್ನು ಬಂಧನದಲ್ಲಿರಿಸಿದವರು ಸ್ತುತ್ಯರೇ? ಅಭಿಮನ್ಯುವನ್ನು ಕೊಂದ ಜಯದ್ರಥ, ಕರ್ಣಾದಿಗಳನ್ನು ಕೊಂಡಾಡುವೆವೇ? ಆದ್ದರಿಂದ ಸೋತವನು ಅವಮಾನ್ಯನೆಂದು ತಿಳಿಯುವುದು ಸರ್ವಥಾ ಯುಕ್ತವಲ್ಲ.

ಏನೋ ಅಲ್ಪ ವಿಚಾರ ನ್ಯೂನತೆಯಿಂದ ರಾವಣನು ಸೋತ. ರಾಮ ಗೆದ್ದು ಸೋತ. ರಾಮನು ವಿಚಾರವಿಲ್ಲದೆ ಹೆಂಡತಿಯನ್ನು ಕಳಕೊಂಡ. ಆ ಶೋಕದಲ್ಲಿ ಬಹುಕಾಲ ನರಳಿದ. ರಾವಣ ವಿಚಾರನ್ಯೂನತೆಯ ಮೂಲಕ ಪರಮಾತ್ಮನಲ್ಲಿಗೆ ಏರಿಬಿಟ್ಟ. ಹೀಗೆ ನೋಡಿದರೆ ಹೆಂಡತಿ ಕಳಕೊಂಡ ರಾಮನೋ ಜಾಣ? ರಾವಣನೋ ಜಾಣ?

ರಾವಣನು ಜನಿಸಿದುದರಿಂದ ಮನುಜರಿಗೆ ಕೆಡುಕುಂಟಾಗಲಿಲ್ಲ. ಅವನು ನಾಶಹೊಂದಿದುದರಿಂದ ಗುಣವೂ ಉಂಟಾಗಲಿಲ್ಲ. ಹೀಗಿರಲು ಅವನನ್ನು ನಿಂದಿ

ಸುವುದೆಂತು? ಅದಲ್ಲದೆ ಆವನಿಂದ ಮನುಷ್ಯರಿಗೆ ದೋಷ ಉಂಟಾದುದು ತಿಳಿದು ಬರುವುದಿಲ್ಲ. ರಾವಣನ ಮರಣಾನಂತರ ಪೂರ್ವಸುಖಾಧಿಕ ಸುಖಲಾಭವನ್ನು ಮನುಷ್ಯರು ಹೊಂದಿದ್ದಿಲ್ಲ. ರಾವಣನ ಜೀವನದ ಕಾಲ ಜನರೆಲ್ಲರೂ ಸಂಪತ್ ಸಮೃದ್ಧರಾಗಿದ್ದರು. ದಕ್ಷಿಣೋತ್ತರ ಭಾರತದೇಶವು ಐಶ್ವರ್ಯಶಾಲಿಯಾಗಿತ್ತು. ಇದನ್ನು ರಾಮಾಯಣದಲ್ಲಿ ಕಾಣಬರುವ ವರ್ಣನೆಯಿಂದ ಪಂಡಿತ ಪಾಮರರಿಗೂ ನಿರ್ಣಯಿಸಬಹುದಾಗಿದೆ. ರಾವಣನು ಎಲ್ಲಾ ರಾಷ್ಟ್ರಪತಿಗಳನ್ನೂ ಜಯಿಸಿರುವನು. ಅವನ ಸಾಮ್ರಾಜ್ಯವು ಸುಖಭೂಯಿಷ್ಠವಾಗಿತ್ತು. ಐಶ್ವರ್ಯಶಾಲಿನಿಯಾಗಿತ್ತು. ಇಂತಹನನ್ನು ಪ್ರಜೆಗಳೆಂದಾದರೂ ದೂರುವರೇ? ಯಾವನು ಸುಖಭೋಗಕ್ಕೆ ಬಯಸುವುದಿಲ್ಲ, ಸಂಪತ್ತಿಗೆ ಮರುಳಾಗುವುದಿಲ್ಲ, ಮನುಜನು ಎಂದಾದರೂ ರಾವಣನನ್ನು ನಿಂದಿಪನೇ? ಅವನಷ್ಟು ಹೇಯನೇ? ಅವನು ಅಂದಿನ ಮಾನವಕುಟುಂಬಕ್ಕೆ ಕೇಡನ್ನು ಬಗೆಯಲಿಲ್ಲ. ರಾಜ್ಯಾಧಿಪತಿಗಳಾದ ಮಾನವರನ್ನು ದಂಡಿಸಿದುದಿಲ್ಲ. ಅವನೊಂದಿಗೆ ಪಾಂಡ್ಯ ಕೇರಳ ರಾಜರ ಸಾಮ್ರಾಜ್ಯಶಾಹಿಯು ನಡೆಯುತ್ತಿದ್ದಿತು. ಅವರೆಂದೂ ಭಯಾಕ್ರಾಂತರಾಗಿರಲಿಲ್ಲ. ಐಶ್ವರ್ಯ ಸುಖನಿಧಿಗಳೇ ಆಗಿ ಬಾಳಿದ್ದರು. ಮಾತ್ರವಲ್ಲ; ಮನುಷ್ಯರಿಂದ ತನಗೆ ಒಂದಿನಿತೂ ಭಯವನ್ನು ರಾವಣನು ಹೊಂದುವವನಲ್ಲ. ಅದು ಅವನಿಗೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಅವನನ್ನು ಮನುಷ್ಯರಿಗೆ ವಿರೋಧಿಯೆಂದು ಹೇಳಬರುವುದಿಲ್ಲ. ಅದಕ್ಕೆ ಬದಲಾಗಿ ಮನುಜರಲ್ಲಿ ಅನುಕಂಪಾಯುಕ್ತನಾಗಿದ್ದನೆಂದೇ ಎಣಿಸಬೇಕಾಗುತ್ತದೆ. ತನಗೆ ವಿರೋಧಿಗಳಾದವರನ್ನು ಅವನು ಹಾಗೆ ಬಿಡುತ್ತಿದ್ದಿಲ್ಲ. ಆದರೆ ವಿರೋಧಿಗಳಲ್ಲಿ ವಿರೋಧವನ್ನು ಬಗೆಯದವರು ಆರಾದರೂ ಇರುವರೇ? ಈ ವಿರೋಧದ ಮೂಲಕ ಏನೋ ಕೆಲವು ಮನುಷ್ಯರನ್ನು ರಾವಣನು ಹಿಂಸಿಸಿರುವನು. ಹೀಗೆ ಮಾಡದವರಾದರೂ ಆರು?

ರಾವಣನಿಗೆ ಭೂಮಿಯಲ್ಲಿ ಯಾರೊಡನೆಯೂ ಹಗೆತನವಿದ್ದಿಲ್ಲ. ಅವನಿಗೆ ದೇವತೆಗಳು ವಿರೋಧಿಗಳು. ಆ ಪರಾಕ್ರಮಿಯು ದೇವತೆಗಳನ್ನು ಭೂಮಿಗಿಳಿಸಿದನು. ತನ್ನ ದಾಸರನ್ನಾಗಿ ಮಾಡಿದನು. ಆದರೆ ದೇವತೆಗಳು ಮಾಡತಕ್ಕ ಕರ್ಮಗಳಿಗೆ ಭಂಗವನ್ನುಂಟುಮಾಡಿದ್ದಿಲ್ಲ. ಭಾರತದ ನಹುಷನಂತೆ ದೇವರ್ಷಿಗಳನ್ನು ತನ್ನ ಪಾಲಕಿಯ ವಾಹಕರನ್ನಾಗಿ ಮಾಡಿಸಿಲ್ಲ. ದೇವರ್ಷಿಗಳನ್ನೆಲ್ಲಾ ಬಹುಮಾನಿಸುತ್ತಿದ್ದನು. ಪೂಜಿಸುತ್ತಿದ್ದನು. ದೇವತೆಗಳನ್ನೆಲ್ಲಾ ತಮ್ಮ ತಮ್ಮ ಕರ್ಮಗಳಲ್ಲಿ ಯಥೇಷ್ಟವಿದ್ದುಕೊಳ್ಳಲು ಬಿಟ್ಟಿದ್ದನು. ಆದರೆ ಅವರನ್ನು ತನ್ನ ಆಜ್ಞಾನುವರ್ತಿಗಳನ್ನಾಗಿ ಮಾಡಿದ್ದನು. ಅವರನ್ನು ಅವರ ನಿತ್ಯಕರ್ಮಗಳಿಂದ ತೆಗೆದು ಹಾಕಿ ಲೋಕಗತಿಯನ್ನು ಹಾಳುಗೈದುದಿಲ್ಲ. ಇದು ನಮಗೆ ಸ್ಮರಣೀಯವಾದ ಸಂಗತಿ. ಸೂರ್ಯನು ಅಂದು ತನ್ನ ತೀಕ್ಷ್ಣಕಿರಣಗಳಿಂದ ಲೋಕವನ್ನು ಬೆಳಗಿಸುತ್ತಿದ್ದನು. ಚಂದ್ರನೂ ತನ್ನ ಅಮೃತಕಿರಣಗಳಿಂದ ಜೀವಲೋಕವನ್ನು ಆಹ್ಲಾದಿಸುತ್ತಿದ್ದನು. ಋತುಚಕ್ರದ ಅಧಿಕಾರದಿಂದ ಇಂದ್ರನನ್ನು ತೆಗೆದುಹಾಕಿದ್ದಿಲ್ಲ. ಯಮನನ್ನು ಲೋಕದವರನ್ನು ಲೆಕ್ಕದ ಪಟ್ಟಿಯಿಂದ ತೆಗೆದುಹಾಕುವ ಅಧಿಕಾರದಿಂದ ಹೊರಗೆಯ್ದುದಿಲ್ಲ. ಅಗ್ನಿ, ವಾಯು, ವರುಣರು ಅವನ ಅಧೀನರಾಗಿದ್ದರು. ಇನ್ನಿತರರು ಆಜ್ಞಾನುವರ್ತಿಗಳಾಗಿದ್ದರಲ್ಲದೆ ತಮ್ಮ ನಿಯೋಗಶೂನ್ಯರಾಗಿದ್ದಿಲ್ಲ. ರಾವಣನು ಹೀಗೆ ದೇವತೆಗಳನ್ನು ತನ್ನ ಅಧೀನದಲ್ಲಿರಿಸಿದ್ದರೂ ಅದರಿಂದ ಮನುಷ್ಯರಿಗೆ ಕಿಂಚಿತ್ತಾದರೂ ಉಪದ್ರವವು ಉಂಟಾಗಲಿಲ್ಲ. ಭೂಲೋಕದವನು ರಾವಣ. ಅವನ ಕೀರ್ತಿ ಪ್ರತಾಪಗಳು ಸ್ವರ್ಗಲೋಕಕ್ಕೆ ಮುಟ್ಟಿದುವು. ಇದರಿಂದ ಮನುಷ್ಯರು ಅವನನ್ನು ನಿಂದಿಸಬೇಕೋ? ವಂದಿಸಬೇಕೋ?

ರಾವಣ ರಾಕ್ಷಸ. ಮಾನುಷ ಭಿನ್ನ. ಮಾನುಷ್ಯರಿಗೆ ರಾಕ್ಷಸರು ಭಯಂಕರರು. ಮನುಷ್ಯರು ನಿದ್ದೆ ಮಾಡತೊಡಗಿದಾಗ ರಾಕ್ಷಸರು ಎಚ್ಚರಗೊಳ್ಳುವರು. ದೇವತೆಗಳು ಅನಿಮಿಷರು. ನಿದ್ರಾಹೀನರು. ಇದರಿಂದ ದೇವತೆಗಳು ರಾಕ್ಷಸರಿಗಿಂತ ಮನುಷ್ಯರಿಗೆ ಸ್ನೇಹಿಸಲು ಅರ್ಹರೇ? ದೇವತೆಗಳಿಂದ ಕೆಲವುಗಳನ್ನು ನಾವು ಹೊಂದುತ್ತೇವೆ. ಅದಕ್ಕೆ ಬದಲಾಗಿ ಅವರುಗಳಿಗೆ ಕೆಲವನ್ನು ಕೊಡುತ್ತೇವೆ. ಯಾವಾಗಲೂ ದೇವತೆಗಳನ್ನು ಪೂಜಿಸಿ ಪ್ರಸಾದಿಸಿಕೊಳ್ಳಬೇಕು. ಇಲ್ಲವಾದರೆ ಅವರಿಂದೇನೂ ಸಿಕ್ಕುವ ಹಾಗಿಲ್ಲ. ಆದುದರಿಂದ ನಾವೂ ದೇವತೆಗಳೂ ಪರಸ್ಪರ ವಹಿವಾಟುಗಳುಳ್ಳವರು. ಇಂತಿರುವ ದೇವತೆಗಳನ್ನು ರಾಕ್ಷಸರು ತಮ್ಮ ಆಜ್ಞಾನುವರ್ತಿಗಳಾಗಿ ಮಾಡಿದ್ದರಿಂದ ಆವ ಕೆಡುಕಿದೆ? ದೇವತೆಗಳನ್ನು ರಾಕ್ಷಸರು ಜಯಿಸಿದುದರಿಂದ ನಾವು ರಾಕ್ಷಸರನ್ನು ಹಳಿಯತಕ್ಕದಿಲ್ಲ. ದೇವತೆಗಳೆದುರಲ್ಲಿ ಮನುಷ್ಯರನ್ನು ರಾಕ್ಷಸರು ಹಿಂಸಿಸುತ್ತಿದ್ದರೆಂಬುದಾಗಿ ಪುರಾಣದಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿಯೂ ದೇವತೆಗಳು ಮನುಷ್ಯರನ್ನೇ ರಾಕ್ಷಸರ ಎದುರಿಗೆ ಹಾಕುತ್ತಿದ್ದರು. ಮನುಜರ ಮೂಲಕ ಜಯವನ್ನು ದೇವತೆಗಳು ಹೊಂದಿಕೊಳುತಿದ್ದರು. ಏಕ ಛತ್ರ ನಗರದಲ್ಲಿ ಬಕನಿಗಾಗಿ ಪ್ರತಿ ಕುಟುಂಬದಿಂದ ದಿನ ದಿನ ಒಂದೊಂದು ನರಬಲಿಯಾಗುತಿತ್ತು. ಈ ಕಾಲ ದೇವತೆಗಳೇನೂ ಮನುಷ್ಯರಿಗೆ ಸಹಾಯವನ್ನು ಗೆಯ್ದಿಲ್ಲ. ಅವರು ಅವರ ಪಾಡನ್ನೇ ನೋಡುತಿದ್ದರು. ಮನುಜನಾದ ಭೀಮನು ಈ ಸಂಕಟದಿಂದ ಮನುಜ ಕುಟುಂಬವನ್ನು ರಕ್ಷಿಸಿದನು. ಆದರೆ ಬಕನನ್ನು ಕೊಂದ ಭೀಮನನ್ನು ಕೆಲವರು ದೇವತೆಯಾಗಿ ಹೇಳಬಹುದು. ಹೀಗೆ ಹೇಳುವುದಾದರೆ ರಾಕ್ಷಸರಲ್ಲೂ ದೇವತೆಗಳಿದ್ದಾರೆ. ರಾಮನು ವಿರಾಧ ಕಬಂಧರನ್ನು ವಧೆಗೊಳಿಸಿದಾಗ ರಾಕ್ಷಸರಿಂದ ದೇವತೆಗಳ ಉದ್ಧಾರವೇ ಆಯಿತು. ಈಗ ಎಲ್ಲರಿಂದಲೂ ರಕ್ಷೆಯನ್ನು ಪಡೆಯುವವರು ದೇವತೆಗಳೆನ್ನಬೇಕಾಗುತ್ತದೆ. ಈ ದೇವತೆಗಳಿಂದ ರಾಕ್ಷಸರಿಂದ ಉಂಟಾದಂತೆಯೇ ಮನುಷ್ಯರಿಗೆ ಪೀಡೆಯುಂಟಾಗಿದೆ. ಈ ತರದ ಸಂಕಟಗಳನ್ನು ಭಾರತ ವಾಚಕರು ಕಣ್ಣಾರೆ ಕಂಡುಕೊಳ್ಳಬಹುದು. ನಾವು ಕಾರಣಾಂತರಗಳಿಂದ ಸ್ವಲ್ಪ ತಪ್ಪಿ ನಡೆದರೆ ಈ ದೇವತೆಗಳ ಕ್ರೂರ ದೃಷ್ಟಿಯು ನಮ್ಮ ಮೇಲೆ ಬೀಳುತ್ತದೆ. ಇನ್ನು ಕೆಲವು ವೇಳೆ ಹೊಟ್ಟೆಗಿಚ್ಚುಳ್ಳವರಾಗಿ ನಮ್ಮ ಮೇಲೆ ಅಸತ್ಕೃತ್ಯಗಳನ್ನು ದೇವತೆಗಳು ಮಾಡತೊಡಗುತ್ತಾರೆ. ಇಂತು ರಾಕ್ಷಸರು ಮನುಷ್ಯರಿಗೆಂದೂ ಮಾಡಿದುದಿಲ್ಲ. ರಾಕ್ಷಸರು ಮನುಜಾಶನರಂತೆ! ದೇವತೆಗಳೇನು ಮನುಜಾಶನರಲ್ಲವೆ? ಯಮನಿಗಿನ್ನೂ ಮನುಜರ ಜೀವರಸವನ್ನು ಹೀರಿದು ಸಾಕಾಗಿಲ್ಲ. ದೇವತೆಗಳ ಹೆಂಗಸರು ಮನುಷ್ಯರಕ್ತಪಾನ ಲೋಲುಪರಾಗಿದ್ದಾರೆ. ಇದನ್ನೆಲ್ಲಾ ವಿಚಾರಿಸಿದರೆ ಈ ರಾಕ್ಷಸರೆಷ್ಟು ದಯಾಳುಗಳು! ಉಣ್ಣಲು ಏನೂ ಸಿಗದೆ ಹೊಟ್ಟೆಯುರಿ ಎದ್ದಾಗ ಏನೋ ಒಂದೆರಡು ಮನುಷ್ಯರನ್ನು ರಾಕ್ಷಸರು ಉಂಡಿರಬಹುದು. ಹೀಗೆ ಕೆಲವು ಮನುಷ್ಯರೂ ಕೂಡ ಮಾಡುತಿದ್ದಾರೆ. ಮನುಷ್ಯರೇ ರಾಕ್ಷಸರ ಆಹಾರವೆಂದು ಎಲ್ಲಿಯೂ ಹೇಳಿದ್ದು ಕಾಣಬರುವುದಿಲ್ಲ. ಹಾಗೆ ಅವರು ಮಾಡಿದ್ದೂ ಇಲ್ಲ. ಮನುಷ್ಯರು ರಾಕ್ಷಸರಿಗೆ ಲಡ್ಡುವಿನಂತೆ ರುಚಿಯಾದ ಆಹಾರವಾಗಿದ್ದರೆ ಮನುಜರಿಗೂ ರಾಕ್ಷಸರಿಗೂ ಪರಸ್ಪರ ರತಿಬಂಧವು ಉಂಟಾಗುವುದೆಂತು? ನಾರಿಯರನ್ನು ರಾಕ್ಷಸರು ಕಾಮಿಸುತಿದ್ದರು. ಅತ್ಯಾಗ್ರಹ ಉಳ್ಳವರಾಗಿದ್ದರು. ರಾಕ್ಷಸಿಯನ್ನು ನರನು ವಿವಾಹ ಮಾಡಿಕೊಳ್ಳುತಿದ್ದನು. ಈ ರೀತಿಯ ಸೌಹೃದಬಂಧವು ನಮಗೂ ರಾಕ್ಷಸರಿಗೂ ನಡೆಯುತ್ತಿದ್ದಿತೆಂಬುದನ್ನು ಪುರಾಣದಲ್ಲಿ ಹಲವೆಡೆಯಲ್ಲಿ ವರ್ಣಿಸಿದುದು ಕಂಡುಬರುತ್ತದೆ. ಇಷ್ಟು ಸಾಮಿಪ್ಯಬಂಧವು ದೇವತೆಗಳಿಗೂ ಮನುಜರಿಗೂ ಇಲ್ಲದಿರಲು ದೇವತೆಗಳಿಗಾಗಿ ಮನುಷ್ಯನು ರಾಕ್ಷಸರೊಡನೆ ವಿರೋಧ ಭಾವವನ್ನು ವಹಿಸುವುದೇಕೆ? ದೇವ ರಾಕ್ಷಸರಿಗೆ ಜಗಳವಿದ್ದರೆ ಅದರೆಡೆಯಲ್ಲಿ ಮನುಷ್ಯನು ಬೀಳಬೇಕೆ? ಬಿದ್ದಾದರೂ ಪ್ರಯೋಜನವೇನು? ಗುಣವನ್ನು ಅಭಿನಂದಿಸುವುದು ನಮ್ಮ ಕರ್ತವ್ಯವಲ್ಲವೇ? ಈ ವಿಷಯದಲ್ಲಿ ದೇವಾಸುರರ ಭಯವು ನಮಗೆ ಬೇಡ. ಭಗವಂತನಿಗೆ ರಾಕ್ಷಸರೂ ಮನುಷ್ಯರೂ ದೇವತೆಗಳೂ ಎಲ್ಲಾ ಒಂದೇ. ಪರಾಕ್ರಮಿಯಾದ ರಾವಣನನ್ನು ವೈಕುಂಠ ಲೋಕಕ್ಕೆ ಕರೆದೊಯ್ಯಲು ಉಂಟಾದುದಲ್ಲವೇ ರಾಮಾಯಣ? ಇಲ್ಲಿ ರಾವಣನು ರಾಕ್ಷಸನೆಂದು ವಿರೋಧ ಭಾವವನ್ನು ಅವಲಂಬಿಸುವುದು ಸರ್ವಥಾ ಅಯುಕ್ತ. ಭಿನ್ನ ವರ್ಗದವರಾದ ದೇವತೆಗಳಲ್ಲಿ ಸಖ್ಯವನ್ನು ಬೆಳೆಸುವುದಿದ್ದರೆ ರಾಕ್ಷಸರಲ್ಲಿ ಏಕಾಗದು? ಭೀಮಸೇನನ ಮಹಿಷಿಯಲ್ಲವೇ ರಾಕ್ಷಸಿಯಾದ ಹಿಡಿಂಬೆ? ರಾಕ್ಷಸನಾದ ಘಟೋತ್ಕಚನನ್ನು ಎಷ್ಟು ನರಾಧಿಪರು ಕೊಂಡಾಡಿ ಮಾನಿಸಿದರು? ಆದುದರಿಂದ ರಾಕ್ಷಸನು ಮನುಷ್ಯನಿಗೆ ಸ್ನೇಹಿಸಲು ಅರ್ಹನಾಗದಿರುವುದಿಲ್ಲ. ರಾವಣನು ರಾಕ್ಷಸ ಕುಲದವನೆಂದು ನಿಂದಿಸ ತೊಡಗುವುದಾದರೆ ಮೂರ್ಖತನವೆನ್ನಬೇಕು.

ಹಿಂದಿನ ದೇವತೆಗಳೆಲ್ಲಾ ಇಂದೆಲ್ಲಿಗೆ ಪಲಾಯನವನ್ನು ಗೆಯ್ದರು. ಈಗ ಸುಮಾರು ವರ್ಷಗಳಿಂದ ಅವರನ್ನು ಕಂಡವರಿಲ್ಲ. ಏನೊ! ಶಂಕರ, ಮಾಧ್ವ, ರಾಮಾನುಜರು ದೇವಲೋಕವಾಸಿಗಳನ್ನು ಕಂಡಿರುವರಂತೆ! ಆ ಮೇಲೆ ಕಂಡವರಿಲ್ಲ. ಪ್ರಾಚೀನ ಕಾಲದಲ್ಲೂ ರಾಜರ್ಷಿಗಳೂ ತಪಸ್ವಿಗಳೂ ದೇವತೆಗಳ ಬಂಧವುಳ್ಳವರಾಗಿದ್ದರು. ಇನ್ನಾರೂ ಇವರಂತೆ ದೈವಬಂಧವುಳ್ಳವರಿದ್ದಿಲ್ಲ. ರಾಕ್ಷಸರನ್ನು ಹಿಂದಿನ ಜನರಲ್ಲಿ ಅನೇಕರು ಕಂಡಿದ್ದರು. ಅಂದಿನ ಮನುಷ್ಯರು ರಾಕ್ಷಸರ ಸಂಪರ್ಕವನ್ನು ಹೆಚ್ಚಾಗಿ ಹೊಂದಿದ್ದರು. ದೇವತೆಗಳ ವಾಸ, ಎಲ್ಲಿಯೋ ಎತ್ತರದಲ್ಲಿ ದೂರವಂತೆ! ಭೂಮಿಯ ಇಂದಿನ ವಾತಾವರಣವು ಅವರಿಗೆ ಸುಖಕರವಾಗದಿರುವುದರಿಂದ ಈ ಎಡೆ ಇತ್ತಕಡೆ ಅವರ ಸಂಚಾರವಿಲ್ಲದಿರಬಹುದು. ರಾಕ್ಷಸರು ಭೂಲೋಕ ವಾಸಿಗಳಲ್ಲಿ ಸೇರಿದವರಾದ್ದರಿಂದ ಅವರಿಂದೆಲ್ಲಿಯೋ ಈಗ ಅಡಗಿರಬಹುದು. ಹುಡುಕಬೇಕಾಗಿದೆ. ದೇವತೆಗಳನ್ನೂ ರಾಕ್ಷಸರನ್ನೂ ನಿರ್ಮೂಲವಾಗಿ ಮಾಡಿದ್ದು ಎಲ್ಲಿಯೂ ತಿಳಿದುಬರುವುದಿಲ್ಲ. ಪುರಾಣಗಳ ಕೊನೆಯನ್ನು ನೋಡಿದರೂ ದೇವ ರಾಕ್ಷಸರೂ ಇನ್ನೂ ಉಳಿದಂತೆ ಕಾಣಬರುತ್ತದೆ. ಆ ಮೇಲೆ ಅವರೆಲ್ಲಿ ಯಾವಾಗ ಮರೆಯಾದರೋ ಎಂಬುದನ್ನು ತಿಳಿಯೆವು. ರಾಕ್ಷಸರ ಯಾವುದಾದರೂ ಒಂದು ವಂಶದ ಚಿಗುರು ನಮಗೇಕೆ ಕಂಡುಬರುವುದಿಲ್ಲ? ಆ ಪೂರ್ವ ಕಾಲದ ಪಾಂಡವವಂಶವು ಇಂದೂ ನೆಲೆನಿಂತಿದೆಯಂತೆ. ರಘು ಯದು ವಂಶಗಳು ಇಂತೆಯೇ ಇನ್ನೂ ಬಾಳಿವೆಯಂತೆ. ಆದರೆ ಆ ಘಟೋತ್ಕಚನ ವಂಶವು ಎಲ್ಲಿ ಲಯವಾಯಿತೋ? ವಿಭೀಷಣನು ರಾಕ್ಷಸ ರಾಜನಾಗಿರುವನು. ಆ ವಂಶಗಳೆಲ್ಲಾ ಇಂದು ನಾಮಾವಶೇಷಗಳಾಗಿವೆಯೇ? ಪುರಾತನವಾದ ಪೌಲಸ್ತ್ಯ ವಂಶವು ಅಂತು ನಿರ್ಮೂಲವಾಗುವುದು ದೈವಸಮ್ಮತವಾಗುವುದೇ? ಬ್ರಹ್ಮರ್ಷಿ ಕುಲವಲ್ಲವೇ? ಈ ಸಂಶಯ ನಿವೃತ್ತಿಗಾಗಿ ಇನ್ನೊಂದು ಬಗೆಯ ದಾರಿಯನ್ನು ಹಿಡಿದು ವಿವೇಚಿಸೋಣ.

ಹಿಂದಿನ ಕವಿಗಳು ಸ್ವಯಂ ಪ್ರಕಾಶವುಳ್ಳ ಅದೃಶ್ಯಶಕ್ತಿಗಳಿಗೆ ದೇವತ್ವವನ್ನು ಕಲ್ಪಿಸಿದ್ದಾರೆ. ಇಂದು ವಿಜ್ಞಾನ (ಸಾಯನ್ಸ್)ದ ಮೂಲಕ ಕಂಡು ಹಿಡಿದಿರುವ ಮೂಲ ಪದಾರ್ಥಗಳೆಲ್ಲಾ ಪುರಾಣ ಭಾಷೆಯಲ್ಲಿ ಅಥವಾ ಕವಿಸಂಕಲ್ಪದಲ್ಲಿ ಒಂದೊಂದು ದೇವತೆಗಳು ಪ್ರಪಂಚದ ಉತ್ಪತ್ತಿ ಸ್ಥಿತಿಲಯಗಳಿಗೆ ಹೇತು ಭೂತವಾಗಿ ಸೂಕ್ಷ್ಮವಾಗಿ ವರ್ತಿಸುವ ಶಕ್ತಿಗಳಿಗೆ ನವೀನರು ಭೌತಿಕವೆಂದೂ ಪೌರಾಣಿ

ಕರು ಅಧ್ಯಾತ್ಮಿಕವೆಂದೂ ಹೇಳುವರು. ಹಿಂದಿನ ಮಹರ್ಷಿಗಳು ತಪೋಬಲದಿಂದ ಮೂಲ ಪದಾರ್ಥಗಳನ್ನು ಆಂತರೀಯಕವಾಗಿ ಪರಿಗ್ರಹಿಸಿ ಲೋಕಕಲ್ಯಾಣಕ್ಕಾಗಿ ಯುಕ್ತರಾಗಿದ್ದರು. ಆ ಮೂಲಪದಾರ್ಥಗಳನ್ನು ಯಂತ್ರಸಹಾಯದಿಂದ ಚರ್ಮಚಕ್ಷುವಿಗೆ ಕಾಣುವಂತೆ ಮಾಡಿ ಸ್ವಾರ್ಥಸಿದ್ಧಿಗಾಗಿ ನಾನಾತ್ವದಲ್ಲಿ ಪ್ರಯೋಗಿಸುವವರು ಇಂದಿನ ವಿಜ್ಞಾನಿಗಳು. ಋಷಿಗಳು ಆ ಅದೃಶ್ಯ ಶಕ್ತಿಗಳ ದಿವ್ಯ ಪ್ರಭಾವವನ್ನು ದೇವರೂಪೇಣ ಭಜಿಸುವರು. ವಿಜ್ಞಾನಿಗಳು ಆ ಶಕ್ತಿಗಳ ಬಾಹ್ಯ ರೂಪವನ್ನು ಸ್ವಬಲ ವೃದ್ಧಿಗಾಗಿ ಉಪಯೋಗಿಸುವರು. ಈ ರೀತಿಯಿಂದ ಹಿಂದಿನ ಕಾಲದಂತೆ ಈ ಕಾಲದಲ್ಲೂ ದೇವತೆಗಳ ಬಂಧವನ್ನು ಹೊಂದುತ್ತೇವೆ. ಪ್ರಪಂಚದ ಮೂಲ ಪದಾರ್ಥಗಳಾದ ಆ ಸೂಕ್ಷ್ಮ ಶಕ್ತಿ ವಿಶೇಷಗಳು ಕವಿ ದೃಷ್ಟಿಯಿಂದ ದೇವತೆಗಳೆಂದು ನಾವು ತಿಳಿಯ ತೊಡಗಿದರೆ ಅಂದಿನಂತೆ ಇಂದೂ ಈ ಭೂಲೋಕದಲ್ಲಿ ದೇವತೆಗಳನ್ನು ಕಾಣಬಹುದು. ಅಗ್ನಿ, ವಾಯು, ಇಂದ್ರ, ಯಮ, ಇವರುಗಳಿಗೆಲ್ಲಾ ನಮ್ಮಂತೆ ರೂಪವಿಲ್ಲವೆಂದು ಪುರಾಣೇತಿಹಾಸಗಳು ನುಡಿಯುತ್ತವೆ. ಎಲ್ಲಿಯೂ ಯಾವುದರಲ್ಲೂ ಪ್ರವೇಶಿಸಲು ಶಕ್ತಿಯುಳ್ಳವರು ದೇವತೆಗಳು. ಅವರು ನಿತ್ಯರು. ಆದರೆ ಏಕನಾದ ಭಗವಂತನಿಂದ ಅವರೂ ದೂರದಲ್ಲಿರುವವರೇ ಆಗಿದ್ದಾರೆ. ಈಗ ದೇವತೆಗಳೆಂದರೆ ಅದೃಶ್ಯಶಕ್ತಿ ವಿಶೇಷಗಳೆಂದಂತಾಯಿತು. ಪೌರಾಣಿಕರು ಲೋಕದಲ್ಲಿ ವಿವಿಧ ರೂಪವಾಗಿ ಸಂಚರಿಸುವ ಅಗ್ನಿಯನ್ನು ದೇವತೆಯೆಂದು ಕರೆಯುತ್ತಾರೆ. ಇಂದಿನ ವಿಜ್ಞಾನಿಗಳು ಎಲೆಕ್ಟ್ರಿಸಿಟಿಯ ಮೂಲಕ ರೆಡಿಯೊವಿನಲ್ಲಿ ಮುಂದಕ್ಕೆ ಹೋದಾಗ ಪೌರಾಣಿಕರು ಇಂದ್ರನಲ್ಲಿಗೆ ಮುಟ್ಟುವೆವು ಎಂದು ತಿಳಿದರೆ ತಪ್ಪಾಗುವುದೇ? ಇಂತೆಯೇ ಇನ್ನುಳಿದ ದೇವತೆಗಳ ವಿಚಾರ. ಕವಿಗಳು ದೃಶ್ಯಾದೃಶ್ಯ ಶಕ್ತಿಗಳನ್ನು ಮನುಷ್ಯ ವ್ಯಕಿಯಂತೆ ಮಾಡಿ ಕಾಣುವುದು ಅವರ ವಾಸನಾಗುಣ. ಕವಿಗಳು ಕಲ್ಪನಾಲೋಕದ ಮಧುರ ವ್ಯಕ್ತಿಗಳೇ ದೇವತೆಗಳು. ಆ ದೇವತೆಗಳನ್ನು ವಿಜ್ಞಾನಿಗಳು ಕಾಣುವರಾದರೂ ಪ್ರಪಂಚದಲ್ಲಿ ಲೀನವಾದ ಅಂತರ್ಶಕ್ತಿ ವಿಶೇಷವೆಂದೇ ಹೇಳುವರು.

ಇಂತಹ ದೇವತೆಗಳನ್ನೆಲ್ಲಾ ರಾವಣನು ಜಯಿಸಿದ್ದನು. ಅಗ್ನಿ, ಇಂದ್ರ, ವರುಣ ವಾಯುಗಳೆಲ್ಲಾ ರಾವಣನ ಆಣತಿಯನ್ನು ಮೀರುತಿದ್ದಿಲ್ಲ. ಲೋಕದ ಸಕಲ ಸೃಷ್ಟಿಗೂ ಮೂಲವಾಗಿ ವರ್ತಿಸುವ ಆ ದಿವ್ಯ ಶಕ್ತಿಗೆ ಕವಿ ಭಾಷೆಯಲ್ಲಿ ಬ್ರಹ್ಮನೆಂದು ಹೇಳುವರು. ಆ ಬ್ರಹ್ಮನನ್ನು ರಾವಣನು ಘೋರವಾದ ತ್ಯಾಗಗಳಿಂದ ಸಂಕಟಗಳಿಂದ ಹೊಂದಿದ. ವಿಶ್ವ ಸತ್ಯದ ಮೂಲವನ್ನೇ ಆ ಮಹಾಸತ್ವನು ಮುಟ್ಟಿದನು. ಆದುದರಿಂದ ಅವನ ಅಧೀನವಾಗಿ ಎಲ್ಲವೂ ನೆಲೆನಿಂದಿತು. ದೇವತೆಗಳೂ ಅಧೀನರಾದರು. ಯಾವುದೂ ಅವನ ಅಧೀನವಾಗದೆ ಉಳಿದಿಲ್ಲ. ಅವನು ತನಗೆ ಬೇಕಾದಂತೆ ಲೋಕದ ಸೂಕ್ಷ್ಮ ಶಕ್ತಿಗಳನ್ನೆಲ್ಲಾ ವಿನಿಯೋಗಿಸಲು ಶಕ್ತನಾಗಿದ್ದನು. ಆ ಶಕ್ತಿಗಳನ್ನು ಇಲ್ಲವೇ ಆ ದೇವತೆಗಳನ್ನು ತಾನು ಬೇಕಾದಂತೆ ವಿನಿಯೋಗಿಸಲು ತಿಳಿದವನಾದುದರಿಂದ ಅವನು ಶತ್ರುಗಳಿಗೆ ಭಯಂಕರನಾದನು. ಅಗ್ನಿ, ವಾಯು, ವರುಣರನ್ನು ರಾವಣನು ಜಯಿಸಿದನು. ತನ್ನ ವಶವರ್ತಿಗಳನ್ನಾಗಿ ಮಾಡಿದನು. ಈ ಕಾರಣದಿಂದಲೇ ಅವನಿಗೆ ಲೋಕ ವಿಜಯವು ಸುಲಭವಾಯಿತು. ತನಗೆ ತೋಚಿದಾಗ ಎಲ್ಲೆಡೆಯಲ್ಲೂ ಸಂಚರಿಸಲು ಸಾಧ್ಯವಾಯಿತು. ಬೆಂಕಿ, ಗಾಳಿ, ನೀರುಗಳಿಂದು ಬೇಕಾದಂತೆ ಎಲ್ಲಾ ಕೃತ್ಯಗಳನ್ನೂ ಮಾಡಬಹುದು. ಇವುಗಳಿಂದಲೇ ಪ್ರಕೃತಿಯನ್ನೆಲ್ಲಾ ಬೇಕಾದಂತೆ ವಿನಿಯೋಗಿಸಬಹುದು ಮಾತ್ರವಲ್ಲ ಈ ಮೂರು ಶಕ್ತಿಗಳನ್ನು ರಾವಣನು ತನ್ನ ಅಧೀನದಲ್ಲಿಟ್ಟುಕೊಂಡುದರಿಂದ ತನಗೂ ತನ್ನ ನಾಡಿನವರಿಗೂ ಸುಖಸೌಭಾಗ್ಯಗಳನ್ನು ತಂದುಕೊಳ್ಳಲು ಶಕ್ತನಾದನು. ಭೌತಿಕ ಸುಖಸಮೃದ್ಧನಾದನು.

ಇಂದಿನ ನೂತನ ಲೋಕವು ಯಾವ ಸ್ಥಾನವನ್ನು ಬಯಸುತ್ತಿದೆಯೋ ಅದನ್ನು ರಾವಣನು ಹೊಂದಿದನು. ಇಂದಿನ ನಾಗರಿಕ ಜನಾಂಗದವರೆಲ್ಲಾ ಪ್ರಕೃತಿಯ ಸೂಕ್ಷ್ಮ ಶಕ್ತಿಗಳನ್ನು ಸ್ವಾಯತ್ತೀಕರಿಸಿ ಭೌತಿಕ ಐಶ್ವರ್ಯ ಸುಖ ಸಮೃದ್ಧರಾಗಲು ಸೈನ್ಸಿನ ಮೂಲಕ ಬದ್ಧಕಂಕಣರಾಗಿದ್ದಾರೆ. ಅಗ್ನಿ ವಾಯು ವರುಣ ಇಂದ್ರ (ಆಕಾಶ) ಈ ದೇವತೆಗಳ ಶಕ್ತಿಯಿಂದಲೇ ಎಲ್ಲಾ ಕೃತ್ಯವನ್ನು ವಿಜ್ಞಾನಿಗಳು ನಡೆಸುತ್ತಿದ್ದಾರೆ. ಇಂದು ಪ್ರಪಂಚದ ನಾನಾ ಭಾಗಗಳಲ್ಲಿ ನಡೆಯುವ ಸಕಲ ಕರ್ಮಗಳನ್ನು ಕ್ಷಿಪ್ರದಲ್ಲಿಯೇ ಕಾಣಲೂ ತಿಳಿಯಲೂ ಸಾಧ್ಯವಿದೆ. ಆಕಾಶ ಮಾರ್ಗದಿಂದ ಲೋಕವನ್ನೇ ದಿನ ದಿನ ಕಾಣಲು ಸಾಧ್ಯವಿದೆ. ಯಾವ ರೂಪವನ್ನೂ ಸ್ವೇಚ್ಛೆಯಾಗಿ ಧರಿಸಬಹುದು. ಬೆಂಕಿ, ನೀರು, ಗಾಳಿಗಳನ್ನು ರೂಪಾಂತರೀ ಕರಿಸಲು ಶಕ್ತರಾಗಿದ್ದೇವೆ. ಆ ದೇವತೆಗಳಿಂದು ನಮ್ಮ ಆಜ್ಞಾನುವರ್ತಿಗಳಾಗಿದ್ದಾರೆ. ಯುದ್ಧಕ್ಕೆ ಯಾವ ಯಾವ ಬಗೆಯ ಉಪಕರಣಗಳನ್ನು ತಯಾರಿಸಿಲ್ಲ? ಕ್ಷಣದಲ್ಲಿ ನಾಡನ್ನೇ ಧ್ವಂಸಗೊಳಿಸುವ ಮಹದುಪಕರಣಗಳನ್ನು ತಯಾರಿಸಿದ್ದೇವೆ. ಇನ್ನೂ ಶೋಧನೆಯಲ್ಲೇ ಇದ್ದೇವೆ. ಸಮುದ್ರದಲ್ಲೂ ಯುದ್ಧವನ್ನು ಮಾಡತೊಡಗಿದ್ದೇವೆ. ಇದಲ್ಲದೆ ಇನ್ನೂ ಅನೇಕ ಉಪಕರಣಗಳನ್ನು ತಯಾರಿಸಿದ್ದೇವೆ. ನೂತನ ನೂತನ ಶೋಧನೆಗಳನ್ನು ಇನ್ನೂ ನಡೆಸುತ್ತಿದ್ದೇವೆ. ರಾವಣನು ಸೈನ್ಸಿನಿಂದ ಪ್ರಾಪ್ಯಸ್ಥಾನವನ್ನು ಹೊಂದಿದ್ದಾನೆ. ನಾವು ಹೊಂದಿಲ್ಲ. ಇಂದು ನಾವು ಬಗೆಯುವ ಎಲ್ಲಾ ಪರಿಷ್ಕೃತಿಗಳನ್ನೂ ರಾವಣನು ಹೊಂದಿದ್ದನು. ಸ್ತ್ರೀಪುರುಷರನ್ನು ಸಂಬಂಧಿಸಿದ ಸರ್ವತೃಷ್ಣೆ ಸ್ವಾತಂತ್ರ್ಯಗಳೂ ಲೌಕಿಕ ಸಕಲಾಭೀಷ್ಟಗಳೂ ರಾವಣನ ಪ್ರಜೆಗಳಿಗೆ ಸುಕರವಾಗಿತ್ತು. ಎಣಿಸಿದಂತೆ ಎಲ್ಲೆಡೆಯಲ್ಲೂ ಸಂಚರಿಸಲುಳ್ಳ ಶಕ್ತಿಯುಕ್ತರಾಗಿದ್ದರು. ಯಾವ ರೂಪವನ್ನೂ ಮಾಡಿಕೊಳ್ಳಲು ಸಶಕ್ತರೆನಿಸಿದ್ದರು. ಯಾವ ಸುಖವನ್ನೂ ಅವರು ಹೊಂದಲು ಸಾಧ್ಯವುಳ್ಳವರಾಗಿದ್ದರು. ಸ್ತ್ರೀಗೂ ಪುರುಷನಂತೆ ಅಧಿಕಾರ ಸ್ವಾತಂತ್ರ್ಯವಿದ್ದಿತು. ನಿರ್ಭಯರಾಗಿ ಪುರುಷರಂತೆ ಸ್ತ್ರೀಯರಿಗೂ ಸಂಚರಿಸಬಹುದಾಗಿದ್ದಿತು. ರಾವಣನ ಪ್ರಜೆಗಳಲ್ಲಿರುತಿದ್ದ ಮಾಯಾ ವಿದ್ಯೆಗಳು ಎಷ್ಟೋ ಮೇಲಿನ ತರಗತಿಯವು. ನಾವಿನ್ನೂ ಛಾಯಾಯಂತ್ರದಲ್ಲೇ ಇರುವೆವು.

ಇಂದಿನ ಪಾಶ್ಚಾತ್ಯ ಲೋಕವು ದೇವತೆಗಳನ್ನು ಜಯಿಸಲುಳ್ಳ ಶಕ್ತಿಗಾಗಿ ತಪಸ್ಸನ್ನು ಮಾಡುತ್ತಿದೆ. ರಾವಣನು ಆ ತಪಸ್ಸಿನಲ್ಲಿ ವರವನ್ನು ಹೊಂದಿದವನು. ಇಂತಹ ರಾವಣನನ್ನು ಇಂದಿನ ಲೋಕವು ಅನುಕರಿಸುತ್ತದೆ. ಅಲೆಕ್ಸಾಂಡರ್, ನೆಪೋಲಿಯನ್, ಕೈಸರ್ ಇವರಿಗೆ ಹೊಂದಲು ಅಸಾಧ್ಯವಾದ ಆ ಸರ್ವಾಧಿಪತ್ಯವು ಎಷ್ಟೆಷ್ಟೋ ಶತಮಾನಗಳ ಹಿಂದಿನ ರಾವಣನಿಗೆ ಸಾಧ್ಯವಾಗಿದೆ. ಅಂತಹ ರಾವಣನು ನಮಗೆಲ್ಲರಿಗೂ ಕೀರ್ತನೀಯನಲ್ಲವೇ? ಅಭಿನವ ಲೋಕಕ್ಕೆ ಆರಾಧ್ಯನೂ ಅಭಿಮಾನಾರ್ಹನೂ ಅಲ್ಲವೇ?

ಭೌತಿಕ ಸುಖಸಾಮ್ರಾಜ್ಯವನ್ನು ರಾವಣನು ಹೊಂದಿದನೆಂಬುದರಲ್ಲಿ ಕಿಂಚಿತ್ತಾದರೂ ಸಂದೇಹವಿಲ್ಲ. ಅಧ್ಯಾತ್ಮಿಕವನ್ನು ಬಯಸುವವರಿಗೆ ಭೌತಿಕ ವಿಷಯವು ರುಚಿಸದು. ಆ ಅಧ್ಯಾತ್ಮಿಕವಾದಿಗಳಾದ ಮುನಿಗಳು ರಾವಣನನ್ನು ರಾಕ್ಷಸನನ್ನಾಗಿ ಮಾಡಿದರು. ಭೌತಿಕವನ್ನು ತಮ ಪ್ರಧಾನವೆಂದು ಹೇಳುವರು. ತಾಮಸರನ್ನು ಅಂಧಕಾರದಲ್ಲಿ ಚಲಿಸಿರುವವರೆಂದು ಸಾತ್ವಿಕರು ನುಡಿಯುತ್ತಾರೆ. ಈ ರೀತಿಯಿಂದ ಭೌತಿಕ ವಾದಿಗಳು ಅಧ್ಯಾತ್ಮಿಕ ವಾದಿಗಳಿಗೆ ನಿಶಾಚರರಾದರು. ಭೌತಿಕ ಸುಖ ಪ್ರಧಾನಿಗಳಾದ ಜನರ ವಿಕ್ರಮಾಚಾರಗಳಿಗೆ ಸಹಿಸದ ಅಧ್ಯಾತ್ಮಿಕ ವಾದಿಗಳು ಭೌತಿಕ ಸುಖಲೋಲುಪರಿಗೆ ರಾಕ್ಷಸರೆಂಬ ನಾಮಕರಣವನ್ನು ಗೆಯ್ದರು. ತಾಪಸರ ಸಿಂಪೆಗೆ ಅವರೀಡಾದರು. ಈ ಕಾರಣದಿಂದ ನಾವು ಅವರನ್ನು ಹಳಿಯಬೇಕಾದುದಿಲ್ಲ. ಅವರ ಮತವನ್ನು ನಾವು ಹಿಡಿಯತೊಡಗಿದರೆ ಲೋಕದ ಇಂದಿನ ಜನರೆಲ್ಲಾ ರಾಕ್ಷಸರಾಗಿ ತೀರುವರು. ಇದು ಸತ್ಯವಾದರೆ ರಾವಣನು ಆರಾಧ್ಯನಾಗುವನು.

ರಾವಣನಿಗೆ ಹತ್ತು ತಲೆ, ಇಪ್ಪತ್ತು ಕೈಗಳು ಎಂದು ಬಣ್ಣಿಸಿದುದರಿಂದ ನಾವು ಸಂಭ್ರಾಂತರಾಗಬೇಕಾದುದಿಲ್ಲ. ಬ್ರಹ್ಮನಿಗೆ ನಾಲ್ಕು ತಲೆಗಳಿವೆ. ವಿಷ್ಣುವಿಗೆ ನಾಲ್ಕು ತೋಳುಗಳಿವೆ. ಇದನ್ನು ನೋಡಿದರೆ ವಿಕಾರವು ಉಂಟಾಗುವುದಿಲ್ಲವೇ? ಸುಬ್ರಹ್ಮಣ್ಯನಿಗೆ ಆರು ತಲೆಗಳಂತೆ. ಹನ್ನೆರಡು ಕೈಗಳಂತೆ. ಇವನು ಹೀಗಿದ್ದರೂ ಕಮನೀಯ ರೂಪನು. ಈ ನೆಲೆಯಿಂದ ವಿಚಾರಿಸಿದರೆ ಅಮಾನುಷರೂಪರಾದ ದೇವತೆಗಳಿಗಿಂತ ರಾವಣನಿಗೆ ಅಂಗಾಧಿಕ್ಯದಿಂದ ಶ್ರೇಷ್ಠತೆಯನ್ನು ಕಲ್ಪಿಸಿದುದಾಗಿದೆ. ರಾವಣನಿಗೆ ಹತ್ತು ತಲೆಗಳಿವೆಯೆಂದು ಹೇಳಿದುದನ್ನು ವಿಚಾರಿಸಿದರೆ ಅವನು ದಶದಿಕ್ಕುಗಳಲ್ಲೂ ಮುಖಯುಕ್ತನು ಎಂಬುದನ್ನು ಸೂಚಿಸುತ್ತಿದೆ. ಇಂತೆಯೇ ಅವನ ಕೈಗಳು ಒಂದೇ ಕಾಲದಲ್ಲಿ ಒಂದೇ ಕೆಲಸಕ್ಕೆ ಒದಗುವವುಗಳಾದುದರಿಂದ ಇಪ್ಪತ್ತು ಕೈಗಳುಳ್ಳವನೆಂದು ಕಲ್ಪಿಸಿದರು. ರಾವಣನ ಪರಾಕ್ರಮವನ್ನು ವರ್ಣಿಸತೊಡಗಿದಾಗ ಕವಿಗೆ ದಶಶೀರ್ಷಗಳೂ ವಿಂಶತಿ ಬಾಹುಗಳೂ ಹೇಳಬೇಕೆನಿಸಿತು. ಸಾಧಾರಣವಾಗಿ ಒಂದೇ ತಲೆ ಇಪ್ಪತ್ತು ಕೈಗಳುಳ್ಳ ರಾವಣನನ್ನು ರಾಮಾಯಣದಲ್ಲಿ ಕಾಣುತ್ತೇವೆ. ಆದುದರಿಂದ ಅವನ ರೂಪವು ವಿಕಾರಯುಕ್ತವಾದುದು; ಮನೋಜ್ಞವಲ್ಲ ಎಂದು ಹೇಳಬೇಕಾಗಿಲ್ಲ. ಅದ್ಭುತಕೃತ್ಯಗಳನ್ನು ಗೈಯುವ ಸಾಹಸಿಗಳನ್ನೂ ಮಹಾಪುರುಷರನ್ನೂ ಕವಿಗಳು ಅಸಾಧಾರಣವಾದ ರೂಪದಿಂದ ವರ್ಣಿಸುವುದುಂಟು. ದೇವೇಂದ್ರನನ್ನು ಸಹಸ್ರಾಕ್ಷನನ್ನಾಗಿ ವರ್ಣಿಸಿದ್ದಾರೆ. ಸೌಂದರ್ಯಾಪೇಕ್ಷಿಗಳು ಇಂದ್ರನಿಗಿಂತ ರಾವಣನನ್ನೇ ಬಯಸಬೇಕಾಗುತ್ತದೆ. ರಾವಣನು ಅನ್ಯಾದೃಶವಾದ ಭೂಷಣಯುಕ್ತನಾಗಿ ಹೆಚ್ಚು ಅಂಗಗಳಿಂದ ಕೂಡಿದವನಾದನು.

ರಾವಣನು ಸತ್ಯ, ನ್ಯಾಯ, ಬಲ ಪರಾಕ್ರಮಗಳಿಂದ ರಾಮನಿಗಿಂತ ಕೀಳುತರಗತಿಯವನಾಗಿ ರಾಮಾಯಣದಲ್ಲಿ ವರ್ಣಿಸಿಲ್ಲ. ಅಯೋಧ್ಯೆಗಿಂತ ಲಂಕೆಯು ಮಿಗಿಲೆನಿಸಿದಂತೆ ರಾವಣನು ರಾಮನಿಗಿಂತ ಮಿಗಿಲಿನವನಾಗಿದ್ದನು. ಪೌರುಷದಿಂದ ರಾಮನು ರಾವಣನನ್ನು ಕೊಂದಿಲ್ಲ. ದೈವತನದಿಂದ ವಿಜಯಿಯಾದನು. ಆ ದೈವವು ನಮಗೆ ಅಪ್ರಮೇಯ. ರಾವಣನೂ ರಾಮನಂತೆಯೇ ದೈವಪ್ರೇರಣೆಯಿಂದುಂಟಾದನು. ಅಂತಹ ದೈವವು ನಯೋಪಾಯ ಕುಶಲಿಯಾದ ರಾವಣನನ್ನೇಕೆ ವಿರೋಧಿಸಿತು? ಎಂದು ಯಾರಾದರೂ ಕೇಳಿದರೆ 'ದೈವಕೃತ್ಯವು ಇಂತಹುದು ಎಂದು ಉತ್ತರವೀಯಬೇಕಾಗುತ್ತದೆ. ದೈವಪ್ರೇರಣೆಯಿಂದ ಶೋಕಪರ್ಯವಸಾಯಿಯಾದ ಈ ಕಥೆಯು ಪ್ರಥಮವಾಗಿ ರಾವಣನ ಚರಿತೆಯಿಂದ ಲೋಕವು ಕಳೆಗೊಂಡಂತೆ ಹೇಳಿದೆ. ಜಯಿಸಿದುದು ರಾಮನು. ಆದ್ದರಿಂದ ಕವಿಗೆ ಅವನು ಕೀರ್ತನೀಯನಾದನು. ಆದರೆ ಅಜ್ಞಾತವಾದ ದೈವಪ್ರಾತಿಕೂಲ್ಯತೆಯಿಂದ ಆ ಲಂಕಾಪ್ರದೀಪನು ಕಳೆಗೆಟ್ಟುದರಲ್ಲಿ ನಮಗೆ ಶೋಕವು ಉಂಟಾಗದೆ?

ಕಲಿಯುಗ

★

"ಸಂಘೇ ಶಕ್ತಿ ಕಲೌಯುಗೇ"

★

ಲೇಖಕರು: ಶ್ರೀ। ಆರ್. ಎಸ್. ಎಮ್.

> "ಮನುಷ್ಯನು ಸೃಷ್ಟಿಯ ಮಕುಟವೆಂದು ಡಾರ್ವಿನ್ನನು ತಿಳಿಯುವನು. ನಮ್ಮ ಪೂರ್ವಿಕರ ಸಿದ್ಧಾಂತ ಪ್ರಕಾರವೂ ಅವನು ಅನೇಕ ಲಕ್ಷ ಯೋನಿಗಳನ್ನು ದಾಟಿ ಮನುಷ್ಯ ಜನ್ಮವನ್ನು ಧರಿಸುವನು. ಇದಲ್ಲದೆ ಜ್ಞಾನ, ಕಲೆ, ಕೈಗಾರಿಕೆ ಮೊದಲಾದ ಸುಧಾರಣೆಯ ಅಂಗಗಳು ತಲೆಯಿಂದ ತಲೆಗೆ ವೃದ್ಧಿ ಹೊಂದುತ್ತಾ ಬಂದಿವೆ." .... ನವಯುಗವಾದ ಕಲಿಯುಗದ ಕಡೆಗೆ ಈ ಬಗೆಯ ದೃಷ್ಟಿಕೋನದಿಂದ ನೋಡಿ, ಈ ಲೇಖದಲ್ಲಿ ವಿವೇಚಿಸಲ್ಪಟ್ಟಿದೆ. ಲೇಖಕರು ನುರಿತ ಬರೆಹಗಾರರೂ ವಿಚಾರಕರೂ ಆಗಿರುತ್ತಾರೆ. ಇವರ ಲೇಖನಿಯಿಂದ ಅನೇಕ ವಿಚಾರಗಳು ಪತ್ರ ಪತ್ರಿಕೆಗಳಲ್ಲಿ ಚರ್ಚಿತವಾದುದುಂಟು. ತಮ್ಮ ಸಂಪೂರ್ಣ ಹೆಸರನ್ನು ಪ್ರಕಟಿಸಲು ಇಚ್ಛಿಸದುದರಿಂದ ವಾಚಕರಲ್ಲಿ ಆ ಮಟ್ಟಿನ ಕುತೂಹಲವು ಉಳಿಯುವುದು ಸಹಜ. ಆದರೆ ಅವರ ಲೇಖನ ಸ್ವಾರಸ್ಯವನ್ನು ವಾಚಕರು ಗಮನಿಸುವುದಕ್ಕೆ ಅದರಿಂದೇನೂ ತಡೆಯಾಗಲಾರದಷ್ಟೆ.

ಈ ಲೇಖವನ್ನು ಹೊಸ ವರ್ಷದ ಪ್ರಾರಂಭದಲ್ಲಿ ಬರೆಯುತ್ತೇವೆ. ಇದು ಗತವರ್ಷದ ಜೀವನವನ್ನು ಪರ್ಯಾಲೋಚಿಸಿ ಈ ವರ್ಷದ ಕಾರ್ಯಕಲಾಪವನ್ನು ಮುಂದಾಗಿ ಚಿತ್ರಿಸಿ ಆ ಕುರಿತು ನಿರ್ಣಯಗಳನ್ನು ಮಾಡಿಡುವ ಸಮಯ ಈ ಚಿನ್ಹಗಳನ್ನು ಗಣನೆಗೆ ತರಬೇಕಾಗುತ್ತದೆ. ಹೇಗೆಂದರೆ ನಾವಿಕನು ತನ್ನ ನೌಕೆಯನ್ನು ನೀರಿನ ಸೆಳವು ಮತ್ತು ಗಾಳಿಯ ಹೊಡತವನ್ನು ನೋಡಿ ನಡಿಸುವಂತೆ ನಾವು ಕಾಲಪ್ರಭಾವವೆಂಬ ವಾತಾವರಣವನ್ನು ಎಣಿಸಿ ನಮ್ಮ ಸಂಸಾರ ನೌಕೆಯನ್ನು ಸಾಗಿಸಬೇಕಾಗಿದೆ.

ಈ ಯುಗವಾದರೋ ಕಲಿಯುಗ. ಇವು ಅನಾಚಾರದ ದಿನಗಳೆಂತಲೂ ಮುಂಚಿನ ಯುಗಗಳು ಹಿಂದೆ ಹೋದಂತೆ ಒಂದರಿಂದೊಂದು ಉತ್ಕೃಷ್ಟವಿತ್ತೆಂತಲೂ ಸಾಮಾನ್ಯ ಜನರ ಹೇಳಿಕೆ ಇದೆ. ಒಂದು ದುಷ್ಕೃತ್ಯ ಕಂಡರೆ ಇದು ಕಲಿಯುಗದ ಮಹಿಮೆ ಎನ್ನುವ ವಾಡಿಕೆ ಇದೆ. ನಾವು ಕೃತಯುಗವನ್ನು ಸಂಸ್ಕೃತ ಕಾಲವೆಂದೆಣಿಸುವಂತೆ ಕ್ರೈಸ್ತರು ಕೂಡ ಪೂರ್ವದ ಕಾಲವನ್ನು ಸುವರ್ಣಯುಗವೆಂದು ಕರೆಯುವುದುಂಟು. ಇದು ನಿಜವಾದರೆ ನಮ್ಮ ಮುಂದಿರುವ ಕಾಲವು ಕಷ್ಟ, ದುಷ್ಟ, ಅನಿಷ್ಟ ವ ಸಂಕಷ್ಟ ಕಾಲವೆಂದಾಗಿ ನಾವು ನಿಸ್ತೇಜೋವಂತರೂ, ನಿರುತ್ಸಾಹಿಗಳೂ ಆಗುವದೇ ಸರಿ.

ಪರಂತು ವಸ್ತುಸ್ಥಿತಿಯು ಹಾಗಲ್ಲ. ಮುಂದಿನ ದಿನಗಳೂ ಕೆಟ್ಟ ದಿನಗಳಾಗಲು ಕಾರಣವೂ ಇಲ್ಲ. ಚಾರ್ಲ್ಸ ಡಾರ್ವಿನ್ನನೆಂಬ ಶಾಸ್ತ್ರಜ್ಞನ ಸಿದ್ಧಾಂತ ಪ್ರಕಾರ ಸೃಷ್ಟಿಯು ಉತ್ಕರ್ಷೆಯನ್ನು ಪಡೆಯುತ್ತಾ ಬಂದಿದೆ. ಮನುಷ್ಯನು ಸೃಷ್ಟಿಯ ಮಕುಟವೆಂದು ಡಾರ್ವಿನ್ನನು ತಿಳಿಯುವನು. ನಮ್ಮ ಪೂರ್ವಿಕರ ಸಿದ್ಧಾಂತಪ್ರಕಾರವೂ ಜೀವನು ಅನೇಕ ಲಕ್ಷ ಯೋನಿಗಳನ್ನು ದಾಟಿ ಮನುಷ್ಯ ಜನ್ಮವನ್ನು ಧರಿಸುವನು. ಇದಲ್ಲದೆ ಜ್ಞಾನ, ಕಲೆ, ಕೈಗಾರಿಕೆ ಮೊದಲಾದ ಸುಧಾರಣೆಯ ಅಂಗಗಳು ತಲೆಯಿಂದ ತಲೆಗೆ ವೃದ್ಧಿಹೊಂದುತ್ತಾ ಬಂದಿವೆ. ತಾತ್ವಿಕದೃಷ್ಟಿಯಿಂದಲೂ ಇದೇ ವಿಷಯವು ಸಿದ್ಧವಾಗುವುದು. ಹೇಗೆಂದರೆ ಸರ್ವಾತ್ರಾಣಿಯೂ ಪರಿಪೂರ್ಣನೂ ಆದ ಈಶ್ವರನು ಈ ಲೋಕದ ಚಾಲಕನಾಗಿರುತ್ತಾ ಆತನು ಸಚ್ಚಿದಾನಂದ ಮೂರ್ತಿಯಾಗಿರುತ್ತಾ ಆತನ ಲೋಕವೂ ಅಧೋಮುಖವಾಗಿ ಮುಂದರಿಯುವದೆಂಬುದು ಅಸಂಬದ್ಧವಲ್ಲವೇ? ಎಲ್ಲಾ ವಿಷಯಗಳಲ್ಲಿಯೂ ಪರಮಪದವು ಮುಂದಿದೆಯೆಂದು ನಾವು ನಂಬಿ ನಡೆದರೆ ಉತ್ಸಾಹ ಸಾಹಸಗಳು ನಮ್ಮ ಪಾಲಿಗೆ ಬರುವವು. ಕಲಿಯುಗವು ನಮಗೆ ಕಲಿಗಳ ಅಂದರೆ ಶೂರರ ಯುಗವಾಗಿ ಕಾಣುವುದು.

ನಮ್ಮ ಸುತ್ತ ಮುತ್ತ ನೋಡಿದರೂ ಇದೇ ಅರ್ಥವು ಈ ಯುಗಕ್ಕೆ ಸಲ್ಲುವದು. ಲೆನಿನ್, ಹಿಟ್ಲರ್, ಮುಸ್ಸೋಲಿನಿ, ಖಮಾಲ್ ಪಾಷಾ, ಡಿ. ವೆಲೆರಾ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ತಿಲಕ, ಗಾಂಧಿ ವಗೈರೆರ ಕಾಲವು ಶೂರರ ಕಾಲವೇ ಸರಿ. ಅವರು ತಮ್ಮ ಕಾಲವನ್ನು ಆವೆಮಣ್ಣಿನಷ್ಟು ಮೆತ್ತಗೆ ಮಾಡಿ ತಮ್ಮ ಇಚ್ಛೆಯಂತೆ ಅದನ್ನು ರೂಪಿಸಿ ಅದರ ಬೆನ್ನ ಮೇಲೆ ಶಕಪುರುಷರಂತೆ ತಮ್ಮ ಮುದ್ರೆಯನ್ನು ಒತ್ತಿದ್ದಾರೆ. ಮುಂದಿನ ಪೀಳಿಗೆಯವರು ಈ ಕಾಲವನ್ನು ಗಾಂಧಿಯುಗವೆಂದು ಕರೆದರೆ ಅದು ಹೆಚ್ಚೆಂದು ಕಾಣದು.

ಈ ಶಕ ಪುರುಷರ ಚರಿತ್ರವನ್ನು ಸಂಗ್ರಹವಾಗಿ ವಿಚಾರದೃಷ್ಟಿಯಿಂದ ಪರಿಕಿಸಿದರೆ ಅವರನ್ನು ಪ್ರಾಯಶಃ ಎರಡು ವರ್ಗಗಳಲ್ಲಿ ಸೇರಿಸಬಹುದು. ಬಲಶಾಲಿಯೇ ನ್ಯಾಯಶಾಲಿಯೆಂದು ನಂಬುವ ತಮ್ಮ ಚರ್ಯೆಯಲ್ಲಿ ಮತ್ಸ್ಯನ್ಯಾಯವನ್ನು ಅನುಸರಿಸಿ ಜೀರ್ಣಸಬಹುದಾದ್ದನ್ನು ನುಂಗುವ ಪಕ್ಷವು ಒಂದು. ಧರ್ಮಿಷ್ಠನೇ ಬಲಷ್ಟನೆಂದು ನಂಬುವ ತಮ್ಮ ಚರ್ಯೆಯಿಂದ ಪರೋಪಕಾರಾರ್ಥಮಿದಂ ಶರೀರಂ ಎಂಬ ವಾಕ್ಯವನ್ನು ಸಮರ್ಥಿಸುವ ಪಕ್ಷವೊಂದು, ಹೀಗೆ ಎರಡು ಪಕ್ಷಗಳಿವೆ. ಬಲಹೀನನನ್ನು ಬಲಿಷ್ಠನು ಕೊಂದು ಜೀವಿಸುವದು ಪ್ರಕೃತಿಯ ನಿಯಮವೆಂದು ಚಾರ್ಲ್ಸ್ ಡಾರ್ವಿನ್ನನು ಬೋಧಿಸಿದನು. ಯುರೋಪವು ಈ ಹಿಂಸಾತ್ಮಕ ತತ್ವವನ್ನು ಒಪ್ಪಿ ಕೈಕೊಂಡಿದೆ. ಪರಮಾತ್ಮನ ಪ್ರೇಮರೂಪಿ ಜಗತ್ತಿನಲ್ಲಿ ಪ್ರೇಮವೂ . ತುಂಬಿದೆ. ಅಹಿಂಸೆಯು ಪ್ರೇಮದ ಬೀಜವೆಂದು ಮುಂತಾಗಿ ಪರಮಹಂಸ ಗಾಂಧಿ ಪ್ರಭೃತಿಗಳು ಸಾರುವರು. ಹಿಂದುದೇಶವೂ ಈ ತತ್ವವನ್ನು ಮನ್ನಿಸುವುದು. ಪರಂತು ಎರಡು ತಂಡದವರಲ್ಲಿಯೂ ಶಕ್ತಿಯ ಪ್ರಭಾವವಿದೆ. ಇಬ್ಬರೂ ಏಕಾಗ್ರಚಿತ್ತ ಮೂಲಕ ತಪೋಬಲವನ್ನು ಆತ್ಮಸಮರ್ಪಣೆಯಿಂದ ಯಜ್ಞಬಲವನ್ನು ಗಳಿಸಿರುವರು. ಆದರೆ ಒಬ್ಬರದು ರಾವಣನೇ ಮುಂತಾದ ರಾಕ್ಷಸರ ತಪೋಬಲದಂತೆಯೂ ಇನ್ನೊಬ್ಬರದು ಧ್ರುವ, ಜನಕ, ಅಶೋಕ ಮೊದಲಾದ ರಾಜರ್ಷಿಗಳ ತಪೋಬಲದಂತೆಯೂ ಇರುವದು. ಇವುಗಳಲ್ಲಿ ಮೊದಲನೇ ಶಕ್ತಿಯನ್ನು ಆಸುರೀಶಕ್ತಿಯೆಂತಲೂ ಎರಡನೇಯದನ್ನು ದೈವೀಶಕ್ತಿಯೆಂತಲೂ ಅನ್ನಬಹುದು. ಮಹಾತ್ಮಾ ಗಾಂಧೀಜಿಯನ್ನು ದೈವೀಶಕ್ತಿಯ ದೃಷ್ಟಾಂತವನ್ನಾಗಿಯೂ ಹಿಟ್ಲರ ಮಹಾಶಯನನ್ನು ಆಸುರೀಶಕ್ತಿಯ ಮೂರ್ತಿಯನ್ನಾಗಿಯೂ ತೆಕ್ಕೊಳ್ಳಬಹುದು. ಅವರ ಜೀವನದ ಅಂತಿಮ ಹೇತುವಿನಿಂದಲೂ ಅವರ ರಾಷ್ಟ್ರಕಲ್ಪನೆಯಿಂದಲೂ ಅವರ ಧ್ಯೇಯಗಳ ಅಂತರವನ್ನು ನಿರ್ಣಯಿಸಬಹುದು. ಹಿಟ್ಲರನಾದರೋ ಜರ್ಮನ ಜನತೆಯೆಂಬ ಶಕ್ತಿಯನ್ನು ನಿರ್ಮಿಸಿ ಇತರ ರಾಷ್ಟ್ರಗಳನ್ನೂ ಇತರ ಕುಲಗಳನ್ನೂ ಆ ಶಕ್ತಿಗೆ ನಿಷ್ಕರುಣೆಯಿಂದ ಬಲಿಕೊಡುವನು. ಜರ್ಮನಿಯಲ್ಲಿಯೂ ಕೂಡಾ ಎಲ್ಲ ಪ್ರಜೆಗಳನ್ನೂ ರಾಷ್ಟ್ರವೆಂಬ ದೇವತೆಗೆ ಸಮರ್ಪಿಸುವನು. ಆ ದೇವತೆಯ ಎದುರು ಯಾರಿಗೂ ವ್ಯಕ್ತಿತ್ವ ಇಲ್ಲ. ಅವರಿಗೆ ತಮ್ಮದೆಂದು ಕರೆಯಬಹುದಾದ ತನುಮನಧನಗಳಾದರೂ ಇಲ್ಲ. ಅವರ ದೃಷ್ಟಿಯು ಜರ್ಮನಿಯ ಹೊರತು ಬೇರೊಂದಿಲ್ಲವೆನ್ನಬಹುದು. ಹಿಟ್ಲರನು ಅವರ ದೇವರು, ದೇಶೋನ್ನತಿಯು, ಅವರ ಧರ್ಮವೆಂದರೂ ಸಲ್ಲುವುದು. ಇತ್ತ ಮಹಾತ್ಮರ ಅಂಬೋಣವು ಹೀಗಿದೆ. ಧರ್ಮದ ಪುನರುಜ್ಜೀವನವೇ ತನ್ನ ಧ್ಯೇಯ, ಸನಾತನವೂ ಅನಾದಿಯೂ ಆದ ಧರ್ಮಕ್ಕನುಗುಣವಾಗಿ ನಮ್ಮ ಸುಧಾರಣೆಯನ್ನೂ ವ್ಯವಸ್ಥೆಪಡಿಸಲಿಕ್ಕೆ ನಮಗೆ ಸ್ವಾತಂತ್ರ್ಯವು ಅವಶ್ಯಕ. ಆದರೆ ಅಂತಹ ಸ್ವಾತಂತ್ರ್ಯವನ್ನು ಜುಲುಮಿನಿಂದಾಗಲೀ ಹಿಂಸೆಯಿಂದಾಗಲೀ ಸಂಪಾದಿಸತಕ್ಕದಲ್ಲ. ನಮ್ಮ ಉಪಕರಣಗಳಾದರೂ ಉದ್ದಿಶ್ಯದಷ್ಟೇ. ಧರ್ಮ್ಯವೂ ನಿರ್ದುಷ್ಟವೂ ಆಗಿರಬೇಕು. ಹಗೆಯವನ ಎದೆಯನ್ನು ಪ್ರೇಮದಿಂದ ಕರಗಿಸಿ ಅವನನ್ನು ತನ್ನವನನ್ನಾಗಿ ಮಾಡಬೇಕು. ಇದೇ ಮಹಾತ್ಮರ ರಾಷ್ಟ್ರೀಯ ತತ್ವಸಾರವು. ರಾಷ್ಟ್ರವು ಎಲ್ಲರ ಹಿತವನ್ನು ಸಾಧಿಸಬೇಕು. ಎಲ್ಲರೂ ರಾಷ್ಟ್ರಹಿತವನ್ನು ಸಾಧಿಸಬೇಕು ಮತ್ತು ಪರಸ್ಪರ ಬಂಧುಪ್ರೇಮದಿಂದಿರಬೇಕು, ಎಂಬದು ಅವರ ಸಿದ್ಧಾಂತವದೆ. ಅವರ ಪ್ರೇಮದಲ್ಲಿ ಪರಪಕ್ಷದ್ವೇಷವು ಅಣುಮಾತ್ರವೂ ಇಲ್ಲ. ಅವರಿಗೆ ಪರಪಕ್ಷವೇ ಇಲ್ಲವೆನ್ನಬಹುದು. ಹಿಟ್ಲರನ ತತ್ವವನ್ನು ರಾಷ್ಟ್ರಸರ್ವಸ್ವ ತತ್ವ (totalitarian)ವೆನ್ನುವರು. ಮಹಾತ್ಮರ ಧ್ಯೇಯವನ್ನು ಜನತಾ ಸರ್ವಸ್ವ (Solvalizm)ವೆನ್ನಬಹುದು.

ಮಹಾತ್ಮರು ಆಗಾಗ್ಗೆ ನುಡಿಯುವ ರಾಮರಾಜ್ಯವೆಂಬ ವಚನದ ಕುರಿತು ಇಲ್ಲಿ ಆಲೋಚಿಸುವದು ಯುಕ್ತವದೆ; ರಾಮಚಂದ್ರನು ಅವರ ಉಪಾಸ್ಯ ದೇವತೆಯೆಂಬದು ವಾಚಕರಿಗೆ ತಿಳಿದಿರಬಹುದು. ಶ್ರೀ ರಾಮಚಂದ್ರನ ಚರಿತ್ರವು ಬುಡದಿಂದ ತುದಿ ವರೆಗೆ ಧರ್ಮವೆಂಬ ಪದದ ವ್ಯಾಖ್ಯಾನವೆನ್ನಬಹುದು. ಆತನು ತನ್ನ ಎಲ್ಲಾ ನಡೆನುಡಿಗಳಲ್ಲಿಯಾಗಲಿ, ತನ್ನ ಗುರುಹಿರಿಯರ ಕಡೆಗಾಗಲೀ ಪತ್ನಿಪುತ್ರರ ನಡೆಗಾಗಲೀ ಬಂಧುಬಾಂಧವರೊಡನಾಗಲೀ ಪ್ರಜಾಜನರೊಡನಾಗಲೀ ನಿರಂತರವಾಗಿ ಧರ್ಮವನ್ನೇ ಮುಂದಿಟ್ಟು ನಡೆದನಲ್ಲದೆ ಯಾವ ಮೋಹಕ್ಕಾದರೂ ಮಾಯೆಗಾದರೂ ಒಳಪಟ್ಟು ಧರ್ಮಮಾರ್ಗದಿಂದ ತುಸವಾದರೂ ಅತ್ತಿತ್ತ ಸರಿಯಲಿಲ್ಲ. ಆ ದೈವಶಕ್ತಿಯ ಆ ಪುಣ್ಯಚರಿತ್ರೆಯ ಪ್ರಭಾವವೂ ಶ್ರೀ ರಾಮನ ರಾಜ್ಯದಲ್ಲಿ ಜನತಾಜೀವನದಲ್ಲಿ ತೋರುವದು ಸ್ವಭಾವ ಸಿದ್ಧವದೆ.

ಅದ್ಯನಾ ಭರತೇ ಶ್ರೇಷ್ಠತಾತ್ತದೇತತೋ ಜನಾ ॥
ಸಮಾತ್ಪ್ರಮಾಣಂ ಕುರುತೇ ಲೋಕಸ್ತಧನು ವರ್ತತೇ ॥

ಎಂಬ ಗೀತಾವಾಕ್ಯದಂತೆ, ಶಕ್ತಿವಂತನೂ ಪ್ರತಾಪಿಯೂ ಆದ ಪ್ರಭುವಿನ ಮುದ್ರೆಯ (ಅವನು ಅಭಿಷಿಕ್ತನೇ ಆಗಲೀ ಅನಭಿಷಿಕ್ತನೇ ಆಗಲಿ ಚಿಂತೆಯಿಲ್ಲ.) ಪ್ರಜೆಗಳ ಮೇಲೆ ಬಿದ್ದೇ ಬೀಳುವದು. ಆದ್ದರಿಂದ ಅವನ ಕೌಶಲ್ಯಕ್ಕೆ ಆತನ ಹೆಸರು ಬರುವದು. ಇದು ಕಾರಣ "ರಾಜಾ ಕಾಲಸ್ಯ ಕಾರಣಂ" ಎನ್ನುವರು. ಪರಲೋಕದಲ್ಲಿರುವ ತಂದೆಯೇ ನಿನ್ನ ರಾಜ್ಯವು ಬರಲಿ ಎಂದು ಕ್ರೈಸ್ತರು ನಿತ್ಯವೂ

ದೇವರನ್ನು ಪ್ರಾರ್ಥಿಸುವವರ ರಹಸ್ಯವಾದರೂ ಅದೇ. ರಾಮರಾಜ್ಯವನ್ನು ಭಾರತ ವರ್ಷದಲ್ಲಿ ಸ್ಥಾಪಿಸಬೇಕೆಂಬ ಗಾಂಧಿಜೀಯವರ ಧ್ಯೇಯವೂ ಕೂಡ ಇದೇ.

ಹಿಂದಣ ಮಾತುಗಳಿಂದ ಈ ಕುಲವು ಕಲಿಗಳ ಅಥವಾ ವೀರರ ಕಾಲವೆಂದು ವಾಚಕರಿಗೆ ಮನಗಂಡಿರಬೇಕೆಂದು ನಂಬಿದ್ದೇವೆ. ಕಲಿಯುಗದ ಕುರಿತು ಸಂಘೇ ಶಕ್ತಿ ಕಲೌಯುಗೇ ಎಂಬವೊಂದು ವಚನವಿದೆ. ಹಾಗೆ ಸಂಘದ ಮೂಲಕ ನಮ್ಮ ಶಕ್ತಿಯನ್ನು ಬೆಳೆಸಿ ಕಾರ್ಯ ಸಾಧಿಸುವಂತೆ ತದನುಗುಣವಾದ ಲಕ್ಷಣಗಳನ್ನು ಅಂದರೆ ಎಷ್ಟೇ ವಿಧೇಯತೆ, ಶಿಸ್ತು ಪರಿಪಾಲನೆ (Discipline) ಮುಂತಾದ ಲಕ್ಷಣಗಳನ್ನು ಅನುಸರಿಸತಕ್ಕದ್ದು. ಜೀವನಾರ್ಥ ಕಲಹದ ಕುರಿತು (Long-Fellow) ಕವಿಯು ಹೇಳುವದನ್ನು ಕೇಳುವಾ.

In the world's broad field of battle
In the bivouac of life
Be not like dumb driven cattle
Be a hero in the strife"

"ಲೋಕವೆಂಬ ರಣಭೂಮಿಯಲ್ಲಿ ಕಾದುವಾಗಲೂ ಜೀವನವೆಂಬ ಶಿಬಿರದಲ್ಲಿ ಕಾಯುವಾಗಲೂ ಅಸ್ವತಂತ್ರ ಮೂಕಪಶುವಿನಂತೆ ವರ್ತಿಸಬೇಡ. ವೀರನಂತೆ ಹೆಣಗಾಡು." ಈಗ ಭಾರತೀಯರಿಗೆ ತಮ್ಮ ಸತ್ವವನ್ನು ತೋರಲಿಕ್ಕೆ ಒದಗಿರುವ ಸಂದರ್ಭವು ಭಗವದ್ಗೀತೆಯ ೨ನೇ ಅಧ್ಯಾಯದ ೩೨ನೇ ಶ್ಲೋಕದಲ್ಲಿ ವರ್ಣಿಸಿದೆ.

ಯದೃಚ್ಛಯಾ ಚೋಪಪನ್ನಂ
ಸ್ವರ್ಗದ್ವಾರಮಪಾವೃತಮ್
ಸುಖಿನಃ ಕ್ಷತ್ರಿಯಾಃ ಪಾರ್ಥ
ಲಭಂತೇ ಯುದ್ಧಮೀದೃಶಮ್

ಮಾತ್ರ ಈ ಸಮರವು ಅಹಿಂಸಾತ್ಮಕವೆಂಬುದನ್ನೂ ಪ್ರೇಮಪ್ರೇರಿತವೆಂಬದನ್ನೂ ನೆನಪಿನಲ್ಲಿಡತಕ್ಕದ್ದು. ಅರ್ಜುನನ ಚರಿತ್ರೆಯಿಂದ ಮತ್ತೊಂದು ಬುದ್ಧಿವಾದವನ್ನೂ ಕಲಿಯಬಹುದು. ತನ್ನವರನ್ನು ಕೊಂದು ತಾನಾಗಿ ಸಿಕ್ಕುವ ರಾಜ್ಯವಾದರೂ ಬೇಡ. ತಾನು ತನ್ನ ಗುರುಹಿರಿಯರ ಬಂಧುಬಾಂಧವರ ಮೇಲೆ ಕೈಮಾಡೆನು ಎಂದು ಆತನು ಶಸ್ತ್ರವನ್ನು ಕೆಳಗಿಟ್ಟನಷ್ಟೆ. ಆಗ ಶ್ರೀ ಕೃಷ್ಣನು ನೀನು ರಾಜ್ಯಕ್ಕಾಗಿ ಕಾದುವುದಲ್ಲಿ ಧರ್ಮರಕ್ಷಣೆಗಾಗಿ ಕಾದಬೇಕಾಗಿದೆ. ಈ ಕುರುಕ್ಷೇತ್ರವು ಧರ್ಮಕ್ಷೇತ್ರವಿದೆ. ನಾನು ಧರ್ಮಸಂಸ್ಥಾಪನೆಗಾಗಿ ಅವತರಿಸಿದ್ದೇನೆ. ನೀನು ನಾನಾಗಿ ನೆರವಾಗಬೇಕಾಗಿದೆ ಎಂದು ಹಲವು ಬಗೆಯಲ್ಲಿ ಬೋಧಿಸಿ ಯುದ್ಧಕ್ಕೆ ಪ್ರೇರಿಸಿದನು. ಈ ಕಾಲದಲ್ಲಿ ಗಾಂಧಿಜೀಯವರಾದರೂ ಶ್ರೀ ಕೃಷ್ಣ ಪರಮಾತ್ಮನಂತೆ ಸ್ವಂತ ಉದ್ದಿಶ್ಯವೇನೂ ಇಲ್ಲದೆ ನಿಸ್ವಾರ್ಥಬುದ್ಧಿಯಿಂದ ಲೋಕಸಂಗ್ರಹಕ್ಕಾಗಿ ಕರ್ಮ ನಿರತರಾಗಿರುವರು. ನಾವಾದರೂ ನಮ್ಮ ನಮ್ಮ ಕಾರ್ಯಕ್ಷೇತ್ರದಲ್ಲಿ ಅವರನ್ನೂ ಸಾರಥಿಯಾಗಿಟ್ಟು ಅವರನ್ನೂ ಅನುಸರಿಸಿದರೆ ನಮಗೆ ಜಯ ಸಿಕ್ಕುವಲ್ಲಿ ಸಂದೇಹವಿಲ್ಲ. ಈ ಮಾತಿಗೆ ಆಧಾರವಾಗಿ ಸರ್. ಎಸ್. ರಾಧಾಕೃಷ್ಣನ್ ಇವರು ಮಹಾತ್ಮರ ಕುರಿತು ಹೇಳಿದ ವಾಕ್ಯವನ್ನು ಉಲ್ಲೇಖಿಸುವೆವು. "ತಾವು ಪೌರ್ವಾತ್ಯ ತತ್ವಶಾಸ್ತ್ರದ ಮೂರ್ತಿಮಂತ ದೃಷ್ಟಾಂತವಾಗಿದ್ದೀರಿ. ತಮ್ಮನ್ನು ಆಧಾರವಾಗಿಟ್ಟು ನಾನು ಆ ಶಾಸ್ತ್ರವನ್ನು ಬೋಧಿಸಲಾಪೆನು." ವಿಜಯಶ್ರೀಯ ಕುರಿತು ಮಹಾತ್ಮಾಜಿಯವರ ನಿತ್ಯಪಾಠದ ಭಗವದ್ಗೀತಾ ಶ್ಲೋಕವನ್ನು ಹೇಳಿ ಈ ಲೇಖನವನ್ನು ಮುಗಿಸುವೆವು.

ಯತ್ರ ಯೋಗೇಶ್ವರಃ ಕೃಷ್ಣೋ
ಯತ್ರ ಪಾರ್ಥೋ ಧನುರ್ಧರಃ
ತತ್ರ ಶ್ರೀ ರ್ವಿಜಯೋ ಭೂತಿ
ರ್ಧ್ರುವ ನೀತಿರ್ಮತಿರ್ಮಮ ॥

ನಾಡೋಜ ಪಂಪ

★

ಎಸ್. ಬಿ.

ಮಹಾಕವಿ ಪಂಪನು ಜನ್ಮವೆತ್ತಿ ಸಹಸ್ರ ವರ್ಷಗಳು ಕಳೆದುವು. ಆತನ ಮಹಾಕಾವ್ಯಗಳಾದ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಎಂಬೆರಡು ಗ್ರಂಥಗಳು ಕಳೆದ ಶತಮಾನದ ಕೊನೆಯ ಭಾಗದಲ್ಲಿ ಮೊದಲನೆಯ ಸಲ ಅಚ್ಚಾಗಿ ಪ್ರಕಟಗೊಂಡುವು. ಆ ಮೇಲೆ ಕರ್ಣಾಟಕಸಾಹಿತ್ಯ ಪರಿಷತ್ತಿನವರ ಪರಿಶ್ರಮದಿಂದ ವಿಕ್ರಮಾರ್ಜುನ ವಿಜಯವು ಮತ್ತೊಮ್ಮೆ ಪರಿಷ್ಕೃತವಾಗಿ ೧೯೩೧ರಲ್ಲಿ ಮುದ್ರಿತವಾಗಿ ಪ್ರಕಟವಾಯಿತು. ಅದರ ದ್ವಿತೀಯ ಮುದ್ರಣವೂ ಆ ಮೇಲೆ ಪ್ರಕಟಿಸಲ್ಪಟ್ಟಿರುವುದಾಗಿ ತಿಳಿದಿದೆ. ಪಂಪನ ಕಾವ್ಯಗಳು ಆಧುನಿಕ ವಿದ್ವಾಂಸರ ಗಮನಕ್ಕೆ ಬಂದ ಮೊದಲ್ಗೊಂಡು ಅವುಗಳನ್ನು ಕುರಿತು ಬೇರೆ ಬೇರೆ ದೃಷ್ಟಿಯಿಂದ ವಿಮರ್ಶಿಸಿದ ಹಲವು ಲೇಖನಗಳೂ ಪ್ರಕಟವಾಗಿವೆ. ಆಯಾ ಮುದ್ರಣಗಳ ಉಪೋದ್ಘಾತಗಳೂ ಕವಿಯ ದೇಶಕಾಲ, ಕಾವ್ಯ ಸಂದರ್ಭ ಮತ್ತು ಕಾವ್ಯ ಶ್ರೇಷ್ಠತೆಗಳನ್ನು ಕುರಿತಾದ ವಿಚಕ್ಷಣ ವಿಮರ್ಶೆಯನ್ನೊಳಗೊಂಡಿವೆ. ಅಷ್ಟಿದ್ದರೂ ಪಂಪ ಮಹಾಕವಿಯ ವಿಷಯದಲ್ಲಿ ಹಲವು ಸಂಗತಿಗಳು ಅಸ್ಪಷ್ಟವಾಗಿ ಉಳಿದಿದ್ದುವು. ವಿಕ್ರಮಾರ್ಜುನ ವಿಜಯವು ಪಂಪಭಾರತವೆಂದು ಪ್ರಸಿದ್ಧವಾದುದು. ತನ್ನ ಪೋಷಕನಾದ ಅರಿಕೇಸರಿಯನ್ನು ಅರ್ಜುನನೊಡನೆ ಹೋಲಿಸಿ ಅವನ ಗೌರವ ಪ್ರಶಸ್ತಿಗಳನ್ನು ಭಾರತದ ಕಥಾವಿಷಯದಲ್ಲಿ ಹಾಸುಹೊಕ್ಕಾಗಿ ನಲಿದು, ಕವಿ ಈ ಭಾರತ ಕಾವ್ಯರಚನೆಯನ್ನು ಮಾಡಿದ್ದಾನೆ. ಇದಕ್ಕೆ ಐತಿಹಾಸಿಕೋಪಷ್ಟಂಭವಿಲ್ಲದಿದ್ದರೆ, ಪಂಪನ ರಚನೆಯು ಕೆಲವೆಡೆಗಳಲ್ಲಿ ಸಂದು ಬಿಡುವುದು. ಆದುದರಿಂದ ಪಂಪನ ಕಾವ್ಯ ವಿಮರ್ಶೆಯಲ್ಲಿ ಆ ಕಾವ್ಯಗಳ ರಚನಾಕಾಲದ ಐತಿಹಾಸಿಕ ವಿಮರ್ಶೆಯೂ ಸೇರಿರಲೇ ಬೇಕಾಗುತ್ತದೆ. ಈ ರೀತಿಯಾಗಿ ಚಾರಿತ್ರಿಕ ಮತ್ತು ಸಾಹಿತ್ಯ ದೃಷ್ಟಿಯಿಂದ ಪಂಪನ ಕಾವ್ಯ ವಿಮರ್ಶೆಯನ್ನು ಈ ವರೆಗೆ ಒಬ್ಬಿಬ್ಬರು ವಿದ್ವಾಂಸರು ಮಾಡಿದ್ದುಂಟಾದರೂ ಅದು ಸಮಗ್ರವಾಗಿ ಮಾಡಲ್ಪಟ್ಟಿರುವಂತೆ ತೋರುವುದಿಲ್ಲ.



ಶ್ರೀ ಮುಳಿಯ ತಿಮ್ಮಪ್ಪಯ್ಯನವರು

ಇದೀಗ ಪ್ರಕಟಿತವಾಗಿರುವ **ನಾಡೋಜ ಪಂಪ** ಎಂಬ ಗ್ರಂಥದಲ್ಲಿ ಶ್ರೀಯುತ ಮುಳಿಯ ತಿಮ್ಮಪ್ಪಯ್ಯನವರು ಪಂಪ ವಿಷಯಕವಾದ ತಿಳಿವಿನ ಹೊನಲನ್ನೇ ಹರಿಯಿಸಿದ್ದಾರೆ. ರಹಸ್ಯಗಳನ್ನೆಲ್ಲಾ ಭೇದಿಸಿದ್ದಾರೆ. 'ಆತನ ಕಾಲ, ಕುಲಪರಂಪರೆ, ಪೋಷಕರಾಜ ಪರಂಪರೆ ಮುಂತಾದವುಗಳನ್ನೆಲ್ಲ ಸಾಧಾರವಾಗಿ' ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಹಳೆಯ ಕಾವ್ಯಗಳ ಪಠನದಲ್ಲಿ ತೊಡಕಾಗಿ ತೋರುವ ಹಲವು ಸಂಗತಿಗಳು ಇದ್ದೇ ಇರುತ್ತವೆ. ಆದರೆ ಅವುಗಳನ್ನು ಬಗೆಹರಿಸುವುದಕ್ಕೆ ವಿದ್ವಾಂಸರು ಒಂದಿಷ್ಟು ಕೈಗೊಟ್ಟರೆ ಸಾಮಾನ್ಯ ವಾಚಕರ ಗ್ರಹಣಮಾರ್ಗವು ಸುಗಮವಾಗುವುದು. ಪಂಪನ ಕಾವ್ಯಗಳನ್ನು ಅರ್ಥಮಾಡಿಕೊಳ್ಳು ವಲ್ಲಿ ಕಾವ್ಯದ ದೇಸೀ ಮಾರ್ಗಗಳನ್ನು ಅರಿತಿರುವುದರ ಪ್ರಾಮುಖ್ಯತೆಯನ್ನು **ನಾಡೋಜ ಪಂಪ** ಗ್ರಂಥವನ್ನು ಓದುವವರು ತಿಳಿಯದಿರಲಾರರು. ಶ್ರೀ। ತಿಮ್ಮಪ್ಪಯ್ಯನವರು ತಮ್ಮ ಗ್ರಂಥದಲ್ಲಿ ನುಡಿಗಳ ದೇಸಿ, ನುಡಿಗಟ್ಟಿನ ದೇಸಿ, ದೇಸಿಯ ಸ್ವಭಾವ, ಗಾದೆಯ ದೇಸಿ, ಮತ್ತು ಛಂದಸ್ಸಿನ ದೇಸಿ ಮುಂತಾದ ಪ್ರಕರಣಗಳಲ್ಲಿ ಪಂಪನ ದೇಸಿಯನ್ನು ಕುರಿತು ಧಾರಾಳ ಬೆಳಕನ್ನು ಹರಿಯಿಸಿರುತ್ತಾರೆ. ಸಾಹಿತ್ಯ ಪರಿಷತ್ತಿನ ಪಂಪ ಭಾರತ ಮುದ್ರಣ ಪ್ರತಿಗೆ ಅನುಬಂಧವಾಗಿ ಕ್ಲಿಷ್ಟ ಪದಗಳ ನಿಘಂಟು ಒಂದು ಕೊಡಲ್ಪಟ್ಟಿದೆ. ಅವುಗಳೊಳಗಿನ ಕೆಲಕೆಲವು ಶಬ್ದಗಳಿಗೆ ಸಂಪಾದಕರು ಸರಿಯಾದ ಅರ್ಥವನ್ನು ಮಾಡಿಕೊಳ್ಳಲಾರದೆ, ಪ್ರಕರಣವಶಕ್ಕನುಸಾರವಾಗಿ ತಮಗೆ ಉಚಿತವೆಂದು ತೋರುವ ಅರ್ಥಗಳನ್ನು ಕೊಟ್ಟು ಪ್ರಶ್ನಾರ್ಥಕ ಚಿಹ್ನೆಗಳನ್ನೂ ಸೂಚಿಸಿರುವರು. ಅಂಥವುಗಳನ್ನು ಕೆಲವನ್ನು ನಾಡೋಜ ಪಂಪ ಗ್ರಂಥದಲ್ಲಿ ಶ್ರೀ। ತಿಮ್ಮಪ್ಪಯ್ಯನವರು ಬಹು ವಿಚಕ್ಷಣತೆಯಿಂದ ವಿಮರ್ಶಿಸಿ ಸರಿಹೋಗುವ ಅರ್ಥಗಳನ್ನು ಕೊಟ್ಟು ಅಂಥವುಗಳನ್ನು ಅರಿಯುವಲ್ಲಿ ದೇಸಿಯ ಪರಿಚಯವು ಹೇಗೆ ಸಹಾಯಕವಾಗುವುದೆಂಬುದನ್ನು ಸೂಚಿಸಿದ್ದಾರೆ.

ಸಾಹಿತ್ಯ ಪರಿಷತ್ತಿನ ಸಂಪಾದಕರಿಗೆ ಬಗೆಹರಿಯದೆ ಉಳಿದ ಶಬ್ದಗಳೊಳಗೆ 'ಕಡಿತ'ವೆಂಬುದು ಒಂದು. ನಾಡೋಜ ಪಂಪ ಗ್ರಂಥದಲ್ಲಿ ಶ್ರೀ। ತಿಮ್ಮಪ್ಪಯ್ಯನವರು ದೇಸಿಯ ಸಹಾಯದಿಂದ ಅದಕ್ಕೆ ಹೇಗೆ ಅರ್ಥ ತಿಳಿದಿದ್ದಾರೆಂಬುದನ್ನು ಒಂದಿಷ್ಟು ಅದೇ ಗ್ರಂಥದಿಂದ ಉದ್ಧರಿಸಿದರೆ ಅಸಂಗತವೆನಿಸದು.

"ನಿಘಂಟುವಿನಲ್ಲಿ 'ಕೆಸರ ಕಡಿತ' (ಪುಟ ೪೪೨) ಎಂಬ ಸಮಸ್ತ ಪದದ ಮುಂದೆ ಪ್ರಶ್ನಾರ್ಥಕ ಚಿಹ್ನೆವಿದೆ. ಶ್ವೇತ ಭೀಷ್ಮರೊಳಗೆ ನಡೆದ ರಣಾಟೋಪವನ್ನು ಬಣ್ಣಿಸುವ 'ಭೂತಳಮಳ್ಳಾಡೆ ಕೆಸರಕಡಿತದ ತೆರದಿಂ' ಎಂಬ ಪದ್ಯಭಾಗದಲ್ಲಿ ತೋರುವದದು. 'ಕಡಿತ' ಅಥವಾ 'ಕಡಿತ್ತ' ಪದವು ಚರ್ಮಾರ್ಥಕವಾಗಿ ಈ ತುಳು ಕನ್ನಡ ನಾಡುಗಳಲ್ಲಿ ದೇಸಿಯೇ ಆಗಿ ಉಳಿದಿದೆ. ಆದರೆ ಕೃತ್ತಿ ಎಂಬ ಚರ್ಮಾರ್ಥಕ ಸಂಸ್ಕೃತಪದಕ್ಕೂ ಇದಕ್ಕೂ ಸಂಬಂಧವಿರಬಹುದೋ ಎಂದು ಸಂಶಯವಾಗುತ್ತಿದೆ. ಮೆದುಮಾಡಲಿಕ್ಕೆಂದು ಸಮ್ಮಗಾರರು ಕೆಸರಿನಲ್ಲಿ ಕಡಿತ (ಚರ್ಮ)ವನ್ನು ಹಾಸಿ ಇಡುವುದು ಪದ್ಧತಿ. ಆ ಕೆಸರ ಕಡಿತವು ಹೇಗೆ ಅತ್ತಿತ್ತ ಅಲ್ಲಾಡುವುದೋ ಹಾಗೆ ಹೋರಾಟಕ್ಕೆ ದಿಗಿಲಾದ ನೆಲವೇ ಅಲ್ಲಾಡಿತೆಂಬ ಅತಿಶಯೋಕ್ತಿ ಇದು. ಅವನ ಮನಸ್ಸೆಂದರೆ 'ಕೆಸರು ಕಡಿತ,...........ಕೆಸರುಗಂಬ' ಎಂದು ಮೊದಲಾಗಿ ಚಂಚಲಮನಸ್ಕನಾದವನನ್ನು ಬಣ್ಣಿಸುವುದೀಗಲೂ ರೂಢವಾಗಿದೆ. ಭಾಷೆದಪ್ಪಿದವನನ್ನು ನಿಂದಿಸುವಲ್ಲಿ 'ನಿನ್ನ ನಾಲಗೆಯೋ ಕಡಿತ (ತ್ತ) ವೋ ಎನ್ನುವುದೂ ಇದೆ.'' ಸಾವಿರ ವರ್ಷಗಳ ಹಿಂದೆ ಕಾವ್ಯಪ್ರಯುಕ್ತವಾದ ಶಬ್ದಗಳು ಈಗ ಹೇಗೆ ಅರ್ಥವಾಗದೆ ಹೋಗುವುವೆಂದೂ ಅರ್ಥವಾಗಬೇಕಾದರೆ, ದೇಸಿಯ ನುಡಿಯ ಪರಿಚಯ ಅಥವಾ ಆ ಕಡೆಗೆ ಗಮನ ಎಷ್ಟರಮಟ್ಟಿಗೆ ಅವಶ್ಯವೆಂದೂ ನಮಗೆ ಈ ವಿಮರ್ಶೆಯಿಂದ ಸ್ಫುಟವಾಗದಿರದು. ಪಂಪನ ದೇಸಿ ಎಂಬ ಪರಿಚ್ಛೇದಕ್ಕೆ ಸುಮಾರು ೭೫ ಪುಟಗಳನ್ನು ಈ ಗ್ರಂಥದಲ್ಲಿ ವಿನಿಯೋಗಿಸಿದ್ದಾರೆ. ನಿಜವಾಗಿ ನೋಡಿದರೆ ಕಾವ್ಯದರ್ಶನಕ್ಕೆ ಇಂಥ ಹೊಸ ಬೆಳಕು ಬೀಳುವುದು ಹೊಸ ಕಣ್ಣು ಬಂದಂತೆ.

ನಾಡೋಜ ಪಂಪ ಗ್ರಂಥಪ್ರಕಟಣವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವಸೂಚಕ ಸಂಗತಿ. ಒಬ್ಬನೇ ಕವಿಯ ವಿಷಯಕವಾಗಿ ಬರೆದ ಇಷ್ಟು ವಿಸ್ತಾರವಾದ, ಅಗಾಧವಾದ ವಿಮರ್ಶನ ಸಾಹಿತ್ಯವು ಕನ್ನಡದಲ್ಲಿ ಈ ವರೆಗೆ ಹುಟ್ಟಿಲ್ಲ. ಇದನ್ನು ಬರೆಯುವಲ್ಲಿ ಲೇಖಕರು ಎಷ್ಟು ಶ್ರಮವನ್ನು ವಹಿಸಿರುವರೆಂದೂ ಅದೆಷ್ಟು ಪರಿಶೀಲನಕ್ಕೊಳಗಾಗಿರುವುದೆಂದೂ ಮುನ್ನುಡಿಯಿಂದ ವಿದಿತವಾಗುವುದು. ಇದು ಆರೇಳು ವರ್ಷಗಳ ವಿಚಾರದ ಅಧ್ಯವಸಾಯದ ಫಲ. 'ಆರೇಳು ಮಾತೃಕಾಶಯ್ಯೆಯೊಳಗೆ ನಾಡೋಜ ಪಂಪನು (ಗ್ರಂಥಮಾತೃಕೆ) ಮಲಗಿ ನಿದ್ದಿಸುತ್ತಿದ್ದನು. ಕೆಲವು ಕಾಲಗಳ ಹಿಂದೊಮ್ಮೆ ಆಶಯ್ಯೆಗಳನ್ನು ಬಿಡಿಸಿದೆನು. 'ನಾಡೋಜನು ಆರಿಗೂ ಜೀಡವಾದರೆ ನಮಗಿರಲಿ' ಎಂದು ಗೆದ್ದಲೆಗಳು ಬಂದು ಮಾತೃಕೆಯೊಳಗೆ ಒಕ್ಕಲಾಗಿದ್ದುವು. ದಿಗಿಲುಗೊಂಡು ಅದನ್ನು ಮತ್ತೊಮ್ಮೆ ಬರೆದೆನು' ಎಂದು ಲೇಖಕರು ಮುನ್ನುಡಿಯಲ್ಲಿ ಸೂಚಿಸಿರುವುದರಿಂದ ಅಷ್ಟಷ್ಟು ಸಲ ಗ್ರಂಥವನ್ನು ಪ್ರತಿಮಾಡುವಾಗ ಅಷ್ಟಷ್ಟು ಅದು ಪರಿಷ್ಕೃತವೂ ಆಗಿದ್ದಿರಬೇಕೆಂದು ತಿಳಿಯಬಹುದು.

ಈ ಗ್ರಂಥದ ಪೂರ್ವಾರ್ಧವಾದ ಸುಮಾರು ೩೨೦ ಪುಟಗಳಲ್ಲಿ ಪಂಪಾರಿಕೇಸರಿಗಳ ಚರಿತ್ರೆ, ಕುಲ ಪರಂಪರೆ, ದ್ರಾವಿಡ ಭಾಷಾವರ್ಗದ ನಿರ್ವಚನ ಹಾಗೂ ವ್ಯುತ್ಪತ್ತಿ, ಮುಂತಾದ ಚಾರಿತ್ರಿಕ ಚರ್ಚೆಗಳಲ್ಲದೆ ಕಾವ್ಯಧರ್ಮವೂ, ಧರ್ಮವೂ, ಪಂಪನದೇಸಿ ಮೊದಲಾದ ವಿಶೇಷವಾದ ಸಾಹಿತ್ಯವಿಚಾರಗಳೂ ವಿವೃತವಾಗಿವೆ. ಎರಡನೆಯ ಭಾಗದ ಮಿಕ್ಕ ೨೪೦ ಪುಟಗಳಲ್ಲಿ ಮಹಾಕಾವ್ಯಲಕ್ಷಣ, ಪಂಪನ ಕಾವ್ಯಧರ್ಮಪ್ರವಹಣಸ್ವರೂಪ, ಆದಿಪುರಾಣ ರಸಪ್ರವಾಹ ಮತ್ತು ಸಮಸ್ತ ಭಾರತದ ಶೈಲಿ ಎಂಬ ಪರಿಚ್ಛೇದಗಳು ಆದಿಪುರಾಣ, ವಿಕ್ರಮಾರ್ಜುನ ವಿಜಯ (ಪಂಪ ಭಾರತ)ಗಳ ಕೇವಲ ಸಾಹಿತ್ಯವಿಮರ್ಶೆಯುಳ್ಳುವಾಗಿವೆ. ಇಷ್ಟಲ್ಲದೆ ಇಪ್ಪತ್ತು ಪುಟಗಳಷ್ಟು ಉಪಯುಕ್ತ ಅನುಬಂಧಗಳೂ ಜೋಡಿಸಲ್ಪಟ್ಟಿವೆ. ದ್ವಿತೀಯ ಭಾಗದ ಸಮಸ್ತ ಭಾರತದ ಶೈಲಿ ಎಂಬ ಪರಿಚ್ಛೇದವು ವಿಸ್ತಾರವಾದುದು. ಸಾಮಾನ್ಯವಾಗಿ ಪಂಪ ಭಾರತದ ಈಯೊಂದು ಪದ್ಯವು ಬಹೂದ್ಧೃತವಾದುದು:—

'ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ ।
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ ।
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲವರ್ಗಳಿನೀ ಭಾರತಂ ಲೋಕಪೂಜ್ಯಂ'

— ೨೫ನೇ ಪುಟವನ್ನು ನೋಡುವುದು —



> ಸರ್ವಾಧಿಕಾರತ್ವವು ಹಿಂದಿನಂತೆ ಇಂದೂ ಅತಿ ಜಿಗುಟಾಗಿ ನಿಂತಿದೆ. ಹಿಡಿಯಲೂ ಜಿಗುಟು, ಕೊಡಲೂ ಜಿಗುಟು. ಸರ್ವಾಧಿಕಾರತ್ವದ ಮಹಿಮೆಯೆಲ್ಲ ಪೋಲಿಸ್ ಗೂಢಚಾರ ಮತ್ತು ಚಿತ್ರಹಿಂಸೆಯ ಕೊಠಡಿ, ಮತ್ತು ಕಠಿಣ ದಂಡನೆ ಇವುಗಳ ಮೇಲೆ ಆಧರಿಸಿದೆ.

ಸರ್ವಾಧಿಕಾರಿಗಳೂ ನಿರಂಕುಶಪ್ರಭುಗಳೂ ತಾವು ಇಚ್ಛಿಸಿದುದನ್ನು ಮಾಡಿಮುಗಿಸುವವರು; ಇದು ಅವರ ಹೆಮ್ಮೆ. ಇಂದು 'ಸರ್ವಾಧಿಕಾರಿ' ಎಂದ ಕೂಡಲೇ ಒಂದೇ ಅರ್ಥ ಹೊಳೆವುದು,—ಆತನು ತನ್ನ ಮನಸ್ಸಿನಲ್ಲಿದ್ದುದನ್ನು ಮಾಡುವನು.

ಹತ್ತು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಚಿಯೊಪ್ ಎಂಬ ಇಜಿಪ್ಟ ಅರಸು ಪಿರೆಮಿಡ್ಡನ್ನು ರಚಿಸಿದನು; ಸೀಝರರು ತಮ್ಮ ಅದ್ಭುತವಾದ ಸ್ನಾನಗೃಹಗಳನ್ನೂ ಕೊಲೊಸಿಯಮುಗಳನ್ನೂ ರಚಿಸಿದರು; ಫ್ರಾನ್ಸಿನ ಹದಿನಾಲ್ಕನೇ ಲೂಯಿಯು ವರ್ಸೆಲಿ ನಗರವನ್ನು ರಚಿಸಿ, ಫ್ರಾನ್ಸಿನ ದಿವಾಳಿಗೆ ಕಾರಣನಾದನು; ಮೊದಲನೇ ನೆಪೋಲಿಯನನು ತನ್ನ ಪ್ರಸಿದ್ಧ 'ನ್ಯಾಯಶಾಸ್ತ್ರ'ವನ್ನು ರಚಿಸುವುದರೊಂದಿಗೆ ಐದು ಮಿಲ್ಲಿಯ ಗೋರಿಗಳ ರಚನೆಗೂ ಕಾರಣನಾದನು; ಮೂರನೇ ನೆಪೋಲಿಯನನು ಸುಂದರ ಬೌಲ್‌ವಾರ್ಡನ್ನು ನಿರ್ಮಿಸಿದನು.

ಅಹುದು, ನಿರಂಕುಶಪ್ರಭುಗಳು ಮಹತ್ತಾದುದನ್ನು ಮಾಡುವರು. ಆದರೆ, ರೋಮನ್ ಸಾಮ್ರಾಜ್ಯದಂತಹ ಒಂದು ಬಲಶಾಲಿ ಸಾಮ್ರಾಜ್ಯ ಅಥವಾ ಬ್ರಿಟಿಷ್ ಸಾಮ್ರಾಜ್ಯದಂತಹ ಒಂದು ಸವಿಸ್ತಾರ ಹಾಗೂ ಸುದೃಢ ಸಾಮ್ರಾಜ್ಯವನ್ನು ಮಾತ್ರ ರಚಿಸಿದವರು ಅವರಲ್ಲ. ಈ 'ಡಿಕ್ಟೇಟರು'ಗಳ ಮತ್ತೊಂದು ಮಹಾ ಗುಣವು-ಶಿಸ್ತುಪಾಲನೆಯೆನ್ನುವರು. ಈ ಶಿಸ್ತಿಗಾಗಿ ಪಿಸಿಸ್ಟ್ರೇಟಸು, ಆಗಸ್ಟಸ್, ಹದಿನಾಲ್ಕನೆ ಲೂಯಿ, ನೆಪೋಲಿಯನ್- ಇವರೆಲ್ಲ ಹೆಸರಾಗಿರುವರು. ಆದರೆ....ಕೊನೆಗೆ?

'ಡಿಕ್ಟೇಟರ'ರು ಕಾರ್ಯವಿಚಕ್ಷಣತೆ ಮತ್ತು ಶಿಸ್ತುಪಾಲನೆ-ಇವುಗಳನ್ನು ತೋರಬಲ್ಲರು........ಮಾತ್ರ ನೀವು ನೆಲತನಕ ಬಾಗಿ ಅವರನ್ನು ಆರಾಧಿಸುವನಕ! ಹೀಗಿದ್ದರೂ ಈ 'ಸರ್ವಾಧಿಕಾರತ್ವ'ವು ಹಿಂದಿನಿಂತೆ ಇಂದೂ ಅತಿ ಜಿಗುಟಾಗಿ ನಿಂತಿದೆ-ಹಿಡಿಯಲೂ ಕೊಡಲೂ ಜಿಗುಟೇ ಆಗಿದೆ.

ಸರ್ವಾಧಿಕಾರತ್ವದ ಮಹಿಮೆಯೆಲ್ಲ, ಭಾರವೆಲ್ಲ ಪೋಲೀಸ್ ಗೂಢಚಾರ, ಚಿತ್ರಹಿಂಸೆಯ ಕೊಠಡಿ ಮತ್ತು ಕಠಿನ ದಂಡನೆ ಇವುಗಳ ಮೇಲೆ ಆಧರಿಸಿದೆ; ಬೆನ್ನಲ್ಲೆ ಯಾವಾಗಲೂ ಒಂದು ಮಹಾಕಲಹವು, ಅಂತಃಕಲಹವು, ಪಾಳೆಯದೊಳಗಿನ ಕಚ್ಚಾಟವು-ಕಾದೇ ಇದೆ.

ಆದರೆ ಸರ್ವಾಧಿಕಾರತ್ವದ ಮಾನಸ ಪರಿಣಾಮಗಳನ್ನು ಮಾರ್ಕ್ಸಿಸ್ಟರೂ ಫ್ಯಾಸಿಸ್ಟರೂ ಮರೆತುಬಿಡುತ್ತಾರೆ. ಸರ್ವಾಧಿಕಾರತ್ವವು ಯಾವಾಗಲೂ ಆಳುವವರ ಮತ್ತು ಆಳಲ್ಪಡುವವರ ಕೀಳ್ಮೆಯಲ್ಲಿ ಕೊನೆಗೊಳ್ಳುವುದು. ಇದಕ್ಕೆ ಅಪವಾದಗಳಿರಬಹುದು; ಆದರೆ ಅವು ನಿರಂತರವಿರಲಾರವು. ಅವು ಮನುಷ್ಯರ ಭಾವಶುದ್ಧಿಯ ಮೇಲೆ ಅವಲಂಬಿಸಿರುತ್ತವೆ. ಆದರೆ ಮಾನವನಲ್ಲಿ ವಿಶೇಷವಾಗಿ ವ್ಯವಹಾರ ಪ್ರಮುಖರಲ್ಲಿ ಅಂಥ ಭಾವಶುದ್ಧಿ ಬಹು ಅಪೂರ್ವವಾಗಿರುತ್ತದೆ.

ಸರ್ವಾಧಿಕಾರತ್ವಗಳು ಸಾಮಾನ್ಯವಾಗಿ ವಿಶ್ವಾಸದ ಉತ್ಸಾಹತರಂಗಗಳಿಂದ ಬಲಗೊಳ್ಳುವುವು; ಆದರೆ ಉತ್ಸಾಹದಲ್ಲಿ ಏರಿಳಿತವಿರುವುದರಿಂದ ಕ್ರಮೇಣ ಅವು ಭಯಭೀತಿಗಳ ಮೇಲೆ ಅವಲಂಬಿಸಿರಬೇಕಾಗುತ್ತದೆ. ಆದರೆ ಮನುಷ್ಯರು ಕಾರ್ಯಪ್ರವೃತ್ತರಾಗುವುದಕ್ಕೆ ಬಹು ಭೀತರಾಗಿರುವುದು ಮಾತ್ರವೇ ಅಲ್ಲ, ಅವರು ವಿಚಾರಿಸುವುದಕ್ಕೆ ಭೀತರು, ಅಥವಾ ಮಂಕುಗೊಳಿಸಲ್ಪಡುವವರು ಇಲ್ಲವೆ ಉನ್ಮಾದೀಕೃತರೂ ಆಗಬೇಕಾಗುತ್ತದೆ. ಈ ಬಗೆಯ ಭೀತಿಯನ್ನು ಕೆಲವು ವೇಳೆ ಧರ್ಮಸಂಸ್ಥೆಗಳ ಮೂಲಕ ಮಾಡಿಸಬೇಕಾಗುವುದು; ನೆಪೋಲಿಯನನಿಗೆ ವಿರುದ್ಧವಾದ ಕ್ರಾಂತಿಕಾರರಿಗೂ ಆಧುನಿಕ ಸ್ಪೈನಿನ ಮುಂದಗಾಮಿಗಳಿಗೂ ಧರ್ಮಸಂಸ್ಥೆಯು ನರಕದ ಭೀತಿಯನ್ನು ಹುಟ್ಟಿಸಿರುವುದು.

ಆದರೆ ಹೆಚ್ಚಿನ ಸರ್ವಾಧಿಕಾರಿಗಳು ತಮ್ಮ ಮೇಲಿನ ಅಧಿಕಾರಿಕ ಶಕ್ತಿ ಮೂಲಗಳನ್ನು ಮೆಚ್ಚುವುದಿಲ್ಲ. ದರ್ಪಾಡಂಬರಗಳಿಂದ, ಅವಕ್ಕಿಂತಲೂ ವಿಶೇಷವಾಗಿ ದ್ವೇಷದಿಂದ-ಸಾಮ್ಯವಾದಿಗಳ ದ್ವೇಷ, ಜನಾಂಗಸಂಘದ ಸಂಪದ್ವಾದಿಗಳ ದ್ವೇಷ, ಗಡಿನಾಡಿನ ಹೊರಗಣ ಜನಾಂಗ ದ್ವೇಷ ಮುಂತಾದವುಗಳಿಂದ ಮನುಷ್ಯರ ಬುದ್ಧಿಯನ್ನು ವಿಪ್ಲವಗೊಳಿಸುವುದು ಸುಲಭವಾಗಿರುತ್ತದೆ. ಆದುದರಿಂದ ವಿಪ್ಲವಗೊಳಿಸತಕ್ಕ ದ್ವೇಷಭಾವವು ಕ್ರಮೇಣ ಅದರಿಂದಲೂ ಪ್ರಭಾವಶಾಲಿಯಾದ ಯುದ್ಧದ ಕಡೆಗೆ ಸರಿಯುತ್ತದೆ.

ಆದರೆ, ಮನುಷ್ಯರ ಬುದ್ಧಿಯನ್ನು ಮಂಕು ಮಾಡಿ ಸ್ವತಂತ್ರ ವಿಚಾರ ಮಾಡದಂತೆ ಮಾಡುವುದಕ್ಕೆ ಅವರನ್ನು ಸ್ತಂಭನಗೊಳಿಸುವುದು ಬಹು ಪ್ರಭಾವಕಾರಕವಾಗಿರುವುದು. ಈ ವಿಷಯದಲ್ಲಿ ಆಧುನಿಕ ಸರ್ವಾಧಿಕಾರತ್ವವು, ಬಹುಶಃ ಹಿಂದಿನವುಗಳಿಗಿಂತ ನಿಜವಾಗಿಯೂ ಒಂದು ಹೆಜ್ಜೆ ಮುಂದುವರಿದಂತೆ ತಿಳಿಯಬಹುದು.

ಅವರು ಹೊಸ ಧರ್ಮ ಸಂಸ್ಥಾಪಕರು. ರಾಜ್ಯವೆಂಬ ಒಂದರ ಹೊರತು ಬೇರೆ ದೇವರಿಲ್ಲ; ಮುಸಲಿನಿ, ಹಿಟ್ಲರ್, ಅಥವಾ ಸ್ಟಾಲಿನ್ ಆ ದೇವರ ಪ್ರವಾದಿ.

ಒಮ್ಮೆ ಮುಸಲಿನಿಯವರು ಒಬ್ಬ ಪ್ರಸಿದ್ಧ ಲೇಖಕರೊಡನೆ ಹೀಗೆಂದಿರುತ್ತಾರೆ—"ಆಧುನಿಕ ಭಾವಿಕನಾದ ಮಾನವನ ಶಕ್ತಿಯು ನಿಸ್ಸೀಮವಾಗಿದೆ........ ಆಗ ಜನತೆಯು ನನ್ನ ಕೈಯೊಳಗೆ ಮಯಣದಂತೆ ಇರುವುದು........ನಾನು ಅವರ ಅಂಶವೆಂಬ ಅನಿಸಿಕೆಯಾಗುವುದು. ಹಾಗಿದ್ದರೂ ಮಣ್ಣನ್ನು ರೂಪಗೊಳಿಸುವ ಮೂರ್ತಿಕಾರನಂತೆ ನನ್ನಲ್ಲಿ ಒಂದು ಬಗೆಯ ಹೇವರಿಕೆಯುಂಟಾಗುತ್ತದೆ, ತನ್ನ ಆದರ್ಶಕ್ಕನುಸರಿಸಿ ರೂಪರಚನೆ ಮಾಡಲು ಸಾಧ್ಯವಾಗದಾಗಿ ಕೆಲವು ವೇಳೆ ಶಿಲ್ಪಿಯು ತನ್ನ ಕೈಯ ಶಿಲೆಯನ್ನು ಬಡಿದೊಗೆಯುವುದಿಲ್ಲವೆ?" ಇದು ನಿಜವಾಗಿಯೂ ನಿರ್ದಾಕ್ಷಿಣ್ಯವಾದ ಮಾತ್ರವಲ್ಲ ದೀರ್ಘದರ್ಶಿತೆಯುಳ್ಳುದಾಗಿವೆ.

ಸರ್ವಾಧಿಕಾರತ್ವದಿಂದ ಪ್ರಜೆಗಳಿಗೆ ಬರಿಯ ಯಾತನೆಯು ಮಾತ್ರವಲ್ಲ, ಕ್ರಮೇಣ ನಿರ್ದಯವಾದ ಕೀಳ್ತನವೂ ಸಂಭವಿಸುತ್ತದೆ. ಆಧುನಿಕ ವಿಜ್ಞಾನದ ಬಗೆ ಬಗೆಯ ಅನುಕೂಲತೆಗಳೆಲ್ಲ ಅಂಥ ಸರಕಾರದ ಸಹಾಯಕ್ಕೊದಗುತ್ತವೆ. ವೈಜ್ಞಾನಿಕನೂ ಅಧಿಕಾರಿಯೂ, ಮನುಷ್ಯ ಪ್ರವೃತ್ತಿಯನ್ನು ಬಂಧನಗೊಳಿಸುವುದರಲ್ಲಿ ಕೇವಲ ಬಲ ಮತ್ತು ಹಿಂಸೆಗಳಿಗಿಂತಲೂ ಕ್ರೂರವಾದ ರೀತಿಯಲ್ಲಿ ಸಮರ್ಥನಾಗುತ್ತಾನೆ.

ಹಾಗಿದ್ದರೂ ನಿರಂಕುಶಪ್ರಭುತ್ವದ ಮುಖ್ಯ ತತ್ವಗಳು ಬದಲಾಗುವುದಿಲ್ಲ. ಉನ್ನತಶೀಲರನ್ನು ಕೃಶೀಕರಿಸಿ ಎಲ್ಲರನ್ನೂ ಒಂದೇ ಮಟ್ಟದಲ್ಲಿರಿಸುವ ಯತ್ನದಿಂದಲಾಗಿ ಸಂಪೂರ್ಣ ಸಮಾಜದ ಶಕ್ತಿ ಕುಗ್ಗುತ್ತದೆ. ವೈಯಕ್ತಿಕ ವ್ಯತ್ಯಾಸಗಳು ವ್ಯರ್ಥವಾಗುತ್ತವೆ. ಅಂತೂ ಅಭಿವೃದ್ಧಿಗೆ ಅನುಕೂಲವಾದ ಅಂಥ ವ್ಯತ್ಯಾಸಗಳಿರಲೇಬೇಕೆಂಬುದರಿಂದ ಲೈಂಗಿಕ ಭೇದಕ್ಕೆ ಲೋಕದಲ್ಲಿ ಪ್ರತ್ಯೇಕ ಸ್ಥಾನ ದೊರೆತುದು.

ಸರ್ವಾಧಿಕಾರತ್ವ ರಾಜ್ಯಗಳು ಪಿಂಡದ ಏಕರೂಪತೆಯನ್ನು ಇಚ್ಛಿಸುವವು. ಶಿಶು ಜನನ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸರ್ವಾಧಿಕಾರಿಗಳು ಬೊಬ್ಬಿಡುತ್ತಾರೆ. ಹಾಗಿದ್ದರೂ ವಿಚಾರಜನನವನ್ನು ಅವರು ತಡೆಗಟ್ಟುವುದಕ್ಕೆ ಶ್ರಮಪಡುತ್ತಾರೆ. ದೈಹಿಕ ಧೀರತೆಯನ್ನವರು ಪ್ರಶಂಸಿಸುವರು; ಆದರೆ ನೈತಿಕ ಧೈರ್ಯಕ್ಕೆ ಅವರು ಹೇಸುವರು. ಪ್ರತಿಯೊಬ್ಬ ಅಪರಾಜನು ಕೆಲಕೆಲವು ಚಿಕ್ಕ ಪುಟ್ಟ ಅಪರಾಜರನ್ನು (tyrant) ಸಾಕುತ್ತಾನೆ. ಅಂಥವರು ಅವರಿಗೆ ಅವಶ್ಯವಾಗಿ ಬೇಕಾಗಿದ್ದಾರೆ.

ಇದೇ ರೀತಿಯಲ್ಲಿ ಇಡೀ ಜನಾಂಗವನ್ನೇ ಕ್ರಿಯಾಶೀಲರನ್ನಾಗಿ ಮಾಡುವ ಕೃತಕೋಪಾಯ ನಡೆಯುತ್ತದೆ. ಆದರೆ ಕೃತಕೋಪಾಯಕ್ಕೊಳಗಾದ ಜನಾಂಗವು ಕ್ರಿಯಾಶೀಲವಾಗುವುದಿಲ್ಲ. ಕ್ರಮ ಅಥವಾ ಶಿಸ್ತು ಉಂಟಾಗುವುದು ನಿಜ; ಆದರೆ ಇದು ಸ್ಮಶಾನದ ಕ್ರಮ ಅಥವಾ ಶಿಸ್ತು. ಕೃತಕವಾಗಿಸುವಂಥ ಮಹಾಮೂರ್ತಿಯು ತನ್ನ ಔನ್ನತ್ಯದಲ್ಲಿ ನಿಜಸ್ಥಿತಿಯನ್ನು ಕಾಣಲಾರ. ಅವನಿಗದನ್ನು ಯಾರು ತಿಳಿಸಲು ಸಮರ್ಥರು?

ಕಟ್ಟಕಡೆಗೆ ಸರ್ವಾಧಿಕಾರತ್ವಗಳ ಅವನತಿ, ಜನಾಂಗದ ಅವನತಿ ಮಾತ್ರವಲ್ಲ ಸರ್ವಾಧಿಕಾರಿಯ ಅವನತಿ ಕೂಡಾ ಆಗಿರುತ್ತದೆ. ಸಾಮಾನ್ಯವಾಗಿ ಹತ್ತರಲ್ಲಿ ಒಂಬತ್ತು ಮಂದಿಗೆ ತಮ್ಮ ಜನರ ಮೇಲಣ ತಡೆಯಿಲ್ಲದ ಅಧಿಕಾರದಿಂದ ಮಾದಕ ವಿಷ ಕುಡಿದಂತೆ ತಲೆಕೆಡುವುದೆಂದು ಎಣಿಸಬಹುದು. ಅಂತೂ ಎಲ್ಲಾ ಸರ್ವಾಧಿಕಾರತ್ವಗಳು ಕಟ್ಟಕಡೆಗೆ ಮೊಸ್ಕೊವಿನ ಕಡೆಗೆ ಸರಿಯುತ್ತವೆ.

ತನ್ನ ಸ್ವಯಂಪ್ರಭುತ್ವದ ಆತುರವನ್ನು ಎಷ್ಟು ಬಿಗಿಹಿಡಿದರೂ ಸರ್ವಾಧಿಕಾರಿಯ ಕ್ರಿಯಾಶಕ್ತಿಯು ಆತುರವನ್ನು ತಡೆಯುವ ದೆಸೆಯಿಂದ ಕುಗ್ಗುವ ಸಂಭವವಿದೆ. ಒಂದು ಕೈಯನ್ನು ತನ್ನ ಪಿಸ್ತೂಲಿನ ಕಡೆಗೂ ಒಂದು ಕಣ್ಣನ್ನು ಪೋಲೀಸು ವರದಿಗಳನ್ನು ಓದುವುದಕ್ಕೂ ಉಪಯೋಗಿಸಬೇಕಾಗಿರುವ ಶಾಸಕನ ಪ್ರಭಾವ ಶಕ್ತಿಯು ಅರ್ಧ ಪಾಲು ತಗ್ಗುವುದು.

ಇಷ್ಟೇ ಅಲ್ಲದೆ, ಪೋಲೀಸರಿಗೂ ಗೂಢಚಾರರಿಗೂ ಪೋಲೀಸರನ್ನು ಕಾಯುವ ಗೂಢಚಾರರಿಗೂ ಗೂಢಚಾರರ ಮೇಲೆ ಕಣ್ಣಿಡುವ ಗೂಢಚಾರರಿಗೂ, ಎಲ್ಲರಿಗೂ ವೇತನ ಕೊಡಬೇಕಾಗುತ್ತದೆ. ಇವುಗಳಿಗೆಲ್ಲ, ದರ್ಪಾಡಂಬರ ಪ್ರದರ್ಶನಗಳಿಗೆ, ಈ ಕಣ್ಣುಕಟ್ಟುಗಳಿಗೆಲ್ಲ ಬಡ ತೆರಿಗೆದಾರನು ದುಡ್ಡನ್ನು ಒದಗಿಸಬೇಕು. ಪರಕೀಯ ಧನಪತಿಗಳು ಸಾಲ ಕೊಡುವುದಕ್ಕೆ ಹಿಂಜರಿದ ಪಕ್ಷದಲ್ಲಿ ದೇಶೀಯ ತೆರಿಗೆದಾರನನ್ನಲ್ಲದೆ ಮತ್ತಾರನ್ನು ಹಿಳಿಯುವುದು?

ಆಧುನಿಕ ಮಾನವನು ಬಂಧನಗೊಳ್ಳಲು ಆತುರಪಡುವುದೇಕೆ? ಆರ್ಥಿಕ ಕಾರಣಗಳಿಗಿಂತಲೂ ವಿಶೇಷವಾಗಿ ಯುರೋಪಿನಲ್ಲಿ ಇಂದೀಗ ಒಂದು ಮಾನಸ ಆವಶ್ಯಕತೆ ಇದೆ. ಜವಾಬ್ದಾರಿ ಮತ್ತು ವ್ಯಕ್ತಿತ್ವಕ್ಕಾಗಿ ೨೫ ವರ್ಷಗಳ ಕಾಲ ಹೋರಾಡಿ,—ಮಧ್ಯಕಾಲೀನನು ಧರ್ಮಮಂದಿರಗಳನ್ನು ಆಶ್ರಯಿಸಿದ ಹಾಗೆ ಬಿಡುಗಡೆಯ ಆಶ್ರಯ ಹೊಂದಬೇಕಾಗಿದೆ. ಧರ್ಮವು ಮಾಸಿಹೋಗಿದೆ; ಆದರೆ ಅದಕ್ಕೊಂದು ಪ್ರತಿವಸ್ತು ಇಲ್ಲದೆ.

ವ್ಯಕ್ತಿಯು ನಿಸ್ಸಾರ, ಸಮಾಜ ಮುಖ್ಯ ಎಂಬ ತತ್ವವು ಹೊಸತಲ್ಲ. ಇದು ಪೂರ್ವಕಾಲೀನ ಅನಾಗರಿಕ ತತ್ವವನ್ನು ಅವಲಂಬಿಸಿದಂತೆಯೇ ಸರಿ. ಮೂಲನಿವಾಸಿಗಳಲ್ಲಿ ಕೂಡ ವ್ಯಕ್ತಿಯ ಜವಾಬ್ದಾರಿಯ ಬದಲು ಸಾಮೂಹಿಕ ಶಕ್ತಿಯಲ್ಲಿ ವಿಶ್ವಾಸವಿತ್ತು. ವ್ಯಕ್ತಿ ಇಲ್ಲವೇ ಇಲ್ಲ; ಸಮೂಹ ಮಾತ್ರವಿದೆ. ಈ ಕುರುಡು ನಂಬಿಕೆಯನ್ನು ಮಾನವನು ೨೦೦೦ ವರ್ಷಗಳ ಹಿಂದೆಯೇ ಕಳೆದುಹಾಕಿದ್ದಾನೆ.

ಇಂದೀಗ ನಾಗರೀಕತೆಯ ಭಾರದಿಂದ ತುಂಬಿದ ಮಾನವನು, ವ್ಯಕ್ತಿತ್ವ ಸ್ವಾತಂತ್ರ್ಯದ ದರ್ಪದಿಂದ ಪ್ರಾಚೀನ ಕಂದರಗಳ ಆಶ್ರಯವನ್ನು ಪಡೆಯಲು ಆನಂದಿತನಾಗಿದ್ದಾನೆ. ಅಲ್ಲಿ ಜನತೆಯ ಜಂಗುಳಿಯಲ್ಲಿ ವೈಯಕ್ತಿಕ ಮಾನವನು ಮುಳುಗಿಹೋಗುತ್ತಾನೆ. ಅಲ್ಲಿ ಒಬ್ಬನು ತಾಂತ್ರಿಕನ ಆತ್ಮವಿಸ್ಮರಣೆಯಂತೆ ತನ್ನನ್ನು ತಾನು ಮರೆತುಬಿಡಬಹುದು.

ಕೇಂಬ್ರಿಜ್ಜಿಗೆ ಸಂದರ್ಶನಾರ್ಥವಾಗಿ ಬಂದಿದ್ದ ಒಬ್ಬ ಜರ್ಮನ್ ನಾಜಿಯು ಹೇಳಿದುದೇನೆಂದರೆ, "ಜರ್ಮನಿಯಲ್ಲಿ ನಾವೆಲ್ಲರೂ ಏಕಪ್ರಕಾರವಾಗಿ ಆಲೋಚಿಸುತ್ತಿರುವೆವೆಂಬ ಅನಿಸಿಕೆಯು ಬಹು ಆಶ್ಚರ್ಯಕರವಾಗಿ ತೋರುತ್ತಿದೆ." ಅವನು ಹೇಳಿದುದರ ತಾತ್ಪರ್ಯವೇನೆಂದರೆ "ನಾವೆಲ್ಲರೂ ಏಕಪ್ರಕಾರವಾಗಿ ಆಲೋಚಿಸುತ್ತಿರುವೆವೆಂದು ಗ್ರಹಿಸುವುದರ ಮೂಲಕ, ಆಲೋಚಿಸುವ ಆವಶ್ಯಕತೆಯೇ ಇಲ್ಲದುದಕ್ಕಾಗಿ ಆಶ್ಚರ್ಯವು."

ನಾವಿನ್ನೂ ಪ್ರಜಾಪ್ರಭುತ್ವದ ತತ್ವವನ್ನು ನಂಬುತ್ತೇವೆಯೆ? ಸ್ವಾತಂತ್ರ್ಯದ ವಿಷಯದಲ್ಲಿ ಅಸಹ್ಯಪಟ್ಟಿಲ್ಲವಾದರೂ ಮನುಷ್ಯರು ಪ್ರಜಾಪ್ರಭುತ್ವದ ವಿಷಯದಲ್ಲಿ ಅಪನಂಬಿಕೆಯುಳ್ಳವರಾಗಿದ್ದಾರೆಯೆ? ಹೌದು; ಕಾರಣವು ಮೂಢತೆಯೂ, ಮಾನವ ಸಹಜವೂ ಆಗಿದೆ. ಹತ್ತೊಂಬತ್ತನೆಯ ಶತಮಾನವು ಮತದಾನದ ಪಟ್ಟಿಗಳಿಂದ ಬೇಕಾದ್ದೆಲ್ಲ ದೊರೆವುದೆಂದು ನಂಬಿತು. ಆದರೆ ಆ ದೊರೆಯ ಬೇಕಾದ ವಸ್ತು ದೊರೆಯಲಿಲ್ಲ. ಏಕೆಂದು ತಿಳಿದುಕೊಳ್ಳಬಹುದು; ರಾಜಕೀಯ ಸ್ವಾತಂತ್ರ್ಯವು ಬೇಕಾದಷ್ಟು ದೊರೆತಿರುವುದಿಲ್ಲ.

ಹತ್ತು ಮತ (Votes)ಗಳು ಹೆಚ್ಚಿದರೆ ಅಸಮರ್ಪಕ ವೇತನವಿರುವ ಒಬ್ಬ ಮನುಷ್ಯನು ಸ್ವತಂತ್ರನೆನಿಸಲಾರನು. ಆದುದರಿಂದ ಆರ್ಥಿಕ ಸ್ವಾತಂತ್ರ್ಯವು ನಿಷ್ಫಲವೆಂದು ಮಾನವನ ಮೂಢ ಬುದ್ಧಿಗೆ ತೋರಿಬಂತು. ಅರ್ಧ ರೊಟ್ಟಿಯು ಬಹು ಸ್ವಲ್ಪವಾದುದರಿಂದ ಹಲವು ಮಂದಿ ವಿಚಾರಕರು ಅದನ್ನು ಬಿಸಾಡಿ ಸರ್ವಾಧಿಕಾರತ್ವದ ಹೊಟ್ಟನ್ನು ತಬ್ಬಿಕೊಂಡರು.

ಕಳೆದ ಕೆಲವು ವರ್ಷಗಳಲ್ಲಿ ಸರ್ವಾಧಿಕಾರತ್ವಗಳೆಂದರೆ, ಹತ್ತಿರದ ದಾರಿಯೆಂಬ ಭ್ರಮೆಯಿಂದ ಅವಲಂಬಿಸಿದ ಸುತ್ತು ದಾರಿಯೆಂದು ಹಲವರಿಗೆ ಖಚಿತವಾಗಿದೆ. ಮಾನವ ಸ್ವಭಾವವು ಬಹಳ ನಿರ್ಬಲವೂ ನೀಚವೂ ಆಗಿರುವುದೇ ಸರ್ವಾಧಿಕಾರತ್ವಗಳ ವಿಫಲತೆಯ ಕಾರಣಗಳು.

ಹಿಂಸೆಯ ವಿನಾ ಸಂಪೂರ್ಣ ಕ್ರಾಂತಿ ಸಾಧ್ಯವಿಲ್ಲ; ಹಿಂಸೆಯು ಮನುಷ್ಯನನ್ನು ಪಶುವನ್ನಾಗಿ ಮಾರ್ಪಡಿಸುತ್ತದೆ. ನಿರಂಕುಶ ಅಧಿಕಾರವಿಲ್ಲದ ಸಂಪೂರ್ಣ ಕ್ರಾಂತಿ ಸಾಧ್ಯವಿಲ್ಲ. ನಿರಂಕುಶ ಅಧಿಕಾರವು ಮನುಷ್ಯರನ್ನು ಅಪರಾಜರನ್ನಾಗಿ (Tyrants) ಮಾರ್ಪಡಿಸುತ್ತದೆ.

ಹದಿನೆಂಟನೆಯ ಶತಮಾನದ ಕ್ರಾಂತಿಯ ಹಿಂದಣ ತತ್ವವೇತ್ತರು ಮಾನವರ ವಿಷಯದಲ್ಲಿ ಆಶಾವಾದಿಗಳಾಗಿದ್ದರು ಮತ್ತು ನಾಳೆ ಶುಭದಿನಗಳು ಬರುವುವೆಂದು ಆಶಿಸಿದ್ದರು. ನಾವು ಹಾಗೆ ಎಣಿಸಲಾರೆವು. ನಾವು ಬೇಕಾದಷ್ಟು ಸಂಗತಿಗಳನ್ನು ಕಂಡೆವು. ಕಂಡಿಲ್ಲವಾದರೆ ಕುರುಡರೆನ್ನಬೇಕು. ಮನುಷ್ಯರು ಪ್ರಜಾಪ್ರಭುತ್ವ ಸರಕಾರವನ್ನು ಆದರಿಸುತ್ತಿದ್ದುದೇಕೆಂದರೆ ಅವರು ಮಾನವ ಸ್ವಭಾವವನ್ನು ವಿಶ್ವಾಸದಿಂದ ಕಂಡರು. ನಾವು ಮಾನವ ಸ್ವಭಾವವನ್ನು ವಿಶ್ವಾಸಿಸಲಾರೆವಾದುದರಿಂದ ಅದನ್ನು ಆದರಿಸುವುದು ವಿವೇಕಸಮ್ಮತವಾಗಿದೆ.

— ೨೩ನೇ ಪುಟದಿಂದ ಮುಂದುವರಿಸಿದುದು —

ಇಲ್ಲಿ ತೋರುವ ಎಂಟು ಮಂದಿ ನಾಯಕಮೂರ್ತಿಗಳ ಸಾದ್ಯಂತವಾದ ಚರಿತ್ರ ಚಿತ್ರಣವು ಕೊನೆಯ ಪರಿಚ್ಛೇದದಲ್ಲಿ ವಿಸ್ತಾರವಾಗಿ ರೂಪಿತವಾಗಿದೆ. ಮುಖ್ಯವಾಗಿ ಪಂಪ ಹಾಗೂ ಪಂಪನ ಕಾವ್ಯಗಳನ್ನು ತಿಳಿಯಬೇಕೆಂದು ಬಯಸುವ ಕನ್ನಡ ವಾಚನಪ್ರಿಯರಿಗೆ **ನಾಡೋಜ ಪಂಪ** ಗ್ರಂಥವು ಅವಶ್ಯವಾಗಿ ಸಂಗ್ರಹಣೀಯವಾದುದು.

ಕನ್ನಡದಲ್ಲಿ ಪಂಪನ ಮೇಲ್ಮೆಯನ್ನು ತಮ್ಮ ಪುಷ್ಪಾಂಜಲಿ ನಾಮದ ಕೊನೆಯ ಮಂಗಳಾಚರಣದಲ್ಲಿ ಸ್ಥಾಪಿಸಿರುವುದನ್ನು, ಪಂಪ ಮಹಾಕವಿಯ ಹೃದಯದ ಆಳವನ್ನವಗಾಹಿಸಿದ ಶ್ರೀ ತಿಮ್ಮಪ್ಪಯ್ಯನವರ ಈ ಪದ್ಯ ಮೂಲಕವೆ ಅರಿತುಕೊಳ್ಳಬೇಕು:—

'ಪಂಪನ ಗಾದೆ ಪಂಪನೊಲವಿಂಬಲಿದಾ ನುಡಿಗಟ್ಟು ಪಂಪ ನೊಂ ।
ದಿಂಪಿನಗೆಯೆ ಪಂಪನುಸುರಿಂದೊಸರೆದ್ದು ತಿರುಳ್ದ ಬಾಸೆಯಾ ।
ಪಂಪನ ದೇಸಿಯಂ ದೆಸೆಯನಪ್ಪುವ ಕಂಪಿನ ವಾರಿ ವಸ್ತು ರೂ ।
ಪಿಂ ಪೆಣೆವಂದಮಂ ಬಗೆಯೆ ಪಂಪನ ಕನ್ನಡಮಲ್ತೆ ಕನ್ನಡಂ ॥'

ಸಣ್ಣ ಕಥೆ

ಪರೀಕ್ಷೆ

ನಾಗಮ್ಮ, ಅಂದರೆ ಸಾಹುಕಾರ ಸುಬ್ರಾಯರ ಕೈಹಿಡಿದ ಹೆಂಡತಿ, ಜಾತ್ರೆಗೆ ಹೋಗಬೇಕೆಂದು ಎರಡು ತಿಂಗಳುಗಳಿಂದ ತಯ್ಯಾರಿಯಲ್ಲಿದ್ದಳು. ಒಂದು, ಎರಡು, ಮೂರು, ಹೀಗೆ ಒಂದರ ಮೇಲೆ ಒಂದರಂತೆ ಐವತ್ತೊಂಬತ್ತು ದಿನಗಳು ಕಳೆದುವು.

ಸುಬ್ರಾಯರು ಆ ದಿನ ರಾತ್ರಿ ಕೊಂಚ ತಡಮಾಡಿಯೇ ಮನೆಗೆ ಬಂದಿದ್ದರು. ಕೋಣೆಯಲ್ಲಿ ದೀಪ ಭಗಭಗ ಉರಿಯುತಿತ್ತು. ನಾಗಮ್ಮ ಆಗಲೂ ಎಚ್ಚರವಾಗಿದ್ದಳು. ಅವಳ ಮುಂದೆ ತೆರೆದ ಬಾಗಿಲ ಉಕ್ಕಿನ ಪೆಟ್ಟಿಗೆ ಇದ್ದಿತು. ಅವಳು ವಸ್ತ್ರಗಳ ಗಂಟು ಕಟ್ಟುತಿದ್ದಳು. ಅದನ್ನು ನೋಡಿ ಸುಬ್ರಾಯರ ಮನಸ್ಸು ಅಸ್ವಸ್ಥವಾಯಿತು.

ಇತರ ದಿನಗಳಲ್ಲಿಯಾದರೆ, ಗೊರಕೆಯ ಹಾಡುಗಳಿಂದ ನಾಗಮ್ಮನು ಸುಬ್ರಾಯರನ್ನು ಹಸೆಗೆ ಕರೆಯುತ್ತಿದ್ದ ಹೊತ್ತದು. ಆ ದಿನ ಮಾತ್ರ ಅವಳು ಎವೆಗೆ ಎವೆ ಹಚ್ಚದೆ ಕೂತಿದ್ದಳು. 'ಏನೇ ಇದು, ಎಷ್ಟು ದೊಡ್ಡ ದೀಪ?' ಎಂದು ಕೇಳಿದರು.

'ಅಲ್ಲರೀ, ಭಟ್ಟರು ಬಂದಿದ್ದರು.' ಎಂದವಳು ಮಾತಿಗೆ ಪೀಠಿಕೆ ಹಾಕಿದಳು.

'ಯಾವ ಭಟ್ಟರು, ಮಲೆಹಿತ್ತಲಿನವರೆ? ಇನ್ನೆರಡು ತಿಂಗಳಲ್ಲಿ ಬರಹೇಳಬೇಕಾಗಿತ್ತು. ನಿನಗೆ ಒಂದೂ ತಿಳಿಯುವುದಿಲ್ಲ.'

'ಏನಂದಿರಿ?' ಎಂದು ಕೇಳುವ ಹಾಗೆ ನಾಗಮ್ಮ ಸುಬ್ರಾಯರನ್ನು ನೋಡಿದಳು.

'ಅಲ್ಲ ಕಾಣೆ!' ಸುಬ್ರಾಯರು ಸ್ವಲ್ಪ ಮೆಲ್ಲಗೆ ಹೇಳಿದರು–'ಸರಕಾರವು ಕೃಷಿಕರಿಗೆ ಸಾಲ ರಿಯಾಯತಿಯ ಕಾನೂನು ಮಾಡಿ ಎಷ್ಟೋ ಉಪಕಾರ ಮಾಡಿದೆ. ಈಗ ಸಾಹುಕಾರರಿಗೂ ಒಂದು ಕಾನೂನು ಮಾಡುವದಂತೆ. ಸ್ವಲ್ಪ ದಿನಗಳು ಕಳೆದರೆ...........'

'ಹೌದು...........ಅವರು ನಾಯಿನಂತೆ ನೀವೂ ಅಸಲು–ಬಡ್ಡಿ ಗುಳುಂಮಾಡಿ ನೀರು ಕುಡಿಯಬಹುದು ಎಂದು ಆಸೆ–ಅಲ್ಲವೆ? ನಿಜ. ನಾನು ತಿಳಿಯದವಳು. ನಿಮ್ಮ ಬುದ್ಧಿ ನನಗೆ...........'

'ಒದರ ಬೇಡ ನಾಗೂ, ಎಲ್ಲಿಯಾದರೂ ಆ ಭಟ್ಟ ಕೇಳಿಬಿಟ್ಟಾನು!'

'ಯಾವ ಭಟ್ಟ? ಬಂದದ್ದು ಗೋಪಣ್ಣ ಭಟ್ಟರು. ಅವರು ನಾಳೆ ಜಾತ್ರೆಗೆ ಹೋಗುತ್ತಾರೆ. ಹೇಳಲಿಕ್ಕೆ ಬಂದಿದ್ದರು.'

'ಹಾಂ; ಗೊತ್ತಾಯಿತು. ಭಟ್ಟರ ಜಾತಿಯೇ ಹಾಗೆ! ಧರ್ಮಕ್ಕೆ ಆಗುವದಾದರೆ ಜಾತ್ರೆ ಯಾತ್ರೆ ಎಲ್ಲಿಂದ ಎಲ್ಲಿಗೆ ಮಾಡಲಿಕ್ಕೂ ಸಿದ್ಧರು.'

'ಪದ್ಮಕ್ಕನೂ ಹೋಗುತ್ತಾಳೆ.'

'ಸರಿ, ಮತ್ತೇನು, ನೀನೂ ಹೋಗುವದೆ! ಹೇಗೂ ನಿನ್ನ ಸಂಬಂಧಿಕಳು. ನಿನ್ನನ್ನು ಕರಕೊಂಡು ಹೋಗುವುದು ಸಹಜ.'

'ಅಲ್ಲರೀ...........'

'ಮತ್ತೇನು? ಆನೆ ಕುದುರೆಗಳ ಶೃಂಗಾರವಾಗಬೇಕೆ?'

ನಾಗಮ್ಮ ಗಂಡನ ಈ ಮಾತು ಕೇಳಿ ಔಡು ಕಚ್ಚಿದಳು. ಆದರೂ–'ನನಗೆ ಒಂದು ಶೀರೆ ಕುಪ್ಪಸ...........' ಎಂದು ಗುಣ ನೋಡಲಿಕ್ಕೆ ಹೇಳಿದಳು.

'ನಾಗವೇಣಿ! ಅದೀಗ ನೀನು ಆಡಬಾರದ, ನಾನು ಕೇಳಬಾರದ ಮಾತು. ಮತ್ತೇನಾದರೂ ಹೇಳು, ಕೇಳುತ್ತೇನೆ' ಎಂದು ಸುಬ್ರಾಯರು ಪ್ರಯತ್ನಪಟ್ಟು ನಸುನಕ್ಕರು.

ಅವರ ಅರ್ಥಹೀನ ನಗು ನೋಡಿ ನಾಗಮ್ಮನ ತುಟಿಗಳು ಅದುರಿದುವು.

'ನಾಗವೇಣಿ! ಖರ್ಚುಮಾಡಿ ಎಲ್ಲರೂ ಜಾತ್ರೆಗೆ ಹೋಗುತ್ತಾರೆ. ಅದರಲ್ಲಿ ಏನು ವಿಶೇಷವಿದೆ? ನೀನು ಖರ್ಚುಮಾಡದೆಯೇ ಜಾತ್ರೆ ನೋಡಿ ಬಂದರೆ....'

'ನಿಮ್ಮ ಹೆಂಡತಿಯಾದ್ದಕ್ಕೆ ನನ್ನ ಜನ್ಮ ಪಾವನವಾಯಿತು. ಇದೇ ಅಲ್ಲವೆ, ನಿಮ್ಮ ಅಭಿಪ್ರಾಯ? ಸಾಹುಕಾರರಂತೆ ಸಾಹುಕಾರರು! ಮರ್ಯಾದೆ ಇಲ್ಲದವರು ತಾನೆ ೫ ರೂಪಾಯಿ ಶೀರೆ ಉಡಿಸಿ ಹೆಂಡತಿಗೆ ಜಾತ್ರೆಗೆ ಕಳುಹಿಸುವರು. ಮತ್ತೆ ಇಪ್ಪತ್ತು ಮೂವತ್ತು...........'

ಸುಬ್ರಾಯರು ನಾಗಮ್ಮನನ್ನೇ ನೋಡುತಿದ್ದರು. ಅವರ ಹಲ್ಲುಗಳು ಕಡಿಯುತಿದ್ದುವು. ಹೇಳಿದರು–'ಹೂಂ, ಹಾಗಾದರೆ ನಿನಗೆ ಹೋಗಲೇ ಬೇಕೆ? ಹೋಗು, ಏನೇನು ಬೇಕು, ಹೇಳು!' ಸುಬ್ರಾಯರಿಗೆ ಸರಾಗವಾಗಿ ಮಾತನಾಡಲಾಗಲಿಲ್ಲ. ಅವರು ತಡದು ತಡದು ಹೇಳಿದರು.

ನಾಗಮ್ಮನ ಸಂದೇಹವು ನಿಜವಾಗುತ್ತ ಬಂದಿತ್ತು. ಅವಳು ಎದ್ದು ನಿಂತಳು. 'ಹೌದು, ನಾನು ಜಾತ್ರೆಗೆ ಹೋಗಲೇ ಬೇಕು. ಯಾರು ಯಾರೋ ಹೋಗುತ್ತಾರಂತೆ. ನಾನೇಕೆ ಹೋಗಬಾರದು?'

'ನಾಗವೇಣಿ, ನಿನ್ನನ್ನು ತಡೆದವರು ಯಾರು? ಹೋಗು. ಯಾರ್‍ಯಾರಾದರೂ ಹೋದರೆ ನೀನೂ ಹೋಗಬೇಕು! ಏನೇನು ಬೇಕೆಂದು ಹೇಳು' ಎಂದು ಸುಬ್ರಾಯರು ಸ್ವಲ್ಪ ಕರ್ಕಶರಾಗಿಯೇ ಹೇಳಿದರು.

'ಬೇಕು, ನನಗೆ ಒಂದು ಶಿಲ್ಕ್ ಶೀರೆ, ಒಂದು ರವಕೆ ಕಣ, ಒಂದು ಜೋಡು ಬಳೆ, ಒಂದು ಜೋಡು ಸ್ಲಿಪ್ಪರು...........'

'ನಾಗವೇಣಿ, ತಡಿ, ತಡಿ. ನೀನು ಹೇಳುತ್ತಾ ಹೋದರೆ, ನನಗೆ ಗೊತ್ತಾಗುವುದು ಹೇಗೆ? ಒಂದೆರಡು ಹೇಳು.'

'ಹೌದು, ನಿಮಗೆ ಮರೆಯುತ್ತದೆಂದು ನನಗೆ ತಿಳಿದಿದೆ. ಇಗೊಳ್ಳಿ ಬರೆದು ಇಟ್ಟಿದ್ದೇನೆ' ಎಂದು ಹೇಳಿ ಅವಳು ಒಂದು ಕಾಗದದ ಪಟ್ಟಿಯನ್ನು ಸುಬ್ರಾಯರ ಕೈಗೆ ಕೊಟ್ಟಳು.

ಸುಬ್ರಾಯರು ಓದಿದರು. ಅವರಿಗೆ ತಲೆ ತಿರುಗುವ ಹಾಗಾಯಿತು. 'ಒಂದು ಶಿಲ್ಕ್ ಶೀರೆ, ಒಂದು ಕುಪ್ಪಸ ಕಣ, ಒಂದು ಜೋಡು ಬಳೆ, ಒಂದು ಸ್ಲಿಪ್ಪರು ಜೋಡು, ಒಂದು ಕನ್ನಡಕ...........' ಅವರು ಬೆಲೆಯನ್ನು ಕೂಡಿಸಿ ನೋಡಿದರು. ಎದೆ ದಸಕ್ಕಾಯಿತು. 'ನಾಗವೇಣಿ, ಇದೇನೆ? ನಾಲ್ಕು ನಾಲ್ಕು ಹದಿನಾಲ್ಕು ಎರಡು ಹದಿನಾರು ಆರು ಇಪ್ಪತ್ತಾರು...........ಹೂಂ. ಮೂವತ್ತೆಂಟು ರೂಪಾಯಿ ಎರಡಾಣೆ ಮೂರು ಪೈ! ಒಂದು ಜಾತ್ರೆಗೆ ಇಷ್ಟು ಖರ್ಚು– ನಾಲ್ವತ್ತು ರೂಪಾಯಿ?'

'ಎಲ್ಲಿ ನಲ್ವತ್ತು; ಬರೇ ಇಪ್ಪತ್ತಮೂರು ರೂಪಾಯಿ ನಾಲ್ಕಾಣೆ!'

ಸುಬ್ರಾಯರ ಮುಖ ಬೆವರಿತು. ಅವರು–'ಆ ಹಾಳು ನೌಕರರ........... ಹೂಂ! ನಾಗವೇಣಿ, ನೀನು ಲೆಕ್ಕಮಾಡಿ ನೋಡು. ನಾಲ್ಕು ನಾಲ್ಕು ಹದಿನಾಲ್ಕು ಎರಡು ಹದಿನಾರು ಆರು ಇಪ್ಪತ್ತಾರು...........'

'ಸಾಕು ನಿಮ್ಮ ಲೆಕ್ಕ! ಗೊತ್ತಿದೆ ನನಗೆ!! ಇಪ್ಪತ್ತಮೂರು ರೂಪಾಯಿ ನಾಲ್ಕಾಣೆ!'

ಸುಬ್ರಾಯರ ಕೈಯಿಂದ ಕಾಗದ ಕೆಳಗೆ ಜಾರಿಬಿದ್ದಿತು. ಅವರು—'ನಾಗವೇಣಿ! ನೀನು ತಿಳಿಯದವಳೇ? ಲೆಕ್ಕಮಾಡಿ ನೋಡು! ನಾಲ್ಕು ನಾಲ್ಕು ಹದಿನಾಲ್ಕು ಎರಡು...........'

ಅಷ್ಟರಲ್ಲಿ ರಾಮು ಬಂದು—'ಅಪ್ಪಯ್ಯ, ಯಾಕೆ ಗಾಬರಿಯಾಗುತ್ತೀರಿ. ನಾಲ್ಕು ನಾಲ್ಕು...........'

'ಸಾಕೋ, ಅಲ್ಲಿ ಕೂತುಕೊ'. ನಿನ್ನೆಯ ಪೋರ ನನಗೆ ಕಲಿಸಲಿಕ್ಕೆ ಬರುತ್ತಾನೆ! ನಾಗವೇಣಿ, ನೋಡು–ನಾಲ್ಕು ನಾಲ್ಕು ಹದಿನಾಲ್ಕು...........'

ನಾಗಮ್ಮನಿಗೆ ಸುಬ್ರಾಯರ 'ನಾಲ್ಕು ನಾಲ್ಕು ಹದಿನಾಲ್ಕು' ಕೇಳಿ ಸಾಕಾಯಿತು. ಅವಳು–'ಸಾಕು ನಿಮ್ಮ ಹರಟೆ, ವಿಶೇಷವಾಯಿತು. ನಾನೂ ಶಾಲೆಗೆ ಹೋಗಿ ಎರಡು ವರ್ಷ ಕಲಿತಿದ್ದೇನೆ. ನಾಲ್ಕು ನಾಲ್ಕು...........'

ಸುಬ್ರಾಯರು—'ಅದೇ ಈಗ! ಹೆಣ್ಣುಮಕ್ಕಳು ಶಾಲೆಗೆ ಹೋದರೆ ಆಗುವದೇ ಇಷ್ಟು. ಹೇಳಿದ್ದು ಕೇಳುವುದಿಲ್ಲ, ತಾವಾಗಿ ತಿಳಿಯುವುದಿಲ್ಲ. ಇಗೋ, ಬೇಕಾದ್ದು ಮಾಡು'. ಎಂದು ಅವರು ಕಾಗದವನ್ನು ಗುಟಲಿ ಮಾಡಿ ಬಿಮ್ಮನೆ ಬಿಸಾಡಿದರು. ಅದು ರುಮ್ಮನೆ ಹೋಗಿ ನಾಗಮ್ಮನ ಕೆನ್ನೆಗೆ ತಾಗಿತು. ಅವಳಿಗೆ ಇಷ್ಟೆ ಬೇಕಾಗಿದ್ದಿತು.

ಅವಳು—'ಏನು, ಅಂಗಡಿ ಎಂದು ತಿಳಿದಿರಾ? ಇದು ಅಂಗಡಿಯಲ್ಲ, ಮನೆ! ಗೊತ್ತಾಯಿತೆ?' ಇಷ್ಟು ಹೇಳುವಾಗ ನಾಗಮ್ಮನ ಕೈ ಕೋಣೆಯ ಮೂಲೆಯಲ್ಲಿದ್ದ ಕಸಬರಿಗೆ ಮೇಲಿತ್ತು.

ನಾಗಮ್ಮನನ್ನು ನೋಡಿ ಸುಬ್ರಾಯರ ಸಿಟ್ಟು ಕೊಂಚ ಇಳಿಯಿತು. ಅವರು ಅಂಗಡಿಯಲ್ಲಿ ಲೆಕ್ಕಮಾಡುವ ಹಾಗೆಯೇ ಇಲ್ಲಿಯೂ ಲೆಕ್ಕಮಾಡಿದ್ದರು. 'ನಾಗವೇಣಿ!' ಅಂದರು.

'ಹೂಂ.'

'ನನಗೆ ತಿಳಿಯಲೇ ಇಲ್ಲ. ಇದು ಮನೆ; ಅಂಗಡಿಯಲ್ಲ! ಹಾಂ! ಮರೆತು ಹೋಗಿದ್ದಿತು. ನೀನು ಜಾತ್ರೆಗೆ ಹೋಗಬಹುದು! ಎಷ್ಟು ರೂಪಾಯಿ ಬೇಕು, ನಾಗವೇಣಿ?'

ನಾಗಮ್ಮ ನೋಡಿದಳು. ಒಂದರೆಕ್ಷಣ ಕಳೆಯುತಿದ್ದರೆ ಯಾರನ್ನೊ ಹೊಡೆಯಲಿಕ್ಕೆಂದು ಎತ್ತಿದ ಕಸಬರಿಗೆಯಿಂದ ಅವಳು ಯಾರನ್ನೊ ಹೊಡೆಯುತಿದ್ದಳು. ಅವಳದು ವಿಚಿತ್ರ ಸ್ವಭಾವ. ಹೇಳಿದಳು—'ಯಜಮಾನ್ರೇ, ಆ ಮಧ್ಯಾಹ್ನ ಸಮಯ ಆ ನಿಮ್ಮ ಸುಡುಗಾಡು ಮೋರೆಯ ಸರಸಿ ಜಾತ್ರೆಗೆ ಹೋಗುವದನ್ನು ನೋಡಿದೆ. ಸೀರೆ, ಕುಪ್ಪಸ, ಸ್ಲಿಪ್ಪರು, ಕನ್ನಡಕ, ಬಳೆಗಿಳೆ ಹಾಕಿ ಲೈಸಾಗಿದ್ದಳು, ನಾನು ಚಾವಡಿಯಲ್ಲಿದ್ದೆ. ಹೋಗುವಾಗ ನನ್ನನ್ನೇ ನೋಡಿ ಅಣಕಿಸುವ ಹಾಗೆ ನಕ್ಕು ಹೋದಳು. ನನ್ನ ಎದೆ ಬಿರಿವಂತಾಯಿತು. ಇಪ್ಪತ್ತಮೂರು ರೂಪಾಯಿ ನಾಲ್ಕಾಣೆ ಒಂದು ಜಾತ್ರೆಗೆ ಖರ್ಚು, ಸುಟ್ಟ ಮೋರೆಯವಳು! ಎದುರಿಗೆ ಸಿಕ್ಕಿದ್ದರೆ ಇದರಿಂದಲೆ ಪೂಜೆ ಮಾಡುತಿದ್ದೆ! ನಿಮ್ಮೆದುರಿಗೇ ಮುಖಕ್ಕೆ ಮಂಗಳಾರತಿ ಆಗುತಿತ್ತು!'

'ನಾಗವೇಣಿ, ನೀನು ಜಾತ್ರೆಗೆ ಹೋಗಬಹುದು. ಅವಳು ಇಪ್ಪತ್ತಮೂರು ಖರ್ಚು ಮಾಡಿದಳಾದರೆ ನೀನು ನಾಲ್ವತ್ತು ಖರ್ಚುಮಾಡು!'

'ಇಲ್ಲ, ನಾನು ಹೋಗುವದಿಲ್ಲ. ನಿಮ್ಮ ಪರೀಕ್ಷೆಗೆ ಹೇಳಿದೆ. ಅಷ್ಟೆ!'

'ನನ್ನಾಣೆ, ನೀನು ಜಾತ್ರೆಗೆ ಹೋಗಬೇಕು.'

'ಇಲ್ಲ. ರಾಮು ಬಂದು ಒಂದು ಕತೆ ಹೇಳಮ್ಮಾ! ಎಂದ. ನಾನು—ಏನು ಕತೆ ಹೇಳುವದು? ಅಪ್ಪ ಬರಲಿ, ಜೀವನದ ಕತೆಯನ್ನೇ ಹೇಳುತ್ತೇನೆ' ಎಂದೆ.

'ನೀನು ಜಾತ್ರೆಗೆ ಹೋಗಬೇಕು. ನಾಗವೇಣಿ—ಈ ವರ್ಷ ಜಾತ್ರೆ ಬಹಳ ವಿಶೇಷ.'

'ಅದಕ್ಕಾಗಿಯೇ ಅಂದೆ. ಹೋಗುವದಿಲ್ಲವೆಂದು! ಸರಸಿ ಹೋಗಿದ್ದಾಳೆ. ನೀವೂ ಹೋಗಿ. ವಿಶೇಷ ಮಾಡಿಕೊಳ್ಳಿ. ನಾನು ಹೋದರೆ ಸರಸವು ನೀರಸವಾಗುತ್ತದೆ. ಬೇಡ. ನನಗೆ ಜಾತ್ರೆಯೂ ಬೇಡ, ಯಾತ್ರೆಯೂ ಬೇಡ.'

ನಾಗಮ್ಮ ಕಣ್ಣುಗಳನ್ನು ಒರಸಿಕೊಂಡು ಒಳಗೆ ಹೋದಳು. ಸುಬ್ರಾಯರು ಒಂದು ತಣ್ಣಗಿನ ಉಸಿರು ಬಿಟ್ಟು ಹೊರಗೆ ಆಕಾಶವನ್ನು ನೋಡ ತೊಡಗಿದರು.

ಕೋಗಿಲೆಗೆ

— ೧ —

ಬಾ ಬಾ ಕೋಗಿಲೆ
ಮೋದದ ಬಾಗಿಲೆ
ಹೃದಯದ ತಾಪವ ಪರಿಹರಿಸು.
ಗಗನಾಂಗಣದಲ್ಲಿ ರಿಂಗಣಗುಣಿಯುತ
ನವ ವಿಧ ನಾಟ್ಯವನಭಿನಯಿಸು:

— ೨ —

ಮುಂಜಾನೆಯ ಬೈಗಿನ ಕೆಂಬಣ್ಣದ
ಆಗಸಪಟಿಗೆ ಚುಕ್ಕಿಯೊಲು
ಕಂಗೊಳಿಸುವ ಕೃಷ್ಣ-ಶರೀರದ ಸುವಿ-
ಹಂಗಾಧಿಪ ಗಾಯಕ ಮಣಿಯೆ !
ಅನವರತವು ನೀ ಹಾಡುತಿರು !
ಇಳೆಗಾನಂದವ ನೀಡುತಿರು !

— ೩ —

ಮಾರನ ಸೇನಾನಿಯು ನೀನೆಂಬುದ
ತೋರಿಸಲೋಸುಗವೀ ತೆರದಿ.
ಕ್ರೂರತೆಯೊಳು ವಿರಹಿಗಳೆದೆ ಬಿರಿವೊಲು
ಕೂರಲಗುಗಳ ನೆಸೆಯುತಿಹೆಯಾ?
ಎಡವಿದ ಜೆರಳನೆ ನೋಯಿಪುದೇ?
ಇನಿತು ಕಠೋರತೆಯಿರಬಹುದೇ?

— ೪ —

ಪ್ರೇಮಸುಧಾರಸಪೂರಿತ ಹೃದಯಕೆ
ಸಂತಸದೂಟವನುಣ ಬಡಿಸಿ;
ಕಾರಿರುಳಾದರು ದಾರಿಯ ತೋರುವ
ವೀರನ ದಾಸನು ನೀನಲ್ತೆ !
ಎದೆಯೊಲವೊರತೆಯ ತೂಬುಗಳ
ಸಡಿಲಿಸಿ ತುಂಬಿಸು ನೇಹಕೊಳ.

— ೫ —

ಗಾಯಕಮಣಿ ನಿನಗೇನೀವೆ?
ಒಲುಮೆಯ ವೀಣೆಯ ಕೈಗೀವೆ.
ಎನ್ನೆದೆಯೊಲವಿನ ತಂತಿಯನು
ಮಿಡಿಯುತ ಹೊರಡಿಸು ನಾದವನು.
ಗಾನಲಹರಿಯೊಳಗೋಲಾಡಿ
ತಲೆದೂಗುವೆ ನಿನ್ನನು ನೋಡಿ.

ಬಿ. ರಾಮಚಂದ್ರ



ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರ್

ವರ್ಸೇಲಿ ಒಪ್ಪಂದ

(1918—ನವಂಬರ)

ಇದು ಇನ್ನೊಂದು ಮಹಾಯುದ್ಧಕ್ಕೆ ಬಿತ್ತಿದ ಬೀಜ!

ಲೇಖಕರು: ಶ್ರೀ। ಹರಿದಾಸ—ಇವರಿಂದ

ಹೇಗೋ ಈ ಲೇಖಕರು ಜರ್ಮನಿಯ ಸರ್ವಾಧಿಕಾರಿಯು ನವ ಜರ್ಮನಿಯನ್ನು ಘಟಿಸಿ ತಂದ ಫಲಿತಾಂಶಕ್ಕೆ ಮೆಚ್ಚಿದ್ದಾರೆ. "ವರ್ಸೆಲಿ ಸಂಧಿ"ಯೆಂದ ಕೂಡಲೇ ಜರ್ಮನಿಯನ್ನು ಬಂಧಿಸಿದ ಒಂದು ಭಯಂಕರ ರಜ್ಜುವಿನ ನೆನಪಾಗುವುದು. ಅದನ್ನು ಧಿಕ್ಕರಿಸಿ ತನ್ನ ಪ್ರತಿಭೆಯನ್ನು ಬೀರ ತೊಡಗಿದ ಹರ್ ಹಿಟ್ಲರರು ಕೆಲ ಕೆಲವರ ಮೆಚ್ಚುಗೆಗೆ ಪಾತ್ರವಾದರೆ ಆಶ್ಚರ್ಯವಲ್ಲ. ಹಿಟ್ಲರರ ಕಾರ್ಯವಿಧಾನದಲ್ಲಿ ಇವರ ಅನುಮೋದನೆ ಇಲ್ಲದಿರಬಹುದು; ಆದರೆ, ಜರ್ಮನಿಯಿಂದು ಐಕ್ಯಗೊಂಡಿದೆಯೆಂಬುದನ್ನೆ ಇವರು ನೋಡುತ್ತಾರೆ.

ಯೂರೋಪಿನ ಇಂದಿನ ಅಲ್ಲೋಲ ಕಲ್ಲೋಲ ಪರಿಸ್ಥಿತಿಗೆ ಜರ್ಮನಿಯ ಅತಿಕ್ರಮಣಶೀಲದ ದಬ್ಬಾಳಿಕೆಯೇ ಕಾರಣವಾಗಿದೆಯೆಂಬುದು ಜಗಜ್ಜಾಹೀರವಾಗಿದೆ. ನಾಜಿಗಳು ಇತ್ತೀಚಿಗೆ ಯೆಹೂದಿಯರ ಮೇಲೆ ಕೈಕೊಂಡ ಅತ್ಯಾಚಾರವನ್ನು ನೋಡಿದಾಗ ಶಾಂತಿಪ್ರಿಯ "ಸುಹೃದಯರಿಗೆ" ಯೆಹೂದಿಯರ ಮೇಲೆ ಸಹಾನುಭೂತಿಯುಂಟಾಗುತ್ತಿದೆ: ಆದಿರಲಿ: ಜರ್ಮನಿಯ ಈ ರೀತಿಯ ಅತಿಕ್ರಮಣ ಶೀಲ ವರ್ತನೆಯ ಮೂಲ ಕಾರಣವನ್ನು ಪರೀಕ್ಷಿಸಿದಲ್ಲಿ ಇಂದಿನ ಭಯಾನ್ವಕ ಪರಿಸ್ಥಿತಿಗೆ ವರ್ಸೇಲಿ ಒಪ್ಪಂದವೇ ಬೀಜಬಿತ್ತಿದೆಯೆಂದು ಮನದಟ್ಟಾಗುವುದರಲ್ಲಿ ಏನೇನೂ ಸಂದೇಹವಿಲ್ಲ. ಜರ್ಮನಿಯು ಮೊದಲು ಯುದ್ಧವನ್ನು ಪ್ರಾರಂಭಿಸಿತೆಂದು ಅಪವಾದ ಹೊರಿಸುವುದರಲ್ಲಿ ಏನೇನು ಹುರುಳಿಲ್ಲ. ಈ ರೀತಿಯ ಅಪಪ್ರಚಾರವನ್ನು ರಾಜಕಾರಣ ವಿದ್ಯಾರ್ಥಿಗಳು ನಂಬಿ ಎಂದೆಂದೂ ಮೋಸಹೋಗರು. 1910ರಿಂದಲೇ ಯೂರೋಪಿನ ಪ್ರಮುಖ ರಾಷ್ಟ್ರಗಳೊಳಗೆ ವ್ಯಾಪಾರದ ಬಗ್ಗೆ ಪೈಪೋಟಿ ಎದ್ದು (Competition) ಆಗಾಗ ವಾದ ವಿವಾದಗಳೆದ್ದು ಬಡಿದಾಟವಾಗುತ್ತಿದ್ದಿತೆಂದೂ ಜರ್ಮನಿಯನ್ನು ಅಪ್ಪಳಿಸಿ ಬಿಡಲು ಫ್ರಾನ್ಸ್ ಬ್ರಿಟನ್ ಮೊದಲಾದ ರಾಷ್ಟ್ರಗಳು ಸಮಯವನ್ನು ನಿರೀಕ್ಷಿಸುತ್ತಿದ್ದವೆಂದೂ ಹಲವು ಆಧಾರ ಗ್ರಂಥಗಳಿಂದ ಸಮರ್ಥಿಸಬಹುದಾಗಿದೆ. ಏನೇ ಇರಲಿ. ವರ್ಸೇಲಿ ಪರಿಷತ್ತಿನಲ್ಲಿ ಇನ್ನಿತರ ರಾಷ್ಟ್ರಗಳು ಜರ್ಮನಿಗೆ ಅಕ್ಷಮ್ಯ ಮಹಾಪರಾಧಗಳನ್ನು ಮಾಡಿವೆಯೆಂಬುದನ್ನು ಮೊದಲು ಲಕ್ಷ್ಯದಲ್ಲಿಟ್ಟು ಇಂದಿನ ಸ್ಥಿತಿಗತಿಗಳನ್ನು ವಿಚಾರಿಸಬೇಕಾಗಿದೆ. ಜರ್ಮನಿಯು ಯಾವ ಅನಾಯಕತ್ವ ಪರಿಸ್ಥಿತಿಗೆ ತಳ್ಳಲ್ಪಟ್ಟಿತೆಂಬುದನ್ನು ತುಸು ವಿಚಾರಿಸಿದರೆ ಕಲ್ಲಿದೆಯೂ ನೀರಾಗಿ ಹೋಗದೆ ಇರದು.

ಕಳೆದ ಮಹಾಯುದ್ಧವು 1918ನೇ ನವಂಬರ ತಿಂಗಳಲ್ಲಿ ಪರಿಸಮಾಪ್ತಿಗೊಂಡಿತು. ಯುದ್ಧವನ್ನು ನಿಲ್ಲಿಸಿ ಯುರೋಪಿನ ರಾಷ್ಟ್ರಗಳು ಒಪ್ಪಂದ ಮಾಡಿಕೊಂಡು ಪರಸ್ಪರ ಪ್ರೇಮ ವಿಶ್ವಾಸದಿಂದಿರಬೇಕೆಂದು ಅಮೇರಿಕದ ಅಧ್ಯಕ್ಷ ವಿಲ್ಸನರು ಭಗೀರಥ ಪ್ರಯತ್ನಪಟ್ಟರು. ವರ್ಸೇಲಿಯಲ್ಲಿ ನೆರೆದ ಪರಿಷತ್ತಿನಲ್ಲಿ ಕ್ಲೆಮೆನ್‌ಸಿಯಾ (ಫ್ರಾನ್ಸ್) ಲೋಯಿಡ್ ಜಾರ್ಜ್ (ಬ್ರಿಟನ್), ಸೊನ್ನಿನೋ (ಇಟಲಿ) ಸಯೋನ್ಜಿ (ಜಪಾನ್) ಹೈಮಾನ್ಸ್ (ಬೆಲ್ಜಿಯಂ) ಪಾದರೆವಿಸ್ಕಿ (ಪೋಲೆಂಡ್) ಬ್ರಿಟೀನು (ರುಮೇನಿಯಾ) ಡಾಬೆನ್ಸ್ (ಬೊಹೇಮಿಯಾ) ವಿನ್ಜಿಲೋಸ್ (ಗ್ರೀಸ್) ವಿಲ್ಸನ್ (ಅಮೇರಿಕಾ) ಮೊದಲಾದವರು ಪ್ರಮುಖ ಭಾಗವನ್ನು ವಹಿಸಿದ್ದರು. ಆದರೆ ರಶಿಯಾ, ಜರ್ಮನಿ, ಟರ್ಕಿ ರಾಷ್ಟ್ರಗಳ ಪ್ರತಿನಿಧಿಗಳನ್ನು ಕರೆಯಲಿಲ್ಲ. ರಶಿಯವು ಯುದ್ಧದ ಸಾಲವನ್ನು ಕೊಡಲು ನಿರಾಕರಿಸಿದುದರಿಂದ ಅದಕ್ಕೆ ಸ್ಥಾನ ದೊರೆಯಲಿಲ್ಲ. ಜರ್ಮನಿಯಂತೂ ಮಹಾಪರಾಧಿ! ಈ ಪರಿಷತ್ತಿನಲ್ಲಿ ಸೇರಿದ ಶಕ್ಯವಿದ್ದಷ್ಟು ಮಟ್ಟಿಗೆ ಸಾಧಿಸುವ ರಾಷ್ಟ್ರಪ್ರತಿನಿಧಿಗಳೆಂದು ಹೇಳಿದರೆ ತಪ್ಪಾಗಲಾರದು. ಇಷ್ಟೇ ಅಲ್ಲ. ಸೋತ ಜರ್ಮನಿಯನ್ನು ಕೊಳ್ಳೆ ಹೊಡೆಯಲು ಸೇರಿದ 'ದರೋಡೆಖೋರ'ರೆಂದು ಹೇಳಿದರೂ ಹೇಳಬಹುದಾಗಿದೆ. ಜರ್ಮನಿ, ರಶಿಯಾ ರಾಷ್ಟ್ರಗಳ ಪ್ರತಿನಿಧಿಗಳಿಗೆ ಸ್ಥಾನವು ದೊರೆಯದೆ ಹೋದರೆ ಪ್ರಪಂಚದ ಮೂಲೆಯಲ್ಲಿದ್ದ ಚೀನ, ಜಪಾನ್ ಸದಸ್ಯರನ್ನು ಕರೆಸಿಕೊಳ್ಳಲಾಯಿತು. ವರ್ಸೇಲಿ ಪರಿಷತ್ತಿನಲ್ಲಿ ಸ್ವಜನ ಪಕ್ಷಪಾತತನವು ತಾಂಡವವಾಡಿತೆಂದೆನ್ನಬಹುದು. ಬ್ರಿಟನ್ ಮತ್ತು ಫ್ರಾನ್ಸ್‌ಗಳು ಮನಬಂದಂತೆ ವರ್ತಿಸಲು ಸಾಧ್ಯವಾಯಿತು. ಈ ಸದಸ್ಯರ ಮನೋವೃತ್ತಿಯನ್ನು ಸ್ವಲ್ಪ ಮಟ್ಟಿಗೆ ಪರಿಶೀಲಿಸೋಣವೇ? ಜರ್ಮನಿಯು ದುಷ್ಟ ಜನಾಂಗ, ಮಾನವ ಜನಾಂಗದ ಸಂಸ್ಕೃತಿಯನ್ನೇ ನಾಶಮಾಡಲು ಯತ್ನಿಸಿದ ಕೊಲೆಗಡುಕ, ಅದರ ಸ್ನೇಹಿತರೆಲ್ಲರೂ ನೀಚರು. ಅದರ ವಿರುದ್ಧ ಹೋರಾಡಿದ ರಾಷ್ಟ್ರಗಳೆಲ್ಲವೂ ನ್ಯಾಯ ಮಾರ್ಗಾವಲಂಬಿಗಳು ಎಂಬ ಮನೋಭಾವವು ಇವರಲ್ಲಿ ಇದ್ದಿತ್ತೆಂದು ಧಾರಾಳವಾಗಿ ಹೇಳಬಹುದು. ಆ ಕಾರಣವನ್ನೇ ಮುಂದಿಟ್ಟುಕೊಂಡು ಜರ್ಮನಿಯ ವಿರುದ್ಧ ಹೋರಾಡಿದ ರಾಷ್ಟ್ರಗಳಿಗೆ 'ಕೊಳ್ಳೆ'ಯನ್ನು ಹಂಚಿಕೊಡಲಾಯಿತು. ವರ್ಸೇಲಿಯಲ್ಲಿ ಸೇರಿದ ಪರಿಷತ್ತು ಒಪ್ಪಂದವನ್ನು ಮಾಡಲು ಸೇರಿದ್ದರೂ, ಅದು ಅಪರಾಧಿಯನ್ನು ಶಿಕ್ಷಿಸಲು ಏರ್ಪಡಿಸಿದ ನ್ಯಾಯಸ್ಥಾನವೆಂದೆನ್ನಲಡ್ಡಿಯಿಲ್ಲ. ಯೂರೋಪಿನ ರಾಷ್ಟ್ರಗಳೆಲ್ಲವೂ ಸ್ವಾವಲಂಬಿಯಾಗುವಂತೆ ಸರಿಸಮಾನತಾ ದೃಷ್ಟಿಯಲ್ಲಿ ಯೋಗ್ಯ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದರೆ ಪ್ರಪಂಚದ ಚರಿತ್ರೆಯೇ ಬೇರೆಯಾಗುತ್ತಿತ್ತು. ಈ ಪರಿಷತ್ತಿನ ಸದಸ್ಯರಿಗೆ ಆ ರೀತಿಯ ವ್ಯವಸ್ಥೆಯನ್ನು ರಚಿಸುವ ಒಂದು ಮಹಾ ಸುಸಂದರ್ಭವು ದೊರಕಿತು. ಆದರೆ ಅದನ್ನು ಅವರು ಕಳಕೊಂಡರು. ತಮ್ಮ ಮರಿಮಕ್ಕಳು ಪುನಃ ಬಡಿದಾಡಿ ಸಾಯುವಂತೆ ಬೀಜಬಿತ್ತಿದರು.

ಅಧ್ಯಕ್ಷ ವಿಲ್ಸನ್ ಇವರೊಬ್ಬರು ಮಾತ್ರ ಮೊದಮೊದಲು ನಿಷ್ಪಕ್ಷಪಾತತನವನ್ನು ತೋರಿಸಿ ಮಾನವ ಜನಾಂಗದ ಉದ್ಧಾರಕರೆಂದು ಪ್ರಪಂಚದಲ್ಲಿ [illegible]ಟ್ಟರು. ಅತ್ಯಲ್ಪ ಸಮಯದೊಳಗಾಗಿ ಇವರು ಪ್ರಪಂಚದಲ್ಲಿ ಕೀರ್ತಿ ಗಳಿಸಿಕೊಂಡರು. ಆದರೇನು? ಇವರ ಮಾತು ಪರಿಷತ್ತಿನಲ್ಲಿ ನಡೆಯಲಿಲ್ಲ. ಇಲ್ಲವೇ ಉದಾತ್ತ ಭಾವನೆಯನ್ನು ಸಾಧಿಸಲು ಇವರಲ್ಲಿ ಧೈರ್ಯವಿಲ್ಲದೆ ಹೋಯಿತು. ಒಂದು ವೇಳೆ ಇವರು ಧೈರ್ಯದಿಂದ ಆ ರೀತಿ ವರ್ತಿಸುತ್ತಿದ್ದರೂ ಪ್ರಯೋಜನವಾಗುತ್ತಿತ್ತೆಂದು ಹೇಳುವುದು ತೀರ ಕಷ್ಟ. ಯಾಕೆಂದರೆ ಅಲ್ಲಿ ಸೇರಿದ್ದ 'ದರೋಡೆಖೋರ'ರೆಲ್ಲರೂ ಜರ್ಮನಿಯ ಹುಟ್ಟಡಗಿಸಿಬಿಡಲು ನಿರ್ಧರಿಸಿ ಬಂದವರು. ಗೆದ್ದ ರಾಷ್ಟ್ರಗಳ ಪ್ರತಿನಿಧಿಗಳವರು. ಇತ್ತ ವಿಲ್ಸನರೂ ಪೋಲೆಂಡಿನ ಬಗ್ಗೆ ಪಕ್ಷಪಾತತನವನ್ನೂ ತೋರಿಸಿದುದರಿಂದ ಜನಾಪವಾದಕ್ಕೆ ತುತ್ತಾದರು. ಬಿರುಗಾಳಿಗೆ ಸಿಕ್ಕ ತರಗಲೆಯಂತೆ ಇವರ ಪಾಡಾಯಿತು. ನಿಜವಾದ ನ್ಯಾಯವು ವರ್ಸೇಲಿ ಪರಿಷತ್ತಿನಲ್ಲಿ ದೊರಕದೆ ಹೋದುದು ಮಾನವ ಜನಾಂಗದ ದುರದೃಷ್ಟವೇ ಸರಿ!

ಬಿದ್ದ ಜರ್ಮನಿಯು ಎಂದೆಂದೂ ತಲೆ ಎತ್ತಬಾರದೆಂದು ಪರಿಷತ್ತಿನ ಸದಸ್ಯರು ತಾಳಿದ್ದ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಸೋತ ಈ ರಾಷ್ಟ್ರದ ಮೇಲೆ ಅಪಾರ ಸಾಲವನ್ನು ಹೊರಿಸಲಾಯಿತು. ಇದರೊಂದಿಗೆ ಜರ್ಮನಿಯು ಶಸ್ತ್ರ ಸನ್ಯಾಸವನ್ನು ಕೈಕೊಳ್ಳಬೇಕೆಂಬ ಕರಾರನ್ನು ಹಾಕಲಾಯಿತು. (ಎಲ್ಲ ರಾಷ್ಟ್ರಗಳಿಗೂ ಶಸ್ತ್ರಸನ್ಯಾಸವಲ್ಲ!) ಬ್ರಿಟನ್ ಮತ್ತು ಫ್ರಾನ್ಸ್‌ಗಳು ತಮ್ಮ ಸಂರಕ್ಷಣೆಗೆ ಶಸ್ತ್ರ ಸಂಗ್ರಹಿಸಬಹುದೆಂದು ಒಪ್ಪಿಕೊಳ್ಳಲಾಯಿತು. ಫ್ರೆಂಚರು ಜರ್ಮನಿಯ ಸೇನಾಶಕ್ತಿಯನ್ನು ಕಂಡು ಬೆದರಿದ್ದರೆ, ಜರ್ಮನಿಯ ನೌಕಾಪಡೆಯ ಶಕ್ತಿಯನ್ನು ಕಂಡು ಬ್ರಿಟನ್ ನಡುಗಿಹೋಗಿತ್ತು.

ಇಷ್ಟೇ ಅಲ್ಲ: ಬೃಹತ್ ಜರ್ಮನಿಯು ಅಪಾಯಕರವೆಂದೆಣಿಸಿ ಅದರ ಒಂದೊಂದೆ ಮೂಳೆಗಳನ್ನು ಕಡಿದು ಫ್ರಾನ್ಸ್, ಇಟಲಿ, ಪೋಲೆಂಡ್ ಇವುಗಳಿಗೆ ಕೊಡಲಾಯಿತು. ಫ್ರಾನ್ಸ್ ಮತ್ತು ಬ್ರಿಟನ್ ದರೋಡೆಖೋರರು ಜರ್ಮನಿಯ ವಸಾಹತಗಳನ್ನು ನುಂಗಿ, ನೀರು ಕುಡಿದು, ಜೀರ್ಣಿಸಿಕೊಂಡವು. ಡಾ॥ ಬೆನ್ಸರನ್ನು ಸಂತೈಸುವುದಕ್ಕಾಗಿ ಹಂಗೇರಿ ರಾಜ್ಯವನ್ನೊಡೆದು, ಜೆಕೊಸ್ಲೊವೇಕಿಯವೆಂಬ ಪ್ರತ್ಯೇಕ ರಾಷ್ಟ್ರವನ್ನು ರಚಿಸಿ ಅವರಿಗೆ ಸೂಡೆಟನ್ (ಜರ್ಮನ್) ಪ್ರದೇಶವನ್ನೂ ಕಾಣಿಕೆ ಕೊಟ್ಟರು. ಆಸ್ಟ್ರಿಯಾ, ರಶಿಯಾ, ಮತ್ತು ಪ್ರಶಿಯಾಗಳೊಳಗೆ ಹರಿದು ಹಂಚಿಹೋಗಿದ್ದ ಪೋಲೆಂಡವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಲಾಯಿತು. ಆದರೆ ನಿಜ ಪೋಲೆಂಡ್‌ವನ್ನು ರಚಿಸಲಿಲ್ಲ. ಅಲ್ಲೂ ಬ್ರಿಟನ್ ತನ್ನ

ಭೇದನೀತಿಯನ್ನು ಪ್ರಯೋಗಿಸಿ, ಜರ್ಮನಿಯನ್ನು ವಿಭಾಗಿಸಿ, ಡಾನ್ಜಿಗ್ ನಗರವನ್ನು ಪ್ರತ್ಯೇಕಿಸಿ ಪೋಲೆಂಡಕ್ಕೆ ''ಬಾಲ್ಟಿಕ್'' ಸಮುದ್ರ ಪ್ರವೇಶ ಸಿಗುವಂತೆ ಮಾಡಿದೆ: ಡಾನ್ಜಿಗ್‌ದ ಜನಸಂಖ್ಯೆಯಲ್ಲಿ ಶೇಕಡ 96 ಜನರು ಜರ್ಮನರಾದರೂ ಅವರನ್ನು ಆಳುವ ಅಧಿಕಾರ ಪೋಲೆಂಡಕ್ಕೆ ದೊರೆಯಿತು.

ಈ ಒಪ್ಪಂದವನ್ನು ಜರ್ಮನರು ಉಪಾಯವಿಲ್ಲದೆ ಒಪ್ಪಬೇಕಾಯಿತು. ಒಪ್ಪದಿದ್ದರೆ ಪುನಃ ಯುದ್ಧ ಹೂಡುವೆವೆಂದು ಜರ್ಮನರಿಗೆ ನಿಶ್ಚಿತ ಅವಧಿಯನ್ನಿತ್ತು ''ಯುದ್ಧಾಹ್ವಾನ'' (ultimatum) ಕಳುಹಿಸಲಾಯಿತು; ಹಿಂಡನ್‌ಬರ್ಗ್ ಹತಾಶನಾಗಿ, ಒಪ್ಪಿಕೊಂಡು ರಾಜ್ಯಾಡಳಿತವನ್ನು ಹೊತ್ತನು. ಆದರೆ ಜರ್ಮನಿಯ ಅಂದಿನ ಪರಿಸ್ಥಿತಿಯನ್ನು ಕಂಡು ಮನಕರಗದ ಮಾನವನು ದೊರೆಯಲಾರನೆಂದೆನ್ನಬೇಕು: ಜರ್ಮನಿಯ ಜೀವಾಳವಾಗಿದ್ದ ಸಾರ್ ಮೊದಲಾದ ಕಲ್ಲಿದ್ದಲಿನ ಕೇಂದ್ರಗಳನ್ನು ಕಳೆದುಕೊಂಡ ಸರಕಾರವು ಹೇಗೆ ಸರಾಗವಾಗಿ ಸಾಗಬೇಕು? ಯುದ್ಧದ ಫಲವಾಗಿ ಇದ್ದ ಎಲ್ಲ ಔದ್ಯೋಗಿಕ ಸಂಸ್ಥೆಗಳೂ ಹಾಳುಬಿದ್ದಿದ್ದುವು: ಹೊಸ ಸಂಸ್ಥೆಗಳನ್ನು ಸ್ಥಾಪಿಸಲು ಹಣದ ಅಭಾವ. ಇತ್ತ ಸಾಲದ ಹೊರೆ! ಜರ್ಮನಿಯ ಆ ಜೀವನ್ಮೃತ ಪರಿಸ್ಥಿತಿಯನ್ನು ಬಣ್ಣಿಸಲಳವಲ್ಲ: ಕಾಗದ, ಯಂತ್ರ ಮೊದಲಾದುವುಗಳನ್ನೂ ಅದು ವಿದೇಶದಿಂದ ಪಡೆಯಬೇಕಾಯಿತು. ಈ ಸಮಯವನ್ನು ಸಾಧಿಸಿ, ಬ್ರಿಟನ್, ಫ್ರಾನ್ಸ್, ಅಮೆರಿಕಗಳು ಕೈಗಾರಿಕೆಗಳನ್ನು ಹೆಚ್ಚಿಸಿ ಜರ್ಮನಿಗೆ ಕಳುಹಿಸಿ, ಈ ರೀತಿಯಿಂದಲೂ ಅವರನ್ನು ಸುಲಿದುವು: ಅಮೆರಿಕದ ವ್ಯಾಪಾರವು ಪ್ರಬಲಗೊಂಡಿತು: ಒಂದೇ ಭಾಷೆಯನ್ನಾಡುವ ಜರ್ಮನ್ ಜನರು ಬೇರೆ ಬೇರೆ ಸರಕಾರಗಳೊಳಗೆ ಸೇರಿಕೊಂಡುದರಿಂದ ಅವರಲ್ಲಿ ಪರಸ್ಪರ ದ್ವೇಷಾಸೂಯೆಯು ಉಂಟಾಯಿತು: ಮಿಲಿಯಾಂತರ ನಿರಪರಾಧಿ ಆಬಾಲವೃದ್ಧರು ಹೊಟ್ಟೆಗಿಲ್ಲದೆ ಸಾಯಬೇಕಾಯಿತೆಂದು ಇತ್ತೀಚೆಗೆ ಮಹಾತ್ಮಾ ಗಾಂಧಿಯವರಿಗೆ ಬರೆದ ಪತ್ರದಲ್ಲಿ ಆಂಗ್ಲ ತತ್ವಶಾಸ್ತ್ರಿಗಳಾದ ರಿಚ್ಚಾರ್ಡ್ ಗ್ರೆಗ್ ಇವರೇ ಸೂಚಿಸಿರುವರೆಂದ ಮೇಲೆ ಜರ್ಮನರಲ್ಲಿ ಯಾವ ರೀತಿಯ ಮನೋವೃತ್ತಿಯುಂಟಾಗದೆ ಇರದು!

ಈ ಪರಿಸ್ಥಿತಿಯಲ್ಲಿ ಹಿಟ್ಲರನ ಉಪಯವಾಯಿತು.

ಹರಿದು ಹಂಚಿಹೋದ ಜರ್ಮನ್ ರಾಷ್ಟ್ರವನ್ನು ಒಟ್ಟುಗೂಡಿಸಿ, ಜನರಲ್ಲಿ ಏಕೀಕರಣವುಂಟಾಗುವಂತೆ ಮಾಡಿ, ಮಾತೃಭೂಮಿಯ ದಾಸ್ಯಶೃಂಖಲೆಗಳನ್ನು ಕಿತ್ತೊಗೆದು, ಅವಿಶ್ರಾಂತವಾಗಿ ದುಡಿದ, ಈ ನಿಸ್ವಾರ್ಥಿ, ದೇಶಾಭಿಮಾನಿ ಹಿಟ್ಲರನು ಹಲವರೊಡನೆ "ನರಪಿಶಾಚಿ" ''ನರಾಧಮ''ನೇ ಇರಲಿ, ಬೃಹತ್ ಜರ್ಮನಿಯ ಕಾರಣಕರ್ತ, ವಿಭೂತಿ ಪುರುಷನೆಂಬುವುದರಲ್ಲಿ ಏನೇನೂ ಸಂದೇಹವಿಲ್ಲ. ಹಿಟ್ಲರನು ಅಂದು ಜರ್ಮನಿಯ ಗದ್ದುಗೆಯನ್ನು ಏರದೆ ಹೋಗುತಿದ್ದರೆ ಜರ್ಮನಿಯು ಯುರೋಪಿನ ನಕಾಶೆಯಲ್ಲಿ ಮಾಯವಾಗುತಿತ್ತೆಂಬುದು ನಿರ್ವಿವಾದ. ಸಾರ್, ಸುಡೆಟನ್ ಪ್ರದೇಶ, ಹಾಗೂ ಜರ್ಮನಿಯ ವಸಾಹತಗಳನ್ನು ಇನ್ನಿತರರು ನುಂಗಿ ನೀರು ಕುಡಿದುದೇ ಇದಕ್ಕೆ ಸಾಕ್ಷಿಯಾಗಿದೆ!

ಇಂದಿನ ದಿನ ಜರ್ಮನಿಯಷ್ಟು ಐಕ್ಯಹೊಂದಿದ ರಾಷ್ಟ್ರ ಇನ್ನೊಂದಿಲ್ಲ. ನಿಸ್ವಾರ್ಥ ರಾಷ್ಟ್ರಾಭಿಮಾನದಿಂದ ಕೂಡಿದ ಈ ಜನಾಂಗದಲ್ಲಿದ್ದಷ್ಟು ರಾಜಕೀಯ ನವಜಾಗ್ರತಿ ಪ್ರಪಂಚದ ಇನ್ನಾವ ಮೂಲೆಗಳಲ್ಲಿಯೂ ಕಾಣಲಸಾಧ್ಯವೆಂದರೆ ಅತಿಶಯೋಕ್ತಿಯಾಗಲಾರದು. ಪ್ರಜಾಸತ್ತೆ, ನಾಗರಿಕ ಹಕ್ಕು, ಸ್ವಾತಂತ್ರ್ಯ ಎಂದು ದೊಡ್ಡ ಟೊಳ್ಳು ಬೊಬ್ಬೆಯನ್ನೆಬ್ಬಿಸುವ ಅಮೆರಿಕ ರಾಷ್ಟ್ರದಲ್ಲಿ ನೀಗ್ರೋ ಹಾಗೂ 'ರೆಡ್ ಇಂಡಿಯನ್'ರವರನ್ನು ಯಾವ ರೀತಿ ಹಿಂಸಿಸುತ್ತಿರುವರೆಂಬುದು ಗೊತ್ತಿದ್ದವರಿಗೆ ಗೊತ್ತು. ಕ್ರಿಶ್ಚಿಯನ್ ಮತ ಪ್ರಚಾರದ ಹೆಸರಲ್ಲಿ ಪಾಶ್ಚಾತ್ಯ ಪ್ರಜಾಸತ್ತೆಯ ರಾಷ್ಟ್ರಗಳು ಆಫ್ರಿಕದಲ್ಲಿ ಯಾವ ಉಗ್ರೋಪಾಯಗಳನ್ನೂ ಕೈಕೊಂಡಿವೆಯೆಂಬುದು ನಿಷ್ಪಕ್ಷಪಾತಿ ಜನರಿಂದ ತಿಳಿಯಬೇಕು. ''ಅಯ್ಯೋ, ಯೆಹೂದಿಯರ ಮೇಲೆ ಇಂತಹ ದಬ್ಬಾಳಿಕೆ'' ಎಂದು ಬಾಯಿ ಬಾಯಿ ಬಡುವ ಹಿಂದುಗಳು ತಮ್ಮ ನಾಡಿನಲ್ಲಿ ಸ್ವದೇಶ ಬಾಂಧವರಾದ ಹರಿಜನರೇ ಮೊದಲಾದ ಇನ್ನಿತರರನ್ನು ಎಷ್ಟು ತಿರಸ್ಕಾರದಿಂದ ಕ್ರೂರತನದಿಂದ ಹಿಂಸಿಸುತ್ತಿರುವರೆಂಬುದನ್ನು ನಾನು ಬಣ್ಣಿಸಬೇಕಾಗಿಲ್ಲ. ರಾತ್ರಿ ಮನೆಗಳಿಗೆ ಕನ್ನವಿಕ್ಕುವವರೂ ಕಳ್ಳರು. ಅಂಗಡಿಯವನಿಗೆ ಖೋಟಾ ನಾಣ್ಯವನ್ನು ಜಾರಿಸಿಬಿಡಲು ಭಗೀರಥ ಪ್ರಯತ್ನ ನಡೆಸುವವರೂ ಕಳ್ಳರೇ!

ಇನ್ನೊಂದು ಮಹಾಯುದ್ಧಕ್ಕೆ ವರ್ಸೇಲಿ ಪರಿಷತ್ತಿನಲ್ಲಿ ಬೀಜ ಬಿತ್ತಿದ ರಾಷ್ಟ್ರಗಳು ಅದರ ಫಲವನ್ನುಣ್ಣಬೇಕಾಗಿ ಬಂದರೆ ಅದರಲ್ಲಿ ತಪ್ಪೇನು?

ನೋಟ

ಈ ತುಂಬಿಗಳೆಲ್ಲಿಗೆ ಸರಿಯುವವೊ?
ಏತಕೆ ನುಣ್ಚರವನು ಗೈಯುವವೊ?
ಬಿಸಿಲಿನ ಬೇಗೆಯನೆಣಿಸದೆ
ಧರ್ಮವನಿನಿಸೂ ಗಣಿಸದೆ
ರಜವನು ತರಲೆಂದೇ
ಕಷ್ಟವು ಬರಲೆಂದೇ
ಹೆಣಗುತ ತಮ್ಮೊಳು ತಾವೇ ಗೊಣಗುವವು
ಸೂರ್ಯನು ಪದ್ಮಕೆ ಬಲ್ಲಹನಾಗಿರೆ,
ನೋಡದೆ, ಬಯಸುತಲೋಡುವುದೇಕೊ?
ಕೊಳದಲಿ ನಿರ್ಮಲ ಜಲದಲಿ
ಹುಟ್ಟಿದರೇನದು ಹೂವು
ಬಂಡುಣಿಗೇತುತ್ತೂ
ಅವಮಾನಕೆ ಬಿತ್ತೂ
ಏನೋ ಗುಣವಿದರಿಂದಲಿ ಭೂತಳಕೆ
ಅಲೆಯುತಲೊಲಿಯುತ ಮುತ್ತುತ ಮುಸುರುತ
ಸುಳಿವವು ನಾಣಿಲಿ ತುಂಬಿಗಳೆಲ್ಲಾ
ಪೀಡಿಸಿ ಕಮಲವಕಿಡಿಸಿ
ಹಾಡಿಸಿ ನಗಿಸುತ ಸುಡಿಸಿ
ಹಾಳ್ಮಾಡಿದುವಾಪೂವ
ಕೋಳಾಡುವು ತಾವು
ಮಧುಪಗಳೇತಕೆ ಸುಮ್ಮನೆ ಬಳಲುವವೊ?

''ಕೃಷ್ಣ''



ಟುನಿಸ್ ನಗರದೊಳಗಿನ ನೆಟೀವರ ಒಂದು ಮಾರ್ಕೆಟು. ಇಲ್ಲಿ ಹೆಚ್ಚಾಗಿ ಅರಬರೇ ಕಾಣುವರು. ಹೆಚ್ಚಿನ ಕಟ್ಟಡಗಳಾದರೂ ಅರಬರ ರೀತಿಯವೇ.

ಟುನಿಸಿಗಾಗಿ ಇಟಲಿಯ ಕೂಗು!

ಪ್ರಪಂಚದ ಮತ್ತೊಂದು ಸಮಸ್ಯೆ

90,000 ಇಟೇಲಿಯಾನರು 90,000 ಫ್ರೆಂಚರನ್ನು ಸಂಧಿಸಿರುವರು!

ಕಳೆದ ದಸಂಬರ ತಿಂಗಳ ಆರಂಭದಲ್ಲಿ ಪರರಾಷ್ಟ್ರ ಮಂತ್ರಿಗಳಾದ ಕೌಂಟ್ ಸಿಯಾನೋ ಅವರು ಇಟಲಿಯ ಚೇಂಬರ್ ಆಫ್ ಡಿಪ್ಯುಟೀಸ್ ಶಾಸನಸಭೆಯಲ್ಲಿ ಉದ್ವೇಗಜನಕವಾದ ಭಾಷಣವೊಂದನ್ನಿತ್ತೊಡನೆಯೇ 'ನಮಗೆ ಟುನಿಸ್ ಬೇಕು' ಎಂಬ ಕೂಗು ಮೊಳಗಿತು. ಆ ಭಾಷಣದಲ್ಲಿ ಅವರು ಇಟಲಿಯ ಸಾಹಜಿಕ ಆಶಯಗಳ ಕುರಿತಾಗಿ ಪ್ರಸ್ತಾವಿಸಿದ್ದರು. ಕಳೆದ ಶತಮಾನದಲ್ಲಿ ಆರಂಭವಾಗಿದ್ದ [illegible] ಇವಕ್ಕೆಲ್ಲ ಕಾರಣ. ಟುನೀಶಿಯವು ಟರ್ಕಿಶ್ ಆಧಿಪತ್ಯಕ್ಕೊಳಗಾಗಿ [illegible] "ಬೇ"ಗಳಿಂದ (ಪಾಳೆಯಗಾರರು) ಆಳಲ್ಪಡುತ್ತಿದ್ದ ಕಾಲದಲ್ಲಿ ಎಂದರೆ ೧೮೬೨ರಲ್ಲಿ ಇಟಲಿಯು ಅಲ್ಲಿಯ ಅಭಿವೃದ್ಧಿಗಾಗಿ ಹೇರಳ ದ್ರವ್ಯವನ್ನು [illegible]. ಬಳಿಕ ೧೮೬೯ರಲ್ಲಿಯೂ ಟುನೀಶಿಯವು ಬಡವಾಗಿ ದಿವಾಳಿಯ ಸ್ಥಿತಿ [illegible] ಅದರ ಆರ್ಥಿಕ ಆಡಳಿತವು ಬ್ರಿಟಿಷ್, ಫ್ರೆಂಚ್ ಮತ್ತು ಇಟಲಿಯ ತ್ರಿರಾಷ್ಟ್ರಗಳ ವಶಕ್ಕೆ ಬಂತು.

ಆ ಮೇಲೆ ಇಟಲಿಯು ಮಾರ್ಗಗಳನ್ನು ರಚಿಸಿ ರೈಲ್ವೆಯನ್ನು ಪಡೆದು ವೃದ್ಧಿಪಡಿಸಿ ಒಳದೇಶಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿತು. ಇದೇ ರೀತಿಯಲ್ಲ ಇಟಲಿಯು ತನ್ನ ನೆಲೆಯನ್ನು ಭದ್ರಗೊಳಿಸಿಕೊಂಡು ಟುನೀಶಿಯವು ತಮ್ಮ ಸಾಮ್ರಾಜ್ಯಾಂಗವೆಂದು ಭಾವಿಸತೊಡಗಿತು. ಇಟಲಿಯನರ ಪೂರ್ವಜರಾದ ಕಾರ್ತೆಜಿಯನರೂ ಹೀಗೆ ಭಾವಿಸುತ್ತಿದ್ದರು.

ಆದರೆ ಈ ಕಾಲದಲ್ಲಿ ಜರ್ಮನಿಯ ಬಿಸ್ಮಾರ್ಕ ಮಹಾಶಯನ ಭೇದೋಪಾಯವು ಫಲಿಸಿತು. ಆಲ್ಸಾಸ ಲೊರೈನನನ್ನು ಕಳಕೊಂಡು ಫ್ರಾನ್ಸ್ ಕಳವಳಿಸುತ್ತಿದ್ದ ಕಾಲವದು. "ಚಿಂತಿಸುತ್ತಿರುವ ಜನಾಂಗವು ಅಪಾಯಕಾರೀ ಜನಾಂಗ"ವೆಂದು ಬಿಸ್ಮಾರ್ಕನಿಗೆ ಗೊತ್ತು. ಅದಕ್ಕಾಗಿ ಫ್ರೆಂಚ್ ಜನರ ಚಿತ್ತವನ್ನು ಸ್ವಲ್ಪ ಪ್ರಸನ್ನಗೊಳಿಸಲೋ ಅಥವಾ ಮತ್ತೊಂದು ಕಡೆಗೆ ತಿರುಗಿಸಲೋ ಆತನೊಂದು ಉಪಾಯಹೂಡಿದನು. "ಜರ್ಮನಿಗೆ ವಸಾಹತುಗಳ ಆವಶ್ಯಕತೆ ಇಲ್ಲ; ಆದರೆ ಫ್ರಾನ್ಸಿಗಿದೆ. ಒಟ್ಟೋಮನ್ ಸಾಮ್ರಾಜ್ಯವು ಧೂಳೀಪಟವಾಗುತ್ತಿದೆ. ಫ್ರಾನ್ಸು ಈಗಲೇ ಮುಂದರಿಯಬೇಕು"—ಎಂದನು.


ಫ್ರಾನ್ಸು, ಬಿಸ್ಮಾರ್ಕನಂದಂತೆ ಪೆಟ್ಟುಹೊಡೆಯಿತು; ೧೮೮೧ನೇ ಇಸವಿಯ ಒಂದು ದಿನ ಇಟಲಿಯವರು ಎದ್ದು, ತಮ್ಮದಲ್ಲದ ತೀರ ಭಿನ್ನವಾದ ತ್ರಿವರ್ಣದ ಧ್ವಜವು ಟುನಿಶಿಯದ ಮೇಲೆ ಹಾರಾಡುವುದನ್ನೂ, ಫ್ರೆಂಚ್ ಸೈನ್ಯಗಳು ಮುಖ್ಯ ಪಟ್ಟಣವನ್ನಾಕ್ರಮಿಸಿರುವುದನ್ನೂ, ಎಲ್ಲ ಇಟೇಲಿಯಾನರೂ ಫ್ರೆಂಚ್ ಪ್ರಜೆಗಳಾಗಿ ಮಾರ್ಪಟ್ಟುದನ್ನೂ ನೋಡಿದರು.

ಈ ಅದ್ಭುತ ಫಲದ ಸೌಂದರ್ಯವನ್ನೂ; ಅಂದಿನ ಆ ಘಟನೆಯನ್ನೂ ಇಟೇಲಿಯು ಮರೆತಿಲ್ಲ. ವಿಶೇಷವಾಗಿ ಇಟೇಲಿಯಲ್ಲಿಲ್ಲದ ಸೈಂದುಪ್ಪು, ಸತು, ಸೀಸ, ಮೊದಲಾದುವು ಟುನಿಶಿಯದಲ್ಲಿ ಹೇರಳವಾಗಿವೆ ಎಂಬುದನ್ನು ಇಟೇಲಿಯು ಮರೆತಿಲ್ಲ.

ಈ ಪ್ರಶ್ನೆಯ ಮತ್ತೊಂದು ದೃಷ್ಟಿಯೂ ಇದೆ. ಭೂಗೋಲ ನಕಾಶೆಯನ್ನು ನೋಡಿದರೆ ಜಿಬ್ರಾಲ್ಟರ್ ಸ್ಟ್ರೈಟ್ಸ್ ಮತ್ತು ಸುವೇಜ್ ಕಾಲುವೆಯ ನಡು ಅಂತರದಲ್ಲಿ ಟುನಿಶಿಯವು ಇರುವುದು ಕಂಡುಬರುವುದು. ಸಿಸಿಲಿಯೊಂದಿಗೆ ಇದು ಅತಿ ಬಲಾಢ್ಯವಾಗುವುದು. ಮೆಡಿಟರೇನಿಯನ್ ಸಮುದ್ರದಲ್ಲಿ ಇದಕ್ಕೆ ಪ್ರಾಧಾನ್ಯ ದೊರೆಯುವುದು. ೯೦೦ ಮೈಲುಗಳ ಕರಾವಳಿಯು ಸಿಗುವುದು. ಆರ್ಥಿಕ ಹಾಗೂ ರಾಜಕೀಯ ಮಹತ್ವವು ಟುನಿಶಿಯಕ್ಕೆ ಸುಲಭವಾಗಿ ದೊರೆಯುವುದು.

ಹೀಗೆ ಈ ಘರ್ಷಣ ಬಂದಿದೆ. ಹೀಗಾಗಿ ಇಂದು ಉತ್ತರ ಆಫ್ರಿಕದ ಕರಾವಳಿಯಲ್ಲಿ ೯೦,೦೦೦ ಇಟೇಲಿಯಾನರು ೯೦,೦೦೦ ಫ್ರೆಂಚ್ ಜನರನ್ನು (೧೯೩೯ನೇ ಜಾನೇವರಿಯಂತೆ ಈ ಸಂಖ್ಯೆ!) ಎದುರಾಗಿರುವರು. ಇದರ ಅಂತ್ಯವೇನೋ ಹೇಳಬರುವುದಿಲ್ಲ.

ಟುನಿಶಿಯದಲ್ಲಿನ ಪ್ರಚಲಿತ ಪರಿಸ್ಥಿತಿಯೇನು ಎಂದು ಕೇಳಿದರೆ ಇಷ್ಟನ್ನು ಹೇಳಬಹುದು. ಹೊರಗಿನಿಂದ ತೋರಿಕೆಗೆ,ಯಾವ ಘರ್ಷಣವೂ ಇಲ್ಲ. ಫ್ರೆಂಚ್ ಅಧಿಕಾರಿಗಳು ಸಾರ್ವಜನಿಕರ ಹಿತಚಿಂತನೆಯಿಂದ ಜಾಗರೂಕರಾಗಿ (ದಬ್ಬಾಳಿಕೆಯೆಂದೂ ಹೇಳಬಹುದಾದ ರೀತಿಯ) ಕ್ರಮ ತೆಗೆದುಕೊಂಡಿರುವರು. ಉದಾಹರಣಾರ್ಥ ಫೇಸಿಸ್ಟ್ ಯುನಿಫಾರ್ಮುಗಳೂ ಬಹಿರಂಗ ಸಭೆ—ಮೆರವಣಿಗೆ ಮೊದಲಾದುವೂ ನಿಷೇಧಿಸಲ್ಪಟ್ಟಿವೆ. ಆದರೆ, ಫ್ರೆಂಚರು, ಇಟಲಿಯಾನರ ಪ್ರಚಾರವನ್ನೇನೂ ನಿರ್ಬಂಧಿಸಲಿಲ್ಲ. ಸಾರ್ವಜನಿಕ ನೆಮ್ಮದಿಗೆ ಭಂಗ ಬಾರದಿದ್ದರೆ ಸಾಕು—ಅವರು ಬೇಕಾದುದನ್ನು ಮಾಡಲಿ—ಎಂಬ ಮನೋಭಾವವದು.



ಟುನಿಶಿಯಾ ದ್ವೀಪದ ಜ್ಜೆರ್ಬಾ ಎಂಬಲ್ಲಿನ ಯಹೂದ್ಯ ಸುಂದರಿಯೊಬ್ಬಳು.

ಇಟಲಿಯ ಪತ್ರಿಕೆಗಳಲ್ಲಿ ಟುನಿಸಿಯದಲ್ಲೇ—ಫ್ರೆಂಚ್ ವಿರೋಧ ಲೇಖಗಳು ಆರಂಭವಾಗಿವೆ. ಟುನಿಶಿಯಾವು ಇಟೇಲಿಗೆ ಸೇರಬೇಕೆಂಬ ವಾದಗಳೆದ್ದಿವೆ. ಇದು ಅವ್ಯಾಹತವಾಗಿ ನಡೆದೇ ಇದ್ದರೂ ಫ್ರೆಂಚರು ವಿಶೇಷ ನಿರ್ಬಂಧಗಳನ್ನು ತಾರದಿದ್ದುದು ಮೆಚ್ಚತಕ್ಕುದು. ಟುನಿಶಿಯದಲ್ಲಿ ಇಟೇಲಿಯಾನರು ರೋಮ್ ಸಾಮ್ರಾಜ್ಯ ವಿಜೃಂಭಣೆಯ ಚಲಚ್ಚಿತ್ರಗಳ ಪ್ರದರ್ಶನವನ್ನು ನಡೆಸುತ್ತಿರುವರು.

ಟುನಿಶಿಯದಲ್ಲಿ ಇಟೇಲಿಯಾನರ ಚಟುವಟಿಕೆಗಳ ಕೇಂದ್ರವು ಟುನಿಸ್ ನಗರದಲ್ಲಿರುವ ಇಟೇಲಿಯನ್ ರಾಯಭಾರಿಯ ಕಚೇರಿಯೇ ಆಗಿದೆ ಎಂದು ಬ್ರಿಟಿಷ್ ಪತ್ರಿಕೆಗಳಿಗೆ ಬರೆವ ಇಟೇಲಿಯನ್ ಲೇಖಕ ಜೋರ್ಜ್ ಮಾರ್ಟೆಲ್ಲಿಯವರು ಹೇಳುತ್ತಾರೆ. ಇಟೇಲಿಯ ಒಂದು ನಗರದಲ್ಲಿ ಒಬ್ಬ ಜವಾಬ್ದಾರಿ ಅಧಿಕಾರಿಯು ಕೊಡುವ ತೆರವೇ ಟುನಿಸ ನಗರದಲ್ಲಿ ಈ ಇಟೇಲಿಯನ್ ರಾಯಭಾರಿಯು ಆಜ್ಞೆಗಳನ್ನು ಹೊರಡಿಸುತ್ತಾನೆ.



ಶ್ರೀ ಕಾಶಿಮಠಾಧೀಶ ಶ್ರೀಮತ್ ವರದೇಂದ್ರ ತೀರ್ಥ ಶ್ರೀ ಪಾದಂಗಳವರು.
(ಶ್ರೀಮತ್ ಸುಕೃತೀಂದ್ರ ತೀರ್ಥರ ಗುರುಗಳವರು)

ಪ್ರಭಾತ ಆಫೀಸು, ಮಂಗಳೂರು.

ಮೊದಮೊದಲು, ಟುನಿಶಿಯದಲ್ಲಿರುವ ಹೆಚ್ಚಿನ ಜನರು ಫೆಸಿಸ್ಟರಿಗೆ ವಿರೋಧ ಇದ್ದರು. ವ್ಯಾಪಾರದ ಮುಗ್ಗಟ್ಟು ಬರುತ್ತಲೇ ಇಟೇಲಿಯ ರಾಯಭಾರಿಯು ರೋಮ್ ನಗರದಿಂದ ಸಹಾಯ ತರಿಸಿ ಅವರಿಗೆ ಅನ್ನ ಕೊಡಿಸಿದನು. ಹೀಗಾಗಿ, ಟುನಿಶಿಯದಲ್ಲಿರುವ ಇಟೇಲಿಯಾನರ ಸಹಾನುಭೂತಿಯನ್ನು ಫೆಸಿಸ್ಮ್ ಮೆಲ್ಲನೆ ಪಡೆಯಿತು. ಫೆಸಿಸ್ಟರ ಈ ಹಿಡಿತವು ಇಂದಿಗೂ ಶಿಥಿಲವಾದುದಿಲ್ಲ. ಫೆಸಿಸ್ಟ್ ವಿರೋಧಿಗಳು ಇಲ್ಲವೆಂದಿಲ್ಲ,—ಮಾತ್ರ ಕಡಮೆ.

ಟುನಿಶಿಯಾ ಶಾಲೆಗಳಲ್ಲೂ ಫೆಸಿಸ್ಮ್ ಮನೆ ಮಾಡುತ್ತಿದೆ. ಇಂದು ಅಲ್ಲಿ ಕಲಿಯುವ 14,000 ಇಟೇಲಿಯನ್ ಮಕ್ಕಳು ಫ್ರೆಂಚ್ ಅಧಿಕಾರಿಗಳ ಕೈಕೆಳಗಿರುವವರಾದರೂ ಅವರಿಗೆ ಒಳ್ಳೇ ಇಟೇಲಿಯನರಾಗಲು ಕಲಿಸಲಾಗುತ್ತಿದೆ. ಆದರೂ ಫ್ರೆಂಚರೂ ಇಟೇಲಿಯನರೂ ಇಲ್ಲಿ ಇಂದಿಗೂ ಸಮಾನತೆಯ ಭಾವದಿಂದಲೇ ಇದ್ದಾರೆ. ಟುನಿಶಿಯದಲ್ಲಿರುವ ಇಟೇಲಿಯನ್ ಯೆಹೂದ್ಯರು ಕೂಡ (ಇವರು ಹೆಚ್ಚು ಮಂದಿ ಇರುವರು; ತುಂಬ ವರ್ಚಸ್ಸು ಉಳ್ಳವರು) ಸಮತಾಭಾವದಿಂದಲೆ ಇರುವರು.



ಟುನಿಶಿಯಾದಲ್ಲಿನ ಮೆಟ್ಲೊಯಿ ಎಂಬಲ್ಲಿರುವ ಸೈಂದುಪ್ಪು ಗನಿಗಳಲ್ಲಿ ಒಂದು ಲಘು ದೂಮಶಕಟ. ಈ ಗನಿಗಳನ್ನು ಫಿಲಿಪ್ಪೆ ಥೊಮುಸನೆಂಬವನು ಕಂಡುಹಿಡಿದನು. 1881 ರಿಂದಿತ್ತ ಫ್ರೆಂಚರು ಇದನ್ನು ಲಾಭಕರವಾಗಿ ಉಪಯೋಗಿಸಿಕೊಂಡು ಬಂದಿರುವರು.

ಟುನಿಶಿಯದಲ್ಲಿರುವ ಇಟೇಲಿಯಾನರನ್ನುಳಿದರೆ, ಅರಬ್ ಪ್ರಜೆಗಳ ವಿಷಯ ಗಮನಿಸಬೇಕು. ಈ ಅರಬರು ಟುನಿಶಿಯದಲ್ಲ ಅತ್ಯಧಿಕ ಸಂಖ್ಯೆಯಿಂದಿದ್ದಾರೆ. ಇವೆರು ಮೊದಲು ಬಹುವಿಧದ ತಂಟೆಯನ್ನು ಕೊಟ್ಟವರು. ಈ ಅರಬರ ಅತೃಪ್ತಿಯು ಇಟೇಲಿಗೆ ತಮ್ಮ ವಾಂಛಿತ ಫಲಸಿದ್ಧಿಗಾಗಿ ಸ್ವರ್ಣ ಸುಸಂಧಿಯಾಗಿ ತೋರಿದೆ.

[ಟುನಿಶಿಯವು ಉತ್ತರ ಆಫ್ರಿಕದಲ್ಲಿ ಫ್ರೆಂಚರ ಆಡಳಿತದಲ್ಲಿರುವ ಚಿಕ್ಕ ದೇಶ; 48,300 ಚದರ ಮೈಲು ವಿಸ್ತೀರ್ಣ. ಟುನಿಸ್ ಎಂಬುದು ರಾಜಧಾನಿ.]

ಒಂದು ಶತಮಾನದ ಹಿಂದಿನ ಭಾರತ.

೧೯೩೯ರಲ್ಲಿ ನಡೆದ ಕೆಲಕೆಲವು ವಿಶೇಷ ಘಟನೆಗಳು.

ಆ ಕಾಲದ ಜನರಿಗೆ ಶಾಂತಿಯಿತ್ತೇ?

> ಇದು ೧೯೩೯ನೇ ಇಸವಿ. ೧೮೩೯ರಲ್ಲಿ, ಸರಿಯಾಗಿ ಇಂದಿಗೆ ನೂರು ವರುಷಗಳ ಹಿಂದೆ, ಭಾರತದಲ್ಲೇನು ನಡೆಯಿತು? ಆಗ ನಡೆದ ಕೆಲವು ವಿಶೇಷ ಘಟನೆಗಳನ್ನು ಈಗ ನಡೆಯುತ್ತಿರುವ ಘಟನೆಗಳಿಗೆ ಹೋಲಿಸಬಹುದೇ?
>
> ಬ್ರಿಟಿಷರ ಅಫಘಾನ ದಂಡಯಾತ್ರೆ—ಸಿಂಧದ ಅಮೀರರ ಪರಾಭವ—ದೋಸ್ತ ಮಹಮ್ಮದನ ಪಲಾಯನ—ಜೋಧಪುರ ರಾಣಿ ಮತ್ತು ಬರೋಡೆ ಮಹಾರಾಜರು ಬ್ರಿಟಿಷರೊಡನೆ ಮಾಡಿದ ಸಂಧಿಗಳನ್ನು ಮುರಿದು ಕೊನೆಗೊಪ್ಪಿದ ರೀತಿ—ಕೊಚ್ಚಿಯ ಸಿಂಹಾಸನದಲ್ಲಿ ಹೊಸ ಅರಸರು—ಇದನ್ನೆಲ್ಲ ಈ ಲೇಖದಲ್ಲಿ ವಿವರಿಸಲಾಗಿದೆ.

ಇಂದಿಗೆ ನೂರು ವರುಷಗಳ ಹಿಂದೆ, ೧೮೩೯ರಲ್ಲಿ, ಭಾರತದಲ್ಲಿ ನಡೆದ ಕೆಲ ಕೆಲವು ಘಟನೆಗಳು ಹಲವು ವಿಧದಲ್ಲಿ ಸ್ಮರಣೀಯವಾಗಿವೆ.

ಲೊರ್ಡ್ ಆಕ್ಲೆಂಡರವರು ಆಗ ಹಿಂದೂದೇಶದ ಗವರ್ನರ್–ಜನರಲರಾಗಿದ್ದರು. ರಷ್ಯನ್ ವಿರೋಧದ ಧೋರಣೆ ಆವರದ್ದಾಗಿದ್ದಿತು. ಅಫಘಾನಸ್ಥಾನದ ಮೇಲೆ ದಂಡೆತ್ತಿ ಹೋಗಲು ಲೊರ್ಡ್ ಆಕ್ಲೆಂಡರವರು ಒಂದು ಸೈನ್ಯವನ್ನು ಸಿದ್ಧಪಡಿಸಿದ್ದರು. ಆ ಸೈನ್ಯಕ್ಕೆ "ಸಿಂಧ ಸೈನ್ಯ"ವೆಂದು ಹೆಸರನ್ನೂ ಇರಿಸಿದರು. ಅಫಘಾನಿಸ್ಥಾನವನ್ನು ಗೆದ್ದು, ಅಲ್ಲಿ ಆಗ ಆಳುತ್ತಿದ್ದ ದೋಸ್ತ್ ಮಹಮ್ಮದನನ್ನು ಪದಚ್ಯುತನನ್ನಾಗಿ ಮಾಡಿ, ಆ ದೇಶದಿಂದ ತಲೆ ಮರೆಸಿ ಬಂದಿದ್ದ ಮಾಜಿ ಅರಸು ಶಹಾಸೂಜನನ್ನು ಅಫಘಾನ್ ಸಿಂಹಾಸನದಲ್ಲಿ ಕುಳ್ಳಿರಿಸಿ, ಅಫಘಾನಿಸ್ಥಾನವನ್ನು [illegible] ಒಂದು ಜೇಲಿಯಂತೆ ಇರಿಸುವ ಹಂಚಿಕೆಯಾಗಿತ್ತು.

"ಸಿಂಧ ಸೈನ್ಯ"ದಲ್ಲಿ ಎರಡು ಬಗೆಯ ದಳಗಳಿದ್ದವು. ಒಂದು ಬೊಂಬಾಯಿ ದಳವೆಂದೂ ಮತ್ತೊಂದು ಬಂಗಾಳ ದಳವೆಂದೂ ನಾಮಕರಣ ಮಾಡಲ್ಪಟ್ಟಿತ್ತು. ಬೋಲನ್ ಕಣಿವೆಯ ಮೂಲಕ ಈ ಸೈನ್ಯಗಳು ಸಾಗಿ ಅಫಘಾನಿಸ್ಥಾನವನ್ನು ಜಯಿಸಬೇಕಾಗಿತ್ತು.



ಬೋಲನ್ ಕಣಿವೆ. 1839ರ ಫೆಬ್ರವರಿ ತಿಂಗಳಲ್ಲಿ ಬ್ರಿಟಿಷ ಬಂಗಾಳ ದಳವು ಬಲು ಕಷ್ಟದಿಂದ ಈ ಕಣಿವೆಯನ್ನು ದಾಟಿ ಅಫಘಾನಿಸ್ಥಾನಕ್ಕೆ [illegible].

೧೮೩೯ನೇ ಹೊಸ ವರ್ಷಾರಂಭದಂದು ಬಂಗಾಳ ದಳವು ಸಿಂಧದ ಅಮೀರರ ಪ್ರದೇಶವನ್ನು ಪ್ರವೇಶಿಸಿತು. ಬ್ರಿಟಿಶರಿಗೂ ಸಿಂಧದ ಅಮೀರರಿಗೂ ಕೆಲವರ್ಷಗಳ ಹಿಂದೆ ಆದ ಒಪ್ಪಂದವನ್ನು ಈ ಬಲಾತ್ಕಾರದ ಪ್ರವೇಶದಿಂದ ಮುರಿದಂತಾಯಿತು. ಅಮೀರನು ನಿಷೇಧಿಸಿದನು. ಬಂಗಾಳ ದಳವು ಈ ನಿಷೇಧವನ್ನು ಅಲಕ್ಷಿಸಿ ಪ್ರವೇಶಿಸಿ, ಸಿಂಧದ ನಡುವಣ ಬಕ್ಕರ್ ಎಂಬ ಸುಭದ್ರ ಕೋಟೆಗಳಿರುವ ದ್ವೀಪವನ್ನು ಹಿಡಿಯಿತು.

ಸಿಂಧದ ಮುಖ್ಯ ಅಮೀರನು ದುಃಖಬಾಷ್ಪಗಳಿಂದ ಬಕ್ಕರನ್ನು ಬ್ರಿಟಿಷರಿಗೊಪ್ಪಿಸಿಕೊಡುವ ಸಂಧಿಗೆ ಸಹಿಹಾಕಿದನು. ಅದನ್ನು ಸಹಿಸಿನಿಶಿ ಬ್ರಿಟಿಷರಿಗೊಪ್ಪಿಸಿಕೊಡಬೇಕಾದರೆ ಆ ವೃದ್ಧ ಅಮೀರನು 'ಇದು ನನ್ನ ದೇಶದ ಹೃದಯದಂತಿದ್ದ ದ್ವೀಪ. ಅದರ ಪಾಲನೆಯಲ್ಲಿ ನನ್ನ ಗೌರವವಿದೆ. ಅದನ್ನು ಕೊಟ್ಟರೆ ನನ್ನ ಕುಟುಂಬಕ್ಕೂ ಮಕ್ಕಳಿಗೂ ನನ್ನ ಮೇಲೆ ವಿಶ್ವಾಸತಪ್ಪುವುದು." ಎಂದನು.

"ಸಿಂಧಸೈನ್ಯ'ದ ಬೊಂಬಾಯಿ ದಳವು ಇಷ್ಟರೊಳಗೆ ಹೈದರಾಬಾದ್ (ಸಿಂಧ) ವರೆಗೆ ಸಾಗಿ, ಇನ್ನು ಮುಂದರಿಯಲಾರದೆ ನಿಂತಿತ್ತು. ಅದರ ಮುಖ್ಯ ಸೇನಾನಿಯಾದ ಸರ್ ಜೊನ್‌ಕೀನನು ಅಮೀರರ ಅಪ್ಪಣೆಯಿಲ್ಲದೆ ಅಷ್ಟಕ್ಕೂ ಮುಂದರಿದು ಬಹು ಕಷ್ಟದಲ್ಲಿ ಕ್ರಮಿಸಿ ಹೋದ ನಂತರ ಹೈದರಾಬಾದಿನಿಂದ ೨೦ ಮೈಲು ದೂರದಲ್ಲಿ ತಳವೂರಿ ನಿಂತನು. ಈ ತಟಸ್ಥದಳಕ್ಕೆ ಬೆಂಬಲ ಕೊಡುವ ಸಲುವಾಗಿ ಬಕ್ಕರದಲ್ಲಿ ನಿಲ್ಲಿಸಿದ್ದ ಶಹಸೂಜನ ಸೈನಿಕರೂ ಬಂಗಾಳ ದಳವೂ ಸಿಂಧ ನದಿಯ ಮೂಲಕ ಅತ್ತ ತೆರಳಿದವು.

ಸೈನ್ಯಗಳಿಗೆ ಹೈದರಾಬಾದ್ ಕಡೆಗೆ ತೆರಳುವುದೆಂದರೆ ಮಹದಾನಂದವಾಗಿದ್ದಿತು. ಏಕೆಂದರೆ ಹೈದರಾಬಾದ್ ನಗರವು ಆ ಕಾಲದಲ್ಲಿ ಬಲು ಶ್ರೀಮಂತ ನಗರವಾಗಿತ್ತು. ಅಲ್ಲಿಗೆ ತೆರಳಿ ಕೊಳ್ಳೆ ಹೊಡೆದರೆ ಹತ್ತು ಕೋಟಿ ರೂಪಾಯಿಯಷ್ಟಾದರೂ ಸೊತ್ತು ದೊರೆಯಬಹುದೆಂದು ಅವರಿಗೆ ಆ ಆನಂದ.

ಆದರೆ ಆ ದುರಾಶೆಯು ಸೈನ್ಯಗಳು ಹೈದರಾಬಾದು ನಗರದ ಹೊರಗೆ ಬಂದು ತಳವೂರಿದಾಗ ಅವರ ಆಸೆಯೆಲ್ಲಾ ಮಣ್ಣುಪಾಲಾಯಿತು. ಬ್ರಿಟಿಷ ಸೈನ್ಯಗಳ ಗುಡುಗುಡಾಟಕ್ಕೆ ಅಮೀರರು ಹೆದರಿದರೇನೊ, ಅವರನ್ನೆದುರಿಸುವ ಇಚ್ಛೆಯಿಲ್ಲದೆ ಒಪ್ಪಂದ ಮಾಡಿಕೊಂಡರು.

೧೮೩೯ನೇ ಫೆಬ್ರವರಿ ತಾ. ೫ರಲ್ಲಿ "ಸಿಂಧ ಸೈನ್ಯ"ದ ಎರಡು ದಳಗಳು ಪುನಃ ಪೃಥಕ್ ಆಗಿ, ಬಂಗಾಳ ದಳವು ಬಕ್ಕರ್ ಕಡೆಗೂ ಬೊಂಬಾಯಿ ದಳವು ಸಿಂಧ ನದಿಯ ಮೂಲಕ ಮೇಲ್ಭಾಗಕ್ಕೂ ಮುಂದುವರಿದುವು.

ಫೆಬ್ರವರಿ ತಾ. ೨೦ರಲ್ಲಿ ಬಂಗಾಳ ದಳವು ಬೋಲನ್ ಕಣಿವೆಯ ಸಮೀಪಕ್ಕೆ ಬಂದವು. ಈ ಭಯಂಕರ ಕಣಿವೆಯ ೧೫೦ ಮೈಲುಗಳನ್ನು ಸೈನ್ಯವು ಬಲು ಕಷ್ಟದಿಂದ ದಾಟಿತು. ಇಷ್ಟನ್ನು ದಾಟುವಾಗ ಸೈನ್ಯದ ನೂರಾರು ಕತ್ತೆಗಳೂ ಕುದುರೆಗಳೂ, ಒಂಟೆಗಳೂ ಸತ್ತು ಬಿದ್ದುವು.

೧೮೩೯ನೇ ಎಪ್ರಿಲ್ ತಾ. ೬ರಲ್ಲಿ ಬಂಗಾಳ ಮತ್ತು ಬೊಂಬಯಿ ದಳಗಳು ಕ್ವೆಟ್ಟಾದಲ್ಲಿ ಒಟ್ಟಾದುವು. ಅಲ್ಲಿಂದ ಇವೆರಡೂ ದಳಗಳು, ಕೋಜಕ್ ಕಣಿವೆಯನ್ನು ದಾಟಿ ಅಫಘಾನಿಸ್ಥಾನಕ್ಕೆ ತಲಪಬೇಕು! ಕೋಜಕ್ ಕಣಿವೆಯನ್ನು ದಾಟುವುದೆಂದರೆ ದೊಡ್ಡ ಸಾಹಸಕಾರ್ಯವನ್ನು ಮಾಡಿದಂತೆ. [illegible] ಆಗ ಆ ದಳದ ಒಬ್ಬ ಆಫೀಸರನಾದ [illegible] ಈ ಸೈನ್ಯವು ನೀರಿಗಾಗಿ ಪಟ್ಟ ಕಷ್ಟಗಳನ್ನು ಕರುಣಾಜನಕವಾಗಿ ವರ್ಣಿಸಿದ್ದಾನೆ. ಒಂದೆರಡು ದಿನಗಳ ತನಕ ನೀರೇ ದೊರೆಯದೆ ಸೈನ್ಯವು [illegible] ಮುಂದರಿದಿದೆ. ಕೊನೆಗೆ ಚಿಕ್ಕ ಕೊಳಕು ಕೆರೆಗಳನ್ನು ಕಂಡು [ಅವುಗಳಲ್ಲೂ ನೀರು ಧಾರಾಳಹರಿಯುತ್ತಿಲ್ಲ!] ಆ ನೀರಿನಿಂದಲೇ ದಾಹವಡಗಿಸಿಕೊಂಡುದುಂಟು.

ಹಗಲಲ್ಲಿ ನೀರು ದೊರೆಯದಿದ್ದಾಗ ಸೈನ್ಯಗಳು ಬೇಗನೆ ರಾತ್ರಿ ಬಂದರೆ ಸ್ವಲ್ಪ ತಂಪು ದೊರೆತೀತೆಂದು ಆಶಿಸುವುವು. ಆ ನಂತರ ಬೇಕಾದರೆ ನೀರಿನ ಆಸರೆಗಳುಳ್ಳ ಸ್ಥಳಗಳಿಗೆ ಮುಂದರಿಯಬಹುದೆಂದು ಬೆಳಕನ್ನು ಹಾರೈಸುವುವು. ದಿನಕ್ಕೆ ಹತ್ತು ಮೈಲುಗಳಿಗಿಂತ ಹೆಚ್ಚು ಮುಂದರಿಯಲಾಗುವುದಿಲ್ಲ! ಬಾಯಾರಿ, ದಣಿದು ಕುದುರೆಗಳು ಬಿದ್ದು ಚಡಪಡಿಸುತ್ತಿದ್ದವು. ಪರರಾಜ್ಯಗಳನ್ನು ಕೊಳ್ಳೆ ಹೊಡೆವ ದಾಹಕ್ಕೂ ಈ ದಾಹಕ್ಕೂ ಎಂತಹ ಗಂಟು! ಚತುಷ್ಪಾದ ಪ್ರಾಣಿಗಳಿಗೂ ಮಾನವರಿಗೂ ಈ ಬಗೆಯ ಸಂತಾಪಕೊಟ್ಟಾದರೂ ಒಂದು ರಾಜ್ಯವನ್ನು ಬ್ರಿಟಿಷರು ಗೆಲ್ಲುವರು! ಹೀಗೇ ಎರಡು ದಿನಗಳ ತನಕ ಮುಂದರಿದಾಗ ಒಂದು ಅಂದವಾದ ಕೆರೆಯು ಅವರ ಕಣ್ಣಿಗೆ ಬಿತ್ತು. ಸೈನ್ಯಗಳೂ ಕುದುರೆಗಳೂ ಹುಚ್ಚರಂತೆ ಅದರ ಕಡೆನೋಡಿ ನೀರು ಕುಡಿದು ಆನಂದಪಟ್ಟವು.

ಎಪ್ರಿಲ್ ಸುಮಾರಿಗೆ ಬ್ರಿಟಿಷ ಸೈನ್ಯವು ಕಂದಹಾರಕ್ಕೆ ತಲಪಿತು. ಶಹಸೂಜನು ಆ ನಗರವನ್ನು ಯಾವ ವಿರೋಧವೂ ಇಲ್ಲದೆ ಪ್ರವೇಶಿಸಿ ಅಫಘಾನಿಸ್ಥಾನದ ಅಮೀರನೆಂದು ಸಾರಿದನು. ಆದರೆ ಅಮೀರನ ಮೆರವಣಿಗೆಯನ್ನು ಕಂದಹಾರದ ಜನರೆಲ್ಲಾ ಬಹಿಷ್ಕರಿಸಿದರು. **ರಸ್ತೆಯಲ್ಲಿ ಒಬ್ಬನಾದರೂ ಈ ಮೆರವಣಿಗೆಯನ್ನು ನೋಡಲು ನಿಂತಿರಲಿಲ್ಲವಂತೆ.**

ಎರಡು ತಿಂಗಳನ್ನು ಸೈನ್ಯವು ಕಂದಹಾರದಲ್ಲಿ ಕಳೆದು ಕಾಬೂಲ ದಾರಿ ಹಿಡಿಯಿತು. ದಾರಿಯಲ್ಲಿ ಇವರಿಗೆ ಪ್ರಖ್ಯಾತ ಘಜ್ನಿಕೋಟೆ ದೊರೆಯಿತು. ಇದನ್ನು ವಶಪಡಿಸಿಕೊಳ್ಳಬೇಕಾಗಿ ಕಂಡುಬಂತು. ಈ ಕೋಟೆಯನ್ನು ಹೇಗೆ ಪ್ರವೇಶಿಸಲೆಂದು ಸೈನ್ಯವು ಚಿಂತಿಸುತ್ತಿರುವಾಗ ದೋಸ್ತ್ ಮಹಮ್ಮದನ ದಾಯಾದಿ ಮಗನೊಬ್ಬನು ಬಂದು, ಸೈನ್ಯಕ್ಕೆ ಕೋಟೆಯ ವಿಷಯ ರಹಸ್ಯಗಳನ್ನು ತಿಳಿಸಿದನು. ಬ್ರಿಟಿಷರು ಸಿಡಿಮದ್ದನ್ನು ಕೋಟೆಯ ದ್ವಾರದಲ್ಲಿರಿಸಿ ದ್ವಾರವನ್ನೊಡೆದರು. ಸೈನ್ಯವು ರಣಗರ್ಜನೆಯಿಂದ ಕೋಟೆಯನ್ನು ಪ್ರವೇಶಿಸಿತು. ಕೈಕೈಹತ್ತಿ ಕಾದಾಟ ನಡೆಯಿತು. ಕಿಲ್ಲೆದಾರನೂ ಅವನ ಹಲವು ಸೈನಿಕರೂ ಸೆರೆಯಾಳಾದರು.

ಅತ್ತ ಮತ್ತೊಂದು ಬ್ರಿಟಿಷ್ ದಳವು ಕರ್ನಲ್ ವಾರ್ಟನ್ ವೇಡರೆಂಬವರ ನಾಯಕತ್ವದಲ್ಲಿ ಖೈಬರ್‌ಪಾಸ್ ಕಣಿವೆಯ ಮೂಲಕ ಅಫಘಾನಿಸ್ಥಾನವನ್ನು ಪ್ರವೇಶಿಸಿತು. ಬಲಾತ್ಕಾರದಿಂದ ಸಿಂಹಾಸನವನ್ನು ಕಿತ್ತುಕೊಂಡು ತನ್ನ ಅಧೀನ ವಿರಿಸಿಕೊಂಡಿದ್ದ ಅಫಘಾನಿಸ್ಥಾನದ ಅಮೀರ ದೋಸ್ತ್ ಮಹಮ್ಮದನು, ಕಾಬೂಲಿನ ಎರಡೂ ಕಡೆಗಳಿಂದ ಸೈನ್ಯವು ಏರಿಬರುವುದೆಂದು ತಿಳಿದು ಕಾದಾಟಕ್ಕೆ ಸಿದ್ಧನಾದರೂ, ಕೊನೆಗೆ ಅಧೀರನಾಗಿ,—ಯಾವ ಸಂಧಿ ಪ್ರಸ್ತಾಪಕ್ಕೂ ಬರಲಾಗದೆ— ೧೮೩೯ನೇ ಆಗೋಸ್ತು ತಾ. ೨ರಲ್ಲಿ ಕಾಬೂಲಿನಿಂದ ಪಲಾಯನ ಮಾಡಿದನು. ಶಹಾಸೂಜನು ಕಾಬೂಲನ್ನು ಪ್ರವೇಶಿಸಿ, ಬ್ರಿಟಿಷ್ ಮತ್ತು ಹಿಂದೀ ಸೈನ್ಯದ ಸಹಾಯದಿಂದ ರಾಜ್ಯಭಾರವಾರಂಭಿಸಿದನು.

ಶಹಾಸೂಜನ ರಕ್ಷಣೆಗೂ ಘಜ್ನಿ ಮೊದಲಾದ ಕೋಟೆಗಳ ಸುರಕ್ಷಿತತೆಗೂ ೧೦,೦೦೦ ಸೈನಿಕರನ್ನಿರಿಸಿ, ಉಳಿದ 'ಸಿಂಧ ಸೈನ್ಯ'ವು ಪುನಃ ಹಿಂದೂದೇಶಕ್ಕೆ ಬಂತು.

೧೮೩೯ರಲ್ಲಿ ಏಡನ್ ನಗರವು ಬ್ರಿಟಿಷರ ವಶವಾಯಿತು. ಬ್ರಿಟಿಷರ ಎರಡು ಯುದ್ಧ ನಾವೆಗಳೂ ಈಸ್ಟ್ ಇಂಡಿಯಾ ಕಂಪೆನಿಯ ಐದು ನಾವೆಗಳೂ ಸೈನಿಕರನ್ನತ್ತ ಒಯ್ದು, ಏಡನನ್ನು ವಶಪಡಿಸಿಕೊಂಡುವು. ಏಡನ್ ಬಂದರದಿಂದ ಅರಬರು ಬಂದೂಕು ಹಾರಿಸಿ ಕಾಳಗಕೊಟ್ಟರೂ, ಅವರ ಕೋವಿ ಮದ್ದು ಮುಗಿದೋ ಮತ್ತೆ ಹೇಗೋ ಅರಬರು ಹಿಂತೆಗೆದರು. ಬ್ರಿಟಿಷ್ ಸೈನಿಕರು ದಡದಲ್ಲಿಳಿದು ಏಡನ್ ಕೊಳ್ಳೆಯನ್ನು ಪೂರ್ಣಗೊಳಿಸಿದರು.

೧೮೩೯ರಲ್ಲಿ ಹಿಂದೂದೇಶದ ಪೂರ್ವ ಕರಾವಳಿಯ ಮೇಲೆ ಸಮುದ್ರದಿಂದ ಪ್ರವಾಹದ ಮಹಾತೆರೆಗಳು ಬಂದು ಒಳ ಭಾಗಕ್ಕೆ ಹೊಡೆದು, ಕರಾವಳಿ ಪ್ರದೇಶದಲ್ಲಿರುವ ಸಾವಿರಾರು ಜನರು ಜಲಸಮಾಧಿ ಹೊಂದಿದರು; ಅನೇಕ ಹಡಗುಗಳು ನೆಲಕ್ಕೆ ಬಂದು ಹೊಡೆದುವು. **ಕೊರಿಂಗಾ ಎಂಬ ಒಂದೇ ಪ್ರದೇಶದಲ್ಲಿ ೨೦,೦೦೦ ಜನರು ಈ ಮಹಾ ಪ್ರವಾಹದಿಂದ ಜಲಸಮಾಧಿ ಹೊಂದಿದರೆಂದು ಹೇಳಲಾಗಿದೆ.**



ಇದು ಖೈಬರ್‌ಪಾಸ್ ಕಣಿವೆಯ ಒಂದು ದೃಶ್ಯ.
ಖೈಬರ್‌ಪಾಸ್ ಕಣಿವೆಯಲ್ಲಿ ಇದು ಅತ್ಯಂತ ಅಗಲಕಿರಿದಾದ ರಸ್ತೆ.

೧೮೩೯ರಲ್ಲಿ ನಮ್ಮ ದೇಶೀ ಸಂಸ್ಥಾನಗಳಲ್ಲೇನು ನಡೆಯಿತು? ಜೋಧಪುರದ ರಾಣಾಮಾನಸಿಂಗನು ಈಸ್ಟ್ ಇಂಡಿಯಾ ಕಂಪೆನಿಗೆ ಕಪ್ಪಕಾಣಿಕೆಗಳನ್ನು ಕೊಡಲೊಲ್ಲನೆಂದನು. ಕಪ್ಪಕಾಣಿಕೆಗಳ ಹಳೆ ಬಾಕಿಯನ್ನು ಸಲ್ಲಿಸಲಾಗುವುದಿಲ್ಲನೆಂದು ಖಂಡತುಂಡವಾಗಿ ಹೇಳಿಬಿಟ್ಟನು. ಕೂಡಲೆ ಕರ್ನಲ್ ಸದರ್‌ಲೆಂಡ್ ಎಂಬವರ ನೇತೃತ್ವದಲ್ಲೊಂದು ಸೈನ್ಯವು ಅತ್ತ ಕಳಿಸಲ್ಪಟ್ಟಿತು. ಈ ಕರ್ನಲನು ಅತ್ತಹೋಗಿ ಜೋಧಪುರದಲ್ಲಿ ಐದು ತಿಂಗಳು ನಿಂತು, ರಾಜನ ಮೇಲೆ ಒಬ್ಬ ಬ್ರಿಟಿಷ್ ಏಜಂಟನನ್ನು ನೇಮಿಸಿ, ಹಳೆ ಸಾಲಗಳನ್ನು ತೀರಿಸಲು ಏರ್ಪಾಡು ಹೇಳಿಕೊಟ್ಟನು.

ಇದೇ ವರುಷ ಬಡೋದೆ ಮಹಾರಾಜರೂ ಬ್ರಿಟಿಷರೊಡನೆ ಮಾಡಿದ ಒಂದು ಒಪ್ಪಂದವನ್ನು ಗೌರವಿಸಲು ನಿರಾಕರಿಸಿದರು. ಇದಕ್ಕೆ ಶಿಕ್ಷೆಯೆಂದು ಬಡೋದೆ ಸಂಸ್ಥಾನದ ಪೆಟ್ಲಾಡ್ ಎಂಬ ಒಂದು ಮಹತ್ವದ ಜಿಲ್ಲೆಯನ್ನು ಜಗಲಿಗೆ ಹಾಕಿಕೊಂಡರು. ಮುಂದೇನು ನಡೆಯುತಿತ್ತೋ,—ಅಷ್ಟರಲ್ಲಿ ಬ್ರಿಟಿಷರ ಸುದೈವದಿಂದ, ಬಡೋದೆ ರಾಣನ ದುರ್ದೈವದಿಂದ ಆತನು ಮೊದಲಿನ ಸಂಧಿಯನ್ನು ಗೌರವಿಸುವೆನೆಂದು ಮಾತುಕೊಟ್ಟು, ಪೆಟ್ಲಾಡನ್ನು ತಿರುಗಿ ಪಡೆದನು.

ಬಡೋದೆಯ ನಂತರ ಬ್ರಿಟಿಷರಿಗೆ ಆ ವರ್ಷ ತೊಂದರೆ ಕೊಟ್ಟ ಸಂಸ್ಥಾನವೆಂದರೆ ಕೊಚ್ಚಿ. ಕೊಚ್ಚಿ ಮಹಾರಾಜನು ದುರಾಡಳಿತೆ ನಡೆಸುತ್ತಿದ್ದನಂತೆ. ಬ್ರಿಟಿಷರು ಅವನಿಗೆ ಎಚ್ಚರ ಹೇಳಿ ಹೇಳಿ, ಕೊನೆಗೆ ಅವನನ್ನು ಸಿಂಹಾಸನದಿಂದ ಕೆಳಗಿಳಿಸಿ ಕೊಚ್ಚಿಯನ್ನಾಳುವಂತೆ ಇಂಗ್ಲಿಷನೊಬ್ಬನನ್ನು ನೇಮಿಸಿದರು.


೧೮೩೯ನೇ ಸಪ್ಟೆಂಬರ ತಾ. ೫ರಲ್ಲಿ ಸತಾರಾ ಸಂಸ್ಥಾನದ ರಾಜಾ ಪ್ರತಾಪಸಿಂಘನು ಬ್ರಿಟಿಷರಿಗೆದುರಾಗಿ ಒಳಸಂಚು ನಡೆಸುತ್ತಿರುವನೆಂದು ಅವನನ್ನು ಸಿಂಹಾಸನಭ್ರಷ್ಟನನ್ನಾಗಿ ಮಾಡಿ ಬ್ರಿಟಿಷರು ಅದೇ ಕೈಯಿಂದ ಅವನ ಸಹೋದರ ಅಪ್ಪಾಸಾಹೇಬನನ್ನು ಪ್ರತಿಷ್ಠಿಸಿದರು. ಪ್ರತಾಪಸಿಂಘನು ಕಾಶಿಗೊಯ್ಯಲ್ಪಟ್ಟು, ಅಲ್ಲಿ ಒಂದು ವಿಧದಲ್ಲಿ ಬಂಧಿಯಾಗಿದ್ದನು. ನ್ಯಾಯಖಾತೆಯ ಮೂಲಕ ಪ್ರತಾಪಸಿಂಘನು ಈಸ್ಟ್ ಇಂಡಿಯಾ ಕಂಪೆನಿಯ ವಿರುದ್ಧ ತುಂಬಾ ಹೋರಾಡಿದನು. ಕೋರ್ಟ್ ಒಫ್ ಡೈರೆಕ್ಟರರ ಮುಂದೆ ಪ್ರತಾಪಸಿಂಘನು ಆರು ಮಂದಿ ಯುರೋಪಿಯನರನ್ನು ಕೂಡ ತನ್ನ ಪರವಾಗಿ ವಾದಿಸಲು ಕಳಿಸಿದನು. ಆದರೆ ಫಲವೇನೂ ಇಲ್ಲ. ಪ್ರತಾಪಸಿಂಘನು ಈಸ್ಟ್ ಇಂಡಿಯಾ ಕಂಪೆನಿಯಿಂದ ಪೆನ್ಶನ್ ಪಡೆದೇ ಕಾಲಕಳೆದನು.

೧೮೩೯ನೇ ವರುಷದಲ್ಲಿ ಹಲವು ಸಂಸ್ಥಾನಗಳಲ್ಲಿ ಹೊಸ ರಾಜರು, ಬಾದ್ಶಹರು ಸಿಂಹಾಸನವೇರಿದರು. ೧೮೩೯ನೇ ಮೇ ತಾ. ೩೧ರಲ್ಲಿ ಹೊಸ ಗವರ್ನರರು ಬಂದರು. ಸಿಲೋನ್ ಮತ್ತು ಪೋರ್ಚುಗೀಸ್ ಇಂಡಿಯದಲ್ಲೂ ಹೊಸ ಗವರ್ನರರು ಬಂದರು.

೧೮೩೯ರಲ್ಲಿ ಎರಡು ಮಹಾವ್ಯಕ್ತಿಗಳು ಕಣ್ಮರೆಯಾದುವು. ಪಂಜಾಬ ಸಿಂಹನೆಂಬ ಖ್ಯಾತಿಯಿದ್ದ ರಣಜಿತಸಿಂಘನು (ಸಿಕ್ಖರ ಮಹಾರಾಜನು) ಜೂನ್ ತಾ. ೨೭ಲ್ಲಿ ಪಕ್ಷವಾತದಿಂದ ಕಾಲವಾದನು. ಇದಕ್ಕೆ ಹತ್ತು ದಿನಗಳ ಹಿಂದೆ, ಲೊಡ್ಡ್ ವಿಲಿಯಮ್ ಬೆಂಟೆಂಕನು ಗ್ಲಾಸ್ಗೋ ನಗರದಲ್ಲಿ ಕಾಲವಾಗಿದ್ದನು. (ಲೊರ್ಡ್ ವಿಲಿಯಮ್ ಬೆಂಟೆಂಕನು ೧೮೨೮ರಿಂದ ೧೮೩೫ರ ವರೆಗೆ ಹಿಂದೂದೇಶದ ಗವರ್ನರ್ ಜನರಲನಾಗಿದ್ದನು.)

ಬೊಂಬಾಯಿಯ ಪ್ರಸಿದ್ಧ ಉದ್ಯಮಿ ಜಾಮ್‌ಶೇಡ್ಜಿ ನಸ್ಸರ್‌ವಾಂಜಿ ತಾತಾವರು ೧೮೩೯ರಲ್ಲಿ, ಸುರತಿನಿಂದ ೨೦ ಮೈಲು ದೂರವಿರುವ ನವಸಾರಿ ಎಂಬಲ್ಲಿ ಜನಿಸಿದರು. ಇವರೇ ಮುಂದೆ ಜಾಮ್ಶೇದ್‌ಪುರದ ತಾತಾ ಕಬ್ಬಿಣ ಕಾರ್ಖಾನೆಯ ಸ್ಥಾಪನೆಗೆ ಮೂಲ ಕಾರಣರಾದರು.

ಹೀಗೆ ಸ್ಮರಣೀಯ ಘಟನೆಗಳಿಂದ ಆ ೧೮೩೯ನೇ ವರುಷವು ಮುಗಿಯಿತು. ಇಂದು, ೧೯೩೯ರಲ್ಲಿ, ಸಂಸ್ಥಾನಗಳಲ್ಲಿನ ಚಳವಳ, ದಬ್ಬಾಳಿಕೆ, ಒಂದು ಸಂಸ್ಥಾನದಲ್ಲಿ ಪೊಲಿಟಿಕಲ್ ಏಜಂಟರ ಕೊಲೆ, ಫೆಡರೇಶನಿಗೆ ಸರ್ವತ್ರಿಕ ವಿರೋಧ—ಇವೆಲ್ಲ ನಡೆದೇ ಇವೆ. ೧೮೩೯ನೇ ವರುಷವು ಹೇಗೆ ತುಫಾನಿನಲ್ಲೇ ಉದಯಿಸಿ ಅಸ್ತಮಿಸಿತೋ ಅದೇ ರೀತಿ ೧೯೩೯ನೇ ವರುಷದ ಉದಯವೂ ಆಗಿದೆ. ಆದರೆ ಅಂದಿಗೂ ಇಂದಿಗೂ ಭೇದವಿಷ್ಟು: ಸಿಂಧದ ಆಮೀರರು ಈಗಿಲ್ಲ.



ಪ್ರೊಫೆಸರ್ ಎಸ್. ರಾಧಾಕೃಷ್ಣನ್.
ಹಿಂದೂದೇಶದ ಇಂದಿನ ಪ್ರಸಿದ್ಧ ಮೇಧಾವಿಗಳಲ್ಲೊಬ್ಬರು.

ಜ್ಞಾನದ ರಮ್ಯಕತೆ

(ಪ್ರೊಫೆಸರ್ ಡಿ. ಎಸ್. ಡಿ. ಗೊರ್ಡನ್, ಅವರ ಆಂಗ್ಲದಿಂದ)

ಹೊಸ ಶಾಸ್ತ್ರದ ಅಸ್ತಿವಾರಗಳಿಗೆ ಪ್ರಪಂಚವು ಹಿಂದುಗಳ ಪ್ರಗತಿಗೆ ಋಣಬದ್ಧವಾಗಿರುವುದು. ಹಿಂದೂದೇಶದ ದಿವ್ಯವಾದ ದಾನವೇ ಅಂತಹದಾಗಿರುವಾಗ ಎಲ್ಲಾ ಉಪಯೋಗಕರವಾದ ತಿಳಿವಳಿಕೆಯು ನಮಗೆ ಪಶ್ಚಿಮದಿಂದ ಬರುತ್ತದೆಂದು ಈಗಲೂ ವಿದ್ಯಾವಂತರು ಕೂಡ ಭಾವಿಸಿಕೊಳ್ಳುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಕೆಲವು ಐತಿಹಾಸಿಕ ಪರಿಸ್ಥಿತಿಗಳ ಸಂಬಂಧದಿಂದ ಹಿಂದೂದೇಶವು ಆಶಾದಾಯಕವಾದ ತನ್ನ ಹಳೇ ಅಸ್ತಿವಾರಗಳ ಮೇಲೆ ಯೋಗ್ಯ ಕಟ್ಟಡವನ್ನು ನಿರ್ಮಿಸಲಾಗುವುದಿಲ್ಲವೆಂಬುದೇ ವಿಷದಾಂತವಾದ ಸಂಗತಿಯು.


"ಕಲೆಯು ವಿಶಾಲವಾಗಿದೆ; ಕಾಲವು ಕಳೆದುಹೋಗುತ್ತಿದೆ" ಎಂಬುದು ಒಂದು ಹಳೇ ನಾಣ್ಣುಡಿ. ಆದರೆ ಮನುಷ್ಯನ ಗೇಣುದ್ದ ಜೀವಮಾನದಲ್ಲಿ, ಯಾರೊಬ್ಬನಿಂದಲೂ ಜ್ಞಾನದ ಬಲು ಚಿಕ್ಕ ಅಂಶಕ್ಕಿಂತಲೂ ಹೆಚ್ಚಿನದನ್ನು ಪರಿಚಯ ಮಾಡಿಕೊಳ್ಳಲು ಆಶಿಸಲಾಗದಷ್ಟು ಪ್ರಚಂಡ ವೇಗದಲ್ಲಿ ಜ್ಞಾನವು ಬೆಳೆಯುತ್ತಿದೆ ಎಂಬುದು ಈ ದಿನಗಳಲ್ಲಿ ಮುಖ್ಯತಃ ನಿಜವಾದುದು. ಆದರೂ ಕೆಲವೇ ಶತಮಾನಗಳ ಹಿಂದೆ ವಿದ್ಯಮಾನವು ಹೀಗಿರಲಿಲ್ಲ. ಆಗಿನ ದಿವಸಗಳಲ್ಲಿ ಚೆನ್ನಾಗಿ ಅಂತ ಸುಶಿಕ್ಷಿತರು ತಿಳಿಯಬೇಕಾದುದೆಲ್ಲವನ್ನು ತಿಳಿದಿದ್ದರೆಂದು ಭಾವಿಸಲ್ಪಡುತ್ತಿದ್ದರು. ಈ ವಿಷಯದಲ್ಲಿ ಪುರಾತನ ಗ್ರೀಸಿನಲ್ಲಿನ ಪ್ಲೇಟೊ ಮತ್ತು ಅರಿಸ್ಟಾಟಲ್, ಮಧ್ಯಯುಗಗಳಲ್ಲಿನ ಥೋಮಸ್ ಎಕ್ವಿನಾಸ್ ಮತ್ತು ಡನ್ಸ್ ಸ್ಕೋಟಸ್ ಮತ್ತು ೧೮ನೇ ಶತಮಾನದ ಫ್ರೆಂಚ್ ವಿಶ್ವಕೋಶಕಾರನು--ಇವರೆಲ್ಲರೂ ಉದಾಹರಣೆಗಳಾಗಿದ್ದಾರೆ. ಆದರೆ ಈಗಿನ ದಿವಸಗಳಲ್ಲಿ ಜ್ಞಾನವು ನಿರಂತರವೂ ಸಂಚಯವಾಗುತ್ತಿದೆ ಮತ್ತು ಎಡೆಬಿಡದೆ ಮುಂದುವರಿಯುವ ಪ್ರವಾಹದ ಸ್ಥಿತಿಯಲ್ಲಿದೆ. ಇದರಲ್ಲಿ ಕೊನೆಯ ಮಾತಿಲ್ಲ; ಇತ್ತೀಚೆಗಿನ ಮಾತುಗಳು ಮಾತ್ರವೇ ಇವೆ.

ಪ್ರಜ್ಞಾಶಾಲಿಗಳಿಂದ ತುಂಬಿ ತುಳುಕುವ ಈ ಯುಗದಲ್ಲಿ ವಾಸಿಸಿರುತ್ತ, ಆಧುನಿಕ ಜನಾಂಗವು ಜ್ಞಾನವನ್ನು ಬಹು ಪೂಜ್ಯವೆಂದೂ ಆಶ್ಚರ್ಯಕರವೆಂದೂ ಎಣಿಸುವುದನ್ನು ಕೊನೆಗಾಣಿಸಬೇಕೆಂದು ತಿಳಿಯುವುದು ಸ್ವಾಭಾವಿಕವು. ಜನಾಂಗವು ತನ್ನ ರಚನೆಗಾಗಿ ಶತಮಾನಗಳ ಪರ್ಯಂತ ಪರಿಶ್ರಮಿಸಿ ಪಡೆದ ದುಡಿಮೆಯ ವಿಚಾರವನ್ನು ಲೆಕ್ಕಿಸದೆ ನಿಶ್ಚಿತ ಕ್ರಮದಲ್ಲಿ ವಿದ್ಯಾಭ್ಯಾಸವು ಸಾಗುವಂತೆ ನೋಡಬೇಕು. ಆದರೆ ಹಿಂದಿನ ಕಾಲದಲ್ಲಿ ಇದು ಹೀಗಿರಲಿಲ್ಲ. ಆಗ ಜ್ಞಾನವು ಪವಿತ್ರವಾಗಿರುತ್ತಿತ್ತು. ಅದರೊಳಗೆ ಎಲ್ಲರನ್ನೂ ಪ್ರವೇಶಿಸಲು ಬಿಡುತ್ತಿದ್ದಿಲ್ಲ; ಇದು ಬುದ್ಧಿಶಾಲಿಗಳಾಗಿ ದೇವರಿಂದ ಆರಿಸಲ್ಪಟ್ಟವರಾದ ಕೆಲವೇ ಮಾನವರ ಹಕ್ಕಾಗಿದ್ದಿತು. ಜ್ಞಾನದ ಸುತ್ತಲೂ ವೈಚಿತ್ರ್ಯವೂ ಗೂಢತತ್ವದ ತೇಜೋಮಂಡಲವೂ ಇದೆ. ಅದೃಶ್ಯಲೋಕಗಳೊಂದಿಗೆ ಸಂಪರ್ಕವನ್ನು ಬೆಳೆಸುವ ಮತ್ತು ಜ್ಞಾನದ ಅತಿ ಪ್ರಾಚೀನ ಸಂರಕ್ಷಕರಾದ ಪುರೋಹಿತರೂ, ಚಿಕಿತ್ಸಕರೂ, ಭವಿಷ್ಯವಾದಿಗಳೂ ಅಮಾನುಷ ವ್ಯಕ್ತಿಗಳೆಂದು ಪ್ರಾಯಶಃ ಗಣಿಸಲ್ಪಡುತ್ತಿದ್ದರು.

ಎರಡು ದೊಡ್ಡ ಗ್ರಂಥಗಳು

ಮನುಷ್ಯನ ಜ್ಞಾನಸಿಂಹಾನಾರೋಹಣದ ಕಥೆಯು ಕಾದಂಬರಿಯಂತೆ ಓದಲ್ಪಡುತ್ತದೆ; ಈ ಕಾದಂಬರಿಯು ಪ್ರೊಫೆಸರ್ ಲೆನ್ಸ್‌ಲೊಟ್ ಹೊಗ್‌ಬೆನ್ ಇವರ "ಮಿಲಿಯಾಂತರರಿಗೆ ಗಣಿತವೂ" (Mathematics for the Million) "ನಾಗರಿಕನಿಗೆ ವಿಜ್ಞಾನವೂ" (Science for the Citizen) ಎಂಬ ಹೆಸರುಳ್ಳ ಇತ್ತೀಚೆಗಿನ ಎರಡು ಗ್ರಂಥಗಳಲ್ಲಿ ವಿವರವಾಗಿಯೂ ಹೃದ್ಗತವಾಗಿಯೂ ತರಲ್ಪಟ್ಟಂತೆ ಬೇರೆ ಎಲ್ಲಿಯೂ ಪ್ರಾಯಶಃ ತರಲ್ಪಟ್ಟಿಲ್ಲ. ಈ ಗ್ರಂಥಗಳಲ್ಲಿ ಗ್ರಂಥಕರ್ತರ ಮುಖ್ಯ ಉದ್ದೇಶವು ಜ್ಞಾನವನ್ನು ಜನಪ್ರೀತವನ್ನಾಗಿ ಮಾಡುವುದು. ಆದಾಗ್ಯೂ ತನ್ನ ಕೆಲಸದ ಭರದಲ್ಲಿ ಮನುಷ್ಯನ ಜ್ಞಾನಾನ್ವೇಷಣವು ದಿವ್ಯವಾದ ಸಾಹಸಕೃತ್ಯವಾಗಿದೆ ಎಂದು ಧಾರಾಳವಾಗಿ ಸ್ಪಷ್ಟಪಡಿಸಿದರು. ಆದರೆ ದುರದೃಷ್ಟವಶಾತ್, ಈ ದಿನಗಳಲ್ಲಿ ಕೆಲವೇ ಮನುಷ್ಯರು ತಮ್ಮ ಜೀವನದಲ್ಲಿ ಈ ಸಾಹಸಕೃತ್ಯದ ಚೈತನ್ಯವನ್ನು ಕಂಡುಕೊಳ್ಳುವರು ಅಥವಾ ಶೋಧನೆಯ ರೋಮಾಂಚನವನ್ನು ಅನುಭವಿಸುವರು. ಅವರು ಕಳೆದು ಹೋದ ಕಾಲಕ್ಕೆ ಸಾಕಷ್ಟು ಕೃತಜ್ಞತೆಯನ್ನು ಸಹ ಸಲ್ಲಿಸುವುದಾಗಲೀ, ಜ್ಞಾನವು ತಮ್ಮ ಜನ್ಮಸಿದ್ಧ ಹಕ್ಕೆಂದಾಗಲೀ ಮಾನಿಸುವಂತೆ ತೋರಿಸುವುದಿಲ್ಲ. ಏಕೆಂದರೆ ಓದಲಾತುರಪಡುವವರೆಲ್ಲರಿಗೂ ಜ್ಞಾನವು ಒಂದು ತೆರೆದಿಡಲ್ಪಟ್ಟ ಪುಸ್ತಕದಂತಿದೆ.

ಆದಕಾರಣ ಮಾನವವಂಶದ ಬಾಲ್ಯಾವಸ್ಥೆಯಲ್ಲಿರುವ ವಸ್ತುಸ್ಥಿತಿಗಳನ್ನು ನಾವೆಲ್ಲರೂ ಜ್ಞಾಪಕಮಾಡಿ ಅವುಗಳನ್ನು ವರ್ತಮಾನ ಕಾಲದೊಂದಿಗೆ ತಾರತಮ್ಯ ನೋಡುವುದು ಒಳ್ಳೆಯದು. ಉದಾಹರಣೆಗಾಗಿ ಪುರಾತನ ಗ್ರೀಸಿನ ಮತ್ತು ರೋಮಿನ ಬಲು ಪ್ರಖ್ಯಾತಿಗೊಂಡ ತತ್ವಜ್ಞಾನಿಗಳಿಗಿಂತಲೂ ಈಗಿನ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯು ಬಹಳ ಹೆಚ್ಚಿಗೆ ತಿಳಿದಿರುವನೆಂಬ ವಸ್ತುಸ್ಥಿತಿಯು ಎಷ್ಟು ಮಂದಿಗೆ ಗೊತ್ತಿದೆ? ಒಬ್ಬನು ವಿಕಾರವಾದ ರೋಮನ್ ಸಂಖ್ಯಾವಾಚಕಗಳನ್ನು ನೋಡಿದರೆ ಆ ಜನರಿಗೆ ಈ ಪದ್ಧತಿಯಿಂದ ಶೀಘ್ರವಾಗಿಯೂ ಸುಲಭವಾಗಿಯೂ ಎಣಿಕೆಮಾಡುವುದು ಹೇಗೆ ಸಾಧ್ಯವಾಯಿತೆಂದು ಅವನು ಆಶ್ಚರ್ಯಗೊಳ್ಳುವನು. ಗ್ರೀಕರು ನಿಸ್ಸಂಶಯವಾಗಿ ದೊಡ್ಡ ಚಿತ್ರಕಾರರೂ ವಿಚಾರಿಗಳೂ ಆಗಿದ್ದರು ಮತ್ತು ರೋಮನರು ನಿಸ್ಸಂದೇಹವಾಗಿ ದೊಡ್ಡ ಧರ್ಮಶಾಸ್ತ್ರಕಾರರೂ, ಮನುಷ್ಯನನ್ನು ಆಳುವವರೂ ಆಗಿದ್ದರು. ಆದರೆ ಗಣಿತ ರಾಜ್ಯದಲ್ಲಿ ಅವರು ಗಣನೀಯರಲ್ಲ.



ಕೆ. ಕೃಷ್ಣಮೂರ್ತಿ.
ಭಾರತದ ಮಹಾ ಜ್ಞಾನಿಗಳಲ್ಲಿ ಇವರೊಬ್ಬರು ಅಮೇರಿಕದ ತನಕವೂ ತೆರಳಿ ಅಲ್ಲಿದ್ದ ತಮ್ಮ ತತ್ವವನ್ನು ಅಲ್ಲಿ ಬಹು ಜನರಿಗೆ ಪಸರಿಸಿದ್ದಾರೆ. ಮಾನವ ಜೀವನವನ್ನು ನೋಡುವ ಇವರ ಕ್ರಮ, ತರ್ಕಸರಣಿ ಇವು ಹಲವರನ್ನು ಆಕರ್ಷಿಸಿವೆ.

ಗಣಿತವೂ ಬೀಜಗಣಿತವೂ

ಎಲ್ಲಾ ಯುಗಗಳಲ್ಲಿನ ಕುಶಾಗ್ರ ಬುದ್ಧಿಶಾಲಿಗಳು ಗಣಿತದಲ್ಲಿ ತೊಡಕುಪಡಿಸುವ ಗಹನವಿಚಾರಗಳಲ್ಲಿ ತಮ್ಮನ್ನು ತಾವೇ ಪ್ರದರ್ಶನ ಮಾಡಿರುವರು ಎಂಬುದು ಕೆಲವು ಮಾನಸಿಕ ಸಮರ್ಥನೆಗಳಿಂದ ಆಗಾಗ್ಗೆ ಕಂಠೋಕ್ತಗೊಳಿಸಬಹುದು. ಇದು ಹೀಗಾದರೆ ಪುರಾತನ ಹಿಂದುಗಳು ನಿಸ್ಸಂದೇಹವಾಗಿ ಪ್ರಪಂಚದಲ್ಲಿ ಜಲೋ ಮೇಧಾವಿಗಳಾಗಿದ್ದರು. ಏಕೆಂದರೆ ಆಧುನಿಕ ಗಣಿತಶಾಸ್ತ್ರದ ಬುನಾದಿ ಕಲ್ಲುಗಳು ಅವರಿಂದಲೇ ಇಡಲ್ಪಟ್ಟವು. ಇತ್ತೀಚೆಗಿನ ವರೆಗೆ ನಾಗರಿಕ ಪ್ರಪಂಚವು ಇಂದು ಉಪಯೋಗಿಸುವ ಸಂಖ್ಯಾವಾಚಕಗಳು ಮೂಲದಲ್ಲಿ ಅರಬಸ್ಥಾನದ್ದೆಂದು ತಪ್ಪಾಗಿ ಭಾವಿಸಲ್ಪಟ್ಟಿತ್ತು. ಆದರೆ ಪುರಾತನ ಅರಬರು ಇವುಗಳನ್ನು ಹಿಂದೂಸ್ಥಾನದಿಂದ ಸಾಲ ತಂದು ಯೂರೋಪಿಗೆ ದತ್ತಕೊಟ್ಟರು. ಅಂಕೆಗಳಿಗೆ ಸ್ಥಾನಬೆಲೆಯನ್ನು ಕೊಡುವುದರಿಂದ ಒಬ್ಬನಿಗೆ ಸುಲಭವಾಗಿಯೂ ಚತುರತೆಯಿಂದಲೂ ಶೀಘ್ರವಾಗಿಯೂ ಎಣಿಕೆಮಾಡಲಿಕ್ಕೆ ಅನುಕೂಲ ಮಾಡಿಕೊಡುವುದೇ ಹಿಂದೂ ಸಂಖ್ಯಾವಾಚಕಗಳ ಕೌತುಕವು. ಈ ಪದ್ಧತಿಯಲ್ಲಿ ಪ್ರಾಯಶಃ ಬಹಳ ಆಶ್ಚರ್ಯಕರವಾದ ಶೋಧನೆಯು ಸೊನ್ನೆಯಾಗಿರುತ್ತದೆ. ಈ ಸೊನ್ನೆಯು ಶೂನ್ಯಭಾವವನ್ನು ಸಂಖ್ಯಾವಾಚಕದಲ್ಲಿ ತೋರಿಸಿಕೊಡಲು ಮಾಡಿದ ಉತ್ಕೃಷ್ಟವಾದ ಪ್ರಯತ್ನವು ಆಗಿರುತ್ತದೆ. ಆದರೆ ಸೊನ್ನೆಯು ಶೂನ್ಯತೆಯನ್ನೂ ಸ್ವಲ್ಪವನ್ನೂ ಸೂಚಿಸುತ್ತ

ದೆಂಬುದೇ ಅದರ ಒಂದು ಸೊಗಸು. ಒಂಟಿಯಾಗಿರುವಾಗ ಶೂನ್ಯತೆಯನ್ನೂ ಇತರ ಅಂಕೆಗಳ ಸಮೂಹದಲ್ಲಿರುವಾಗ ಸ್ವಲ್ಪವನ್ನೂ ಅದು ಸೂಚಿಸುತ್ತದೆ.

ಆದರೆ ಈ ಅಭ್ಯಾಸಕ್ಷೇತ್ರದಲ್ಲಿ ಕೂಡ ಪುರಾತನ ಹಿಂದುಗಳು ಅಪೌರ್ವ್ಯವಾದ ಕೆಲಸವನ್ನು ಮಾಡಿದ್ದಾರೆ. ಅಗಾಧಶ್ರದ್ಧೆಯುಳ್ಳ ಹಿಂದುಗಳು ಪೂರ್ವಕಾಲದಿಂದಲೂ ತಾವು ದೈವಗಳೆಂದು ಪೂಜಿಸಿದ ಸ್ವರ್ಗೀಯ ಬಿಂಬಗಳ ಸ್ಥಾನಗಳನ್ನನುಸರಿಸಿ ತಮ್ಮ ಧಾರ್ಮಿಕ ಹಬ್ಬ ಹುಣ್ಣಿಮೆಗಳನ್ನೂ ವೃತೋಪವಾಸಗಳನ್ನೂ ನಿಶ್ಚಯಿಸಿ ಒಂದು ಪಂಚಾಂಗರಚನೆಯ ಆವಶ್ಯಕತೆಯನ್ನು ಅನುಭವಿಸಿದರು. ಮಾನವ ಜೀವನ ಮತ್ತು ಪ್ರಾರಬ್ಧಕರ್ಮಗಳ ಮೇಲೆ ಗ್ರಹ ಮತ್ತು ನಕ್ಷತ್ರಗಳ ಪ್ರಭಾವಗಳಿವೆ ಎಂಬುದನ್ನು ನಿಶ್ಚಯಿಸಲು ಯತ್ನಿಸುತ್ತಿದ್ದ ಜ್ಯೋತಿಶ್ಯಾಸ್ತ್ರವೇ ಈ ಅಭ್ಯಾಸದ ಒಂದು ಉತ್ಪನ್ನವು. ಗ್ರಹನಕ್ಷತ್ರಗಳ ಪ್ರಭಾವವು ಮನುಷ್ಯನ ಮೇಲಿದೆ ಎಂಬ ಈ ನಂಬಿಕೆ ಹೆಚ್ಚು ಕಡಿಮೆ ಮಾನವ ಚರಿತ್ರೆಯಷ್ಟೆ ಪುರಾತನವಾಗಿದೆ. Bertrand Russelsನು ತನ್ನ ಇತ್ತೀಚೆಗಿನ ಪುಸ್ತಕಗಳೊಂದರಲ್ಲಿ ಈ ವಿಷಯವನ್ನು ತೋರಿಸಿದ್ದಾನೆ. ಯಾವುದೆಂದರೆ, ತನ್ನಿಂದ ಬಲುದೂರದಲ್ಲಿರುವ ಮತ್ತು ಸೌಮ್ಯವಾಗಿ ಒತ್ತಟ್ಟಿಗಿರುವ ಸ್ವರ್ಗೀಯ ಬಿಂಬಗಳು ಮನುಷ್ಯನು ತಾನಾಗಿಯೇ ಹುಡುಕಿ ತೆಗೆದು ವ್ಯವಸ್ಥಾಪಿಸಿದ ಕ್ರಮಗಳಿಗೆ ವಿಧೇಯವಾಗಿ ನಡೆಯುವುದೆಂಬ ತತ್ವವೇ ಮನುಷ್ಯನಲ್ಲಿ ತನ್ನ ಪ್ರಾಮುಖ್ಯತೆಯ ಮತ್ತು ಅಧಿಕಾರದ ತಿಳಿವಳಿಕೆಯು ಅವನನ್ನು ಬಲವತ್ತಾಗಿ ಖಚಿತಗೊಳಿಸಿದಷ್ಟು ಬೇರಾವುದೂ ಮಾಡಲಾಗದು. ಕ್ಷುಲ್ಲಕನಂತೆ ತೋರುವ ಮನುಷ್ಯನು ತನ್ನ ಬಂಡಿಯನ್ನು ನಕ್ಷತ್ರಗಳಿಗೆ ಗಂಟು ಹಾಕಲು ಸಮರ್ಥನೆಂಬುದನ್ನು ಕೇಳಲು ಆಶ್ಚರ್ಯ ಮತ್ತು ಹೆಗ್ಗಳಿಕೆಯ ವಿಷಯವಾಗಿರುತ್ತದೆ.

ರೇಖಾಗಣಿತವೂ ಖಗೋಳ ಶಾಸ್ತ್ರವೂ

ಗಣಿತ ಮತ್ತು ಬೀಜಗಣಿತ—ಇವುಗಳ ಹುಟ್ಟುವಿಕೆಯು ಹಿಂದೂದೇಶಕ್ಕೆ ಋಣಬದ್ಧವಾಗಿರುವುದಾದರೆ ರೇಖಾಗಣಿತವೂ ಶಾಸ್ತ್ರವೆನ್ನಿಸಿಕೊಂಡ ತನ್ನ ಸ್ಥಾಪನೆಗೆ ನಾಯ್ಲ್ ಕಣಿವೆಯ ಪುರಾತನ ನಿವಾಸಿಕರಿಗೆ ಋಣಬದ್ಧವಾಗಿರುವುದೆಂದು ತೋರುವುದು. ಈಜಿಪ್ಟಿನ ಪಾದ್ರಿಗಳು ಯಾವಾಗಲೂ ಬದಲಾವಣೆ ಹೊಂದುವ ನೀಲ ನದಿಯ ತ್ರಿಕೋಣ ಭೂಮಿಯ ಸರಿಯಾದ ಅಳೆಯುವಿಕೆಯ ಆವಶ್ಯಕತೆಯನ್ನು ಅನುಭವಿಸಿದುದರಿಂದ, ತ್ರಿಕೋಣ, ಚಚ್ಚೌಕ, ಆಯತಗಳಂಥ ವಸ್ತುಗಳ ಲಕ್ಷಣಗಳನ್ನು ಕಲಿಯುವುದಕ್ಕೆ ತೊಡಗಿದರು. ಅವರು ಹೇಗೆ ಹೆಚ್ಚು ಹೆಚ್ಚಾಗಿ ಕಲಿತರೋ ಅಷ್ಟು ಹೆಚ್ಚು ಹೆಚ್ಚಾಗಿ ಅವರಲ್ಲಿ ಆಶ್ಚರ್ಯವು ಬೆಳೆಯಿತು. ಸಾಮಾನ್ಯವಾಗಿ ತಮ್ಮ ಶೋಧನೆಗಳನ್ನು ಪೈಶಾಚಿಕ ಪ್ರಭಾವಗಳೆಂದು ತಿಳಿಯದ ಹಾಗೆ ಅವರು ಸ್ವಲ್ಪ ಸಮಯದ ತನಕ ತಮ್ಮ ತಿಳುವಳಿಕೆಗೆ ಬೀಗ ಮುದ್ರೆಯನ್ನೊತ್ತಿದರು. ಆದರೆ ಬಲು ಬೇಗನೆ ಅವರು ಧೈರ್ಯಗೊಂಡು ತಮ್ಮ ಶಾಸ್ತ್ರವನ್ನು ಲೌಕಿಕ ಚಮತ್ಕಾರಗಳನ್ನು ಅಳೆಯುವುದರಲ್ಲಿ ಮಾತ್ರವೇ ಅಲ್ಲದೆ ಸ್ವರ್ಗೀಯ ಬಿಂಬಗಳನ್ನೂ ಅಳೆಯಲು ಸಹ ತೊಡಗಿದರು. ಇದರ ಪರಿಣಾಮವೇ ತ್ರಿಕೋಣಮಿತಿ (Trigonometrey) ಮತ್ತು ಖಗೋಳ ಗಣಿತಗಳ ಹುಟ್ಟುವಿಕೆಯು. ಪ್ರಪಂಚದ ಶಾಶ್ವತವಾದ ಅದ್ಭುತಗಳಾಗಿರುವ ದೀರ್ಘವಾದ ಸೂಚ್ಯಗ್ರಸ್ತಂಭಗಳು [Pyramids] ಸಹ ಖಗೋಳ ಶಾಸ್ತ್ರದ ಮೂಲವನ್ನವಲಂಬಿಸಿ ರಚಿಸಿದುದಾಗಿದೆ ಎಂದು ತೋರುತ್ತದೆ.



'ಬರ್ಲಿನಿನಲ್ಲಿ ಭಾರತ'

ಜರ್ಮನಿಯ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ಈ ಪ್ರತಿಮೆಯ ಕಾರಂಜಿಯೊಂದಿದೆ. ನೋಡುವಾಗ ಹಿಂದೂ ದೇವತೆಯ ವಿಗ್ರಹದಂತೆ—ದಕ್ಷಿಣ ಭಾರತದ ಯಾವುದಾದರೊಂದು ದೇವಾಲಯದೊಳಗಿನ ಪ್ರತಿಮೆಯಂತೆ ತೋರುವುದು.

ಆದರ ಈ ಅಭ್ಯಾಸ ಕ್ಷೇತ್ರದಲ್ಲಿ ಕೂಡ ಪುರಾತನ ಹಿಂದುಗಳು ಅಪೌರ್ವ್ಯವಾದ ಕೆಲಸವನ್ನು ಮಾಡಿದ್ದಾರೆ. ಅಗಾಧ ಶ್ರದ್ಧೆಯುಳ್ಳ ಹಿಂದುಗಳು ಪೂರ್ವ ಕಾಲದಿಂದಲೂ ತಾವು ದೈವಗಳೆಂದು ಪೂಜಿಸಿದ ಸ್ವರ್ಗೀಯಬಿಂಬಗಳ ಸ್ಥಾನಗಳನ್ನನುಸರಿಸಿ ತಮ್ಮ ಧಾರ್ಮಿಕ ಹಬ್ಬ ಹುಣ್ಣಿಮೆಗಳನ್ನೂ ವ್ರತೋಪವಾಸಗಳನ್ನೂ ನಿಶ್ಚಯಿಸಿ ಒಂದು ಪಂಚಾಂಗ ರಚನೆಯ ಆವಶ್ಯಕತೆಯನ್ನು ಅನುಭವಿಸಿದರು. ಮಾನವ ಜೀವನ ಮತ್ತು ಪ್ರಾರಬ್ಧ ಕರ್ಮಗಳ ಮೇಲ ಗ್ರಹ ಮತ್ತು ನಕ್ಷತ್ರಗಳ ಪ್ರಭಾವಗಳಿವೆ ಎಂಬುದನ್ನು ನಿಶ್ಚಯಿಸಲು ಯತ್ನಿಸುತಿದ್ದ ಜ್ಯೋತಿಶಾಸ್ತ್ರವೇ ಈ ಅಭ್ಯಾಸದ ಒಂದು ಉತ್ಪನ್ನವು. ಗ್ರಹ ನಕ್ಷತ್ರಗಳ ಪ್ರಭಾವವು ಮನುಷ್ಯನ ಮೇಲಿದೆ ಎಂಬ ಈ ನಂಬಿಕೆ ಹೆಚ್ಚು ಕಡಿಮೆ ಮಾನವ ಚರಿತ್ರೆಯಷ್ಟೆ ಪುರಾತನವಾಗಿದೆ. Bertrand Russels ನು ತನ್ನ ಇತ್ತೀಚೆಗಿನ ಪುಸ್ತಕಗಳೊಂದರಲ್ಲಿ ಈ ವಿಷಯವನ್ನು ತೋರಿಸಿದ್ದಾನೆ. ಯಾವುದೆಂದರೆ, ತನ್ನಿಂದ ಬಲುದೂರದಲ್ಲಿರುವ ಮತ್ತು ಸೌಮ್ಯವಾಗಿ ಒತ್ತಟ್ಟಿಗಿರುವ ಸ್ವರ್ಗೀಯ ಬಿಂಬಗಳು ಮನುಷ್ಯನು ತಾನಾಗಿಯೇ ಹುಡುಕಿ ತೆಗೆದು ವ್ಯವಸ್ಥಾಪಿಸಿದ ಕ್ರಮಗಳಿಗೆ ವಿಧೇಯವಾಗಿ ನಡೆಯುವುವೆಂಬ ತತ್ವವೇ ಮನುಷ್ಯನಲ್ಲಿ ತನ್ನ ಪ್ರಾಮುಖ್ಯತೆಯ ಮತ್ತು ಅಧಿಕಾರದ ತಿಳಿವಳಿಕೆಯು ಅವನನ್ನು ಬಲವತ್ತಾಗಿ ಖಚಿತಗೊಳಿಸಿದಷ್ಟು ಬೇರಾವುದೂ ಮಾಡಲಾಗದು. ಕ್ಷುಲ್ಲಕನಂತೆ ತೋರುವ ಮನುಷ್ಯನು ತನ್ನ ಬಂಡಿಯನ್ನು ನಕ್ಷತ್ರಗಳಿಗೆ ಗಂಟು ಹಾಕಲು ಸಮರ್ಥನೆಂಬುದನ್ನು ಕೇಳಲು ಆಶ್ಚರ್ಯ ಮತ್ತು ಹೆಗ್ಗಳಿಕೆಯ ವಿಷಯವಾಗಿರುತ್ತದೆ.

ಬೋಧನಾ ಕ್ರಮಗಳು

ಶಾಲೆಯಲ್ಲಿ ಕಲಿಸುವ ಗಣಿತಪಾಠದಲ್ಲಿ ಈ ಆಶ್ಚರ್ಯಕರವಾದ ಕಥೆಯ ಸ್ವಲ್ಪಾಂಶವೂ ಸೇರಿರಲಿಕ್ಕಿಲ್ಲ. ಇಂದು ಕಲಿಸಲ್ಪಡುವ ಗಣಿತವು ಅನೇಕ ವಿದ್ಯಾರ್ಥಿಗಳಿಗೆ ಗುಮ್ಮನಂತಿರುವುದು. ಆದರೆ ಅದನ್ನು ಮನೋರಂಜಕವಾಗಿಯೂ ಪ್ರೀತಿಯೋಗ್ಯ ಅಭ್ಯಾಸವನ್ನಾಗಿಯೂ ಮಾಡಲು ಸುಲಭಸಾಧ್ಯವಿದೆ. ಕೆಲವು ಐತಿಹಾಸಿಕ ಭೂಮಿಕೆಯನ್ನು ಪರಿಚಯ ಮಾಡಿಸುವುದಲ್ಲದೆ ಪ್ರಶ್ನೆಗಳು ಜೀವನದ ವಸ್ತುಸ್ಥಿತಿಗಳಿಗೆ (Life's situations) ಸರಿಯಾಗಿ ಹೊಂದಿಕೊಳ್ಳ ತಕ್ಕುದು ಎಂಬುದೇ ಆವಶ್ಯಕವಾದ ಒಂದು ಸುಧಾರಣೆಯಾಗಿರುತ್ತದೆ. ಲೆಕ್ಕಗಳು ಮಿಥ್ಯವಾಗಿಯೂ ಕೃತ್ರಿಮವಾಗಿಯೂ ತೋರಬಾರದು. ಗಣಿತದಲ್ಲಿ ಇದು ಒಂದು ಪ್ರಧಾನವಾದ ವಿವೇಚನೆಯಾದರೆ ಬೀಜಗಣಿತದಲ್ಲಿ ಮತ್ತು ರೇಖಾಗಣಿತದಲ್ಲಿ ಮತ್ತಷ್ಟು ಜಾಗರೂಕರಾಗಿರಬೇಕು. ಈ ಪಾಠಗಳಲ್ಲಿ ತರಬೇತಿಯನ್ನು ಹೊಂದಿದ ಜನರು ಆಗಾಗ್ಗೆ ಮುಂದಿನ ಜೀವನದಲ್ಲಿನ ಲಾಭವನ್ನು ಕುರಿತು ವಿಚಾರಿಸುವರು ಮತ್ತು ಅವುಗಳ ವ್ಯವಹಾರಿಕ ಪ್ರಯೋಜನಗಳನ್ನು ಕುರಿತು ಪ್ರಶ್ನಿಸಲು ಆತುರಗೊಳ್ಳುವರು. ಈ ಶಾಸ್ತ್ರಗಳನ್ನು ಜೀವನದ ವಸ್ತುಸ್ಥಿತಿಗಳಿಗೆ ಹೊಂದಿಸಿಕೊಳ್ಳುವಂತೆ ಮಾಡಲು ಅವರಿಗೆಂದೂ ಕಲಿಸಿಕೊಡಲಿಲ್ಲ. ಈ ಎಲ್ಲಾ ಜ್ಞಾನವು ಮನುಷ್ಯನ ಆವಶ್ಯಕತೆಗಳಿಂದ ಪ್ರವರ್ಧಮಾನವಾಗಿದೆ, ಎಂಬುವನ್ನೂ ದಿನಂಪ್ರತಿಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅವನ್ನು ಪ್ರಯೋಗಿಸುತ್ತಾರೆಂಬುದನ್ನೂ ಅವರಿಗೆ ಮಂಪಟ್ಟಾಗುವಂತೆ ಮಾಡಲ್ಪಡಲಿಲ್ಲ.

ಶಾಸ್ತ್ರಗಳು

ಗಣಿತದ ಅಭಿವೃದ್ಧಿಯೇ ಸರಿಯಾದ ಜ್ಞಾನವನ್ನು ಪಡೆಯುವರೆ ಪ್ರಥಮ ಹೆಜ್ಜೆಯಾದರೆ, ಶಾಸ್ತ್ರಗಳ ಅಭಿವೃದ್ಧಿಯೇ ಮುಂದಿನ ಹೆಜ್ಜೆಯಾಗುವುದು. ಏಕೆಂದರೆ ಗಣಿತದ ಸಹಾಯವಿಲ್ಲದಿದ್ದರೆ ಪ್ರಕೃತಿಯ ಚಮತ್ಕಾರವನ್ನು ಸರಿಯಾಗಿ ತಿಳಿಯುವರೆ ಅಸಾಧ್ಯವಾಗುತ್ತದೆ. ಪ್ರಾಚೀನ ಜನರಿಗೆ ವಿಜ್ಞಾನಗಳನ್ನು ಅಭಿವೃದ್ಧಿಯ ಮಾಗಕ್ಕೆ ತರುವುದಕ್ಕೆ ಅವರಲ್ಲಿರುವ ಗಣಿತಶಾಸ್ತ್ರ ಸನ್ನಾಹದ ನ್ಯೂನತೆಗಳೇ ಒಂದು ತೊಡಕಾಗಿದೆ. ದೃಷ್ಟಾಂತಕ್ಕಾಗಿ ಇತರ ವಿಧಗಳ ಗೂಢವಿಚಾರಗಳಲ್ಲಿ ಬುದ್ಧಿವಂತರಾದ ಪುರಾತನ ಗ್ರೀಕ ಮತ್ತು ರೋಮನರು ಈ ಒಂದು ಕಠಿನ ತರದ ಕೊರತೆಯಿಂದಲೇ ಹೆಚ್ಚಿನ ಅಭ್ಯುದಯವನ್ನು ಹೊಂದಲಾಗಲಿಲ್ಲ. Syracusನ ಮುತ್ತಿಗೆಯನ್ನು ಹಾಕಿದ Archimedesನ ವಿಷಯವು ರೋಮನ್ ಯೋದ್ಧರಿಗೆ ಸಂಪೂರ್ಣ ದಿಗಿಲು ಉಂಟಾದುದು ಎಷ್ಟು ಕರುಣಾಜನಕವೊ ಅಷ್ಟೇ ಹಾಸ್ಯಕರವೂ ಆಗಿರುವುದು. ಅವರು ತಮ್ಮ ವಿನಾಶಕ್ಕಾಗಿ ಪ್ರಸಿದ್ಧ ವಿಜ್ಞಾನಿಗಳು ಏನನ್ನು ಶೋಧಿಸುವರೋ ಎಂಬುದನ್ನು ದೂರದರ್ಶಿಯಾಗಿ ನೋಡಲಿಲ್ಲ.

ವಿಜ್ಞಾನದ ವಿನಾಶಕರ ಶಕ್ತಿಯನ್ನು ನಾವು ಇನ್ನು ಮುಂದೆ ಪ್ರಶಂಸಿಸುವುವುದಿಲ್ಲವೆಂಬುದು ನಿಜ. ಆದರೆ ವಿದ್ಯಾರ್ಥಿಗಳ ಅವಗಾಹನೆಗೆ ತರಲಾಗುವ ಅನೇಕ ಶಾಂತಮಯ ವ್ಯಾಸಂಗಗಳಿರುತ್ತವೆ. ಪ್ರಕೃತದಲ್ಲಿ ಶಾಲಾವಿಜ್ಞಾನವು ಸಾಮಾನ್ಯ ಸೂತ್ರಗಳಿಗೇನೆ ಹೆಚ್ಚಿಗೆ ಸಂಬಂಧಿಸಿರುತ್ತದೆ. ಅದು ಜೀವನದ ಸಾಮಾನ್ಯ ಉದ್ದೇಶಗಳಲ್ಲಿ ಶಾಸ್ತ್ರೀಯ ಜ್ಞಾನದ ಉಪಯೋಗಕ್ಕೆ ಅತ್ಯಲ್ಪ ಗಮನವನ್ನು ಕೊಡುತ್ತದೆ. ಅಂತಹ ಪರಿಸ್ಥಿತಿಗಳಲ್ಲಿ ಆ ಪಾಠವನ್ನು ಕಲಿಯುವುದು

ಬೇಸರವಾದ ಕಾರ್ಯವಾಗಿ ಪರಿಣಮಿಸುವುದು. ಇದರ ನಿವಾರಣಾರ್ಥವಾಗಿ ಮಾನವ ರಸಿಕತೆಯ ಹೆಚ್ಚಿನ ಅಂಶವನ್ನು ಪರಿಚಯ ಮಾಡಿಸುವುದು ಆವಶ್ಯಕವಾಗಿದೆ. ಕಾಯಿದೆಗಳನ್ನು ಶೋಧಿಸಿದ ವಿಜ್ಞಾನಿಗಳ ಜೀವನಕ್ಕೆ ಅನ್ವಯಿಸುವ ಸಂಗತಿಗಳನ್ನು ಹೇಳುವುದು ಮಾತ್ರವಲ್ಲದೆ ಆ ಶೋಧನೆಗಳು ಯಾವ ಪರಿಸ್ಥಿತಿಗಳಲ್ಲಿ ನಡೆಯಿತೆಂಬುದನ್ನು ಹೇಳಬೇಕು. ಅಂತಹ ತಿಳುವಳಿಕೆಯು ಶಾಸ್ತ್ರೀಯ ಶಿಕ್ಷಣವನ್ನು ಸಂಪೂರ್ಣಗೊಳಿಸಿದಂತಾಗುವುದು ಮತ್ತು ವಿದ್ಯಾರ್ಥಿಗೆ ವಿಶಾಲವಾದ ಪ್ರಪಂಚವನ್ನು ತೆರೆದುಕೊಟ್ಟಂತಾಗುತ್ತದೆ. ಶಾಸ್ತ್ರೀಯ ಮನುಷ್ಯರು ತಮ್ಮ ದೃಷ್ಟಿಕ್ಷೇಪದಲ್ಲಿ ಸಂಕುಚಿತರಾಗಿರುವರು, ಅಲ್ಲದೆ ಸಾಮಾನ್ಯವಾಗಿ ಮಾನವ ವ್ಯಾಪಾರಗಳನ್ನು ಹೆಚ್ಚಾಗಿ ತಿಳಿದಿರುವುದಿಲ್ಲ ಎನ್ನುತ್ತಾರೆ. ಇದು ನಿಜವಾಗಿದ್ದರೆ ಅವರ ತರಬೇತಿಯು ಸ್ವಲ್ಪದರ ಪ್ರತಿಯೊಂದನ್ನು ತಿಳಿಯಲು ಉತ್ತೇಜಿಸುತ್ತದೆ, ಆದರೆ ಪ್ರತಿಯೊಂದರ ಸ್ವಲ್ಪವನ್ನು ತಿಳಿಯಲು ಉತ್ತೇಜಿಸುವುದಿಲ್ಲ ಎಂಬ ತತ್ವವು ವಿಶೇಷಿಸುತ್ತದೆ.

ಚರಿತ್ರೆಯೂ ಭೂಗೋಳವೂ

ಆದರೆ ಚರಿತ್ರೆ ಮತ್ತು ಭೂಗೋಳವು ಬೇರೊಂದು ವಿಧದ ಶಿಸ್ತನ್ನು ಮನಸ್ಸಿಗೆ ಕೊಡುತ್ತಿದೆ. ಇವುಗಳನ್ನು ಮನುಷ್ಯತ್ವದ ಸೊತ್ತುಗಳೆಂದೂ ಅಥವಾ ಮಾನವ ಜೀವನದ ಮತ್ತು ಆಲೋಚನೆಗೆ ಸಂಬಂಧಿಸಿದ ವಿಷಯವೆಂದೂ ಸಾಂಪ್ರದಾಯಕವಾಗಿದೆ. ಆದಕಾರಣ ಈ ಅಭ್ಯಾಸಗಳು ವಿದ್ಯಾರ್ಥಿಗಳಿಗೆ ಸ್ವಾಭಾವಿಕವಾಗಿ ಮನೋರಂಜಕವಾಗಿರುವುವು. ಮತ್ತು ಉಪಾಧ್ಯಾಯರ ಕರ್ತವ್ಯವು ಸುಲಭವಾಗುವುದೆಂದು ಊಹಿಸಲ್ಪಡಬಹುದು. ಆದರೆ ವಿದ್ಯಮಾನವು ಹೀಗಲ್ಲವೆಂದು ಶಾಲಾ ಕೋಣೆಯೊಳಗಿನ ಅನುಭವವು ಹೇಳಿಕೊಡುತ್ತದೆ. ಏಕೆಂದರೆ ವಿದ್ಯಾರ್ಥಿಗಳಲ್ಲಿ ಎಷ್ಟೊ ಒಳ್ಳೇ ಉತ್ಸಾಹವು ತುಂಬಿಕೊಂಡಿದ್ದರೂ ಅದನ್ನು ಪ್ರತಿಯೊಂದೆಡೆಯಲ್ಲಿರುವ ಕೆಟ್ಟ ಶಿಕ್ಷಣವು ನಿಸ್ತೇಜಗೊಳಿಸುತ್ತದೆ. ಚರಿತ್ರೆಯ ಪಾಠಗಳು ಯುದ್ಧ ಕಾಳಗಗಳ ಗಿಳಿಪಾಠ, ರಾಜರಾಣಿಯರ ಮರಣ ಪ್ರಕಟಣೆಗಿಂತ ಸ್ವಲ್ಪ ಹೆಚ್ಚಾಗಿರುವುದು. ಮತ್ತು ಭೂಗೋಳ ಪಾಠಗಳು ಹೆಸರುಗಳ ಸೂಚೀ ಪತ್ರಕ್ಕಿಂತ ಸ್ವಲ್ಪ ಹೆಚ್ಚಾಗಿರುವುವು. ಕೆಲವೇ ಉಪಾಧ್ಯಾಯರು ಚರಿತ್ರೆಯು ಕಳೆದ ಕಾಲದ ಸಾಹಸ ಕೃತ್ಯವೆಂದೂ ಭೂಗೋಳವು ವರ್ತಮಾನ ಕಾಲದ ಅನ್ವೇಷಣವೆಂದೂ ಊಹಿಸುವರು. ಅಲೆಕ್ಸಾಂಡರ್ ಪೋಪರು "ಮಾನವ ವರ್ಗವನ್ನು ತಕ್ಕ ರೀತಿಯಲ್ಲಿ ಅಭ್ಯಸಿಸುವುದೇ ಮಾನನೀಯವು" ಎಂದು ಹೇಳಿದರು. ಯಾಕಂದರೆ ಅನಾಗರಿಕತೆಯಿಂದ ಮುಂದರಿಸಿಕೊಂಡು ನಾಗರಿಕತೆಗೆ ಬಂದು ಮುಟ್ಟಿದ ಕ್ರಮವು ಮಾನವನಿಗೆ ಮನಸ್ಸಿಗೆ ಈಯುವುದಕ್ಕಿಂತ ಅತ್ಯಧಿಕವು ಆಹ್ಲಾದವು ಬೇರೆಯಾವುದೀಯುವುದು? ಪ್ರಪಂಚದ ಭಾಗಗಳಲ್ಲಿರುವ ಸಂಗಾತಿಗಳು ಹೇಗೆ ಜೀವಿಸುವರೆಂಬುದರ ಜ್ಞಾನವು ಮನಮುಟ್ಟುವಷ್ಟು ಚೆನ್ನಾಗಿ ಬೇರಾವುದು ಮನಮುಟ್ಟುವುದು? ವಿಶಾಲವಾಗಿ ಆಲೋಚಿಸಿದಲ್ಲಿ, ಅಂಥ ಅಭ್ಯಾಸವು ಉಪಯೋಗಕರವಾದ ಜ್ಞಾನದ ಸಾರವಾಗಿರುವುದು.

ಕೆಲವು ವರ್ಷಗಳ ಹಿಂದೆ ಎಚ್. ಜಿ. ವೆಲ್ಸ್‌ರು ತನ್ನ ದೊಡ್ಡ ಪುಸ್ತಕವನ್ನು ಬರೆದರು. ಅವರು ಬರೆದಿರುವ ಬಾಹ್ಯರೇಖೆಯ ಚರಿತ್ರೆಯಲ್ಲಿ ಒಬ್ಬನು ಸಾಮಾನ್ಯ ಚಾರಿತ್ರಕ ವಸ್ತುಗಳನ್ನು ಕಾಣುವನೆಂದು ಬರೆದಿದ್ದನು.

ಆದರೆ ನಿಜವಾದ ಪುಸ್ತಕವು ಇದಕ್ಕಿಂತ ತೀರ ಭಿನ್ನವಾಗಿದೆ. ಅದು ಹೆಚ್ಚು ಕಡಿಮೆ ಎಲ್ಲಾ ವಿಧದ ಜ್ಞಾನದ ಸಾರಾಂಶವಾಗಿರುತ್ತದೆ. ಎರಡೂ ದಡಗಳಲ್ಲೂ ಅನೇಕಾನೇಕ ಶಾಖೆಗಳಿಂದೊಡಗೂಡಿ ಯುಗಯುಗಾಂತರದಿಂದ ಪ್ರವಹಿಸುವ ನಿರ್ಝರಣಿಯ ಹೋಲಿಕೆಯನ್ನು ಗ್ರಂಥಕರ್ತರು ಊಹಿಸಿರುವರು. ಇವರ ಪುಸ್ತಕವನ್ನು ಲಕ್ಷ್ಯಪೂರ್ವಕವಾಗಿ ಓದುವುದೇ ಉದಾರವಾದ ವಿದ್ಯಾಭ್ಯಾಸವಾಗಿರುವುದು.

ಆದರೆ ಶಾಲೆಯಲ್ಲಿ ಇಂದು ಕಲಿಸಲ್ಪಡುವ ಚರಿತ್ರೆಯು ಸಂಕುಚಿತ ದೃಷ್ಟಿಯದು. ಸಾಮಾನ್ಯ ಜನರ ಅಭಿಪ್ರಾಯದಲ್ಲಿ ಮುಖ್ಯವೆಂದು ತೋರಿದ ಅಂಶಗಳ ಚತುರ್ಗಡಿಗೇನೇ ಬಂಧಿಸಲ್ಪಟ್ಟಿದೆ. ಅವುಗಳಲ್ಲಿ ಮಾತ್ರವೇ ಪರೀಕ್ಷೆಗಳಲ್ಲಿ ಪ್ರಶ್ನೆ ಕೇಳುವರು. ನಿಜವಾದ ಚರಿತ್ರೆಯು ರಾಜಕೀಯ, ಆರ್ಥಿಕ, ರಾಜಶಾಸನಾನುರೂಪದ ಘಟನಾವಳಿಗಳನ್ನು ಸಂಬಂಧಿಸುವುದರಲ್ಲಿ ಅಲ್ಲ; ಜನಸಾಮಾನ್ಯರ ಜೀವನದಲ್ಲಿ ಚರಿತ್ರೆಯು ಬೇರೂರಿಕೊಂಡಿದೆ ಎಂಬುದು ನಿರ್ಲಕ್ಷಿಸಲ್ಪಟ್ಟಿದೆ. ಇದನ್ನು ಸಾಕ್ಷಾತ್ಕರಿಸಲಾರದ ಒಬ್ಬ ವಿದ್ಯಾರ್ಥಿಯು ಚರಿತ್ರೆಯನ್ನೆ ಓದಿಲ್ಲ. ತಿರಿಗಿ ಶಾಲೆಯಲ್ಲಿ ಕಲಿಸಲ್ಪಡುವ ಚರಿತ್ರೆಯಲ್ಲಿ ಕೆಲವು ವೇಳೆ ಘಟನೆಗಳ ಮೇಲುಮೇಲಿನ ಸಂಗತಿಗಳನ್ನು ಹೇಳಿ ಮುಗಿಸಿಬಿಡುವರು. ಇಂಗ್ಲೆಂಡು ದೇಶದ ಚರಿತ್ರೆಯಲ್ಲಿ ಉದಾಹರಣೆಗಾಗಿ ಪ್ರಾಚೀನ ಕೆಲ್ಟಿಕ್ ನಿವಾಸಿಗಳು ಪೂಜಿಸುವ ಸ್ಥಳಗಳನ್ನು ಗುರುತಿಸುವುದಕ್ಕಾಗಿ ಶಿಲೆಗಳಿಂದ ಕೆಲವು ವಿಶಿಷ್ಠ ಕಟ್ಟಡಗಳನ್ನು ರಚಿಸಿದುದನ್ನು ಪಾಠಗಳಲ್ಲಿ ಹೇಳುವುದು ವಾಡಿಕೆಯಾಗಿದೆ. ಆದರೆ ಈ ಕಟ್ಟಡಗಳು ಪ್ರಾಚೀನ ನಕ್ಷತ್ರ ಶಾಲೆಯಂತೆ ಉಪಯೋಗಿಸಲ್ಪಟ್ಟಿವೆ ಎಂದು ಎಂದಿಗೂ ಹೇಳಲ್ಪಡುವುದಿಲ್ಲ. ಕೃಷಿಯ ಕಾರ್ಯಗಳನ್ನು ವ್ಯವಸ್ಥೆಪಡಿಸುವ ಉದ್ದೇಶದಿಂದ ಸೂರ್ಯನ ಮತ್ತು ಸಂಬಂಧವಾದ ಚಲನೆಗಳನ್ನು ಲಕ್ಷ್ಯವಿಟ್ಟು ನೋಡುವುದಕ್ಕಾಗಿ ಕೆಲ್ಟರು ಅವುಗಳನ್ನು ಉಪಯೋಗಿಸುತ್ತಿದ್ದರು. ಚರಿತ್ರೆಯ ವಸ್ತುವಿನ ಸಮೀಪ ಅಭ್ಯಾಸ ಮತ್ತು ವಿಚಾರವು ಈಗ ಚರಿತ್ರೆಯೆನ್ನಿಸಿಕೊಳ್ಳುವಂಥ ನಿರರ್ಥಕ ಹುಚ್ಚು ಮಾತುಗಳ ಸಂಕಲೆಗಿಂತ ಫಲಕಾರಿಯೆಂದು ಮೇಲೆ ಹೇಳಿದ ದೃಷ್ಟಾಂತಗಳು ಸ್ಪಷ್ಟೀಕರಿಸುತ್ತವೆ.

ಸಾಮಾನ್ಯ ತಿಳುವಳಿಕೆ

ಚರಿತ್ರೆಯನ್ನೂ ಭೂಗೋಳವನ್ನೂ ಒಟ್ಟುಗೂಡಿಸಿ ಅವನ್ನು ಸಾಮಾನ್ಯ ತಿಳುವಳಿಕೆಯ ಹೆಸರಿನ ಅಭಿಧಾನದಿಂದ ಮೆರೆದ ಸಮಯವೊಂದಿತ್ತು. ಈ ಪಾಠಗಳಿಗೆ ಈ ಹೆಸರು ಸಂಪೂರ್ಣ ಹಕ್ಕಿನದಾಗಿ ತೋರುತ್ತಿದೆ. ಏಕೆಂದರೆ ಶಾಲೆಯಲ್ಲಿ ಕಲಿಸುವ ಇತರ ಪಾಠಗಳಿಗಿಂತ ಈ ಪಾಠವೇ ವಿದ್ಯಾರ್ಥಿಗಳ ಮನಸ್ಸನ್ನು ಚೆನ್ನಾಗಿ ವಿಕಸಿಸುವಂತೆ ಮಾಡುತ್ತದೆ. ಈ ಪಾಠಗಳು ಬಲು ಪ್ರಗಾಢವಾಗಿವೆ. ಬೇಸರವನ್ನು ಹುಟ್ಟಿಸುವ, ಕಲ್ಪನಾಶಕ್ತಿಯನ್ನು ಕುಗ್ಗಿಸುವ ಶಿಕ್ಷಣದ ಹಸೆಯಿಂದ ಶಾಲೆಯಿಂದ ಹೊರಬಂದ ವಿದ್ಯಾರ್ಥಿಗಳು ಮನುಷ್ಯರ ಭೂತಕಾಲದ ಅಭಿವೃದ್ಧಿಯನ್ನು ಕುರಿತು ಅಲ್ಪ ಸ್ವಲ್ಪ ಮತ್ತು ಅಪೂರ್ಣ ವಿಚಾರವೂ ವರ್ತಮಾನ ಕಾಲದ ವಾತಾವರಣವನ್ನು ಅರಿಯದೇ ಇರುವವರಾಗಿದ್ದಾರೆ. ಮನುಷ್ಯನ ಪ್ರಗತಿಯು ಕಾದಂಬರಿಯಂತೆಯೂ ಪ್ರಪಂಚದಲ್ಲಿ ಆಧುನಿಕ ಅಸ್ತಿತ್ವವು ಅವನ ಹಿಂದಣ ಎಲ್ಲಾ ಪರಾಕ್ರಮ ಕೃತ್ಯಗಳ ಸಂಯೋಗವಾಗಿಯೂ ಮುಂದಿನ ಕೀರ್ತಿಯ ಸೂಚಕವಾಗಿಯೂ ತಿಳಿದರೇನೆ ಅಭಿವೃದ್ಧಿಯು ಖಂಡಿತವಾಗಿಯೂ ಸಾಧ್ಯವೂ.

(ಅನುವಾದಕ: ಶ್ರೀ ಎ. ಕೆ. ಪೈ.)

ಗ್ರಹಣ

ಪೌರ್ಣಿಮಾ ದಿನಮಂದು! ಪೂರ್ವವಧುವಿನ ಮಡಿಲ
ಬಿಟ್ಟೆದ್ದು ಬರುತಿರ್ದನಾ ಚಂದ್ರ ನಸುನಗುತ
ಅಮ್ಮನುಡಿಯಿಂದೆದ್ದ ಮುದ್ದು ಮಗುವಿನ ತೆರದಿ!
ಬೆಳದಿಂಗಳಿನ ತಂಪ ಹೀರಿತ್ತು ಜಗದಗಲ!
ಸುಖಶಾಂತಿ ಸಂತೋಷದಲಿ ತೇಲುತಿತ್ತು ತಿರೆ!
ಹಾ! ತಿಮಿರವೊಂದು ಮರೆಮಾಡಿತಾ ಶಶಿಯನ್ನು
ಕತ್ತಲೆಯು ಕವಿಯಿತ್ತೈ ಭೂಮಂಡಲದಲ್ಲೆಲ್ಲ!
ಗ್ರಹಣವಿದು ನಿಮಿಷಾರ್ಧದಲಿ ಮಾಯವಾಯ್ತರರೆ!!

ಚಂದ್ರನಾ ನುಂಗಿರ್ದ ರಾಹು ಬಿಟ್ಟೋದನು,
ಚಂದ್ರನುರೆ ಬೆಳಗಿ, ಬೆಳಗಿತ್ತ ತಿರೆಗಾ ಬಳಿಕ!
ಅಂದವಾಯ್ತಾನಂದವಾಯ್ತು ಜಗದಲ್ಲೆಲ್ಲ!
ಅಂದು ಸ್ವಾತಂತ್ರ್ಯದಿಂ ಮೆರೆದಿರ್ದ ಭಾರತಿಯ
ನಾವರಿಸಿ ನುಂಗಿತ್ತೈ ತಮವೊಂದು! ಬೆಳಕಿಲ್ಲ!
ಈ ಗ್ರಹಣಮೆಂದು ಮರೆಯಾಗುವುದೊ? ಶಿವಬಲ್ಲ!

ಪುನಾಕ.

ಧನಸೇವೆ ಯೊಂದೇ ಅಲ್ಲ— ಜನತಾಸೇವೆ

ಕಲ್ಕತ್ತೆಯ ದಾಬೂರ್ ಸಂಸ್ಥೆ.

1934ನೇ ಬಿಹಾರ್ ಭೂಕಂಪದಲ್ಲಿ ನೆರವಾದ ಧರ್ಮಸಂಸ್ಥೆಯ ಇತಿಹಾಸ.



ದಾಬೂರ್ ಸಂಸ್ಥೆಯ ಸ್ಥಾಪಕರಾದ ದಿವಂಗತ ಡಾ| ಎಸ್. ಕೆ. ಬರ್ಮನ್‌ರವರು.



ಕಲ್ಕತ್ತೆಯ ಸುಪ್ರಸಿದ್ಧ ದೇಶೀ ಔಷಧಗಳ ಸಂಸ್ಥೆ, ದಾಬೂರ್ (ಡಾ| ಎಸ್. ಕೆ. ಬರ್ಮನ್) ಲಿಮಿಟೆಡ್

ನಮ್ಮ ದೇಶದಲ್ಲಿರುವ ಪ್ರಾಗತಿಕ ಆಯುರ್ವೇದಿಯ ಔಷಧಾಲಯಗಳಲ್ಲಿ ಕಲ್ಕತ್ತೆಯ ದಾಬೂರ್ (ಡಾ| ಎಸ್. ಕೆ. ಬರ್ಮನ್) ಲಿಮಿಟೆಡ್ ಈ ಸಂಸ್ಥೆಯು ಗಣನೀಯವಾಗಿದೆ. ಇವರು ನಾನಾ ಪೆಟೆಂಟ್ ಔಷಧಗಳ, ಆಯುರ್ವೇದಿಯ ತಯಾರಿಗಳ, ಸುಗಂಧಾದಿ ಅಲಂಕಾರ ದ್ರವ್ಯಗಳ ಮತ್ತು ಸಂಬಂಧಪಟ್ಟ ಇತರ ವಸ್ತುಗಳ ವ್ಯಾಪಾರಿಗಳೂ ಅವುಗಳನ್ನು ತಯಾರಿಸುವವರೂ ಆಗಿದ್ದಾರೆ.

ವಾಂತಿಭೇದಿಗೆ ದಿವ್ಯೌಷಧ.

ಈ ಸಂಸ್ಥೆಯು ಅರ್ಧ ಶತಮಾನಕ್ಕಿಂತಲೂ ಹಿಂದೆ ಸ್ಥಾಪಿಸಲ್ಪಟ್ಟಿತು. ಅಂದರೆ 1884ರಲ್ಲಿ ಇದರ ಸಂಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಚಿಕ್ಕದಾಗಿತ್ತದು. ಇದರ ಸ್ಥಾಪಕರಾದ ಡಾ| ಎಸ್. ಕೆ. ಬರ್ಮನ್‌ರವರ ಪ್ರಥಮ ಶೋಧವು ''ಕಾಫು'' ಎಂಬ ಕರ್ಪೂರದ ಔಷಧದಿಂದ ಮೊದಲಾಯಿತು. ವಾಂತಿಭೇದಿಯ ಈ ಔಷಧವು ಜನರಿಗೆ ವರದಾನದಂತೆ ಬಂತು; ಸಾವಿರಾರು ಜನರ ಪ್ರಾಣಗಳನ್ನು ರಕ್ಷಿಸಿತು. ಇದರ ನಂತರ ಹಲವು ಶೋಧಗಳಾದುವು. ಕೆಲವೇ ವರ್ಷಗಳಲ್ಲಿ ಅನೇಕ ಪ್ರಸಿದ್ಧ ಔಷಧಗಳು ಪ್ರಚಾರಕ್ಕೆ ಬಂದು, ಈ ಶತಮಾನದ ಆದಿಯಲ್ಲಿ ಈ ಸಂಸ್ಥೆಯು ದೇಶದ ಪ್ರಮುಖ ಔಷಧೀಸಂಸ್ಥೆಗಳ ಸಾಲಲ್ಲಿ ನಿಲ್ಲುವಂತಾಯಿತು.

ಈ ಪ್ರಗತಿಯ ಯಶಸ್ಸು, ಸ್ಥಾಪಕರ ಮಗಂದಿರಾದ ದಿವಂಗತ ಶ್ರೀ| ಚುನಿಲಾಲ ಬರ್ಮನರಿಗೆ ಸಲ್ಲುವುದು. ಇವರು ಸಂಸ್ಥೆಗೊಂದು ಸಂಶೋಧನಾಲಯವನ್ನು ಕೂಡಿಸಿಕೊಂಡರು; ಇದರಲ್ಲೀಗ ದೇಶೀ ಔಷಧಗಳ ಶೋಧಗಳು ನಡೆದಿರುತ್ತವೆ.

ಈ ಸಂಸ್ಥೆಯ ಈಗಿನ ನೇತೃಗಳು ಶ್ರೀ| ಪೂರ್ಣಚಂದ ಬರ್ಮನರು. ಇವರು ದಿವಂಗತ ಶ್ರೀ| ಚುನಿಲಾಲ ಬರ್ಮನ್‌ರವರ ಹಿರೇ ಮಕ್ಕಳು. ಇತ್ತೀಚೆಗೆ ಈ ಸಂಸ್ಥೆಗೆ ಬೋಂಡೆಡ್ ಲೆಬರೇಟರಿಯನ್ನು ಕೂಡಿಸಿ, ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಯಲ್ಲಿರುವ ತಮ್ಮ ಆಸಕ್ತಿಯನ್ನು ಪ್ರದರ್ಶಿಸಿದ್ದಾರೆ. ಎಲ್ಲ ಫಾರ್ಮಸ್ಯೂಟಿಕಲ್ ತಯಾರಿಗಳನ್ನು ಇಲ್ಲಿ ಮಾಡುವರು.

ಪೇಟೆಂಟ್ ಔಷಧಿಗಳ ಪ್ರಶಸ್ತಿ.

ಈ ಸಂಸ್ಥೆಯ "ಪುದಿನಹರ', "ಜುರಿತಾಪ"-ಲಾಲ್‌ಶರ್ ಮೊದಲಾದ ತಯಾರಿಗಳು, ಈ ಸಂಸ್ಥೆಯು ಜಾಗರೂಕತೆಯಿಂದ ಘಟಿಸಿ ಪೋಣಿಸಿ ತಂದಿರುವ ಹಲವು ಏಜನ್ಸಿಗಳ ಮೂಲಕ ಉತ್ತರ ಹಿಂದುಸ್ಥಾನದಲ್ಲಿ ಬಹು ದೂರದ ವರೆಗೆ ಹೊಕ್ಕಿ ವ್ಯಾಪಿಸಿಕೊಂಡಿವೆ. ಇವರ ಔಷಧಗಳೂ, ತೈಲಾದಿಗಳೂ ಬಹು ಜನಾದರ ಸಂಪಾದಿಸಿವೆ. ಈಗ ಈ ಸಂಸ್ಥೆಗೆ ಕೂಡಿಸಿಕೊಂಡಿರುವ ಬೋಂಡಡ್ ಲೆಬರೇಟರಿಯ ಮೂಲಕ, ಪಾಶ್ಚಿಮಾತ್ಯ ವಿಧಾನದಲ್ಲಿ ಔಷಧಿಗಳು ತಯಾರಿಸಲ್ಪಟ್ಟು, ಹೆಚ್ಚುವುವು.

ಆಯುರ್ವೇದಿಕ್ ಔಷಧಿಗಳು

ದೇಶದ ಪೀಡಿತ ಜನಸಮುದಾಯಕ್ಕೆ ದೇಶೀ ಔಷಧಿಗಳಿಂದಲೆ ರೋಗಪರಿಹಾರವೆಂದು ಸ್ಥಾಪಕರು ತಿಳಿದು, ಅಲ್ಪ ಖರ್ಚಿನ ಔಷಧಗಳನ್ನು ಶೋಧಿಸ ತೊಡಗಿದರು. ಆಯುರ್ವೇದಿಯ ಪದ್ಧತಿಯು ಭೂಲೋಕದ ಅತೀ ಪ್ರಾಚೀನ ಚಿಕಿತ್ಸಾ ಪದ್ಧತಿ; ಇದು ಅಸಂಖ್ಯಾಕ ವರುಷಗಳಿಂದ ಜನರ ನಾನಾ ರೋಗಗಳನ್ನು ಪರಿಹರಿಸುತ್ತ ಬಂದಿದೆ. ಈ ಆಯುರ್ವೇದೀಯ ಔಷಧಗಳನ್ನು ಈಗಿನ ಕೇಳಿಕೆಗೆ—ಅವಶ್ಯಕತೆಗೆ ಬೇಕಾದಂತೆ ಶೋಧಿಸಿ ತರುವುದು ಅವಶ್ಯವಿತ್ತು.

ಈ ಸಂಸ್ಥೆಯೀಗ ಹಲವು ಬಗೆಯ ದೇಶೀ ಔಷಧಗಳನ್ನು ಪ್ರಚಾರಕ್ಕೆ ತಂದಿದೆ.' ಅತಿ ಶುದ್ಧ ಹಾಗೂ ಮೌಲಿಕ [illegible] ಸಂಪಾದಿಸಿ ತಂದು, ಅಧಿಕೃತ ಆಯುರ್ವೇದೀಯ ಗ್ರಂಥದಲ್ಲ[illegible] ಶಾಸ್ತ್ರೀಯ ರೀತಿಯಲ್ಲಿ ಔಷಧಗಳನ್ನು ತ[illegible]ಲಾಗುತ್ತಿದೆ. [illegible] ದಿನೇ ಹೆಚ್ಚೆಚ್ಚು ಜನಾದರ ಹೊಂದುತ್ತಿವೆ.

ಅಲಂಕಾರಿಕ ದ್ರವ್ಯಗಳು

ಕಾಲದೊಡನೆ ಫ್ಯಾಶನೂ ಬದಲಾಯಿಸುತ್ತಿದೆ. ಕಳೆದ ಶತಮಾನದ ಅಲಂಕಾರಿಕ ದ್ರವ್ಯಗಳ ಸ್ಥಾನದಲ್ಲಿಂದು, ಪಾಶ್ಚಿಮಾತ್ಯರೀತಿಯ ಅಲಂಕಾರಿಕ ದ್ರವ್ಯಗಳು ಪ್ರಚಾರಕ್ಕೆ ಬಂದಿವೆ. ಈ ಸಂಸ್ಥೆಯೀಗ ಇಂತಹ ಅಲಂಕಾರಿಕ ದ್ರವ್ಯಗಳನ್ನು ತಯಾರಿಸಿದ್ದು, ಇವು ಪ್ರಾಥಮಿಕ ಸ್ಥಿತಿಯಲ್ಲಿ ಚರ್ಮ, ಚರ್ಯೆ, ಕೈಕಾಲುಗಳ ಕೂದಲುಗಳನ್ನೆಲ್ಲ ಚೊಕ್ಕವಾಗಿಯೂ ಸೌಂದರ್ಯಯುಕ್ತವಾಗಿಯೂ ಇರಿಸುವ ಮೂಲಕ ಸ್ತ್ರೀಯರಿಗೆ ಅತಿ ಆಕರ್ಷಕ ವಸ್ತುಗಳಾಗಿವೆ. ಈ ಅಲಂಕಾರಿಕ ದ್ರವ್ಯಗಳು ನಮ್ಮ ದೇಶೀಯ ಹವಾಮಾನಕ್ಕೊಪ್ಪುವಂತಿದ್ದು, ತಾತ್ಕಾಲಿಕ ಸೌಂದರ್ಯವನ್ನು ಮಾತ್ರ ಕೊಡುವ ರೀತಿಯ ವಸ್ತುಗಳನ್ನೊಳಗೊಂಡಿರದೆ ಅತಿ ಶುದ್ಧ ಮತ್ತು ಅಮೌಲ್ಯ ದ್ರವ್ಯಗಳನ್ನುಳ್ಳದಾಗಿವೆ; ದೇಹಾರೋಗ್ಯಕ್ಕೆ ಸಹಾಯಕವಾಗಿವೆ.

ಜನತಾ ಸೇವೆ

ಕೇವಲ ವ್ಯಾಪಾರವೊಂದೇ ಉದ್ದೇಶವಲ್ಲ—-ಈ ಸಂಸ್ಥೆಯದು. ಜನತಾ ಸೇವೆಯ ಸಂದರ್ಭಗಳೊಂದನ್ನೂ ಇದು ವ್ಯರ್ಥವಾಗ ಬಿಟ್ಟುದಿಲ್ಲ. 1934ರಲ್ಲಿ ಆದ ಬಿಹಾರ್ ಭೂಕಂಪ ಅನಾಹುತದಲ್ಲಿ ಈ ಸಂಸ್ಥೆಯು ಬಿಹಾರಿ ಜನರಿಗೆ ಎಷ್ಟೋ ಔಷಧಿಗಳನ್ನು ಧರ್ಮಾರ್ಥವಾಗಿ ಹಂಚಿತು. ಮ್ಯಾಲಕರ ಖಾಸಗಿ ಧರ್ಮಧಾನಗಳೂ ಹಲವಿವೆ. ಇಂತಹ ಸಂಸ್ಥೆಗಳು, ನಮ್ಮ ದೇಶದಲ್ಲಿ ಬೆಳೆದು ಬಂದು ದೇಶದ ಸಂಪತ್ತನ್ನೂ ಸಂತೋಷವನ್ನೂ ಹೆಚ್ಚಿಸುವುವೆಂದು ನಮ್ಮ ಅಭಿಮತ. ಈ ದಾಬೂರ್ ಸಂಸ್ಥೆಯ ಅಭಿವೃದ್ಧಿಯು ದೇಶೀಯರಿಗೊಂದು ಹೆಮ್ಮೆಯಾಗುವುದು; ಮತ್ತೀ ಸಂಸ್ಥೆಯ ಅಭಿವೃದ್ಧಿಯಿಂದ ಇನ್ನೂ ಸುಲಭ ಬೆಲೆಯಲ್ಲಿ ಇನ್ನೂ ಹೆಚ್ಚು ಜನರಿಗೆ ಔಷಧಗಳು ದೊರೆವಂತಾಗುವುದು.

ಯಾವಾಗಲೂ ಮಧ್ಯಾಹ್ನದ ಮೇಲೆ, ಊಟಮಾಡಿ ಶಾಲೆಗೆ ಬಂದಕೂಡಲೇ, ವ್ಯಾಕರಣ ಪಾಠವೆಂದು ಕಾಲನಿಯಾಮಕ ಪಟ್ಟ(Time-Table)ಯಲ್ಲಿತ್ತೆಂದು ಮೊದಲೇ ಸೂಚಿಸಿದ್ದೆನಷ್ಟೆ! ನಮ್ಮ ಸಂಸ್ಕೃತ ಕೋಲೇಜು ಒಂದು ವಿಶಾಲವಾದ ಎತ್ತರ ಗುಡ್ಡದ ಮೇಲಿದ್ದುದರಿಂದ ಅಲ್ಲಿ ವರ್ಷದ ಬಹುಭಾಗದಲ್ಲೂ ಬಿಸಿಲಿನ ಬಿರುಸು ಅತ್ಯಧಿಕ. ಮಧ್ಯಾಹ್ನದ ನಡುಬಿಸಿಲಿನಲ್ಲಿ ನಡೆದುಬಂದು, ಕ್ಲಾಸಿನಲ್ಲಿ ಕುಳಿತೊಡನೆ, ಪುಸ್ತಕದ ಸಹಾಯವಿಲ್ಲದೆ ಕಲಿಸುತ್ತಿರುವ ವ್ಯಾಕರಣ ಶಿರೋಮಣಿಗಳ ಬಾಯಿಯಿಂದ ನಿರರ್ಗಳವಾಗಿ ಹೊರ ಹೊರಡುತಿದ್ದ ಪಾಣಿನಿ ಸೂತ್ರಗಳ ನಿರಂತರ ಧಾರೆಯಂತೆ, ನಮ್ಮ ಮೈಮೇಲಿನ ಸೂಕ್ಷ್ಮ ರಂಧ್ರಗಳಿಂದಲೂ, ತಡೆಬಡಿಯಿಲ್ಲದೆ, ಬೆವರಿನ ಅಜಸ್ರ ಪ್ರವಾಹವು ಹರಿಯತೊಡಗಿ, ನಮ್ಮ ಉಟ್ಟ ಬಟ್ಟೆಯನ್ನೂ, ತೊಟ್ಟ ಅಂಗಿಯನ್ನೂ ಒದ್ದೆಯಾಗಿಸಿಬಿಡುತಿದ್ದಿತು.

ಈ ಅವಾಂತರ ಸಾಲದುದಕ್ಕೆ ಮೇಲೆ ಓಡಿನ ಮಾಡಿನ ಕಾವು! ಅದಲ್ಲದೆ, ಸುತ್ತುಮುತ್ತಲೂ ಬಾಗಿಲುಗಳಿಂದಲೋ, ಕಿಟಕಿಗಳಿಂದಲೋ ಅವ್ಯಾಹತವಾಗಿ ಸಾಗಿ ತೀಡಿ ಬರುತ್ತಿರುವ ಬಿಸುಗಾಳಿಯ ಪ್ರತಾಪ! ಈ ಎಲ್ಲಾ ವಿಧದ ಸೆಕೆಯ ಉಷ್ಣತೆಯಿಂದಲೂ, ಹೊಟ್ಟೆಯು ಗಟ್ಟಿಯಾಗಿ ತುಂಬಿದ ಚಿಂತಾರಹಿತ್ಯದಿಂದಲೂ, ಔಷಧದ ಗುಟುಕಿನ ಸೇವನೆಯಂತೆ, ಕಿವಿಗೆ ಕಟುವಾಗಿ ಕೇಳಿಬರುತ್ತಿರುವ, ನಮ್ಮ ಮಟ್ಟಿಗೆ ಅರ್ಥವಿಲ್ಲದೆ ಅನರ್ಥದಂತೆ ಭಾಸವಾಗುತ್ತಿರುವ ವ್ಯಾಕರಣಸೂತ್ರ ಸಮೂಹದಿಂದುಂಟಾದ ಜಾಡ್ಯದ ಔದಾಸೀನ್ಯದಿಂದಲೂ, ಕಣ್ಣು ತೂಕಡಿಕೆಯಾರಂಭವಾಗುವುದು ಅಸಂಭವವಲ್ಲವಷ್ಟೇ!

ಬೇಡವೆಂದರೂ, ನನ್ನ ಇಚ್ಛಾಶಕ್ತಿಯ ವಿರುದ್ಧವಾಗಿ ಕಣ್ಣೆವೆಗಳು ಮುಚ್ಚಲು ಹವಣಿಸುತಿದ್ದುವು. ಕಡೆಗೆ ಒಮ್ಮೆ ಅವಿಧೇಯತೆಯನ್ನು ತೋರ್ಪಡಿಸಿ ಮುಚ್ಚಿಯೇ ಬಿಡುತಿದ್ದುವು. ಆಗಲೂ ಮಾಸ್ತ್ರು ನೋಡಿಬಿಟ್ಟಾರು ಎಂಬ ಹೆದರಿಕೆಯು ಅಂತರಂಗದ ತೆರೆಯಲ್ಲಿ ಸುಪ್ತವಾಗಿರುವುದರಿಂದ, ಕಣ್ಣೆವೆಯ ಕರಿಕೂದಲುಗಳನ್ನು ಬಿಡಿಸಲು ಮನಸ್ಸಿನ ಮೂಲೆಯಲ್ಲಿ ಪ್ರಯತ್ನಿಸುವ ಪ್ರಬಲೇಚ್ಛೆಯು ಬೇಕಾದಷ್ಟು ಹೋರಾಟವನ್ನು ನಡೆಸಿದರೂ, ಅದು ಅರೆನಿದ್ದೆಯ ಮಾಯಾಲೋಕದಲ್ಲಿ ಮರವಿನ ಮಬ್ಬಿನ ಉಬ್ಬಿನಿಂದ ಮುದುಡಿ, ಮುಚ್ಚಿ, ಮುಗ್ಗರಿಸಿ ಮುಗಿದುಬಿಡುತಿತ್ತು.

ನಮ್ಮ ಮನಸ್ಸಿಗೆ ನಾಟುವಂತೆ ಸರಿಯಾಗಿ ಬೋಧಿಸಬೇಕೆಂಬ ಹೆಬ್ಬಯಕೆಯಿಂದ ಪಾಠ ಮಾಡುತ್ತಿರುವ ಸರಳ ಮನಸ್ಸಿನ ಸಾಧು ಅಧ್ಯಾಪಕರ ಸರೀ ಸಮಕ್ಷದಲ್ಲೇ ನಿದ್ರಾದೇವಿಯ ಮೋಹಕ ಉನ್ಮತ್ತಾಲಿಂಗನಕ್ಕೆ ಸೆರೆಯಾಳಾದುದು ನನ್ನ ಮನಸ್ಸಿಗೆ ಬಹಳ ಜುಗುಪ್ಸೆಯನ್ನೂ, ನಾಚಿಕೆಯನ್ನೂ, ಬೇಸರವನ್ನೂ, ಬೇಜಾರವನ್ನೂ ಉಂಟುಮಾಡುತಿತ್ತು; ಸಹಪಾಠಿಗಳೂ ಇತರರೂ ನಗಾಡುವಂತಾದುದು ನನ್ನ ಮನಸ್ಸಿಗೇ ಬಹಳ ನೋವನ್ನುಂಟುಮಾಡುತಿತ್ತು, ಆಗ ನನಗೆ ವ್ಯಾಕರಣ ಸೂತ್ರಗಳ ವಿಲಕ್ಷಣ ರಾಗವೇ ಜೋಗುಳದ ರಾಗವಾಗಿ ಮಾರ್ಪಟ್ಟಿತ್ತೋ ಏನೋ!

ಹೀಗೆ ಒಮ್ಮೆಯಲ್ಲ, ಅನೇಕ ಸಾರಿ ನಿದ್ದೆಯು ನನ್ನನ್ನು ಬಾಧಿಸತೊಡಗಿತು. ಈ ಅವಸ್ಥೆಗೆ ಮುಂಚಿನ ದಿವಸ ರಾತ್ರಿ ಹೆಚ್ಚು ಸಮಯಾತಿಪಾತವಾಗುತ್ತಿರುವಂತೆ ವಾಚನವನ್ನು ಮುಂದರಿಸುವುದೂ ಒಂದು ಕಾರಣವಾಗಿರಲೂ ಬಹುದು!

ನಮ್ಮ ವ್ಯಾಕರಣಾಚಾರ್ಯರು ಬಹಳ ಕ್ಷಮಾಶೀಲರೆಂದೆನ್ನುವುದಕ್ಕೇನೂ ಸಂದೇಹವಿಲ್ಲ. ಇಲ್ಲವಾದರೆ ನನ್ನಉಳಿಗಾಲವಿತ್ತೇ? ಎಂತೂ ಪ್ರಾಚ್ಯವಿದ್ಯಾಪಾರಂಗತರು ಎಂದೂ ಅಷ್ಟು ಜೋರುಮಾಡದವರು ಎಂಬುದು ನನ್ನ ಅನುಭವದ ಮಾತು.

ಅಧ್ಯಾಪಕರ ಎದುರು ಕಣ್ಣು ತೂಕಡಿಸುವಂತಾದುದು ನನಗೇ ಅತ್ಯಧಿಕ ಲಜ್ಜಾಸ್ಪದವಾಗಿ ಪರಿಣಮಿಸಿತು. ಆದರೆ ಮಾಡುವುದೇನು? ನಿದ್ದೆಯ ಒತ್ತಾಯವನ್ನು ಜೈಸಿ ಮುರಿದುಬಿಡಲು ಅಸಮರ್ಥನಾಗಿದ್ದೆನು. ಇದಕ್ಕೆ ಅಧ್ಯಾಪಕರ ತೀಕ್ಷ್ಣವಾದ ಹೆದರಿಕೆಯಿಲ್ಲದುದರ ಪ್ರಭಾವವೂ ಒಂದು ಸಾಮಾನ್ಯ ಕಾರಣವಾಗಿರಲೂ ಬಹುದು. ಅವರು ಅಂತಹ ಸಮಾಧಾನಿಗಳಾದುದು ನನ್ನ ಮಟ್ಟಿಗೆ ಒಂದು ದೈವಿಕ ವರಪ್ರದಾನದಂತೆಯೇ ಆಗಿದ್ದಿತು. ಆದರೂ, ನನ್ನ ನಿದ್ದೆಯ ಕುಹಕತನವು ಅವರ ತಿಳಿವಿಗೆ ಗೋಚರವಾದರೆ, ಅವರು ನನ್ನನ್ನು ನಿರಾತಂಕವಾಗಿ ನಿದ್ದೆಮಾಡಗೊಡುತಿದ್ದಿಲ್ಲ. ಒಮ್ಮೊಮ್ಮೆ ಅವರು ಗಟ್ಟಿಯಾಗಿ ಅಟ್ಟಹಾಸ ಮಾಡಿ ನಕ್ಕು, ನನ್ನನ್ನು ಎಚ್ಚರಿಸುವ ತೊಂದರೆಯನ್ನೂ ಕೊಡುತ್ತಿದ್ದರಲ್ಲದೆ, ತೀಕ್ಷ್ಣವಾದ ನಾಚಿಕೆಗೆ ಪಕ್ಕಾಗಿಸುತ್ತಲೂ ಇದ್ದರು. ಅವರ ನಗುವಿನ ಬೊಬ್ಬೆಗೂ ನನ್ನ ಮೆಲುನಿದ್ದೆಯು . ಅವಿಧೇಯತೆಯನ್ನು ಸೂಚಿಸಿದರೆ, ಅವರು ಒಮ್ಮೊಮ್ಮೆ ನನ್ನ ಹೆಸರು ಹೇಳಿ ಕರೆದಾದರೂ ಜಾಗರಿಸಿ, ವ್ಯಾಕರಣದ ಸೂತ್ರಜಾಲಗಳು ನನ್ನ ಕರ್ಣಕುಹರವನ್ನು ಪ್ರವೇಶಿಸುವ ಸಾಹಸಕ್ಕೆ ಕೈಯಿಕ್ಕುವಂತೆ ಮಾಡಿಬಿಡುತಿದ್ದರು. ಆಗಲೂ ನನ್ನ ನಿದ್ರೆಯ ಭಾವವು ಸುಷುಪ್ತಿಲೋಕಕ್ಕೇರಿದ್ದರೆ, ನನ್ನ ಮೈಯನ್ನು ಸ್ಪರ್ಶಿಸುವ ಧೈರ್ಯಕ್ಕೂ ಕೈಯಿಕ್ಕಿ, ನಿದ್ರಾಭಾವವನ್ನು ತಂದೊದಗಿಸಲು ಹವಣಿಸುತಿದ್ದರು. ಹಾಗಾದಂದು ನನ್ನಮೂಢಲಜ್ಜಾಸ್ಪದತ್ವಕ್ಕೆಮೇರೆ-ಮಿತಿಯಿದ್ದಿಲ್ಲ.

ಈ ಉಪಾಧ್ಯಾಯರಾಗುವುದರ ಬದಲು ಇನ್ನೊಬ್ಬ ಗಂಭೀರ ಕೋಪಿಷ್ಠ ಅಧ್ಯಾಪಕರಾಗುತಿದ್ದರೆ, ಎಂದೋ ನನ್ನನ್ನು ಕ್ಲಾಸಿನಿಂದ ಹೊರಗೆ (Get out) ಓಡಿಸಿಬಿಡುತಿದ್ದರಲ್ಲದೆ, ಕೋಲೇಜಿನಿಂದಲೇ ಬಹಿರ್ಭೂತನನ್ನಾಗಿಸಲು ಹವಣಿಸದೆ ಬಿಡುತಿದ್ದಿಲ್ಲ. ಹಾಗಾಗದಿದ್ದುದಕ್ಕಾಗಿ ನಾನು ದೇವರಿಗೆ ಎಷ್ಟು ಧನ್ಯವಾದದ ಕೃತಜ್ಞತೆಗಳನ್ನು ಸಮರ್ಪಿಸಿದರೂ ಅದರಲ್ಲಿ ನ್ಯೂನತೆಯಿಲ್ಲದಿರದು.

ಒಮ್ಮೊಮ್ಮೆ ನನ್ನ ನಿದ್ದೆಯ ಸುಳಿವು ಉಪಾಧ್ಯಾಯರಿಗೆ ಹತ್ತುತಿದ್ದೇ ಇಲ್ಲ. ಅದೇಕೆಂದರೆ, ಆ ಎತ್ತರದ ದೊಡ್ಡ ಡೆಸ್ಕಿಗೆ (Desk) ಒರಗಿ, ಕ್ರೌನ್ ಚತುರ್ಥಾಂಶ(!)ದ ಸಾವಿರಾರು ಪುಟಗಳಿರುವ ಅಗಲವಾದ ದಪ್ಪ ವ್ಯಾಕರಣ ಪುಸ್ತಕದ ಮರೆಯಲ್ಲಿ ಮುಖವನ್ನು ಮರೆಸಿ, ಆದಷ್ಟು ಸಂಕುಚಿತದ ವಾಮನಾವತಾರವನ್ನು ತಾಳಿ, (ಇದಕ್ಕೆ ನನ್ನ ಶರೀರ ಪ್ರಕೃತಿಯ ಅಸ್ಥೂಲತೆಯೂ ಬಹುಮಟ್ಟಿಗೆ ಸಹಕಾರಿ!) ನಿದ್ರಿಸುತಿದ್ದುದೂ ಕಾರಣವಾಗಿದೆ. ಕ್ಲಾಸಿನಲ್ಲಿ ನಿದ್ರಿಸುವುದು ನನ್ನ ಸಹಜ ಸ್ವಭಾವವೆಂದೇ ಅರಿತು, ಇನ್ನೂ ಒಮ್ಮೊಮ್ಮೆ ಉಪಾಧ್ಯಾಯರು ನನ್ನ ನಿದ್ರಾಸ್ಥಿತಿಯನ್ನು ಕಂಡರೂ ಕಾಣದಂತೆ, ಊದುವ ಶಂಖವನ್ನು ಊದಿಯೇ ಬಿಡುತ್ತಿರುವ ದಾಸಯ್ಯನ ಪರಿಸ್ಥಿತಿಯನ್ನನುಸರಿಸಿ ವ್ಯಾಕರಣ ಪಾಠವನ್ನು ಮುಂದರಿಸಿಯೇ ಬಿಡುತಿದ್ದರು.

ನಾನು ಕ್ಲಾಸಿನಲ್ಲಿ ನಿದ್ರೆಯಿಂದ ಇಷ್ಟು ಬಾರದ ಬನ್ನವನ್ನು ಪಟ್ಟರೂ, ನನ್ನ ಸಹಪಾಠಿಗಳೊರ್ವರೂ ನನ್ನನ್ನು ಒಂದಿಷ್ಟೂ ಎಬ್ಬಿಸುವ ಗೊಡವೆಗೆ ಬರುತಿದ್ದಿಲ್ಲ. ಅಂತಹ ನೈಷ್ಠುರ್ಯಭಾವಕ್ಕೆ ನಾನೆಂತಹ ಅಪರಾಧವನ್ನು ಅವರಿಗೆ ಎಸಗಿದ್ದೆನೋ ಪರಮಾತ್ಮನೇ ಬಲ್ಲ!

ದಿನದಿಂದ ದಿನಕ್ಕೆ ಮುಂದರಿಯುತ್ತಾ ಹೆಚ್ಚುತ್ತಾ ಹೋಗುತ್ತಿರುವ ನನ್ನೀ ನಿದ್ರಾವಸ್ಥೆಯನ್ನು ತಡೆಗಟ್ಟಲು ನಾನು ಬಹಳ ಹೆಣಗಾಡಿದೆನು. ಅನೇಕ ಉಪಾಯಗಳಿಗೆ ಶರಣಾಗತನಾಗಿ, ನಿರಾಶನಾದೆನು. ಕೆಲಕೆಲವು ದಿನಗಳಲ್ಲಿ ನಾನು ಠವೆಲನ್ನು (Towel) ತಣ್ಣೀರಿನಿಂದ ಒದ್ದೆ ಮಾಡಿ, ನಿದ್ದೆ ಬರುವಂತಾದಾಗಲೆಲ್ಲ ಕಣ್ಣಿಗೆ ಉಜ್ಜಿ ನಿದ್ದೆಯನ್ನು ಬಹಿಷ್ಕರಿಸುತಿದ್ದೆನು. ಹೀಗೆ ನಿದ್ದೆಯನ್ನು ಹೊರದೂಡಿದ ಸ್ವಲ್ಪ ಸಮಯದಲ್ಲೇ, ಅದು ಪುನಃ ನೇತ್ರಗಳನ್ನು ಆವರಿಸಲು ಸನ್ನದ್ಧವಾಗುತಿದ್ದಾಗ, ನನ್ನೆರಡು ಕಣ್ಣುಗಳನ್ನೂ, ಬಲಾತ್ಕಾರದಿಂದ ಪಾವಾಣೆಯಷ್ಟು ದೊಡ್ಡದಾಗಿಸಿ, ಬಿರಬಿರನೆ ಶೂನ್ಯದೃಷ್ಟಿಯಿಂದ ನೋಡುತಿದ್ದೆನು. ಆಗ ನೋಡಿದವರಿಗೆ ಏನನಿಸುತಿದ್ದಿತೋ!

ನಿದ್ರಾ ಬಹಿಷ್ಕಾರಕ್ಕೆ ಒದ್ದೆ ಬಟ್ಟೆತುಂಡೂ ನಿಷ್ಪ್ರಯೋಜನವಾಗಿ ಪರಿಣಮಿಸಿದಾಗ ಇನ್ನೇನು ಉಪಾಯ ಮಾಡುವುದೆಂದು ಆಲೋಚನಾನಿರತನಾದೆ. ಕಡೆಗೆ ನನ್ನ ತೊಡೆಯನ್ನೋ ಅಥವಾ ಶರೀರದ ಯಾವುದಾದರೊಂದು ಕೋಮಲವಾದ ಅಂಗವನ್ನೋ ಎರಡು-ಮೂರು ಕೈಬೆರಳುಗಳಿಂದಲೂ, ಅವುಗಳಲ್ಲಿರುವ ಉಗುರುಗಳ ಸಹಾಯದಿಂದಲೂ, ಒತ್ತಿ ಅದುಮಿ, ಚಿವುಟುವ ನಿಷ್ಕರುಣತೆಯನ್ನು ವಹಿಸಲನುವಾದೆ. ಆದರೂ ನಿದ್ರೆಯಿಂದುಂಟಾದ ತಲ್ಲೀನತೆಯಿಂದ ನನ್ನ ಕೈ ಬೆರಳುಗಳಿಗೂ ನೋವನ್ನುಂಟುಮಾಡುವ ಸಂಪೂರ್ಣ ಶಕ್ತಿಯು ಕುಗ್ಗಿದ್ದುದರಿಂದ ಅದೂ ಪ್ರಯೋಜನಹೀನವಾಗತೊಡಗಿತು.

ಹತ್ತಿರದ ಸಹಪಾಠಿಗಳೊಡನೆ, ನನ್ನ ನಿದ್ರಾಪಿಶಾಚಿಯ ಆವೇಶವು ಬಿಟ್ಟೋಡುವಂತೆ ಏನಾದರೂ ಮಂತ್ರವಾದ ಮಾಡಿ ಎಂದು ಪ್ರಾರ್ಥಿಸಿದೆ. ಅವರೂ ಕಡೆಗಣಿಸಿದರು. ಇಲ್ಲವಾದರೆ, ಯಾವ ರೀತಿಯಿಂದಲಾದರೂ ನನಗೆ ಅಸಹನೀಯವಾದ ನೋವನ್ನುಂಟುಮಾಡಿ ನಿದ್ರಾಭೂತವನ್ನು ಹೆದರಿಸಿರಿ ಎಂದು ಕೇಳಿಕೊಂಡೆ. ಅದಕ್ಕೂ ಅವರು ಅಸಮ್ಮತಿಯನ್ನು ಸೂಚಿಸಿದರು.

ನನ್ನ ಗೆಳೆಯನೊಬ್ಬನು ಆ ಸಮಯದಲ್ಲಿ ತಲೆನೆಗಡಿಯ ಶೀತಜ್ವರದಿಂದ ಬಾಧಿತನಾಗಿದ್ದನು. ಅವನು ರೋಗಪರಿಹಾರಾರ್ಥವಾಗಿ ಒಳ್ಳೆಮೆಣಸಿನ ನಯವಾದ ಹುಡಿಯನ್ನು ಸೀಸೆಯಲ್ಲಿ ತುಂಬಿಸಿಟ್ಟುಕೊಂಡಿದ್ದನು. ನಿದ್ರಾ ನಿವಾರಣೋಪಾಯದಲ್ಲಿ ಭಗ್ನ ಹೃದಯನಾಗಿದ್ದ ನನಗೆ ಆ ಸೀಸೆಯು ಕಣ್ಣಿಗೆ ಬಿದ್ದೊಡನೆ ಆಶೆಯ ಅಂಕುರವು ಮನಸ್ಸಿನಲ್ಲಿ ಮೊಳೆಯಿತು. ನಿದ್ದೆ ಬರುವಾಗ ಆ ಕಾರದ ಹುಡಿಯನ್ನು ಮೂಗಿಗೊಮ್ಮೆಏರಿಸಿಬಿಟ್ಟರೆ, ನಿದ್ದೆಯ ಮಾಯೆಯು ಬಿಟ್ಟೋಡಬಹುದೆಂಬ ಭಾವನೆಯದು! ಕಡೆಗೆ,ಗೆಳೆಯನೊಡನೆ ಸ್ವಲ್ಪ ಕೇಳಿ ಕ್ಲಾಸಿನಲ್ಲಿ ಇಟ್ಟುಕೊಂಡೆ.

ನಿದ್ರಾಗಮನವಾದೊಡನೆಯೇ ಆ ಉಪಾಯವನ್ನು ಅನುಸರಿಸತೊಡಗಿದೆ. ನಿದ್ದೆಯೊಮ್ಮೆ ಹಾರಿತು. ವ್ಯಾಕರಣ ಪಾಠವು ಕಿವಿಗೆ ಹಿಂದಿನಂತೆಯೇ ಬೀಳತೊಡಗಿತು. ಕೆಲವು ದಿವಸಗಳಲ್ಲಿ ನಿದ್ದೆಯ ಪ್ರಭಾವವು ಒಳ್ಳೆಮೆಣಸಿನ ಹುಡಿಯನ್ನೂ ಮೀರಿ, ತನ್ನ ಅಸ್ತಿತ್ವವನ್ನು ಬಹಿರಂಗಪಡಿಸತೊಡಗಿತು. ಇದನ್ನು ನಾನು ಸಹಿಸದೆ, ಸ್ವಲ್ಪ ಹೆಚ್ಚು ಹುಡಿಯನ್ನು ನಾಸಿಕಾರಂಧ್ರಗಳಿಗೇರಿಸಿಬಿಟ್ಟೆ. ಅದು ಮೇಲೇರಿ, ಬ್ರಹ್ಮರಂಧ್ರದಲ್ಲೂ ವ್ಯಾಪಿಸಿ, ಇಡೀ ತಲೆಯಲ್ಲೂ ಅಸಹ್ಯ ವೇದನೆಯ ಪರಿಣಾಮವನ್ನುಂಟುಮಾಡಿತು. ಆಗ ಸ್ವಲ್ಪ ನಿದ್ದೆಯ ಕಾಟವು ಕಡಿಮೆಯಾಯಿತು!

ಒಂದು ದಿನ ನಾನು ನಿದ್ದೆಯ ಉಪಟಳವನ್ನು ಸಹಿಸಲಾರದೆ, ಆ ಒಳ್ಳೆಮೆಣಸಿನ ಹುಡಿಯ ಸ್ವಭಾವವು ತಂಪಾದುದೆಂದು ತಿಳಿದವನಾದ ಕಾರಣ, ಅದನ್ನು ನನ್ನದೇ ಕಣ್ಣುಗಳ ಬದಿಗೂ ತೀಡುವಷ್ಟು ನಿಷ್ಕರುಣಿಯಾದೆ! ಆಗ ನನ್ನ ನಯನಗಳು ಸ್ವಲ್ಪ ಪಳಗಿದವುಗಳಾಗಿ, ಬೇಸರದಿಂದಲೂ, ಉರಿಯಿಂದಲೂ, ಕಂಬನಿಗಳನ್ನು ಉದುರಿಸತೊಡಗಿದವು.

ಅಂದಿನಿಂದ ನಿದ್ರಾ ರಾಕ್ಷಸಿಯ ಬಾಧೆಯು ಒಂದನಿತು ಸೂಕ್ಷ್ಮತೆಯನ್ನು ಅವಲಂಬಿಸಿ ನನ್ನ ಮನಸ್ಸಿಗೂ, ವ್ಯಾಕರಣ ಪಾಠ ಮಾಡುತ್ತಿರುವ ಶಾಸ್ತ್ರಿಗಳ ಮನಸ್ಸಿಗೂ ಸ್ವಲ್ಪ ಶಾಂತಿಯನ್ನು ಒದಗಿಸಿದವು. ಅಂದಿನಿಂದಲೇ ವ್ಯಾಕರಣ ಪಾಠವು ನಿರಾತಂಕವಾಗಿ ಪ್ರಚಲಿತವಾಗಲು ಪ್ರಾರಂಭ! ಆದರೂ ಪಾಠದಲ್ಲಿ ನನ್ನ ಚಿತ್ತವು ಮೂಢ!!

ಸಪ್ತರ್ಷಿಗಳು

★

"ಸಪ್ತರ್ಷಿ"ಗಳೆಂಬ ಸಪ್ತತಾರೆಗಳ ವಿವರವನ್ನು ಈ ಲೇಖನದಲ್ಲಿ, ಪ್ರಭಾತದಲ್ಲಿ 'ದಿನದ ಭವಿಷ್ಯ' ಬರೆಯುತ್ತಿರುವ ಶ್ರೀಯುತ ಎಮ್. ಸುಬ್ರಾಯನ್, ಶಿರೋಮಣಿ ಮತ್ತು ವಿದ್ವಾನ್ ಇವರು ಕೊಡುತ್ತ" ಪಾಶ್ಚಾತ್ಯರಿಗೆ ಈ ನಕ್ಷತ್ರಗಳ ಪರಿಚಯವು ಹಿಂದೂ ದೇಶದವರಿಂದುಂಟಾಯಿತೆಂದು ಇವರ ಅಭಿಪ್ರಾಯವಿದೆ. ಸಪ್ತರ್ಷಿಗಳಿಗೆ ಸಂಬಂಧಿಸಿದ ಒಂದು ವಿದೇಶೀ ಕಥೆಯನ್ನೂ ಕೊಟ್ಟಿರುವರು.

ಹಗಲೂ ರಾತ್ರಿಯೂ ಆಕಾಶವನ್ನು ನಾವು ನೋಡುತ್ತಿದ್ದೇವೆ. ನೋಡಿದಷ್ಟೂ ಆನಂದ ಹೆಚ್ಚುತ್ತದೆ. ಕಣ್ಣು ದಣಿಯುವುದಿಲ್ಲ. ಆದರೆ ರಾತ್ರಿಯ ಸಮಯ ಆಕಾಶದ ಬಡಗು ದಿಕ್ಕಿನಲ್ಲಿ ಶೋಭಿಸುವ ಏಳು ನಕ್ಷತ್ರಗಳನ್ನು ಕಾಣುತ್ತೇವೆ. ಅವುಗಳಿಗೆ ಸಪ್ತರ್ಷಿಗಳೆಂದು ಹೆಸರು. ಈ ತಾರಾಪುಂಜಗಳನ್ನು ನಮ್ಮ ಪೂರ್ವಿಕರು ಐದು ಸಾವಿರ ವರ್ಷಗಳ ಹಿಂದೆ ಚೆನ್ನಾಗಿ ಪರಿಚಯಮಾಡಿಕೊಂಡಿದ್ದಾರೆ. ದ್ವಾಪರಯುಗದ ಯುಧಿಷ್ಠಿರ ಚಕ್ರವರ್ತಿಯ ರಾಯಭಾರಿಯ ಕಾಲದಲ್ಲಿ ಇವು ಮಘಾನಕ್ಷತ್ರದ ಉದಯ ಕಕ್ಷ್ಯೆಯನ್ನು ಹೊಂದಿದ್ದುವೆಂದು ವರಾಹನ ಸಂಹಿತೆಯಲ್ಲಿ ಕಂಡುಬರುತ್ತದೆ. (ಬೃಹತ್ ಸಂಹಿತಾ XIII 3) ವಿಷ್ಣುಪುರಾಣದಲ್ಲಿಯೂ ಸಂಹಿತೆಯ ಅಭಿಪ್ರಾಯವನ್ನೇ ಕಾಣುತ್ತೇವೆ. ಹೈಂದವೇತರರೆನಿಸಿದ ಯವನರೂ, ಕಾಲ್ಡಿಯವರೂ, ಈಜಿಪ್ಟರೂ, ರೋಮನರೂ ಬಹಳ ಹಿಂದಿನಿಂದಲೇ ಈ ನಕ್ಷತ್ರ ಗಣದ ಪರಿಚಯವುಳ್ಳವರಾಗಿದ್ದರೆಂದು ಹೇಳುವುದಕ್ಕೆ ತುಂಬಾ ಸಹಾಯಕಗಳಿವೆ. ರೋಮನರು ಇವುಗಳಿಗೆ ಆರ್‌ಸಾ ಮೇಜರ್ (The Great Bear ದೊಡ್ಡ ಕರಡಿ) ಎಂಬ ನಾಮಕರಣವನ್ನು ಮಾಡಿದರು. ಬಡಗು ಭಾಗದ ಈ ನಕ್ಷತ್ರಗಳನ್ನು ಕೆಳಗೆ ನೋಡುವ ಕರಡಿಯಂತೆ ಕಾಣಬಹುದು; ಸಂಕಲ್ಪಿಸಬಹುದು. ಕರಡಿಯ ಬೆನ್ನೂ ಬಾಲವೂ ಇರುವ ಸ್ಥಾನದಲ್ಲಿ ಈ ಏಳು ನಕ್ಷತ್ರಗಳಿವೆ; ಯವನರ ಎಡೆಯಲ್ಲಿ The Great Bear ಎಂಬ ನಾಮವು ಪ್ರಸಿದ್ಧಿಯುಳ್ಳುದು. ಮಾತ್ರವಲ್ಲದೆ ದಂತಕತೆಯೊಂದು ರಸಾವಹವಾಗಿದೆ. ಪೌರಾಣಿಕ ಯವನರ ದೇವೇಂದ್ರನೆನಿಸಿದ ಜೂಪಿಟರನು ಕಾಲಿಸ್ಟೋ ಎಂಬವನ ಕನ್ನಿಕೆಯ ರೂಪಕ್ಕೆ ಮರುಳಾದನು. ಪ್ರೇಮವನ್ನು ಪ್ರಕಟಿಸತೊಡಗಿದನು. ಪುತ್ರಸಂತಾನವಾಯಿತು. ಇದು ಅವನ ಮಹಿಷಿಯಾದ ಜೂನಾವಿಗೆ ತಿಳಿದುಬಂತು. ಕೂಡಲೇ ಅವಳು ರೇಗಿ ಕಾಲಿಸ್ಟಾವಿನನ್ನು ಹೆಣ್ಣು ಕರಡಿಯಾಗಿ ಶಾಪಮುಖದಿಂದ ಮಾಡಿದಳು. ಈ ಕರಡಿಯು ಕಾಡಿನಲ್ಲಿ ತಿರುಗಾಡುತ್ತಿತ್ತು. ಪ್ರೇಮಫಲವಾಗಿ ಉಂಟಾದ ಪುತ್ರನು ಬಳೆದನು. ಅವನು ಒಂದಾನೊಂದು ದಿನ ಬೇಟೆಗೆ ಕಾಡಿಗೆ ಹೋದನು. ಆಗ ಈ ಹೆಣ್ಣು ಕರಡಿಯು ಕಾಣಬಂತು. ಅದಕ್ಕೆ ಗುರಿಹಿಡಿಯಲು ಯತ್ನಿಸಿದನು. ಆಗ ಜೂಪಿಟರನು ಈ ಕರ್ಮವನ್ನು ಕಾಣಲು ಸಹಿಸದವನಾಗಿ ಈ ಎರಡು ಜನರನ್ನೂ ನಕ್ಷತ್ರ ರೂಪಕ್ಕೆ ಮಾರ್ಪಡಿಸಿ ಆಕಾಶದಲ್ಲಿ ಮಾರ್ಪಡಿಸಿದನು. ಈ ರೀತಿಯಿಂದ ಕಾಲಿಸ್ಟೋ ದೊಡ್ಡ ಕರಡಿಯಾಗಿಯೂ ಆರ್ಕಾಸನು ಸಣ್ಣ ಕರಡಿಯಾಗಿಯೂ Little Bear ತೀರಿದರು. ಧ್ರುವ ನಕ್ಷತ್ರಕ್ಕೆ ಸಮೀಪಿಸಿ ಅಲ್ಲೇ ಅಡಗಿಕೊಂಡಿರುವ ಏಳು ನಕ್ಷತ್ರ ಸಮೂಹಗಳಿಗೆ Little Bear ಎಂಬ ನಾಮಕರಣವು. ಯವನರು ಕರಡಿಗೆ ಆರ್‌ಕ್‌ಟಾಸ್, ಆರ್‌ಟ್‌ಟಾಸ್ ಎಂದು ಹೇಳುವರು. ಈ ಹೆಸರಿಗೆ ಕಾರಣವನ್ನು ಡಾಕ್ಟರ್ ಇ. ಸಿ. ಬ್ರಿವರ್ (Dr. E. E. Brewer)ರವರು ಹೀಗೆ ಹೇಳುತ್ತಾರೆ. ಸಂಸ್ಕೃತದ ಅರ್ಚಿಃ ಆರ್ಚಿಸ್ ಎಂಬ ಶಬ್ದವು ಗ್ರೀಕಿಗೆ ಸಂಕ್ರಮಿಸಿತು. ಸಂಸ್ಕೃತದಲ್ಲಿ ಈ ನಕ್ಷತ್ರಗಳಿಗೆ ಮಹಾಚರ್ಚಿಸ್ ಎಂದು ಕರೆಯುತ್ತಾರೆ. ಯವನರು ಮಹಾಚರ್ಚಿಸ್ ಎಂಬ ಶಬ್ದದ ಅರ್ಚಿಸ್ ಎಂಬ ಪದ ಗ್ರಹಣವನ್ನು ಮಾಡಿ ಅರ್ಚ್‌ಟಾಸ್ ಎಂದು ಮಾಡಿದರೆಂದು ಹೇಳುವರು. ಸಂಸ್ಕೃತದಲ್ಲಿ ನಕ್ಷತ್ರಕ್ಕೆ ತುಂಬಾ ಪರ್ಯಾಯ ನಾಮಗಳಿವೆ. ಅವುಗಳಲ್ಲಿ ಋಕ್ಷ ಎಂಬುದು ಒಂದು. ಈ ಋಕ್ಷ ಶಬ್ದಕ್ಕೆ ಕರಡಿಯೆಂಬ ಅರ್ಥವಿದೆ. ಆದುದರಿಂದ ಈ ಋಕ್ಷ ಶಬ್ದವನ್ನು Archtos ಎಂದು ವ್ಯಾಖ್ಯಾನಿಸಿದುದಾಗಿ ಏಕೆ ಹೇಳಬಾರದು? ಏನಾದರೂ ಪಾಶ್ಚಾತ್ಯರಿಗೆ ಈ ನಕ್ಷತ್ರಗಳ ಪರಿಚಯವು ಹಿಂದೂ ದೇಶದವರಿಂದ ಉಂಟಾಯಿತೆಂದು ಹೇಳುವುದಕ್ಕೆ ಸಂಕೋಚಪಡುವುದು ಬೇಡ. ಹಾಗೆ ಊಹಿಸಬೇಕಾಗುತ್ತದೆ. ವರಾಹನು ಈ ನಕ್ಷತ್ರಗಳನ್ನು ಅತಿ ಮನೋಹರವಾಗಿ ವರ್ಣಿಸಿರುವನು. ಅದನ್ನು ವಾಚಕ ಮಹಾಶಯರು ಅಲ್ಲಿ ಕಾಣಬಹುದು. ಇಲ್ಲಿ ಉದ್ಧರಿಸಿ ವಿಸ್ತರಿಸುವುದಿಲ್ಲ.

ಹಿಂದೀಯರು ಮರೀಚಿ, ವಸಿಷ್ಠ, ಆಂಗೀರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತುಗಳೆಂದು ಈ ಏಳು ನಕ್ಷತ್ರಗಳಿಗೆ ಅಧಿಷ್ಠಾನ ದೇವತೆಗಳನ್ನಾಗಿ ಹೇಳಿದ್ದಾರೆ. ಋಷಿಗಳ ಸ್ಥಾನವನ್ನು ಇತ್ತು ಮಹತ್ವವನ್ನು ಕೊಟ್ಟಿದ್ದಾರೆ. ಈ ಋಷಿಗಳು ಬ್ರಹ್ಮಪುತ್ರರು. ಮಾನವ ವಂಶ ಪ್ರತಿಷ್ಠೆಗೆ ಹೇತುಭೂತರಾದ ದಶ ಪ್ರಜಾಪತಿಗಳಲ್ಲಿ ಅಡಗಿದ ಕುಲಗುರುಗಳು.

ಮಹರ್ಷಯಃ ಸಪ್ತಪೂರ್ವೇ
ಚತ್ವಾರೋಮ ನವಸ್ತಥಾ ।
ಮದ್‌ಭಾವಾ ಮಾನಸಾ ಜಾತಾ
ಯೇಷಾಂ ಲೋಕೇ ಇಮಾಃ ಪ್ರಜಾಃ ।,

(ಗೀತೆ X 6)

ಈ ಗೀತಾವಚನವನ್ನು ಅರ್ಥಮಾಡಿದರೆ ಈ ತೇಜಸ್ಸುಗಳನ್ನು ನಾವು ದೇವತೆಗಳೆಂದು ಪೂಜಿಸುವುದರಲ್ಲಿ ಅರ್ಥವಿದೆಯೆಂಬುದು ನಮ್ಮ ಮನಸ್ಸಿಗೆ ಬಾರದಿರದು. ಈ ನಕ್ಷತ್ರಗಳು ಅಶ್ವಿನಿ ಮೊದಲಾದ ಒಂದೊಂದು ನಕ್ಷತ್ರಗಳ ಕಕ್ಷ್ಯೆಯಲ್ಲಿ ನೂರು ನೂರು ವರ್ಷಗಳ ಕಾಲ ಉದಿಸುತ್ತಿದ್ದುವು. ಹೀಗೆ ಉದಿಸಿ ರಾಶಿಚಕ್ರವನ್ನು ಸುತ್ತಲು 2700 ವರ್ಷಗಳು ಬೇಕಾಗುತ್ತದೆಂದು ಪ್ರಾಚೀನರ ಮತ. ಇವರು ಈ ರೀತಿಯಿಂದ ಒಂದೊಂದು ರಾಶಿಯಲ್ಲಿ 225 ವರ್ಷ ನಿಲ್ಲುತ್ತಿರುವರು. ಈಗ ಸಿಂಹ ರಾಶಿಯಲ್ಲಿದ್ದಾರೆ. ನಾವು ಪುರಾಣಗಳಲ್ಲಿ ಇವರು ಮಘಾ ನಕ್ಷತ್ರದಲ್ಲಿದ್ದರೆಂದು ಕಾಣುತ್ತೇವೆ. ಮಘಾ ನಕ್ಷತ್ರವು ಸಿಂಹರಾಶಿಗತವಾದ್ದು. ಆದುದರಿಂದ ಒಂದು ಪರಿವೃತ್ತಿಯು ಕೊನೆಗೊಂಡು ಈಗ ಎರಡನೆಯ ಪರಿವೃತ್ತಿಯೆಂದು ಹೇಳಬಹುದು. ಕನ್ಯಾ ರಾಶಿಗೆ ಬಂದಾಗ ಎರಡನೆಯ ಪರಿವೃತ್ತಿಯೂ ಕೊನೆಗೊಳ್ಳುವುದು.

ಸಪ್ತರ್ಷಿಗಳ ಪ್ರಭೆಯು ಕುಂದುವುದು, ಈ ನಕ್ಷತ್ರಗಳನ್ನು ಉಲ್ಕಾಪಾತ ಧೂಮಕೇತುಗಳುಂಟಾಗುವುದು (ಉಲ್ಕಾಪಾತ =Meteor) (ಧೂಮಕೇತು = Comet] ಮನುಷ್ಯವರ್ಗಕ್ಕೆ ಉಂಟಾಗುವ ಆಪತ್ತನ್ನು ಸೂಚಿಸುವುದಾಗಿದೆ. ಮರೀಚಿಗೆ ಉಲ್ಕಾಪಾತ ಧೂಮಕೇತು ಸಂಪರ್ಕ ಉಂಟಾದರೆ ಮಾಂತ್ರಿಕರಿಗೂ ಸಂಗೀತದವರಿಗೂ ಅಲ್ಲದೆ ಇನ್ನಿತರರಿಗೂ ಅನಿಷ್ಟವೆಂದು ಹೇಳುವರು. ವಸಿಷ್ಠನಿಗೆ ಇವುಗಳಿಂದ ಬಾಧೆಯಾದರೆ ಭಾರತದ ಉತ್ತರ ಪಶ್ಚಿಮಭಾಗದಲ್ಲಿರುವ ಪಾರಸೀಕ ಯವನರೇ ಮೊದಲಾದವರಿಗೂ ಮಾತ್ರವಲ್ಲದೆ ವನವಾಸಿಗಳಿಗೂ ಕೆಟ್ಟ ಫಲವು. ಅಂಗಿರಸನಿಗುಂಟಾದರೆ ಜ್ಞಾನಿಗಳಿಗೂ ವಿಜ್ಞಾನಿಗಳಿಗೂ ಬ್ರಾಹ್ಮಣರಿಗೂ ವಿದ್ಯಾದಾನವನ್ನು ಗೈಯುವವರಿಗೂ ಸಂಕಟ ಫಲವು. ಅತ್ರಿಗುಂಟಾದರೆ ನದಿ, ಸಮುದ್ರ, ಪರ್ವತಾದಿಗಳಿಗೆ ದೋಷ. ಪುಲಸ್ತ್ಯನಿಗುಂಟಾದರೆ ದಾಕ್ಷಿಣಾತ್ಯರಿಗೆ ಕೇಡು. ಪುಲಹನಿಗುಂಟಾದರೆ ಕಂದಮೂಲಗಳಿಗೂ ಸಸ್ಯಾದಿ ವರ್ಗಗಳಿಗೂ ಹಾನಿ. ಕ್ರತುವಿಗುಂಟಾದರೆ ಯಾಗಾದಿ ಸತ್ಕರ್ಮಗಳಿಗೆ ಭಂಗವು. ಈ ರೀತಿಯಾಗಿ ಬೃಹತ್ಸಂಹಿತೆಯಲ್ಲಿ ವಿವರಿಸಿ ಕಾಣುತ್ತದೆ [ಬೃಹತ್ಸಂಹಿತೆ XII 7-11]

ಸಪ್ತರ್ಷಿಗಳಲ್ಲಿ ಮೂಡುಭಾಗದಲ್ಲಿ ಎರಡನೆಯ ನಕ್ಷತ್ರವಾದ ವಸಿಷ್ಠನ ಸಮೀಪದಲ್ಲಿ ಒಂದು ಕಿರಿಯ ನಕ್ಷತ್ರವಿದೆ. ಆ ನಕ್ಷತ್ರಕ್ಕೆ ಅರುಂಧತಿಯೆನ್ನುವರು. ಅರುಂಧತಿಯು ವಸಿಷ್ಠನ ಧರ್ಮಪತ್ನಿ. ಈ ಅರುಂಧತಿಯನ್ನು ಕಾಣುವುದು ಹಿಂದುಗಳಿಗೆ ಪುಣ್ಯಫಲವಾಗಿದೆ. ನವದಂಪತಿಗಳು ಈ ನಕ್ಷತ್ರವಂದನೆಯನ್ನು ಮೊತ್ತಮೊದಲು ಮಾಡಬೇಕು. ಅರುಂಧತಿಯನ್ನು ಕಾಣದಿರುವುದು ಮರಣ ಲಕ್ಷಣವೆಂದು ಹೇಳುವರು.

ಸಪ್ತರ್ಷೀಣಾಂ ಸಮೀಪಸ್ಥಾಂ
ಯೋ ನ ಪಶ್ಯತ್ಯರುಂಧತೀಂ ।
ಧ್ರುವಮಾಕಾಶಗಂಗಾಂ ವಾ
ಸ ನ ಪಶ್ಯತಿ ತಾಂ ಸಮಾಂ ॥

ವಸಿಷ್ಠನ ಪೂರ್ವಭಾಗದಲ್ಲಿರುವ ಮರೀಚಿ, ಬಡಗು ಭಾಗದಲ್ಲಿರುವ ಅಂಗಿರಸ್, ಅಲ್ಲಿಂದ ಮುಂದೆ ಉತ್ತರದಲ್ಲಿರುವ ಅತ್ರಿ ಈ ಮೂರು ನಕ್ಷತ್ರಗಳಿಂದ ನಮ್ಮ ಸಪ್ತಗ್ರಹಗಳಲ್ಲಿ ಪಂಚಗ್ರಹಗಳ ಉತ್ಪತ್ತಿ. ಸೂರ್ಯನು ಮರೀಚಿಯ ಪುತ್ರನು. ಚಂದ್ರನು ಅತ್ರಿಯ ಪುತ್ರನು. ಶನಿಯು ರವಿಯ ಪುತ್ರನು. ಬುಧನು ಚಂದ್ರನ ಪುತ್ರನು. ಗುರುವು ಆಂಗೀರಸನ ಪುತ್ರನು. ಈ ರೀತಿಯಿಂದ ಜ್ಯೋತಿಶ್ಶಾಸ್ತ್ರವನ್ನು ವಿವೇಚಿಸುವಲ್ಲಿ ಸಪ್ತರ್ಷಿಗಳಿಗೆ ಪ್ರಾಧಾನ್ಯತೆಯು ಕಂಡುಬರುತ್ತದೆ. ಚಿತ್ರಶಿಖಂಡಿಗಳೆಂದು ಹೆಸರುಳ್ಳ ಈ ದೀಪ್ತಿ ಗೋಳಗಳು ಉತ್ತರಾಕಾಶದ ಕೇಂದ್ರವರ್ತಿಯಾದ ಧ್ರುವ ನಕ್ಷತ್ರದ ಮಾರ್ಗದರ್ಶಕಗಳಾಗಿ, ತಮ್ಮ ಮಹಾತ್ಮ್ಯವನ್ನು ವರ್ಧಿಸುತ್ತವೆ. ಪುಲಹ ಕ್ರತುಗಳನ್ನು ಯೋಚಿಸಿಕೊಂಡು ಒಂದು ಋಜುರೇಖೆಯನ್ನು

ಉತ್ತರಕ್ಕೆ ಕ್ರತುವಿನಿಂದ ಮರೀಚಿಯು ವರೆಗಿನ ದೂರಕ್ಕೆ ತುಲ್ಯವಾಗಿ ಉದ್ದಕ್ಕೆ ಬರೆದರೆ ಅದು ಧ್ರುವನಕ್ಷತ್ರದಲ್ಲಿ ಬಂದು ಸೇರುವುದು. ಧ್ರುವವು ಜ್ಯೋತಿಶ್ಶಾಸ್ತ್ರಕ್ಕೆ ಒಂದು ಮೂಲಸ್ತಂಭವಾಗಿದೆ. ಅದನ್ನು ಸರಿಪಡಿಸಲು ಈ ನಕ್ಷತ್ರಗಳೇ ಬೇಕು.

ಜ್ಯೋತಿಷ ಸಿದ್ಧಾಂತಿಗಳು ಈ ತಾರೆಗಳು ನಮ್ಮ ಸೂರ್ಯನಿಗಿಂತ ಎಷ್ಟೋ ಪಾಲಿಗೆ ಮಹತ್ತರಗಳೆಂದು ಹೇಳುತ್ತಾರೆ. ಅರಬಿಯ ಜನಾಂಗದವರು ಮಾಡಿದ ನಾಮಕರಣವನ್ನೇ ಪಾಶ್ಚಾತ್ಯರು ಈ ತಾರೆಗಳಿಗೆ ಅಂಗೀಕರಿಸಿರುವರು. ಈ ಹೆಸರುಗಳನ್ನು ಕೆಳಗೆ ಕೊಡಲಾಗುವುದು.

ಕ್ರತು= Dubhe
ಪುಲಹ= Merak
ಪುಲಸ್ತ್ಯ= Shecda
ಅತ್ರಿ= Megrez
ಅಂಗಿರಸ್= Alioth
ವಸಿಷ್ಠ= Mizar
ಮರೀಚಿ= Benatunsch
ಅರುಂಧತಿ= Alcor

ಈ ನಕ್ಷತ್ರಗಳ ಸಮೂಹಕ್ಕೆ 'ಅರ್‌ಸಾಮೇಜರ್ ಎಂಬ ನಾಮಕರಣವಿದೆ. ಇದರಿಂದ ಈ ನಕ್ಷತ್ರಗಳ ಸ್ಥಿತಿಯು ಒಂದೇ ಸಮತಲನದಲ್ಲಿ ಇಲ್ಲವೇ ಗತಿಯು ತುಲ್ಯವಾದ್ದು ಎಂದು ತಿಳಿಯುವುದು ಯುಕ್ತವಲ್ಲ. ಮುನ್ನೂರು ವರ್ಷಗಳ ನಿರಂತರ ಪರಿಶ್ರಮ ಫಲವಾಗಿ ಇವುಗಳ ಗತಿಯು ತುಲ್ಯವಾದುದಲ್ಲವೆಂದು ಸಿದ್ಧಾಂತಿಗಳು ಇಲ್ಲವೆ ನಿರೀಕ್ಷಕರು ಕಂಡೆತ್ತಿದ್ದಾರೆ. ಕ್ರತು (Dubhe) ಮತ್ತು ಮರೀಚಿ (Benatunsch) ಗಳೆಂಬ ಈ ಎರಡು ನಕ್ಷತ್ರಗಳ ಗತಿಯು ಉಳಿದ ಐದು ನಕ್ಷತ್ರಗಳಿಗಿಂತ ಭಿನ್ನವಾದುದು. ಉಳಿದ ಐದರ ಗತಿಯು ಅದ್ಭುತಕರವಾದ ಸಾಮ್ಯತೆಯುಳ್ಳದು. ಮಾತ್ರವಲ್ಲ; ವಸಿಷ್ಠನು (Mizar) ಭೂಮಿಯಿಂದ ಹತ್ತೊಂಬತ್ತು ಲಕ್ಷ ಮೈಲು ದೂರ ಉಳ್ಳವನು ಎಂದು ನಿರ್ಣಯಪಡಿಸಿದ್ದಾರೆ. ಸೂರ್ಯನು ಭೂಮಿಯಿಂದ ಒಂಭತ್ತು ಕೋಟಿ ಮೂವತ್ತು ಲಕ್ಷ ಮೈಲುಗಳ ದೂರದಲ್ಲಿದ್ದಾನೆ. ಈ ದೂರದಿಂದ ವಸಿಷ್ಠನ ಸ್ಥಿತಿಯು ಎರಡು ಲಕ್ಷ ಆರು ಸಾವಿರ ಮೈಲುಗಳ ದೂರದಲ್ಲೆಂದರೆ ಅದು ಎಷ್ಟು ದೂರವೆಂಬುದನ್ನು ವಾಚಕರು ತಮ್ಮಿಂದ ತಾವೇ ಊಹಿಸಬಹುದು. ವಸಿಷ್ಠನಿಂದ ಅದರ ಅತ್ಯಂತ ಸಮೀಪದ ಅಂಗಿರಸ್ ನಲ್ಲಿಗೆ ಅನ್ಯೋನ್ಯ ರಶ್ಮಿಯು ಬಂದು ಸೇರಬೇಕಾದರೆ ಹದಿನಾಲ್ಕು ವರ್ಷಗಳ ಕಾಲಬೇಕು. ಒಂದು ವರ್ಷದಲ್ಲಿ ಒಂದು ಕಿರಣವು ೫,೮೭೬,೦೬೯, ೮೮೦,೦೦೦ ಮೈಲುಗಳ ದೂರ ಹೋಗುತ್ತದೆ. ಈ ದೂರಕ್ಕೆ ಒಂದು ದಿವ್ಯ (ಪ್ರಕಾಶ) ಸಂವತ್ಸರವೆಂದು ಹೆಸರು. ಈ ರೀತಿಯಿಂದ ಭೂಮಿಗೆ ಆ ನಕ್ಷತ್ರದಿಂದ ಕಿರಣವು ಎತ್ತಿ ಸೇರಬೇಕಾದರೆ ೧೮೦ ವರ್ಷಗಳ ಕಾಲವು ಬೇಕು. ಭೂಮಿಯು ಒಂದು ಸಾಸಿವೆ ಕಾಳು, ಸೂರ್ಯನು ಒಂದು ನಿಂಬೆಹುಳಿ ಹಣ್ಣು ಎಂದು ವಿಚಾರಿಸಿದರೆ, ವಸಿಷ್ಠನ ಗೋಳವು ಹದಿಮೂರು ಸಾವಿರ ನಿಂಬೆ ಹಣ್ಣುಗಳ ಯೋಗದಿಂದುಂಟಾದ ಮಹತ್ವವನ್ನೇರುವುದು. ಸೂರ್ಯ ಗೋಳದ ವ್ಯಾಸವು ಭೂಮಿಯ ವ್ಯಾಸಕ್ಕಿಂತ ೧೯೦ ಪಾಲು ದೊಡ್ಡದು. ವಸಿಷ್ಠನದು ೫೭೦೦ ಪಾಲು ದೊಡ್ಡದು ಎಂದು ಹೇಳುತ್ತಿದ್ದಾರೆ. ಇಷ್ಟು ಮಹತ್ತಾದ ಈ ಗೋಳವು ನಮ್ಮ ಕಣ್ಣಿಗೆ ಒಂದು ಮಯಣದ ಬತ್ತಿಯ ಬೆಳಕಿನಂತೆ ತೋರುತ್ತಿರಲು ಭೂಮಿಯಿಂದ ಎಷ್ಟು ದೂರವಿದೆ ಎಂಬುದಾಗಿ ಊಹಿಸಬಾರದೇ? ಪುಲಹನು ವಸಿಷ್ಠನಿಗಿಂತ ೬೦ ದಿವ್ಯವತ್ಸರಗಳ ದೂರದಲ್ಲಿದ್ದಾನೆ. ಹೀಗಿರುವುದರಿಂದ ಈ ನಕ್ಷತ್ರ ಪುಂಜಗಳ ವಿಷಯವಾಗಿ ವಿಚಾರಿಸಿದರೆ ಯಾರ ಮನಸ್ಸು ಒಮ್ಮೆ ಭ್ರಮೆಗೊಳ್ಳಲಿಕ್ಕಿಲ್ಲ! ವಿಸ್ತರಿಸಿದಷ್ಟು ಸಾಕಾಗಲಿಕ್ಕಿಲ್ಲ!

ವರುಷಕ್ಕೆ ಹತ್ತು ಲಕ್ಷ ಜನರ ಬಲಿ!

★

ಹಿಂದೂದೇಶದಲ್ಲಿ ಕ್ಷಯರೋಗದ ಹಾವಳಿ.

ಭೂಕಂಪಕ್ಕಿಂತ ಹೆಚ್ಚು ನರಬಲಿಯನ್ನೊಯ್ಯುತ್ತಿದೆ!

ಲೇಖಕರು ಡಾ| ಎಫ್. ಎಚ್. ಒಡೆಯರ್, ಫರಂಗಿಪೇಟೆ, ಮಂಗಳೂರು.

ಒಂದು ಭೂಕಂಪವು ಪ್ರತಿ ವರುಷಕ್ಕೆ ಬೊಂಬಾಯಿಯ ಗಾತ್ರದ ಒಂದು ನಗರವನ್ನು ಅಳಿಸಿಬಿಟ್ಟರೂ ಕ್ಷಯರೋಗದಷ್ಟು ದೊಡ್ಡ ಸಂಖ್ಯೆಯಲ್ಲಿ ನರಬಲಿಯನ್ನೊಯ್ಯಲಾರದು! ಕ್ಷಯರೋಗದ ಹಾವಳಿಯನ್ನು ಕಾದಾಡುವುದು ಎಲ್ಲ ಸರಕಾರಗಳ—ಹಾಗು ಪ್ರಜೆಗಳ ಮೊದಲನೆ ಕರ್ತವ್ಯವಾಗಿದೆ! ನಮ್ಮ ದೇಶದಲ್ಲಿರುವ ಕ್ಷಯರೋಗ ಚಿಕಿತ್ಸಾಲಯಗಳು ಬಲು ಕಡಿಮೆ. ಜನರ ದಾರಿದ್ರ್ಯ, ಅನಾರೋಗ್ಯಕರ ನಡತೆ, ಅಜ್ಞಾನ—ಇವುಗಳಿಂದ ಕ್ಷಯರೋಗ ಹೆಚ್ಚುತ್ತಿದೆ. ಕ್ಷಯರೋಗವು ಬಾಗಿಲಿಗೆ ಬಂದು ತಟ್ಟಿದರೂ ಒಳಗೆ ಪ್ರವೇಶಿಸಿದಾಗಲೂ ತಿಳಿಯದೆ ಇರುವವರಿದ್ದಾರೆ! ತಿಳಿದವರೊಡನೆ—ಅದರ ಚಿಕಿತ್ಸೆಗೆ ಅನುಕೂಲತೆಯಿಲ್ಲ!

ಕ್ಷಯರೋಗದಷ್ಟು ಭಯಂಕರವಾದ ರೋಗವು ಮತ್ತೊಂದಿಲ್ಲ. ಇಂದು ಹಿಂದೂದೇಶದಲ್ಲಿ ಈ ರೋಗವಿಲ್ಲದ ನಗರ ಯಾ ಹಳ್ಳಿಯಿಲ್ಲ. ಮಂಗಳೂರು ನಗರದ ಆರೋಗ್ಯ ಇಲಾಖೆಯಿಂದ ಹೊರಡುವ ಸಪ್ತಾಹಿಕ ಆರೋಗ್ಯ ವರದಿಗಳನ್ನು ನೋಡಿದರೆ, ವಾರಕ್ಕೆ ನಾಲ್ಕೈದು ಮಂದಿ, ಕ್ಷಯ (ಅಥವಾ ಶ್ವಾಸ ಖಾಸ ರೋಗದಿಂದಾದರೂ) ಮರಣಪಟ್ಟುದು ತಿಳಿದು ಬಂದೀತು.

ಕ್ಷಯ ರೋಗವನ್ನು ಖಂಡಿತವಾಗಿ ಚಿಕಿತ್ಸಿಸಬಹುದಾಗಿದೆ. ಆದರೆ, ಹೆಚ್ಚು ಮಂದಿ, ಕ್ಷಯ ರೋಗದ ಚಿಹ್ನಗಳನ್ನು ತಿಳಿದೂ ಯೋಗ್ಯ ಚಿಕಿತ್ಸೆಗೆ ಕೂಡಲೇ ಕೈ ಹಚ್ಚದೆ ನರಬಲಿ ಕೊಟ್ಟಂತಾಗುವುದು. ದಾರಿದ್ರ್ಯವೂ, ಇತರ ಅನುಕೂಲತೆಗಳಿಲ್ಲದಿರುವುದೂ ಇದಕ್ಕೆ ಕಾರಣವಾಗಿರಬಹುದು. ಪ್ರಥಮ ಸ್ಥಿತಿಯಲ್ಲೇ ಚಿಕಿತ್ಸೆಗೆ ತೊಡಗುವುದರಿಂದ ಕ್ಷಯರೋಗವು ಗುಣವಾಗುವ ಭರವಸೆಯಿದೆ.

ಕಳೆದ ಜಾಗತಿಕ ಮಹಾ ಯುದ್ಧದಲ್ಲಿ ೧,೦೦೦,೦೦೦ ಜನರು ಬ್ರಿಟಿಷ್ ಸಾಮ್ರಾಜ್ಯವೊಂದರಲ್ಲೇ, ಪ್ರಾಣ ಕಳಕೊಂಡರೆಂದು ಹೇಳಲಾಗಿದೆ. ಇದನ್ನೋದುತ್ತ ನಮಗೆ ಇದು ದೊಡ್ಡ ಸಂಖ್ಯೆಯೆಂದೆಣಿಸಿ ಒಂದು ತರದ ಭೀತಿಯುತ್ಪನ್ನವಾಗುತ್ತದೆ. ಆದರೆ, ಹಿಂದೂದೇಶದಲ್ಲಿ ವರ್ಷಂಪ್ರತಿ ೧,೦೦೦,೦೦೦ಕ್ಕಿಂತ ಹೆಚ್ಚು ಮಂದಿ, ಕ್ಷಯ ರೋಗದಿಂದಲೇ ಸಾಯುವರು! ಈ ಸಂಖ್ಯೆಯು ಎಷ್ಟು ಭಯಂಕರವಿರಬೇಕು!

ಅತಿಶಯೋಕ್ತಿಯಲ್ಲ,—೧೯೧೮ರಿಂದ ಈ ವರೆಗೆ ೨೫ರಿಂದ ೩೦ ಮಿಲ್ಲಿಯ ಜನರು ಈ ಭಯಂಕರ ರಾಕ್ಷಸನಿಗೆ ಆಹುತಿಯಾಗಿರುವರು.

ಹೀಗೂ ಎಣಿಕೆ ಹಾಕಬಹುದು: ಬೊಂಬಾಯಿ ನಗರವು ೨೫ರಿಂದ ೩೦ ಬಾರಿ ಭೂಕಂಪದಿಂದ ಅಳಿಸಿ ಹೋದರೆ—ಆಗುವ ಪ್ರಜಾನಾಶದಷ್ಟೇ ಇದು!

ಕ್ಷಯ ರೋಗಕ್ಕಾಗಿ ಸರಕಾರವು ಏನು ಮಾಡಿದೆ? ಎಷ್ಟನ್ನು ಮಾಡಿದೆ? ಹಿಂದೂ ದೇಶದಲ್ಲಿರುವ ಕ್ಷಯ ರೋಗ ಚಿಕಿತ್ಸಾಶ್ರಮಗಳು ಅತ್ಯಲ್ಪ; ಇದ್ದ ಕೆಲವೇ ಚಿಕಿತ್ಸಾಲಯಗಳಲ್ಲಿ ಕೆಲವು ಖಾಸಗಿ ಚಿಕಿತ್ಸಾಲಯಗಳು! ಹಿಂದೂ ದೇಶದಲ್ಲಿನ ಕ್ಷಯ ರೋಗಿಗಳ ಸಂಖ್ಯೆಯನ್ನು ಎಣಿಸಿದರೆ ಈಗ ಇರುವ ಚಿಕಿತ್ಸಾಲಯಗಳು ಏನೇನೂ ಸಾಲವು.

ನಮ್ಮನ್ನಾಳುವ ಬ್ರಿಟಿಷರು ಇಂಗ್ಲಾಂಡಿನಲ್ಲಿ ಶಸ್ತ್ರ ಸಂಗ್ರಹಕ್ಕಾಗಿ ೧೨೦೦ ಮಿಲಿಯ ಪವನು ವೆಚ್ಚಮಾಡಿರುವರು. ಕ್ಷಯ ರೋಗವನ್ನು ಕಾದಾಡಲು ಎಷ್ಟು ವ್ಯಯವಾಗಿದೆಯಂತೆ?

ಡಾ| ಎಫ್. ಎಚ್. ಒಡೆಯರ್‌ರವರು "ಕ್ಷಯ ರೋಗವೂ ನಿವಾರಣೋಪಾಯವೂ" ಎಂಬ ಲೇಖವೊಂದನ್ನು ಬರೆದಿರುವರು. ಅದರಲ್ಲಿ ಅವರು ಕೇವಲ ಕ್ಷಯ ರೋಗದ ಚಿಹ್ನೆ, ಅದರ ಬೆಳವಣಿಗೆಯ ಲಕ್ಷಣಗಳು, ಚಿಕಿತ್ಸೆಯ ಸೂಚನೆಗಳು—ಇದಿಷ್ಟನ್ನೂ ವಿಶದೀಕರಿಸಿರುತ್ತಾರೆ. ಈ ಮೇಲೆ ಕೊಟ್ಟಿರುವ ಅಂಕೆ ಸಂಖ್ಯೆಗಳ ವಿವರವು ಉತ್ತರ ಲಂಡನಿನಲ್ಲಿ ೧೯೧೮ರಿಂದ ೧೯೨೨ರ ವರೆಗೆ ಟುಬರ್ಕುಲೊಸಿಸ್ ಆಫೀಸರರಾಗಿದ್ದ ಡಾ| ಎಫ್. ಎನ್. ಮೂರ್ಹುನ್ ಇವರ ಲೇಖನದಿಂದ ಆಯ್ದು ತೆಗೆದುದಾಗಿದೆ.

ಕ್ಷಯ ರೋಗವೂ, ನಿವಾರಣೋಪಾಯವೂ.

ಕ್ಷಯ ರೋಗದ ನಿವಾರಣೆ ಮತ್ತು ಅದರ ನಿವಾರಣೋಪಾಯವನ್ನು ತಿಳಿಯುವ ಮೊದಲು ಕ್ಷಯ ರೋಗವೆಂದರೇನು? ಅದು ಮನುಷ್ಯನ ಯಾವ ಯಾವ ಅಂಗಗಳಲ್ಲಿ ನೆಲಸುವದು? ಮತ್ತು ಹೇಗೆ ನೆಲಸುವದು ಎಂಬುದನ್ನು ಪ್ರಥಮತಃ ತಿಳಿಯುವುದು ಅವಶ್ಯಕವು. ಈ ರೋಗವು ಶ್ವಾಸಕೋಷ ಮತ್ತು ಶ್ವಾಸ ನಾಳ ಇವುಗಳಲ್ಲಿ ಕಾಣಿಸಿಕೊಳ್ಳುವದು. ಆದುದರಿಂದ ಶ್ವಾಸಕೋಶ ಮತ್ತು ನಾಳಗಳ ಸ್ವರೂಪ (Structure)ವನ್ನು ಈ ಲೇಖನದಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ವಿವರಿಸುವೆನು.

ಶ್ವಾಶಕೋಶಗಳ ರಚನೆ ಮತ್ತು ಕಾರ್ಯ.

ಶರೀರದಲ್ಲಿ ಸದಾ ಹರಿಯುತ್ತಿರುವ ರಕ್ತಕ್ಕೆ ಆಮ್ಲಜನಕವನ್ನು ಕೊಟ್ಟು ಅದರಲ್ಲಿರುವ ಇಂಗಾಲಾಮ್ಲವನ್ನು ಹೊರಹಾಕಿ ರಕ್ತವನ್ನು ಶುದ್ಧಿಮಾಡುವುದೇ ಶ್ವಾಸಕೋಶಗಳ ಮುಖ್ಯ ಕಾರ್ಯವು. ಹೊರಗಿನ ನಿರ್ಮಲವಾದ ವಾಯುವನ್ನು ರಕ್ತಕ್ಕೊದಗಿಸಿಕೊಟ್ಟು ಕಲ್ಮಶವಾದ ವಾಯುವನ್ನು ಹೊರಕ್ಕೆ ತಳ್ಳಲ್ಪಡುವುದರ ಮೂಲಕ ಈ ಕಾರ್ಯವು ಸಾಗುವದು.

ಹೊರಗಿನ ನಿರ್ಮಲವಾದ ವಾಯುವನ್ನು ಉಚ್ಛ್ವಸಿಸಿದಾಗ ಅಂದರೆ ಉಸಿರೆಳೆದುಕೊಂಡಾಗ ಬಾಯಿ ಮತ್ತು ಮೂಗುಗಳಿಗೆ ಮೊದಲಾಗಿ ಹೋಗಿ ಧೂಳು ಮೊದಲಾದ ಕಲ್ಮಶವನ್ನು ಅಲ್ಲಿ ತಡೆದಿಟ್ಟು ಶರೀರದಲ್ಲಿರುವಷ್ಟು ಶಾಖ—ಆವಿಗಳನ್ನು ಒಳಗೆ ಹೋಗುವ ಗಾಳಿಗೆ ಕೊಡುವದೇ ಮೂಗಿನ ಮುಖ್ಯ ಕಾರ್ಯವು. ಆರೋಗ್ಯವಂತರು ಸಾಧಾರಣವಾಗಿ ಬಾಯಿಯಿಂದ ಉಸಿರಾಡುವುದಿಲ್ಲ. ಬಾಯಿಯಿಂದ ಉಸಿರಾಡುವುದೇ ಅನಾರೋಗ್ಯದ ಲಕ್ಷಣ.

ಬಾಯಿ ಮೂಗುಗಳಿಂದ ವಾಯುವು ನಾದ ನಾಳಕ್ಕೆ (Larynx) ಹೋಗುವುದು. ಈ ನಾಳದ ಮೇಲ್ಭಾಗದಲ್ಲಿ ಮೃದ್ವಸ್ಥಿ (Cartilege)ಯಿಂದ ಮಾಡಲ್ಪಟ್ಟ ಪರದೆಯೊಂದಿರುವದು. ಈ ಪರದೆಯನ್ನು "ಹಿನ್ನಾಲಿಗೆ" (Glottis) ಎಂದು ಹೇಳುವರು. ಹಿನ್ನಾಲಿಗೆಯು ಆಹಾರ ಪದಾರ್ಥಗಳನ್ನು ನಾದನಾಳಕ್ಕೆ ಹೋಗದಂತೆ ಮಾಡಿ ಅನ್ನನಾಳಕ್ಕೆ ಹೋಗುವಂತೆ ಮಾಡುವದು. ನಾದನಾಳದ ಮಧ್ಯದಲ್ಲಿ ಅಲಗುಗಳಂತಿರುವ ಮೃದ್ವಸ್ಥಿಗಳೆರಡಿರುವವು. [Vocal-cords.] ಇವುಗಳ ಮಧ್ಯೆಯಿರುವ ಬಿರುಕಿನ ಅಗಲನ್ನು ವ್ಯತ್ಯಾಸಮಾಡುವದರ ಮೂಲಕ ಬೇರೆ ಬೇರೆ ಸ್ವರಗಳು ಹುಟ್ಟುವವು. ನಾದನಾಳದಿಂದ ವಾಯುವು ದೊಡ್ಡ ಶ್ವಾಸನಾಳಕ್ಕೆ [Trachea] ಹೋಗುವದು. ಈ ನಾಳವು ಮೃದ್ವಸ್ಥಿಯ ಉಂಗುರಗಳಿಂದ ಮಾಡಲ್ಪಟ್ಟದೆ. ಹೀಗಿರುವದರಿಂದಲೇ ಕುತ್ತಿಗೆಯನ್ನು ಬಗ್ಗಿಸುವಾಗಲೂ ಈ ನಾಳವು ತೆರೆದಿರುವದು. ಅಲ್ಲಿಂದ ಮುಂದೆ ವಾಯುವು ಸಣ್ಣ ಸಣ್ಣ ಶ್ವಾಸನಾಳಗಳಿಗೆ [Bronchi and Bronchioles] ಹೋಗುವದು. ಈ ನಾಳಗಳು ಒಂದರಿಂದೆರಡರಂತೆ ಕವಲೊಡೆದೊಡೆದು ಸಣ್ಣ ಸಣ್ಣ ನಾಳಗಳಾಗುವವು. ಈ ತೆರನಾದ ನಾಳಗಳ ಸಮೂಹವನ್ನು "ಶ್ವಾಸವೃಕ್ಷ" [Bronchial-tree] ಎಂದು ಕರೆಯುವರು.

ವಾಯುವು ಸಣ್ಣ ನಾಳಗಳಿಂದ ಸಣ್ಣ ಸಣ್ಣ ಶ್ವಾಸ ಚೀಲಗಳಿಗೆ [Aveoli] ಹೋಗುವುದು. ಈ ಚೀಲಗಳು ಒಂದು ಬಗೆಯ ಪೊರೆಯಿಂದ ಮಾಡಲ್ಪಟ್ಟಿರುವವು. ಈ ಪೊರೆಯಲ್ಲಿ ಅನೇಕಾನೇಕ ಲೋಮ ನಾಳಗಳು [capillaries] ಇರುವವು. ಈ ಲೋಮ ನಾಳಗಳಲ್ಲಿ ಹರಿಯುತ್ತಿರುವ ರಕ್ತವು ಚೀಲಗಳಲ್ಲಿರುವ ಈ ಗಾಳಿಯಿಂದ—ಕಿಕ್ಕಿರಿದು ಹರಿಯುತ್ತಿರುವದು. ರಸನಾಳಗಳನ್ನು ತೆಳ್ಳಗಿನ ಪರೆಯಿಂದ ಮಾಡಿರುವದರಿಂದಲೇ ಒಂದರಿಂದಿನ್ನೊಂದು ಆಮ್ಲ ಜನಕ ಮತ್ತು ಇಂಗಾಲಾಮ್ಲವನ್ನು ಬದಲಾಯಿಸಿಕೊಳ್ಳಲು ಅನುಕೂಲವಿರುತ್ತದೆ.

ರೋಗವು ಅಂಟಿಕೊಳ್ಳುವ ಬಗೆ. (Mode of Infection)

ಈ ರೋಗವು ಕ್ರಿಮಿಯಿಂದಲೇ ಉಂಟಾಗುವುದೆಂದು ಪಾಶ್ಚಾತ್ಯ ವೈದ್ಯರ ಮತವಾಗಿದೆ. ಆದರೆ ಆಯುರ್ವೇದ ಚಿಕಿತ್ಸಕರು ಕ್ರಿಮಿಗಳಿಂದಾಗಿಯೇ ಈ ರೋಗವು ಅಂಟಿಕೊಳ್ಳುತ್ತದೆಂಬುದನ್ನು ಒಪ್ಪುವದಿಲ್ಲ. ಆದರೆ ಕ್ರಿಮಿಗಳಿಂದಾಗಿ ಈ ರೋಗವು ಬರುವುದಿಲ್ಲವೆಂಬುದನ್ನು ಅವರು ಹೇಳುವುದಿಲ್ಲ. ಕ್ರಿಮಿಗಳಿಂದಲೂ ದೋಷ ದೂಷ್ಯಗಳಿಂದಲೂ ಈ ರೋಗವು ಬರುತ್ತದೆಂದು ಅವರ ಮತ. ಇತ್ತಂಡದವರ ಅಭಿಪ್ರಾಯದ ಕುರಿತು ಇಲ್ಲಿ ವಿಮರ್ಶಿಸುವದು ಅವಶ್ಯವಿಲ್ಲವೆಂದು ವಿಷಯವನ್ನು ಮುಂದರಿಸುವೆನು. ಈ ರೋಗವು ತಗಲಿದೊಡನೆ ಕೆಮ್ಮು—ಜ್ವರ—ಉಬ್ಬಸ—ಅಜೀರ್ಣ—ದುರ್ಬಲತೆ—ಇತ್ಯಾದಿ ಮುಖ್ಯ ಲಕ್ಷಣಗಳು ಕಾಣುವವು. ಕ್ಷಯ

ರೋಗದ ಕೀಟಾಣುಗಳು ಶ್ವಾಸ ಕೋಶದಲ್ಲಿ ನೆಲಸುವದರಿಂದ ಈ ರೀತಿಯ ಚಿಹ್ನೆಗಳುಂಟಾಗುವವು. ಕ್ಷಯ ರೋಗದ ಕ್ರಿಮಿಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿರುವವು(Types). ಒಂದು Human Type. ಇವು ಉಸಿರಾಡುವ ಕೆಟ್ಟ ಗಾಳಿಯಿಂದಾಗಿ ಅಥವಾ ದೋಷ ದೂಷ್ಯವಾಗುವುದರಿಂದಾಗಿ ದೇಹದಲ್ಲಿಯೇ ಕ್ರಿಮಿಗಳು ಉತ್ಪನ್ನವಾಗಿ ಶ್ವಾಸ ಕೋಶವನ್ನು ಸೇರಿ ಅಲ್ಲಿ ನೆಲಸಿ ಈ ರೋಗವನ್ನುಂಟುಮಾಡುವವು. ಮತ್ತೊಂದು ಬಗೆಯು [Bovine type] ರೋಗದ ಹಸುಗಳ ಹಾಲಿನಲ್ಲಿದ್ದು ಆ ಹಾಲಿನ ಸೇವನೆಯಿಂದ ಈ ಕೀಟಾಣುಗಳು ಹೊಟ್ಟೆಯನ್ನು ಸೇರಿ, ಕರುಳುಗಳಲ್ಲಿ ನೆಲಸಿ ಬೇರೆ ಬೇರೆ ಚಿಹ್ನೆಗಳನ್ನುಂಟುಮಾಡುವವು. ಹೀಗುಂಟಾಗುವ ರೋಗಕ್ಕೆ "ಉದರ ಕ್ಷಯ" [Abdominal-Tuberculosis] ಎನ್ನ ಬಹುದು. ಈ ರೋಗದ ಕುರಿತು ಈ ಲೇಖನದಲ್ಲಿ ವಿವರಿಸುವದಿಲ್ಲ. ಯಾಕೆಂದರೆ ಈ ಕುರಿತು ವಿವರಿಸಿದರೆ ಲೇಖನವು ಬಹು ದೀರ್ಘವಾಗಬಹುದು. ಆದುದರಿಂದ ಶ್ವಾಸಕೋಶಗಳಿಗೆ ಅಂಟುವ "ಶ್ವಾಸಕ್ಷಯ" [Pulmonary Tuberculosis] ರೋಗವನ್ನೇ ಕುರಿತು ವಿವರಿಸಲಿಕ್ಕಿರುವೆನು.

ಗಂಟಲಿನ ಪಾರ್ಶ್ವಗಳಲ್ಲಿ ಎರಡು ಮೇದಗ್ರಂಥಿಗಳು [Tonsils] ಇರುವವು. ದೇಹದೊಳಕ್ಕೆ ಬಾಯಿ ಮೂಗುಗಳಿಂದ ಹೋಗುವ ಕ್ರಿಮಿಗಳನ್ನು ತಡೆಮಾಡುವುದೇ ಈ ಗ್ರಂಥಿಗಳ ಮುಖ್ಯ ಕಾರ್ಯವು. ಈ ಗ್ರಂಥಿಗಳಲ್ಲಿ ಶಕ್ತಿಕುಂದಿದರೆ ಮೇದೋವಾಹಿನಿಗಳ ಮೂಲಕ [Lymphatics] ಶರೀರದಲ್ಲಿ ಹರಡಿ ರೋಗವನ್ನುಂಟುವುದು.

ಕ್ಷಯರೋಗವು ಮನೆತನದ ಕ್ಯಾಲೆ (Familial) ಪೈತ್ರಿಕ (Hereditary) ಕ್ಯಾಲೆ ಎಂಬ ನಂಬಿಗೆಯು ಸಾಮಾನ್ಯವಾಗಿ ಜನತೆಯಲ್ಲಿರುವದು. ಒಂದು ರೀತಿಯಾಗಿ ಇದು ನಿಜವಿರುತ್ತದೆ. ಆದರೆ ತಾಯಿತಂದೆಗಳ ರಕ್ತದಿಂದ ಶಿಶುವು ಈ ರೋಗ ಕ್ರಿಮಿಗಳನ್ನು ಹೊಂದುತ್ತದೆಂಬುದು ಆಧುನಿಕ ಶೋಧನಕಾರರಿಗೆ ಇನ್ನೂ ಸ್ಪಷ್ಟವಾಗಿಲ್ಲ. ಇದನ್ನು ಅನೇಕರು ಒಪ್ಪುವರು. ಮತ್ತೆ ಹಲವರು ಒಪ್ಪುವದಿಲ್ಲ. ಪ್ರಕೃತದಲ್ಲಿ ಅದು ಮುಖ್ಯವಲ್ಲ. ತಾಯಿತಂದೆಗಳಿಗೆ ರೋಗವು ಬರಲು ಯಾವ ಯಾವ ಅನುಕೂಲತೆಗಳು ಇದ್ದವೋ [Environments] ಅದೇ ಅನುಕೂಲತೆಗಳು ಆ ಮನೆಯಲ್ಲಿ ಹುಟ್ಟಿ ಬೆಳೆಯುವ ಮಕ್ಕಳಿಗೂ ಇರುವದು ಸಹಜವಷ್ಟೆ. ಆದುದರಿಂದ ಒಂದು ಮಗುವಿಗೆ ಬಂದ ಕ್ಯಾಲೆಯು ಮತ್ತೊಂದು ಮಗುವಿಗೂ ಬರುವದು ಸ್ವಭಾವಸಿದ್ಧವೇ. ಇದರಿಂದಾಗಿ ಮನೆತನದ ಕ್ಯಾಲೆಯಾಗಬಹುದು. ದುರ್ಬಲರಾದ ತಾಯಿತಂದೆಗಳಿಂದ ಹುಟ್ಟಿದ ಮಕ್ಕಳು ದುರ್ಬಲರಾಗಿರುವದು ಸಹಜ. ಅಂದ ಬಳಿಕ ಕ್ಯಾಲೆಯು ಬರಲು ಅವಕಾಶವು ಹೇರಳವಾಗಿರುವದು. ಈ ರೀತಿಯಲ್ಲಿ ಈ ಕ್ಯಾಲೆಯು ಪೈತ್ರಿಕವೆಂಬುದು ನಿಜ. ಆಯುರ್ವೇದ ಶಾಸ್ತ್ರಕಾರರು ಅನುವಂಶಿಕವಾಗಿ ಈ ರೋಗವು ಬರುತ್ತದೆಂದು ಸುಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಇವರ ಈ ಸಿದ್ಧಾಂತವು ಇಂದು ಜಗತ್ತಿನಲ್ಲಿ ನಿಜವೆಂದು ಎತ್ತಿ ಕಾಣುತ್ತದೆ. ಈ ರೋಗವು ಹಲವು ರೀತಿಗಳಲ್ಲಿ ಅಂದರೆ ಉಸಿರಾಡುವ ಗಾಳಿಯಲ್ಲಿ—ಊಟ ಮಾಡುವ ಆಹಾರದಲ್ಲಿ—ಗಂಟಲಿನ ಮೇದಿಗ್ರಂಥಿಗಳ ಮೂಲಕ ಪೈತ್ರಿಕವಾಗಿಯೂ ರೋಗವು ಮನುಷ್ಯನಿಗೆ ಅಂಟಬಹುದು.

ರೋಗವು ಬೆಳೆಯುವ ಬಗೆ. (Pathology of Tubercle)

ಕ್ಷಯರೋಗದ ಕ್ರಿಮಿಯು ಸಣ್ಣ ತುಂಡು ಕಡ್ಡಿಯಂತಿರುವದು. ಸೂಕ್ಷ್ಮದರ್ಶಕ ಯಂತ್ರದ ಮೂಲಕ ಪರೀಕ್ಷಿಸಿ ನೋಡಿದಾಗ ಇದರ ಸುತ್ತಲೂ ಒಂದು ಮೇದಸ್ಸಿನ ಕವಚ [Lipoid] ಒಂದು ಕಾಣಬರುವದು. ಈ ಕವಚದ ಬಲದಿಂದಲೇ ಕ್ರಿಮಿಯು ಶರೀರದಲ್ಲಿ ನೆಲಸಿ, ಔಷಧಿಗಳಿಗೆ ಬಗ್ಗದಿರವದು. ಈ ಕವಚವನ್ನು ಹರಿದ ಹೊರತು ಕ್ರಿಮಿಯು ಸುಲಭವಾಗಿ ನಾಶವಾಗಲಾರದು. ಆಯುರ್ವೇದ ರೀತಿ ನ್ಯಾಯವಾದ ಚಿಕಿತ್ಸೆಯನ್ನು ಮಾಡಿದರೆ, ಈ ಕ್ರಿಮಿಯನ್ನು ಮೇಲೆ ಹೇಳಿದ ಕವಚವನ್ನು ಹರಿಯದೇನೆ ನಾಶಮಾಡಬಹುದು.

ಕ್ಷಯರೋಗಿಯ ಕಫದಲ್ಲಿ ಕ್ರಿಮಿಗಳು ಹೇರಳವಾಗಿ ದೊರೆಯುವವು. ಈ ಶ್ಲೇಷ್ಮದ ಸಣ್ಣ ಸಣ್ಣ ತುಂತುರುಗಳಲ್ಲಿಯೂ ಮತ್ತು ಅದರ ಮೇಲೆ ಕುಳಿತುಕೊಳ್ಳುವ ಸೊಳ್ಳೆ ನೊಣಗಳ ಕಾಲು—ರೆಕ್ಕೆಗಳ ಮೂಲಕವೂ ಈ ರೋಗ ಕ್ರಿಮಿಗಳು ಗಾಳಿಯಲ್ಲಿ ಹರಡುವವು. ಹೀಗೆ ಗಾಳಿಯಲ್ಲಿ ಸೇರಿಕೊಂಡ ಕ್ರಿಮಿಗಳು ಉಸಿರಾಡುವದರ ಮೂಲಕವಾಗಿ ಶ್ವಾಸನಾಳಗಳಲ್ಲಿ ಸೇರಿಕೊಳ್ಳುವವು. ಈ ಕ್ರಿಮಿಯು ಶರೀರದಿಂದ ಜಿಣುಗುವ ಒಂದು ಬಗೆಯ ವಿಷವು [Toxin] ಹತ್ತಿರದಲ್ಲಿರುವ ಸೂಕ್ಷ್ಮ ನಾಡಿ ಜಾಲಗಳ [Tissues]ನ್ನು ಕೊಲ್ಲುವವು. ಈ ಬಗೆಯಲ್ಲಿ ಹಾನಿ ಮಾಡುತ್ತಿರುವ ಕ್ರಿಮಿಯನ್ನು ಕೊಲ್ಲಲು ಶರೀರದಲ್ಲಿ ಸಾಕಷ್ಟು ಬಿಳಿ ರಕ್ತದ ಕಣಗಳು [White blood corpuscles] ಬೆಳೆಯ ಬೇಕಾಗಿವೆ. ಈ ರಕ್ತದ ಕಣಗಳು ಕ್ರಿಮಿಯನ್ನು ಕೊಂದು ಕ್ಯಾಲೆಯನ್ನು ಬಾರದಂತೆ ಮಾಡುವವು. ಈ ಕಣಗಳು ಬೆಳೆಯುವಂತೆ ಮಾಡುವುದೇ ಕ್ಷಯರೋಗ ಚಿಕಿತ್ಸೆಯಲ್ಲಿ ಮುಖ್ಯ ಅಂಗವಾಗಿದೆ.

ಶರೀರವು ದುರ್ಬಲವಾಗಿದ್ದು ರಕ್ತಕಣಗಳಲ್ಲಿ ಬಲವಿಲ್ಲದೆ ಇಂಥಾ ರಕ್ತಕಣಗಳು ಹೇರಳವಾಗಿ ಬೆಳೆಯದೇ ಇದ್ದರೆ ರೋಗ ಕ್ರಿಮಿಗಳು ಬೆಳೆಯುವವು. ಹಾಗೆ ಬೆಳೆದ ಕ್ರಿಮಿಗಳು ಅಕ್ಕಪಕ್ಕಗಳಲ್ಲಿರುವ ಸೂಕ್ಷ್ಮ ನಾಡಿಜಾಲಗಳ(Tissues)ಗಳನ್ನು ಕೊಂದು ತಿಂದು ಮರಿಗಳನ್ನಿಟ್ಟು ಒಂದು ಸಣ್ಣ ಗೂಡನ್ನು(Tubercle) ಕಟ್ಟಿಕೊಳ್ಳುವುದು. ಮರಿಗಳೆಲ್ಲಾ ಬೆಳೆದ ನಂತರ ಆಹಾರಸಂಪಾದನೆಗಾಗಿ ರಕ್ತದ ಮೂಲಕ ಇಲ್ಲವೇ ಮೇದೋ ವಾಹಿನಿಗಳ ಮೂಲಕ ಇವು ಶರೀರದಲ್ಲೆಲ್ಲಾ ಹರಡಿ ರಕ್ತಕುಂದಿದ ಅವಯವಗಳಲ್ಲಿ ನೆಲಸಿ, ಹಿಂದೆ ಹೇಳಿದಂತೆ ಸಣ್ಣ ಸಣ್ಣ ಗೂಡುಗಳನ್ನು ಕಟ್ಟುವವು. ಇಂತಹ ಗೂಡುಗಳು ಬಹಳವಾದ್ದಲ್ಲಿ ಅಂಥವುಗಳಿಂದಾದ ವಿಷವು ರೋಗಿಯನ್ನು ಕೊಲ್ಲುವುದು. ಈ ವಿಷವನ್ನು ಕೊಲ್ಲಲು ಶರೀರವು ಪಡುವ ಸಾಹಸವೇ ಜ್ವರವಾಗಿ ಕಾಣಿಸಿಕೊಳ್ಳುವದು. ಕ್ರಿಮಿಗಳಿಂದ ಕೂಡಿರುವ ಕಫವನ್ನು ಹೊರಗೆ ಹಾಕಲು ಮಾಡುವ ಪ್ರಯತ್ನವೇ ಕೆಮ್ಮು ಆಗಿ ಕಾಣಿಸಿಕೊಳ್ಳುವದು.

ಗಾಳಿಯಲ್ಲಿ ಅದರಲ್ಲೂ ಪಟ್ಟಣದ ಗಾಳಿಯಲ್ಲಿ ಬೇಕಾದಷ್ಟು ಕ್ರಿಮಿಗಳು ದೊರೆಯುವುದೆಂಬುದು ನಿರ್ವಿವಾದವಷ್ಟೆ. ಅಂದ ಮೇಲೆ ಪ್ರತಿ ಒಬ್ಬನು ಒಮ್ಮೆಯಾದರೂ ಕಲ್ಮಶಮಿಶ್ರವಾದ ಗಾಳಿಯನ್ನು ಸೇವಿಸಿಯೇ ತೀರುವನು. ಹಾಗಾದರೆ ಪ್ರತಿ ಒಬ್ಬನಿಗೆ ಕ್ಷಯವು ಏಕೆ ಬರುವುದಿಲ್ಲ? ಎಂಬ ಪ್ರಶ್ನೆಯು ಹುಟ್ಟಬಹುದು. ಯಾರ ಶರೀರದಲ್ಲಿ ಬಲವಿದೆಯೋ ಅಂದರೆ ಯಾರಲ್ಲಿ ಪ್ರತಿಘಾತ ಶಕ್ತಿಯು ಇರುವುದೋ ಅಂಥವನಲ್ಲಿ ಕ್ರಿಮಿಗಳು ಸೇರಿಕೊಂಡರೆ ಕ್ರಿಮಿಗಳು ಬದುಕಲಾರವು. ನಿಶ್ಶಕ್ತಿಯಾದವನಲ್ಲಿ ಅಂದರೆ ಪ್ರತಿಘಾತ ಶಕ್ತಿಯು ಇಲ್ಲದಿರುವವನಲ್ಲಿ ಕ್ರಿಮಿಗಳು ಸೇರಿಕೊಂಡರೆ ಅವು ಅಲ್ಲಿ ಬೆಳೆಯುವವು. ಅಲ್ಲಿ ಅವುಗಳು ಬೆಳೆಯಲು ತುಂಬಾ ಅನುಕೂಲವಿರುವದು. ಕ್ರಿಮಿಗಳು ಶರೀರವನ್ನು ಹೊಗಲು ಅನೇಕ ಮಾರ್ಗಗಳಿರುವುವು. ಅಂತಹ ಮಾರ್ಗಗಳನ್ನು ತಡೆಯಲು ಸರ್ವಥಾ ಸಾಧ್ಯವಿಲ್ಲದೆ ಸಾಮಾನ್ಯವಾಗಿ ಸಾಧ್ಯವಾಗಲಾರದು. ರೋಗನಿವಾರಣೆಯ ಮುಖ್ಯ ಮಾರ್ಗವು ಪ್ರತಿ ಒಬ್ಬನಲ್ಲಿ ಇರುವದು. ಹ್ಯಾಗಂದರೆ, ಶರೀರದಲ್ಲಿ ರಕ್ತಪುಷ್ಟಿಯನ್ನುಂಟುಮಾಡಿ ಬಲವು ಹೆಚ್ಚುವಂತೆ ಪ್ರಯತ್ನಪಟ್ಟು ಪ್ರತಿಘಾತ ಶಕ್ತಿಯನ್ನು ಹೆಚ್ಚಿಸಿದರೆ ಕ್ರಿಮಿಗಳು ಶರೀರವನ್ನು ಸೇರಿದರೂ ಬದುಕದಂತಾಗಿ ರೋಗನಿವಾರಣೆಯಾಗುವದು. ರೋಗವು ಬೆಳೆದ ನಂತರ ವಾಸಿಮಾಡಲು ಕಷ್ಟಸಾಧ್ಯವೆಂಬುದು ಪ್ರತಿಯೊಬ್ಬನು ತಿಳಿದಿರತಕ್ಕ ವಿಚಾರವು. ಆದುದರಿಂದ ಶರೀರದಲ್ಲಿ ಪ್ರತಿಘಾತ ಶಕ್ತಿಯು ಬೆಳೆಯುವಂತೆ ಮಾಡಿದರೇನೇ ಈ ರೋಗದ ದವಡೆಯಿಂದ ಪಾರಾಗಲು ಸಾಧ್ಯ. ಕ್ಷಯರೋಗಕ್ಕೆ ತುತ್ತಾಗಲು ಶರೀರದ ದೌರ್ಬಲ್ಯವೇ ಮುಖ್ಯ ಕಾರಣವೆಂದಾದ ಬಳಿಕ ಶರೀರದಲ್ಲಿ ರಕ್ತಬಲಗಳನ್ನು ಹೆಚ್ಚಿಸಿ ಕ್ರಿಮಿಗಳನ್ನು ಬೆಳೆಯದಂತೆ ಮಾಡುವುದೇ ನ್ಯಾಯವಾದ ಮಾರ್ಗ. ಈ ರೋಗಕ್ಕೆ ಯಾವ ವೈದ್ಯಕೀಯ ಶಾಸ್ತ್ರದಲ್ಲೂ ಯಾವದೊಂದು ಪ್ರತ್ಯೌಷಧವನ್ನು (Specific) ಕಂಡುಹಿಡಿಯಲ್ಪಟ್ಟಿಲ್ಲವೆಂದು ಹಲವರ ಮತ. ಆದರೆ ಇದು ಎಷ್ಟರ ಮಟ್ಟಿಗೆ ನಿಜವೋ ನಾನು ಹೇಳಲಾರೆ. ಮತ್ತು ಈ ಅಭಿಪ್ರಾಯಕ್ಕೆ ಆಯುರ್ವೇದ ಸಿದ್ಧಾಂತವು ಒಪ್ಪಲಾರದು.

ರೋಗವು ಬಾರದಂತೆ ಅನುಸರಿಸಬೇಕಾದ ಕೆಲವು ಸೂಚನೆಗಳು, ಅಂದರೆ ರೋಗ ಬರುವಿಕೆಯ ಕೆಲವು ಸೂಚನೆಗಳನ್ನು ವಿವರಿಸುವೆನು. ಇವುಗಳನ್ನು ಅನುಸರಿಸುವುದರಿಂದ ಈ ರೋಗವು ಬರುವಂತೆ ಮಾಡಲು ಸಾಧ್ಯವೆಂಬುದನ್ನು ಮರೆಯಬಾರದು. ಯಾವನಾದರೊಬ್ಬನಿಗೆ ಛಳಿಗಾಳಿಯಲ್ಲಿ ಓಡಾಡುವುದರಿಂದ, ಅಭ್ಯಾಸವಿಲ್ಲದೆ ತಣ್ಣೀರಲ್ಲಿ ಸ್ನಾನಮಾಡುವುದರಿಂದ, ಹವೆ ಬದಲಾಯಿಸುವುದರಿಂದ ಕೆಮ್ಮು—ನೆಗಡಿ—ಬರಬಹುದು. ಸಾಧಾರಣವಾಗಿ ಆರೋಗ್ಯವಂತರಿಗೆ ಈ ನೆಗಡಿಯು ಒಂದೆರಡು ವಾರದಲ್ಲಿ ನಿಶ್ಶೇಷವಾಗಿ ಗುಣವಾಗುವುದು. ಕೆಲವರಿಗೆ ಎದೆಯು ವಿಶಾಲವಾಗಿರದೆ ಎದೆ ಎಲುಬುಗಳೆಲ್ಲಾ ಕಾಣುತ್ತಾ ನಿಶ್ಶಕ್ತಿಯಾದವರಿಗೆ ಕೆಮ್ಮು—ನೆಗಡಿ—ಗುಣವಾಗದೆ ಹೆಚ್ಚುತ್ತಾ ಹೋಗಬಹುದು. ಅಲ್ಲದೆ ಆಗಿಂದಾಗ್ಗೆ ಸ್ವಲ್ಪ ಸ್ವಲ್ಪ ಕಫವನ್ನು ಉಗುಳಬಹುದು. ಇದರ ಜೊತೆಯಲ್ಲಿ ಬೇರೆ ಹಲವು ಚಿಹ್ನೆಗಳು ತೋರಿಬರಬಹುದು. ಅಂತಹ ಸಂದರ್ಭದಲ್ಲಿ ನ್ಯಾಯವಾದ ಚಿಕಿತ್ಸಕರಲ್ಲಿಗೆ ಹೋಗಿ ಪರೀಕ್ಷೆ ಮಾಡಿಸಿಕೊಳ್ಳುವುದು ಅತೀ ಅಗತ್ಯವು. ಕೆಲವರಿಗೆ ದಿನಕ್ಕೊಂದು ಬಾರಿ ಜ್ವರವು ಕಾಣಿಸಿಕೊಂಡು ಸಾಯಂಕಾಲದ ವೇಳೆ ಒಂದೆರಡು ಡಿಗ್ರಿ (Degree) ಜ್ವರವು ಬರಬಹುದು. ಇಂಥಹ ಚಿಹ್ನೆಗಳನ್ನು ಕಂಡು ಹಲವರು "ಮಲೇರಿಯಾ" (Malaria fever) ಜ್ವರವೆಂದು ತಿಳಿದು ಕ್ವಿನಿನ್ (Quinine) ಔಷಧಿಯನ್ನು ಸೇವಿಸುವರು. ಆದರೆ ಇದರ ಸೇವನೆಯಿಂದ ಜ್ವರವು ನಿಲ್ಲುವುದಿಲ್ಲ. ರೋಗಿಗೆ ಅಶಕ್ತಿಯೂ ಉಂಟಾಗುವದಿಲ್ಲ. ಹೀಗಾಗುವದರಿಂದ ಇನ್ನೇನು? ಎರಡು ಮೂರು ದಿನಗಳಲ್ಲಿ ವಾಸಿಯಾಗುತ್ತದೆ, ಏನೋ ವಾಯು ಕೆರಳಿದೆ ಎಂದು ಅಲಕ್ಷ್ಯಮಾಡುವರು. ಎರಡು ಮೂರು ದಿನವೇಕೆ? ಎರಡು ಮೂರು ವಾರವಾದರೂ ಜ್ವರವು ನಿಲ್ಲುವದಿಲ್ಲ. ರಾತ್ರಿಹೊತ್ತು ಮೈ ಬೆವರುವದು, ಹುಡಿಗೆಮ್ಮು, ಆಗಿಂದಾಗ್ಗೆ ಕಾಣಿಸಿಕೊಳ್ಳುವದು. ಕ್ವಿನೀನ್ ಔಷಧಿಯಿಂದ ಜ್ವರವು ಹತೋಟಿಗೆ ಬಂದಿರುವದೂ ಕ್ಷಯದ ಸೂಚನೆಯನ್ನು ಕೊಡುವದು.

ಒಂದು ಬಾರಿಯಾದರೂ ಕೆಮ್ಮು ಇಲ್ಲದೆ ಆರೋಗ್ಯದಿಂದಿದ್ದವನು ಇದ್ದಕ್ಕಿದ್ದ ಹಾಗೆಯೇ ಒಂದು ಸಾರಿ ಕೆಮ್ಮಿ ರಕ್ತಮಿಶ್ರವಾದ ಕಫವನ್ನು ಉಗುಳಬಹುದು. ಆದರೆ ಇಂಥಹ ಸಂದರ್ಭದಲ್ಲಿ ಈ ರಕ್ತವು ಬಾಯಿಯಿಂದ ವಸಡಿನಿಂದಲ್ಲವೆಂಬುದನ್ನು ಸ್ಥಿರಪಡಿಸಿಕೊಂಡ ಮೇಲೆ ಶ್ವಾಶಕೋಶದಿಂದಿರಬಹುದೆಂಬುದನ್ನು ತಿಳಿಯತಕ್ಕದ್ದು. ಕ್ಷಯದ ಮೊದಲಿನಲ್ಲಿ ಕ್ಷಯದ ಗೂಡಿನ (Tubercle) ಸುತ್ತಲೂ ರಕ್ತವು ಹೆಚ್ಚಾಗಿ ಸೇರುವದು.

ಕೆಲವು ಲೋಮ ರಕ್ತನಾಳಗಳಲ್ಲಿ ಹೆಚ್ಚು ರಕ್ತವು ತಡೆಯದೆ ಒಡೆದು ಹೋಗುವವು. ಈ ರಕ್ತವು ಕಫದೊಡನೆ ಸೇರಿ ಕೆಮ್ಮಿದಾಗ ಉಗುಳಲ್ಪಡುವದು. ಈ ಚಿಹ್ನೆಯು ಕ್ಷಯರೋಗದ ಪ್ರಥಮದಲ್ಲಿ ಬರುವದಲ್ಲದೆ ರೋಗದ ಅಂತ್ಯದಲ್ಲಿಯೂ ಬರಬಹುದು. ಆಗ ಸುತ್ತಲೂ ಇರುವ ನಾಡಿ ಜಾಲಗಳೆಲ್ಲಾ (Tissues) ನಾಶವಾಗಿ ರಕ್ತನಾಳಗಳಿಗೆ ನೆರವಾಗಿರಲು ಆಸರೆ ಇಲ್ಲದೆ ಒಡೆದು ರಕ್ತವು ಕಫದಲ್ಲಿ ಕಾಣಬರುವದು. ದೊಡ್ಡ ರಕ್ತನಾಳಗಳು ಒಡೆಯುವದರಿಂದ ಪ್ರಾಣಹಾನಿಯಾಗುವ ಸಂಭವವುಂಟು. ಆರೋಗ್ಯದಿಂದಿರುವವನಾಗಲೀ ರೋಗದಿಂದ ನರಳುತ್ತಿರುವವನಾಗಲೀ ಕೆಮ್ಮಿದಾಗ ರಕ್ತಮಿಶ್ರವಾದ ಕಫವು ಬಂದರೆ ಕೂಡಲೆ ಚಿಕಿತ್ಸಕರ ಬಳಿಗೆ ಹೋಗಬೇಕು. ಇನ್ನೂ ಹಲವರಿಗೆ ಎದೆಯ ಪಾರ್ಶ್ವದಲ್ಲಿ ನೋವೂ ಕಾಣಬಹುದು. ಇದಕ್ಕೇನಾದರೂ ಚಿಕಿತ್ಸೆ ಮಾಡಿದರೆ ದಿನವಾರಗಳ ಮೇಲೂ ಈ ನೋವು ವಾಸಿಯಾಗದೇ ಕ್ರಮೇಣ ಹೆಚ್ಚುತ್ತಾ ಬರಬಹುದು. ಈ ಸೂಚನೆಯೊಡನೆ ಕೆಮ್ಮಿದ್ದು ರಕ್ತಮಿಶ್ರವಾದ ಕಫವು ಬಂದಲ್ಲಿ ಕ್ಷಯರೋಗದ ಬರುವಿಕೆಯು ಮುಕ್ಕಾಲು ಪಾಲು ಖಂಡಿತವೆಂದು ತಿಳಿಯತಕ್ಕದ್ದು. ಕೆಲವು ರೋಗಿಗಳಿಗೆ ಶ್ವಾಸಕೋಶಗಳ ಯಾವದಾದರೂ ಸೂಚನೆಗಳು ತೋರುವದೇ ಇಲ್ಲ. ಒಂದು ವಿಧದ ಅಜೀರ್ಣತೆ, ಸರಿಯಾಗಿ ಊಟ ಮಾಡುತ್ತಿದ್ದವನಿಗೆ ಕ್ರಮೇಣ ಹಸಿವಾಗದಿರುವದು, ಅನ್ನ ಸೇರದಿರುವದು, ಊಟವಾದ ಮೇಲೆ ಒಂದು ಬಗೆಯ ಬೇಸರಿಕೆ, ಕಾಲ ಪ್ರವರ್ತಿಯು ಸರಿಯಾಗಿ ಆಗದಿರುವದು, ಅಥವಾ ಬಹಳ ಸರ್ತಿ ಭೇದಿಯಾಗುವುದು, ಈ ತರದ ಲಕ್ಷಣಗಳು ದಿನಗಟ್ಟಲೆ ಇದ್ದರೆ ಕ್ಷಯದ ಬರುವಿಕೆಯನ್ನು ಸೂಚಿಸುವದು. ಇಂಥವು ಕ್ಷಯರೋಗದ ಲಕ್ಷಣಗಳಾಗಿದ್ದಲ್ಲಿ ಇವು ತಿಂಗಳುಗಟ್ಲೆ ತೋರಿಬರುವವು. ಇನ್ನು ಹಲವು ರೋಗಿಗಳಿಗೆ ದಿನದಿನಕ್ಕೆ ತೂಕ ಕಡಿಮೆಯಾಗುವದು, ಸ್ವಲ್ಪ ದೂರ ನಡೆದರೆ ಆಯಾಸ-ಸಂಕಟ-ದಮ್ಮು ಬರುವದು. ಇವೆಲ್ಲವೂ ಬೇರೆ ರೋಗಗಳಿಲ್ಲದ್ದಲ್ಲಿ ಕ್ಷಯರೋಗವನ್ನೇ ಸೂಚಿಸುವವು. ಸಾಮಾನ್ಯವಾಗಿ ಸ್ವಲ್ಪದೂರ ನಡೆದರೆ ಬಳಲುವದು, ಆಟಪಾಟಗಳಲ್ಲಿ ಶಕ್ತಿ ಇಲ್ಲದಿರುವದು; ನಗುತ್ತಾ ಕೆಲಸ ಮಾಡುತ್ತಿದ್ದ ಹೆಂಗಸರು ಬೇರೆ ಕಾರಣವಿಲ್ಲದೆ ಕೆಲಸದಲ್ಲಿ ಒಂದು ಬಗೆಯ ಅಜಾಗರೂಕತೆಯನ್ನು ತೋರಿಸುವದು, ಬಲು ಬೇಗನೆ ಬಳಲುವದು, ಇವೆಲ್ಲವೂ ಕ್ಷಯರೋಗದ ಮೊದಮೊದಲಿನ ಸೂಚನೆಗಳು. ಶರೀರದಲ್ಲಿನ ರಕ್ತವೆಲ್ಲವೂ ಕಡಿಮೆಯಾಗುವದು, ಕಣ್ಣಪರೆಯು ಬಿಳುಪಾಗುವದು, ಉಗುರು ಕಣ್ಣುಗಳು ಬಿಳುಪೇರುವದು, ಮತ್ತು ಶರೀರವೆಲ್ಲಾ ಒಂದು ಬಗೆಯ ಬಿಳಿ ಬಣ್ಣವನ್ನು ಹೊಂದುವದು, ಉಬ್ಬಸ, ಅಜೀರ್ಣ, ಇವೇ ಮೊದಲಾದುವು ಕ್ಷಯರೋಗದ ಆಗಮನವನ್ನು ಸೂಚಿಸುವವು. ಸ್ತ್ರೀಸಂಗವನ್ನು ಬಹಳವಾಗಿ ಬಯಸುವದು, ಈ ರೋಗದಲ್ಲಿ ಒಂದು ಪ್ರಥಮ ಸೂಚನೆ. ರೋಗವು ಪ್ರಬಲವಾಗುತ್ತಾ ಬಂದಲ್ಲಿ ಸ್ತ್ರೀಸಂಗವು ಬೇಡವಾಗುವದು. ಹೆಂಗುಸರಲ್ಲಿ ಕಾರಣವಿಲ್ಲದೆ ಅಂದರೆ ಗರ್ಭಿಣಿಯರಾಗದ ಚಿಕ್ಕವರಲ್ಲಿ ಎರಡು ಮೂರು ತಿಂಗಳು ಮುಟ್ಟು ನಿಲ್ಲುವದು. ಮುಟ್ಟಾಗುವ ಸಮಯ ಜ್ವರ ಕಾಣಿಸಿಕೊಳ್ಳುವದು, ಹೆತ್ತಮೇಲೆ ಎರಡು ಮೂರು ವಾರಗಳ ನಂತರ ಜ್ವರವು ಸಣ್ಣದಾಗಿ ಬರುವದು, ರಾತ್ರಿಯಲ್ಲಿ ಮೈ ಬೆವರುವದು, ಹುಡಿಗೆಮ್ಮು ಕಾಣಿಸಿಕೊಳ್ಳುವದು, ಇವುಗಳೆಲ್ಲವೂ ಕ್ಷಯದ ಸೂಚನೆಗಳೆಂದು ತಿಳಿಯತಕ್ಕದ್ದು.

ಚಿಕಿತ್ಸೆ—ಕ್ಷಯದ ಚಿಕಿತ್ಸೆಯನ್ನು ಮುಖ್ಯವಾಗಿ ಎರಡು ವಿಧಗಳಲ್ಲಿ ಮಾಡಬಹುದು. 1. ಶರೀರದಲ್ಲಿ ಶಕ್ತಿಯನ್ನುಂಟುಮಾಡಿ ಕ್ರಿಮಿಗಳನ್ನು ನಾಶಮಾಡುವದು. 2. ಔಷಧಗಳಿಂದ ಕ್ರಿಮಿಗಳನ್ನು ನಾಶಮಾಡುವದು.

ಶರೀರದಲ್ಲಿ ಶಕ್ತಿಯನ್ನುಂಟುಮಾಡುವುದು:—ನಿರ್ಮಲವಾದ ಗಾಳಿಯನ್ನು ಉಸಿರಾಡುವದರಿಂದ ರಕ್ತಕ್ಕೆ ಸಾಕಷ್ಟು ಆಮ್ಲಜನಕವು ದೊರೆತು ರಕ್ತವು ಶುದ್ಧಿಯಾಗುವದು. ರಕ್ತಶುದ್ಧಿಯಿಂದ ಶರೀರದ ಅವಯವಗಳೆಲ್ಲಾ ಪುಷ್ಟಿಯಾಗಿ ತಮ್ಮ ಕೆಲಸಗಳನ್ನು ಚೆನ್ನಾಗಿ ಮಾಡುವವು. ಆದುದರಿಂದ ನಿರ್ಮಲವಾದ ಗಾಳಿಯ ಸೇವನೆಯು ಅತೀ ಅವಶ್ಯಕ. ಶರೀರ ಪುಷ್ಟಿಗೆ ಬೇಕಾದ ಬಲಯುಕ್ತವಾದ ಆಹಾರ ಅಂದರೆ ಹಾಲು, ತುಪ್ಪ, ಹಣ್ಣು, ಇತ್ಯಾದಿಗಳನ್ನು ಜೀರ್ಣವಾಗುವಷ್ಟು ಸೇವಿಸುವದು. ಯಾವ ಯಾವ ವಸ್ತುಗಳನ್ನು ಎಷ್ಟೆಷ್ಟು ಸೇವಿಸಬೇಕೆಂಬುದನ್ನು ಪ್ರತೀ ಒಬ್ಬ ರೋಗಿಯು ವೈದ್ಯರಿಂದ ತಿಳಿಯತಕ್ಕದ್ದು. ಶರೀರದಲ್ಲಿ ರಕ್ತ ಚಲನೆಯು ಚೆನ್ನಾಗಿ ಆಗುವದರಿಂದ ಕಶ್ಮಲವು ಹೊರ ಬೀಳುವದು. ಆದುದರಿಂದ ಮಿತವಾಗಿ ವ್ಯಾಯಾಮ ಮಾಡಬೇಕು. ಅಂದರೆ ಬಳಲಿದಂತೆ ದಮ್ಮು ಬಾರದಂತೆ ಸ್ವಲ್ಪ ವ್ಯಾಯಾಮ ಮಾಡಬೇಕು. ಆದರೆ ಜ್ವರವಿರುವಾಗ ಮಾತ್ರ ಏನನ್ನೂ ಮಾಡದೆ ಮಲಗಿರಬೇಕು. ಸೂರ್ಯ ರಶ್ಮಿಯಲ್ಲಿನ ಒಂದು ಬಗೆಯ ಕಿರಣಗಳು ಶರೀರದ ಮೇಲೆ ಬಿದ್ದು ಒಂದು ಬಗೆಯ ವಸ್ತುವನ್ನುಂಟುಮಾಡುವವು. ಈ ವಸ್ತುವು ಕ್ರಿಮಿಯ ಮೇದಸ್ಸಿನ ಕವಚವನ್ನು ಹರಿಯುವ ಶಕ್ತಿಯನ್ನು ಪ್ರಕೃತಿ ವೈಶಿಷ್ಟ್ಯದಿಂದ ಹೊಂದಿರುವದು. ಆದುದರಿಂದ ಆದಷ್ಟು ಕಾಲ ಸೂರ್ಯನ ಬೆಳಕಿನಲ್ಲಿರುವದು ಅತ್ಯಾವಶ್ಯವು. ಇವುಗಳ ಜೊತೆಯಲ್ಲಿಯೇ ಮಲಶೋಧನೆಯು ಸರಿಯಾಗಿರುವಂತೆ ನೋಡಿಕೊಳ್ಳುವದು. ಕಷ್ಟನಿಷ್ಠೂರಗಳಿಗೆ ಮನಸ್ಸುಕೊಡದೆ ಸಂತೋಷದಿಂದಿರುವದು. ಇವೆಲ್ಲವೂ ಶರೀರದಲ್ಲಿ ಬಲವುಂಟಾಗಲು ಸಹಕಾರಿಗಳು.

ಮೇಲೆ ಹೇಳಿದವುಗಳೆಲ್ಲವೂ ದೇಹದಲ್ಲಿ ಬಲವನ್ನುಂಟುಮಾಡುವವು. ಇದರಂತೆಯೇ ಶ್ವಾಸಕೋಶಗಳಲ್ಲಿ ಬಲವನ್ನು ಪ್ರತ್ಯೇಕವಾಗಿ ಉಂಟುಮಾಡಲು ಹಲವು ಮಾರ್ಗಗಳಿರುವವು. ಕ್ಷಯದ ಗೂಡುಗಳು ಶ್ವಾಸಕೋಶಗಳಲ್ಲಿರುವದರಿಂದ ಶ್ವಾಸಕೋಶಗಳು ಬಲವಾಗಿರುವಂತೆ ಮಾಡುವದು ಅವಶ್ಯಕ. ಕ್ಷಯದ ಗೂಡಿನ ಸುತ್ತಲೂ ರಕ್ತವು ಸೇರಿರುವದೆಂದು ಹಿಂದೆ ಹೇಳಿದೆಯಷ್ಟೆ. ಶ್ವಾಸಕೋಶಗಳು ಬಲವಾಗಿ ಕೆಲಸ ಮಾಡಿದರೆ ಈ ರಕ್ತ ಚಲನೆಯು ಹೆಚ್ಚಾಗಿ ಕ್ಷಯ ಕ್ರಿಮಿಗಳು ಶರೀರದಲ್ಲೆಲ್ಲಾ ಹರಡಲು ಅನುಕೂಲವಾಗುವದು. ಆದುದರಿಂದ ಶ್ವಾಸಕೋಶ ವಿಶ್ರಾಂತಿಯನ್ನು ಕೊಡಬೇಕು. ಅಂದರೆ ಬಹಳವಾಗಿ ಉಸಿರಾಡದಂತೆ ಮಾಡಬೇಕು. ಆದುದರಿಂದಲೇ ಮಿತವಾಗಿ ವ್ಯಾಯಾಮ ಮಾಡಬೇಕೆಂದು ಎನ್ನುವದು. ಬಳಲದೇ ಇರುವದು, ಆದಷ್ಟು ಕಾಲ ಮಲಗಿರುವದು, ಜ್ವರ ಇರುವಾಗ ವಿಶ್ರಾಂತಿ ಹೊಂದುವದು ರೋಗ ಪ್ರಬಲವಾದಲ್ಲಿ ಪೂರ್ತಿ ವಿಶ್ರಾಂತಿಯನ್ನು ಶ್ವಾಸಕೋಶಗಳಿಗೆ ಕೊಡಲು ಬೇರೆ ಮಾರ್ಗಗಳಿರುವವು. ಆದರೆ ಇವು ವೈದ್ಯನಿಗೆ ಸಾಧ್ಯವೇ ಹೊರತು ಮಿಕ್ಕವನಿಗೆ ಅಲ್ಲ.

ಕ್ರಿಮಿಗಳನ್ನು ಕೊಲ್ಲುವ ಔಷಧಿಗಳು—ಇದನ್ನು ರೋಗಿಯ ಪ್ರಕೃತಿ ಮತ್ತು ರೋಗಕ್ಕನುಸಾರವಾಗಿ ಚಿಕಿತ್ಸೆ ಮಾಡಲು ವೈದ್ಯನಿಂದಲೇ ಸಾಧ್ಯ. ಚಿನ್ನ ಮಿಶ್ರವಿರುವ ಹಲವು ಔಷಧಿಗಳು ಹಲವು ರೋಗಿಗಳಿಗೆ ಸಹಕಾರವಾಗಿವೆ ಎಂದು ಅನುಭವದ ಮಾತು. "ಟ್ಯೂಬರ್ ಕ್ಯುಲೀನ್" (Tuberculin) ಎಂಬ ಪಾಶ್ಚಿಮಾತ್ಯ ರಸವೊಂದು ಸೂಜಿಯ ಮೂಲಕ ರಕ್ತಕ್ಕೆ ಸೇರಿಸುವದರಿಂದ ಅಂದರೆ ಇಂಜೆಕ್ಷನ್ (Injection) ಮಾಡುವದರಿಂದ ಹಲವರಿಗೆ ಈ ರೋಗವು ವಾಸಿಯಾಗಿದೆ. ಆದರೆ ಈ ರೀತಿಯ ಚಿಕಿತ್ಸೆಯನ್ನು ವೈದ್ಯರ ಮೂಲಕವೇ ಮಾಡಿಸಿಕೊಳ್ಳುವದು ಲೇಸಲ್ಲದೆ ಪ್ರಕಟಣೆಯ ಮೂಲಕ ಕಾಣುವ, ಹೊಗಳಿರುವ, ಔಷಧವನ್ನು ಸೇವಿಸುವದರಿಂದ ಈ ಭಯಂಕರ ರೋಗವು ವಾಸಿಯಾಗಬಹುದೆಂಬ ಭರವಸೆಯನ್ನು ನಾನು ಹೇಳಲಾರೆ.

ರೋಗದಲ್ಲಿ ಕಾಣಬರುವ ಚಿಹ್ನೆಯನ್ನು ನಿವಾರಿಸಲು ಬೇರೆಬೇರೆ ಔಷಧಿಗಳನ್ನು ಸೇವಿಸಬೇಕಾಗುವದು. ನಿದ್ರೆ ಇಲ್ಲದಿರುವಿಕೆ, ಅಜೀರ್ಣ, ಇವುಗಳನ್ನೆಲ್ಲಾ ಔಷಧಿಗಳಿಂದ ನಿವಾರಿಸಲ್ಪಡಬೇಕು. ಇಂಥಹ ಔಷಧಿಗಳನ್ನು ವೈದ್ಯಜನರ ಅಭಿಪ್ರಾಯದ ಮೇರೆಗೆ ಸೇವಿಸಿಕೊಳ್ಳಬೇಕು.

ಈ ಲೇಖನದಿಂದ ಮುಖ್ಯವಾಗಿ ತಿಳಿಯಬೇಕಾದುದೇನಂದರೆ ಕ್ಷಯದ ಪ್ರಥಮಾವಸ್ಥೆಯಲ್ಲಿ ರೋಗವನ್ನು ವಾಸಿಮಾಡಲು ಸಾಧ್ಯ. ಆ ರೀತಿ ವಾಸಿ ಮಾಡಲು ಒಳ್ಳೆಯ ಆಹಾರ, ನಿರ್ಮಲವಾದ ಗಾಳಿ, ಸೂರ್ಯನ ಬೆಳಕು, ಮಿತವಾದ ವ್ಯಾಯಾಮ ಇವುಗಳು ಮುಖ್ಯವಾದ ಸಹಕಾರಿಗಳು. ಚಿಹ್ನೆಗಳನ್ನು ನಿವಾರಿಸಲು ವೈದ್ಯರು ಸೂಚಿಸುವ ಔಷಧಗಳನ್ನು ಸೇವಿಸಬೇಕು. ರೋಗಿಯೇ ತನ್ನ ಕಾಯಿಲೆಯನ್ನು ಮತ್ತೊಬ್ಬರ ಸಹಾಯವಿಲ್ಲದೆ ಗುಣಮಾಡಿಕೊಳ್ಳುವಂತೆ ಮಾಡುವದು ಈ ಲೇಖನದ ಉದ್ದೇಶವಲ್ಲ. ಕಾಯಿಲೆ ಬಂದವರು ಸಾಮಾನ್ಯವಾಗಿ ಅಲಕ್ಷ್ಯಮಾಡುವ ಚಿಹ್ನೆಗಳಿಂದ ಕಾಯಿಲೆ ಬಂದುದನ್ನರಿತು ತಕ್ಕ ವೈದ್ಯನಲ್ಲಿಗೆ ಹೋಗಿ ಅವನ ಬುದ್ಧಿವಾದ ಮತ್ತು ಒಳ್ಳೆಯ ಔಷಧಗಳಿಂದ ಚಿಕಿತ್ಸೆಯನ್ನು ಹೊಂದಬೇಕೆಂಬುದೇ ಈ ಲೇಖನದ ಮುಖ್ಯೋದ್ದೇಶ.

ನಾಟ್ಯಕಲೆ

ಭಾರತೀಯರ ಅಭಿನಯ ಕಲೆಯು ಸಂಪೂರ್ಣ ಅಭಿವೃದ್ಧಿಯ ಶಿಖರವನ್ನೇರಿದುದು. ಪ್ರಕೃತಿಯ ಉದಾರ ಅನುಗ್ರಹದ ಮೂಲಕ ಭಾರತೀಯರ ಜೀವನವೃತ್ತಿಗಾಗಿ ಸಂಕಟಪಡದ ಆ ಶತಮಾನಗಳ ಕಾಲವು ಕಳೆದು ಸುಮಾರು ವರ್ಷಗಳಾದುವು. ಅಂದು ವಿಜ್ಞಾನ, ಕಲೆಗಳನ್ನು ಬಳೆಸಿದರು. ಈ ಕಲೆಯು ಇಂದು ಸರಿಯಾಗಿ ಜೀವಿಸಿರುವುದು ಕಥಕ್ಕಳಿಯಲ್ಲಿ.

ಆನಂದೋತ್ಪತ್ತಿಯೇ ಕಲೆಗಳ ಮುಖ್ಯ ಗುಣ. ಅಂತಹ ಕಲೆಗಳಲ್ಲಿ ನಾಟ್ಯ ಕಲೆಯು ಒಂದು. ಇದು ಲಲಿತ ಕಲೆ; ಸೌಂದರ್ಯ ಕಲೆ. ಇದರ ಸೌಂದರ್ಯವನ್ನು ಕಂಡುಕೊಳ್ಳಬೇಕಾದರೆ ಸಂಸ್ಕೃತ ಪುರುಷನಾಗಬೇಕು. ಇಲ್ಲವಾದರೆ ಅದು ರುಚಿಸುವಂತಿಲ್ಲ. ಈ ಕಲೆಗೆ ನಾಟ್ಯಕಲೆ ಇಲ್ಲವೇ ಅಭಿನಯ ಕಲೆ ಎಂಬ ಹೆಸರಿದೆ. ನೃತ್ಯ, ಗೀತ, ವಾದ್ಯಗಳು ಅಂಗತ್ರಯವು; ಇವುಗಳ ಜೀವವೇ ಅಭಿನಯ. ಇದನ್ನು ಆಂಗಿಕ, ಸಾತ್ವಿಕ, ವಾಚಿಕ, ಆಹಾರ್ಯಗಳೆಂದು ನಾಲ್ಕು ಭಾಗವಾಗಿ ಶಾಸ್ತ್ರವೇತ್ತರು ವಿಭಜಿಸುತ್ತಾರೆ. ಭೂಷಣಾದಿಗಳಿಂದ ಸಿಂಗರಿಸಿ ವೇಷವನ್ನು ರೂಪುಗೊಳಿಸುವುದೇ ಆಹಾರ್ಯ. ಇದು ಶಿಲ್ಪ ಚಿತ್ರ ಕಲೆಗಳಿಂದುಂಟಾಯಿತು. ಗದ್ಯ ಪದ್ಯಾತ್ಮಕವಾದ ವಾಚಕಾಭಿನಯವು ಗೀತಕಲೆಯಲ್ಲಿ ಅಂತರ್ಲೀನವಾಗುತ್ತದೆ. ಸಾತ್ವಿಕವು ಸ್ವತಂತ್ರವಾದ್ದು. ಅದು ಇನ್ನೊಂದನ್ನು ಆಶ್ರಯಿಸಿ ಇಲ್ಲ.

ಸ್ತಂಭ, ಪ್ರಲಯ, ರೋಮಾಂಚ, ಸ್ವೇದ, ವೈವರ್ಣ್ಯ, ವೇಪಥು [ವೇಪಥು ಗಾತ್ರ ಕಂಪನಂ] ಅಶ್ರು [ಕಣ್ಣೀರು] ವೈಸ್ವರ್ಯ [ಗದ್ಗದ ಭಾಷಣ]ಗಳೆಂಬ ಎಂಟುಗಳು ಮನೋವಿಕಾರ ಫಲಜನ್ಯಗಳು. ಇದರ ಮೂಲಕ ಶರೀರದಲ್ಲಿ ಉಂಟಾಗುವ ಅವಸ್ಥಾ ಭೇದಗಳನ್ನು ಪ್ರದರ್ಶಿಸುವುದಕ್ಕೆ ಸಾತ್ವಿಕವೆಂದು ಹೆಸರು. ಆಂಗಿಕವು ಅಭಿನಯ ಕಲೆಯಲ್ಲಿ ಪ್ರಧಾನವಾದುದು. ಇದಕ್ಕೆ ಬಹಳ ಪ್ರಾಧಾನ್ಯತೆಯು ಇದೆ. ಅಂಗಚೇಷ್ಟೆಯ ಮೂಲಕ ವಿಕಾರಗಳನ್ನೂ ಅಭಿಪ್ರಾಯವನ್ನೂ ವಸ್ತುಗಳನ್ನೂ ವ್ಯಕ್ತಗೊಳಿಸುವುದೇ ಅಭಿನಯವೆಂದು ಧಾರಾಳವಾಗಿ ಹೇಳಬಹುದು. ನೇಪಥ್ಯ ರಚನೆ, ಶಬ್ದೋಚ್ಚಾರಣೆ ಸಾತ್ವಿಕ ಭಾವಗಳು. ಇವುಗಳೆಲ್ಲಾ ಕೇವಲ ಅಭಿನಯ ಕಲೆಯ ಸಹಾಯಕಗಳು.

ಮಾನವನು ತನ್ನ ಅಭಿಪ್ರಾಯ ಆಶಯಗಳನ್ನು ಹೊರಪಡಿಸಲು ಭಾಷೆಯ ಸೃಷ್ಟಿಯ ಪೂರ್ವಕಾಲದಲ್ಲಿ ಆ ಆದಿಮ ದೆಸೆಯಲ್ಲಿ ಉಪಯೋಗಿಸುತ್ತಿದ್ದುದು ಚೇಷ್ಟೆಯನ್ನು ಇಲ್ಲವೇ ಆಂಗ್ಯವನ್ನು ಎಂಬುದು ಅಭಿಜ್ಞರ ಮತ. ಮಾತ್ರವಲ್ಲ, ಆ ಸಮಯದ ಸಂಸ್ಕಾರ ರೂಪವಾದ ಕಲೆ ಆಂಗ್ಯ. ಹೆಚ್ಚೇಕೆ ಪರಿಷ್ಕೃತಾವಸ್ಥೆಗೆ ಮುಟ್ಟಿದ ಈ ಕಾಲದಲ್ಲಿ ನಮ್ಮನ್ನು ಭಾಷೆಯೊಂದಿಗೆ ಬಿಟ್ಟು ಸಿಲ್ಲದಿರುವುದು ಈ ಚೇಷ್ಟೆ. ಅದ್ದರಿಂದ ಇದಕ್ಕೆ ಎಷ್ಟು ಸಾಮೀಪ್ಯವು ಇಲ್ಲವೇ ಬಂಧವು ಮನುಷ್ಯನಲ್ಲಿದೆ ಎಂಬುದನ್ನು ವಿಚಾರಿಸಿದರೆ ಆಶ್ಚರ್ಯ ಚಕಿತರಾಗುವೆವು. ಕಣ್ಣು, ಕೈ, ಕುತ್ತಿಗೆಗಳನ್ನು ಅಲ್ಪವಾಗಿಯಾದರೂ ವಿಕಾರಗೊಳಿಸದೆ ನಾವು ಮಾತಾಡುವಂತಿಲ್ಲ. ಆವೇಶದಿಂದ ವಿಕಾರವಾದ ಭೀಭತ್ಸವಾದ ಚೇಷ್ಟೆಗಳನ್ನು ಮಾತನಾಡುವಾಗ ಮಾಡಿದ್ದು ಕಂಡರೆ, ಅವರ ಮೇಲೆ ಕ್ರುದ್ಧರಾಗುತ್ತೇವೆ. ಮನಸ್ಸಿನಲ್ಲಿ ಜುಗುಪ್ಸೆಯನ್ನು ಹೊಂದುತ್ತೇವೆ. ಕಿಂಚಿತ್ತಾದರೂ ಸಂತೋಷವುಳ್ಳವರಾಗುವುದಿಲ್ಲ. ಕಾರಣ ಸಾಂಕೇತಿಕ ಬಂಧವು ಭಾಷೆಗೆ ಇರುವುದಾದರೂ ಮನುಷ್ಯನ ವಿಕಾರಗಳೊಡನೆ ಆಶಯಗಳೊಡನೆ ಸ್ವಾಭಾವಿಕವಾದ ಬಂಧವು ಅಭಿನಯಕಲೆಗೆ ಇರುವುದೇ ಆಗಿದೆ. ಹುಬ್ಬನ್ನು ಗಂಟಿಕ್ಕುವುದು, ಕಣ್ಣನ್ನು ತಿರುಗಿಸುವುದು, ದವಡೆಯನ್ನು ಉಬ್ಬಿಸುವುದು, ತುಟಿಯನ್ನು ಬಾತಂತೆ ಮಾಡುವುದು, ಚುಚ್ಚುವುದು, ಕುತ್ತಿಗೆಯನ್ನು ಒಮ್ಮೆ ಅಲುಗಿಸುವುದು, ಕೈಯನ್ನು ಉಜ್ಜುವುದು, ಕೊಡುವುದು, ಇವುಗಳೆಲ್ಲಾ ಒಮ್ಮೆಗೆ ಭಾಷೆಯಿಂದ ವಿಶದೀಕರಿಸಲು ಸಾಧ್ಯವಾಗದ ಆಶಯಗಳನ್ನು ವ್ಯಕ್ತಗೊಳಿಸುತ್ತಿವೆ.



ಶ್ರೀ ಬಗ್ಗಾ ಮತ್ತು ಯಮುನಾ

ಅಭಿನಯ ಕಲೆಯನ್ನು ಇವರು ಸಹಜತೆಯಿಂದ ಸೌಂದರ್ಯಗೊಳಿಸುತ್ತಾರೆ. ಶ್ರೀ ಬಗ್ಗರವರು ನ್ಯೂ ಥಿಯೇಟರ್ಸ್ ಚಲಚ್ಚಿತ್ರ ಕಂಪೆನಿಯಲ್ಲಿ ನಟರೂ ಅಭಿನಯ ನಿರ್ದೇಶಕರೂ ಆಗಿರುವರು. ಇವರು ಆ ಕಂಪೆನಿಯ ಪ್ರಸಿದ್ಧ ನಟಿ ಯಮುನಾ ಈಕೆಯೊಡನೆ ವಿಲಾಯತಿ ಪ್ರವಾಸವಾಗಿ ಮರಳಿ ಬಂದಿರುವರು.

ಮನುಷ್ಯನ ಭಾಷೆಯಿಂದುಂಟಾದ ಸಾಹಿತ್ಯದಂತೆ, ಉಚ್ಚ ನೀಚ ಸ್ವರಗಳಿಂದುಂಟಾದ ಸಂಗೀತದಂತೆ, ಅವನ ಅಂಗಚೇಷ್ಟೆಗಳಿಂದ ಉಂಟಾದ ಕಲೆಯು ನಾಟ್ಯ ಕಲೆ; ಅಭಿನಯ ಕಲೆ. ಸಾಹಿತ್ಯವು ಪ್ರತಿಪಾದನ ಸಾಮರ್ಥ್ಯವನ್ನು ಹೊಂದಿರುವಂತೆ ಅಭಿನಯವು ಕೈಯ ಮುದ್ರೆಯೇ ಮೊದಲಾದುವುಗಳಿಂದ ಮನೋಹರವಾದ ಆಶಯವನ್ನು ನಮ್ಮ ಮುಂದೆ ತಂದಿಡುತ್ತಿದೆ. ವಿಶದೀಕರಿಸುತ್ತಿದೆ. ಗಾಯನವು ಸ್ವರ ವಿಶೇಷಗಳಿಂದ ಮಧುರವಾಗುವಂತೆ ಅಭಿನಯವು ಕರಚರಣಾದಿ ಅವಯವಗಳಿಂದ ವಿವಿಧ ಸ್ಥಿತಿಗತಿಗಳಿಂದ ನಮ್ಮ ಹೃದಯದಲ್ಲಿ ಮಾಧುರ್ಯತೆಯನ್ನುಂಟುಮಾಡುತ್ತದೆ.

ಭಾರತೀಯರ ಅಭಿನಯ ಕಲೆಯು ಸಂಪೂರ್ಣ ಅಭಿವೃದ್ಧಿಯ ಶಿಖರಿಯನ್ನೇರಿದುದು. ಪ್ರಕೃತಿಯ ಉದಾರ ಅನುಗ್ರಹದ ಮೂಲಕ ಭಾರತೀಯರ ಜೀವಿತ ವೃತ್ತಿಗಾಗಿ ಸಂಕಟ ಪಡದ ಆ ಶತಮಾನಗಳ ಕಾಲವು ಕಳೆದು ಸುಮಾರು ಸಂವತ್ಸರಗಳಾದುವು. ಅಂದು ವಿಜ್ಞಾನ, ಕಲೆಗಳನ್ನು ಬಳೆಸಿದರು. ಅದರ ಕೃಷಿಯನ್ನೇಗೈಯ್ದರು. ಅಭಿನಯ ಕಲೆಯೊಂದರ ವಿಷಯವಾಗಿ ಐವತ್ತಕ್ಕಿಂತ ಹೆಚ್ಚು ಗ್ರಂಥರತ್ನಗಳು ಸಂಸ್ಕೃತ ಭಾಷೆಯಲ್ಲಿ ಕಾಣಬರುತ್ತವೆ. ಅಜಂತ ಗುಹೆ, ಬೇಲೂರು ಮೊದಲಾದಲ್ಲಿಯ ಕೆತ್ತನೆಯ ಪ್ರತಿಮೆಗಳು ಆ ಗ್ರಂಥಗಳನ್ನು ಅನಕ್ಷರಶಃ ವ್ಯಾಖ್ಯಾನಿಸುತ್ತಿವೆ. ಆದರೆ ಈ ಕಲೆಯು ಇಂದು ಸರಿಯಾಗಿ ಜೀವಿಸಿರುವುದು ಕೇರಳೀಯರ ಕಥಕ್ಕಳಿಯಲ್ಲಿ ಎಂಬುದು ಅವರಿಗೆ ಅಭಿಮಾನಾಸ್ಪದ ವಿಷಯ.

ಆದರೆ ಅವರು ಕಥಕ್ಕಳಿಯನ್ನು ಪರಿಷ್ಕರಿಸಿ ವಾಚಿಕಾಭಿನಯವನ್ನು ಹಿಂದಕ್ಕೆ ತಳ್ಳಿ ಆಂಗ್ಯವನ್ನು ವಿಸ್ತಾರತೆಗೊಳಿಸಿದರು. ಹಾಡನ್ನು ಸ್ವೀಕರಿಸಿದರೂ ಆಂಗಿಕಾಭಿನಯದ ಪಶ್ಚಾದ್ಭಾಗದಲ್ಲಿಯೇ ಇರಿಸಿದರು. ಹಾಡುವಾಗ ಇಲ್ಲವೇ ಮಾತಾಡುವಾಗ ಮುಖದಲ್ಲಿ ಭಾವವನ್ನು ಅಭಿನಯ ಮೂಲಕ ವ್ಯಕ್ತಗೊಳಿಸುವುದು ಕಷ್ಟ. ಆದುದರಿಂದ ಅವರ ಕಥಕ್ಕಳಿಯ ರಸಾಸ್ವಾದನೆಗೈಯಲು ಸಾಂಕೇತಿಕ ಜ್ಞಾನದ ಆವಶ್ಯಕತೆಯು ಬೇಕು.

ಯಾವ ಉತ್ಕೃಷ್ಟ ಕಲೆಯನ್ನಾದರೂ ರಸವನ್ನು ಅನುಭವಿಸಲು ಸಾಂಕೇತಿಕ ಜ್ಞಾನದವಿನಾ ಸಾಧ್ಯವಿಲ್ಲ. ಒಂದನೆಯ ತರಗತಿಯ ವಿದ್ಯಾರ್ಥಿಯು ಹತ್ತನೆಯ ತರಗತಿಯ ಪುಸ್ತಕ ಪಾಠದ ಅಭಿಪ್ರಾಯವನ್ನು ತಿಳಿಯಲಿಕ್ಕಿಲ್ಲ. ಇದಕ್ಕೆ ಇದೇ ಅದಕ್ಕೆ ಅದೇ ನಿದರ್ಶನ.

ಆದರೆ, ನಾಟ್ಯಾಚಾರ್ಯರುಗಳು 'ನೇತ್ರಭ್ರೂಮುಖರಾಗಾದ್ಯೈಃ ರೂಪಾಂಗೈರುಪಬೃಂಹಿತಾಃ । ಪ್ರತ್ಯಂಗೈಶ್ಚ ಕರಾಃ ಕಾರ್ಯಾರಸಭಾವಪ್ರದರ್ಶಕಾಃ ।' ಕಣ್ಣು, ಹುಬ್ಬು, ಮುಖವರ್ಣ ಮೊದಲಾದ ಉಪಾಂಗಗಳಿಂದಲೂ, ಪ್ರತ್ಯಂಗಗಳಿಂದಲೂ ರಸಭಾವವ್ಯಂಜಕವಾದ ಚೇಷ್ಟೆಯನ್ನು ಮಾಡತಕ್ಕದ್ದು ಎಂದು ಹೇಳುವರು.

ಯತೋ ಹಸ್ತಃ ಸ್ತತೋ ದೃಷ್ಟಿರ್ಯತೋ ದೃಷ್ಟಿ ಸ್ತತೋ ಮನಃ । ಯತೋ ಮನ ಸ್ತತೋ ಭಾವೋ । ಯತೋ ಭಾವಸ್ತತೋ ರಸಃ ॥ [ಕೈ ಇರುವಲ್ಲೇ ಕಣ್ಣು, ಕಣ್ಣಿರುವಲ್ಲೇ ಮನಸ್ಸು; ಮನಸ್ಸು ಹೇಗೆಯೋ ಅದನ್ನು ಹೊಂದಿ ಭಾವ ಇರಬೇಕು. ಆಗ ರಸ ಉಂಟಾಗುತ್ತದೆ.] ಇದೇ ರೀತಿಯಲ್ಲಿ ನಾಟ್ಯವಿಷಯವಾಗಿ ನಮ್ಮ ಪೂರ್ವಜರು ತುಂಬಾ ಹೇಳಿದ್ದಾರೆ. ಆದರೆ ಇಂದಿನ ಅರ್ಧನಗ್ನ ನಗ್ನನೃತ್ಯಗಳು ನಾಟ್ಯಲಕ್ಷಣಯುಕ್ತಗಳೇ ಎಂಬುದನ್ನು ಅವುಗಳನ್ನು ನೋಡಿದರೆ ಮನಗಾಣಬಹುದು.

—M. S. J.

ನಮ್ಮ ಪ್ರಾಚೀನ ನೃತ್ಯಕಲೆ

★

ದೇವದಾಸಿಗಳು ಹಿಂದೆ ಪೂಜ್ಯಭಾವದಿಂದ ಶಾಸ್ತ್ರೋಕ್ತವಾಗಿ ಪ್ರದರ್ಶಿಸುತ್ತಿದ್ದ ನೃತ್ಯವು ಇಂದು ಕೇವಲ ಉದರಪೋಷಣೆಗೋಸ್ಕರ—ಒನಪು ವೈಯ್ಯಾರಗಳಿಂದ ರಸಿಕರ ಮನಸೆಳೆಯಲು ಅಶ್ಲೀಲವಾಗಿ ಮಾರ್ಪಟ್ಟಿದೆ.



ಶ್ರೀ। ಕೆ. ಕೆ. ಶೆಟ್ಟರು.

ಭಾರತೀಯ ನೃತ್ಯಕಲೆಯ ಉತ್ಪತ್ತಿಯು ಮಾನವ ಜೀವನವು ವಿಕಾಸಗೊಳ್ಳುವುದರ ಮುಂಚೆಯೇ ನೆಲೆನಿಂದಿದೆದೆಯೆಂಬುದನ್ನು ಊಹಿಸಿದರೆ ತಪ್ಪಾಗಲಾರದು. ಇದರ ಉತ್ಪತ್ತಿಯು ವಿಚಾರಿಸಿ ತಿಳಿಯುವಷ್ಟು ಆಳವಾಗಿ ತೀರುತ್ತದೆ. ಆದರೂ ಐತಿಹಾಸಿಕ ಪೌರಾಣಿಕ ಹಾಗೂ ವೈದಿಕ ಕಾಲವಲ್ಲಿಯೂ ಇದರ ಸಂಪರ್ಕ ಇತ್ತೆಂಬುದು ಕಂಡುಬರುತ್ತದೆ. ಐತಿಹಾಸಿಕ ಕಾಲದಲ್ಲಿಯ ವಿಚಾರವನ್ನು ತೆಕ್ಕೊಂಡರೆ "ಘುಂಘರು ಪಹಿನಾ ಮೀರಾ ನಾಚಿರೇ" ಎಂಬ ಉಕ್ತಿಯು ಕಾಣುವುದು. ವೈದಿಕ ಕಾಲದ ವಿಚಾರವನ್ನು ಮಾಡಿದರೆ "ಅಧಿವೇಶಾಂಸಿವಪತೆ ನೃತರಿವಃ?" ಎಂಬ ಶ್ರುತಿ ವಾಕ್ಯವು ಕಂಡುಬರುತ್ತದೆ. ಇನ್ನು ಪೌರಾಣಿಕ ಕಾಲದಲ್ಲಿಯೂ ಅರ್ಜುನನು ಬೃಹನ್ನಳೆಯಾಗಿ ವಿರಾಟನಲ್ಲಿ ನೃತ್ಯ ಸಂಗೀತದ ಪಾಠವನ್ನು ಕೊಡುತ್ತಿದ್ದನೆಂದು ಓದುತ್ತೇನೆ. ಹಾಗೂ ವೇದವಲ್ಲಿ ಕೂಡಾ "ಯಸ್ಯಗಾಯಂತಿ ನೃತ್ಯಂತಿ ಭೂಮ್ಯಾಂ ಮರ್ತ್ಯಾಃ" ಎಂಬ ಉಲ್ಲೇಖವು ಕಂಡುಬರುತ್ತದೆ. ಇದೂ ಅಲ್ಲದೆ, ನಮ್ಮ ಭರತ ಖಂಡವಲ್ಲಿಯ ಕೆಲವು ದೇವಾಲಯಗಳ ಹಾಗೂ ಗುಹೆಗಳಲ್ಲಿ ಕಲ್ಲಿನಿಂದ ಕೊರೆದ



ಶ್ರೀ। ಕೆ. ಕೆ. ಶೆಟ್ಟರು "ಕಾಮ ದಹನ"ವೆಂಬ ನೃತ್ಯದಲ್ಲಿ.
ಈಶ್ವರನ ತಪಸ್ಸನ್ನು ಭಂಗಮಾಡಲು ಮನ್ಮಥನು ಪುಷ್ಪಬಾಣವನ್ನು ಬಿಡುವುದನ್ನು ಪ್ರದರ್ಶಿಸುವ ಒಂದು ನೃತ್ಯಭಂಗಿ.

ವಿಗ್ರಹಗಳೇ ಹಿಂದಿನ ನೃತ್ಯಕಲೆಯ ಉನ್ನತಿಯನ್ನು ಸಾರುತ್ತಿದ್ದಾವೆ. ಅಲ್ಲದೆ ತಪಶ್ಚರ್ಯದಲ್ಲಿದ್ದಂಥಾ ಋಷಿ, ಮುನಿಗಳು ಕೂಡಾ ನೃತ್ಯಕ್ಕೆ ಪ್ರೋತ್ಸಾಹ ಕೊಟ್ಟು ಇದರ ವಿಷಯವಾಗಿ ಹಲವು ಶಾಸ್ತ್ರಗಳನ್ನು ಕೂಡಾ ಬರೆದು ಹಾಕಿದ್ದರೆಂತ ತಿಳಿದು ಬರುತ್ತದೆ. ಭರತ ಮುನಿಯು ನಾಟ್ಯಕಲೆಯ ಪಿತಾಮಹನೆಂದು ಧಾರಾಳವಾಗಿ ಹೇಳಬಹುದು. ಅವನು ಬರೆದ ಭರತ ನಾಟ್ಯಶಾಸ್ತ್ರದಲ್ಲಿ "ಸ್ವಯಂ ಬ್ರಹ್ಮನು ನಾಲ್ಕು ವೇದಗಳಿಂದ ಒಂದೊಂದು ವಿಷಯಗಳನ್ನು ತೆಗೆದು ಒಂದು ವೇದ ಮಾಡಿದ್ದಾನೆ. ಯಾವುದೆಂದರೆ, "ಋಗವೇದದಿಂದ ಶಬ್ಧ, ಸಾಮ ವೇದದಿಂದ ಸಂಗೀತ ಯಜುರ್ವೇದದಿಂದ ಹಾವ, ಭಾವ, ಮತ್ತು ಅಥರ್ವವೇದದಿಂದ ರಸ ಇವುಗಳನ್ನು ಕೂಡಿಸಿ ನಾಟ್ಯ ವೇದವೆಂಬ ಪ್ರತ್ಯೇಕ ವೇದವನ್ನು ರಚಿಸಿದ್ದಾನೆ" ಎಂಬ ಉಲ್ಲೇಖ ಮಾಡಿದ್ದಾನೆ. ಕೈಲಾಸಪತಿಯಾದ ಶಂಕರನು ಎಲ್ಲಾ ನಾಟ್ಯಗಳಿಗೂ ಅಧಿದೇವತೆಯಾಗಿ ನಟರಾಜನೆಂದು ಕರೆಯಲ್ಪಡುತ್ತಾನೆ. ಯೋಗಿ ರಾಜಕೃಷ್ಣನು ಗ್ರಹಸ್ತ ರೂಪದಿಂದಿದ್ದು ನಾಟ್ಯವು ಗೃಹಸ್ತ ಜೀವನದ ಒಂದು ಅಂಗವಾಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. "ಬಾಂಸುರಿಲಿಯೆ ನಿತನಾಚತ ತರುಣಿಸುತ ತನರಾಸರಚೈಯ್ಯ", ಎಂಬ ವಾಕ್ಯವು ಉತ್ತರ ದೇಶದಲ್ಲಿ ಪ್ರತಿ ಒಬ್ಬರಿಗೂ ತಿಳಿದಿದೆ. ಪ್ರಾಚೀನ ಕಾಲದಲ್ಲಿ ದೇವಮಂದಿರಗಳಲ್ಲಿ ಈ ಕಲೆಯನ್ನು ತೋರಿಸಿ ದೇವರನ್ನು ಮೆಚ್ಚಿಸುವ ಹಾಗೆ ದೇವದಾಸಿಗಳನ್ನಿಟ್ಟಿದ್ದರು. ಆದರೆ ಅಂದು ಯಾವ ಪೂಜ್ಯ ಭಾವನೆ ಹಾಗೂ ಭಕ್ತಿಯಿಂದ ಈ ಕಲೆಯನ್ನು ಉನ್ನತಿಗೆ ತಂದಿದ್ದರೋ ಇಂದು ಅವೆಲ್ಲಾ ಮಾಯವಾಗಿ ಕೇವಲ ಉದರ ಪೋಷಣೆಗೋಸ್ಕರ ತಮ್ಮ ಪುರಾತನ ನೃತ್ಯಕಲೆಯನ್ನು ಮರೆತು, ಒನಪು ವೈಯ್ಯಾರಗಳಿಂದ ಭಾವಿಕರ ಮನಸೆಳೆಯುವ ಅಶೀಲ ನೃತ್ಯಗಳನ್ನು ಮಾಡುತ್ತಿದ್ದಾರೆ. ಈ ಮೇಲಿನ ನಾಟ್ಯಕಲೆಯ ಪತನಕ್ಕೆ ನಾವೇ ಕಾರಣರೆಂದು ಹೇಳಬಹುದು. ಕಾರಣ, ನಾವು ಶಾಸ್ತ್ರೋಕ್ತ ನೃತ್ಯದ ಕಡೆಗೆ ಹೆಚ್ಚಿನ ಪ್ರೋತ್ಸಾಹಕೊಡದೆ ಅರ್ಧ ನಗ್ನ ನೃತ್ಯ ಹಾಗೂ ಗಾಯನ ಗತಿಗ ಪ್ರೋತ್ಸಾಹಕೊಡುತ್ತಾ ಇದ್ದದ್ದೇ ಇರಲಿ. ಮುಂಚಿನ ದೇವದಾಸಿಗಳ ನೃತ್ಯವನ್ನು ನೋಡಿ "Count Harman Kaijarling" ಎಂಬ ಪಾಶ್ಚಾತ್ಯ ಗೃಹಸ್ಥನು ಈ ಕೆಳಗಿನ ಉದ್ಗಾರಗಳನ್ನು ತೆಗೆದಿದ್ದನು—"ಭಾರತೀಯ ನೃತ್ಯವು ನಿಜವಾಗಿಯೂ ಮುಕ್ತಿಯ ಮಾರ್ಗವಾಗಿದೆ. ಇಲ್ಲಿಯ ನೃತ್ಯ ಕಲೆಯು ಮಾನವನ ಅಂತಸ್ತಿಗೆ ಶಾಂತಿಯನ್ನು ಕೊಟ್ಟು ವಿಮೋಹ ಪೂರ್ಣ ಸಂಸಾರದ ಮಾಯಾಜಾಲವನ್ನು ಛಿನ್ನ ಭಿನ್ನವಾಗಿ ಹರಿದು, ಪಾಪ ತಾಪ, ಆಶೆ ನಿರಾಶೆ ಮತ್ತು ರಾಗದ್ವೇಗಗಳಿಲ್ಲವೊ? ಅಂಥ ಪವಿತ್ರ ಸ್ಥಳಕ್ಕೆ ಕೊಂಡುಹೋಗಿ ಮುಟ್ಟಿಸುತ್ತದೆ". ನಿಜವಾಗಿಯೂ ನಾವು ಈ ಮೇಲಿನ ಪಾಶ್ಚಾತ್ಯರ ಉದ್ಗಾರಕ್ಕೆ ಹೆಮ್ಮೆಪಡಬೇಕು. ಪ್ರಸ್ತುತ್ತ ಕಾಲದಲ್ಲಿ ನೃತ್ಯಕಲೆಯಘ್ನು ಪುನರುಜ್ಜೀವನಗೊಳಿಸಿದ ಶ್ರೇಯಸ್ಸು ಭಾರತೀಯ ನಾಟ್ಯ ವಿಶಾರದ ಶ್ರೀ। ಉದಯಶಂಕರರಿಗೇನೆ ಸಲ್ಲುವುದು. ಕಲಾಶೋಭೆಯ ತವರುಮನೆಯಾದ ಅಜಂತ ಗುಹೆಗಳ ಚಿತ್ರಗಳ ಭಾವ, ಭಂಗಿ, ಅದರ ಅರ್ಥ ಇವೇ ಮೊದಲಾದುವನ್ನು ಇಂದು ಉದಯಶಂಕರರು ನಮ್ಮ ಮುಂದೆ ತೋರಿಸುತ್ತಿದ್ದಾರೆ. ನಾವು ಅದನ್ನು ನೋಡಿ ಮುಗ್ಧರಾಗಿದ್ದೇವೆ. ಆದರೆ ಇದಕ್ಕೆಲ್ಲಾ ಕಾರಣ ಹಾಗೂ ಪ್ರೋತ್ಸಾಹ ಕೊಟ್ಟವರು ಪಾಶ್ಚಾತ್ಯರೇ. ನಾವು ನಮ್ಮ ಮನೆಯಲ್ಲಿ ನೃಭವವಿದ್ದರೂ ಇಲ್ಲಂತ ಸುಮ್ಮಗೆ ಕೂತಿದ್ದೆವು. ಅದೂ ಅಲ್ಲದೆ ಕಲಾವೃಷ್ಟಿಯಿಂದ ಉದಯ ಶಂಕರರಿಗೆ ನಾವು ಅಷ್ಟೊಂದು ಪ್ರೋತ್ಸಾಹಿಸಲಿಲ್ಲವೆನ್ನಬಹುದು. ಭಾರತೀಯರಿಗಿಂತಲೂ ಪಾಶ್ಚಾತ್ಯರೇ ಅವರನ್ನು ಹೆಚ್ಚು ಪ್ರೋತ್ಸಾಹಿಸಿ ಈ ಪ್ರಾಚೀನ ಕಲೆಯನ್ನು ಉನ್ನತಿಗೆ ತಂದವರು. ಮುಖ್ಯವಾಗಿ ಜಗತ್ತಿನ ಎದುರಿಗೆ ಉದಯಶಂಕರರನ್ನು ತಂದವಳು ಓರ್ವ ವಿದೇಶೀನರ್ತಕಿ–'ಅನ್ನಾ ಪಾವ್ಲೋವ' (Anna Paulova) ಇವಳ ಮುಖಾಂತರ ೧೯೨೩ರಲ್ಲಿ ವಿಲಾಯತಿಯಲ್ಲಿ ಭಾರತೀಯ ನೃತ್ಯದ ಆಶ್ಚರ್ಯ ತರದ ಪ್ರದರ್ಶನವು ಏರ್ಪಡಿಸಲ್ಪಟ್ಟಿತ್ತು. ಅನ್ನಾ ಪಾವ್ಲೋವಾ-ಇವಳು ಪೌರಾಣಿಕ ರಾಧಾಕೃಷ್ಣನ ರಾಸಲೀಲೆಯ ಕಡೇಗೆ ಮಾನವ ಸಮಾಜದ ಧ್ಯಾನವನ್ನು ತಿರಿಗಿಸಿ ಆ ಆನಂದಮಯ ಲೀಲೆಯ ಅನುಭವವನ್ನು ಮಾಡಿಸಿದವಳು. ತದನಂತರವೇ ನಮ್ಮ ಧ್ಯಾನವು ನೃತ್ಯದ ಕಡೇಗೆ ತಿರುಗಿ ಪ್ರತಿಯೊಂದು ಕಡೆಯಲ್ಲಿಯೂ ಈ ಕಲೆಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕುವಂತಾಯಿತು. ಉದಯಶಂಕರರ ದ್ವಾರ ಯಾವ ನೃತ್ಯವು ತೋರಿಸಲ್ಪಡುತ್ತದೋ ಅಂಥದ್ದೇ, ಇನ್ನೂ ಕೆಲವು ಪ್ರಾಚೀನ ನೃತ್ಯಗಳು ಅಲ್ಲಲ್ಲಿ ಇವೆ. ಆದರೆ ಅವೆಲ್ಲ ಪ್ರೋತ್ಸಾಹನೆ ಇಲ್ಲದೆ ಹಿಂದೆ ಬಿದ್ದಿದೆ ಎನ್ನಬಹುದು. ದೃಷ್ಟಾಂತವಾಗಿ ಬಿಹಾರದಲ್ಲಿಯ "ನೃತ್ಯ ಕಮಲಾಮನ ಚುಮ್ಮಿ" ಎಂಬ ಸಂಸ್ಥೆಯು ಪುರಾತನದಿಂದಲೂ ಇದೆ. ಅವರ "ತಿರುಹುತ ಜುಮರಾ" ಎಂಬ ನೃತ್ಯವು ಗುಜರಾತಿನ ಗರ್ಭಾ ನೃತ್ಯವನ್ನು ಹೋಲುತ್ತದೆ. ಇನ್ನು ನಮ್ಮ ನೆರೆಯೂರಾದ ಮಲ

ಬಾರವು ನೃತ್ಯಕಲೆಯಲ್ಲಿ ಬಹಳ ಮುಂಬರಿದ ದೇಶ. ಅಲ್ಲಿಯ ಕೇರಳ ಕಲಾ ಮಂಡಲ ಹಾಗೂ ಕವಿ ವಲ್ಲತ್ತೋಳ್ ಇವರು ತಮ್ಮ ಕಥಾಕಳಿ ಎಂಬ ಪ್ರಾಚೀನ ನೃತ್ಯಕಲೆಯ ವಿಷಯವಾಗಿ ತುಂಬಾ ಶ್ರಮಪಡುತ್ತಿದ್ದಾರೆ. ನೃತ್ಯ ವಿಶಾರದ ಉದಯಶಂಕರರು ಕೂಡಾ ತಮ್ಮ ಪ್ರಥಮ ಯುರೋಪದ ಪ್ರವಾಸವನ್ನು ಮುಗಿಸಿ ನಂತರ ಇಲ್ಲಿ ಬಂದು ಕಥಕ್ಕಳಿಯ ಸಂಪೂರ್ಣ ಜ್ಞಾನವನ್ನು ಮಾಡಿಕೊಂಡು ಹೋಗಿರುತ್ತಾರೆ. ಹೀಗೆ ಇನ್ನು ಮಣಿಪುರಿ ನೃತ್ಯ, ರಾಜ್ಯ ಪುತಾನದಲ್ಲಿಯ "ವೀರ ನೃತ್ಯ" ಕಲ್ಕತ್ತದಲ್ಲಿ ಇತ್ತೀಚೆಗೆ ಬೆಳಕಿಗೆ ಬಂದ ಬೃತ ಜಾರಿ ನೃತ್ಯ, ಇವೇ ಮೊದಲಾದುವುಗಳು ನೋಡಲಿಕ್ಕ ಮನಮೋಹಕವಾಗಿ ಮನಸ್ಸಿಗೆ ಉಲ್ಲಾಸವನ್ನು ಕೊಡುವಂಥಾದ್ದಾಗಿದೆ. ಈಗೀಗ ಸಿನೇಮದಲ್ಲಿ ಕೂಡಾ ರಾಷ್ಟ್ರೀಯ ನೃತ್ಯಕಲೆಗೆ ಅಲ್ಪ ಪ್ರೋತ್ಸಾಹನೆ ಸಿಕ್ಕುತ್ತಿದೆ ಎನ್ನಬಹುದು. ಇದೇ ರೀತಿ ಎಲ್ಲಾ ಕಡೆಗಳಲ್ಲಿಯೂ ಪ್ರಾಚೀನ ಭಾರತೀಯ ನೃತ್ಯಕಲೆಯು ವೃದ್ಧಿಗೆ ಬಂದು, ಉದಯಶಂಕರ, ರಾಗಿಣಿ ದೇವಿ, ಗೋಪಿನಾಥ್, ಮೇನಕಾ, ಇವರೇ ಮೊದಲಾದ ನಾಟ್ಯವಿಶಾರದರ ಹಾಗೇ ಪ್ರತಿಯೊಬ್ಬರೂ ಈ ಕಲೆಯನ್ನು ಕಲಿತು ತನ್ಮೂಲಕ ಇಡೀ ಜಗತ್ತಿಗೆ ಭಾರತೀಯ ಆತ್ಮೋನ್ನತವಾದಂಥ ನಾಟ್ಯವನ್ನು ಜಗತ್ತಿಗೆ ಸಾರುವಂತಾಗಲೆಂದು ನಮ್ಮ ಹಾರೈಕೆ.


ಇನ್ನು ಮೇಲಿನ ನೃತ್ಯಕಲೆಯಲ್ಲಿ ನಮ್ಮ ಕರ್ನಾಟಕವು ಕೂಡ ತಕ್ಕಷ್ಟು ಕಾರ್ಯವನ್ನು ಮಾಡಿದೆ ಎನ್ನಬಹುದು. ಧಾರವಾಡದಲ್ಲಿ ಶ್ರೀ|| ಶ್ರೀನಿವಾಸರು ಈ ಕಲೆಯ ವಿಷಯದಲ್ಲಿ ತುಂಬಾ ಶ್ರಮವಹಿಸಿದ್ದಾರೆ. ಹಾಗೇ ಶ್ರೀ|| ಶಿವರಾಮ ಕಾರಂತರು ಕೂಡಾ ನಾಟ್ಯಕಲೆಯ ವಿಷಯ ಚೆನ್ನಾಗಿ ಅನುಭವವನ್ನು ಪಡೆದು ತನ್ನದೇ ಆದ ಕೆಲವು ವಿಶಿಷ್ಟತರದ ನರ್ತನಗಳನ್ನು ನಮ್ಮ ಜಿಲ್ಲೆ ಹಾಗೂ ಬೊಂಬಾಯಿಯಂಥ ದೊಡ್ಡ ಪಟ್ಟಣಗಳಲ್ಲಿ ಹೋಗಿ ಪ್ರದರ್ಶಿಸಿದ್ದಾರೆ. ಸೇವಾಶ್ರಮ, ಕೆನರಾ ಗರ್ಲ್ಸ್ ಸ್ಕೂಲ್, ಟ್ರೈನಿಂಗ್ ಸ್ಕೂಲ್ ಮೊದಲಾದ ನಮ್ಮಲ್ಲಿಯ ಸಂಸ್ಥೆಗಳು ಕೂಡಾ ಭಾರತೀಯ ನೃತ್ಯಕ್ಕೆ ತುಂಬಾ ಪ್ರೋತ್ಸಾಹ ಕೊಡುತ್ತಾರೆಂಬುದು ಮೇಲಿನ ಸಂಸ್ಥೆಗಳ ವಿಶೇಷ ಕಾರ್ಯಕ್ರಮಗಳನ್ನು ನೋಡಿದವರಿಗೆ ತಿಳಿದೇ ಇದೆ. (ಈ ಮೇಲಿನ ಸಂಸ್ಥೆಗಳಲ್ಲಿ ಈ ಲೇಖಕರೇ ನೃತ್ಯವನ್ನು ಕಲಿಸಿದವರು) ಹೀಗೆ ಪ್ರತಿಯೊಂದು ಸಂಸ್ಥೆ ಹಾಗೂ ಜನರು ಇಂಥಾ ಕಲೆಯನ್ನು ಪ್ರೋತ್ಸಾಹಿಸಿ ಮುಂದೆ ತರಬೇಕು.

ಇನ್ನು ಈ ಕಲೆಯನ್ನು ಅಭ್ಯಾಸಿಸುವವರಲ್ಲಿ ಇರಬೇಕಾದ ತಾಳ್ಮೆ ಹಾಗೂ ಸಹನಾಶಕ್ತಿಯ ವಿಷಯ ಸ್ವಲ್ಪ ಹೇಳಿ ಈ ಚಿಕ್ಕ ಲೇಖನವನ್ನು ಮುಗಿಸುತ್ತೇನೆ. ಇದರಲ್ಲಿ ಕೈಯಲ್ಲಿ ತೋರಿಸುವ ಮುದ್ರೆಗಳು ಸರಿಯಾಗಿ ಶಾಸ್ತ್ರೋಕ್ತವಾಗಿ ಅಭ್ಯಾಸಿಸ ಬೇಕು. ಈ ಸಂದರ್ಭದಲ್ಲಿ ಇಡೀ ಅಂಗಾಂಗಗಳು ನೋವಾಗುವ ಸಂಭವವಿರುತ್ತದೆ. ಆದರೆ ಬಿಡದೆ ಅಭ್ಯಾಸಮಾಡಿದರೆ ಸಹಜವಾಗಿ ತಿಳಿದುಬರುವುದು. ಕಣ್ಣು, ಹುಬ್ಬು, ಕಾಲಿನ ಹಜ್ಜೆಗಳ, ತೋಳುಗಳ ಸಂಜ್ಞೆ ಹಾಗೂ ಸಂಗೀತ ಇವು ಒಂದಕ್ಕೊಂದು ಕೂಡಿ, ಕಥೆಯ ಭಾವನೆಯು ಪ್ರೇಕ್ಷಕರಿಗೆ ತಿಳಿಯುವ ಹಾಗೆ ಮುಂಚೆಯೇ ವರ್ಣಿಸಿ ತಿಳಿಸಬೇಕು. ಇದು ಯಾವುದೂ ಇಲ್ಲದೆ, ಹೇಗಾದರೂ ಕುಣಿದು ನಾಟ್ಯ ಎಂತ ಹೇಳಿಸಿಕೊಂಡರೆ ಸರಿ ಎಂಬ ಭಾವನೆಯು ಕಲಿಯುವವರಲ್ಲಿಯೂ ಕಲಿಸುವವರಲ್ಲಿಯೂ ಇರಬಾರದು. ಇಂಥ ಪ್ರಾಚೀನ ದೈವೀಸಂಭೂತ ಕಲೆಯನ್ನು ಅಭ್ಯಾಸಮಾಡುವವರು ಅದರಲ್ಲಿ ಚೆನ್ನಾಗಿ ಮನಸ್ಸಿಟ್ಟು, ಭಕ್ತಿಯಲ್ಲಿ ಕಲಿತರೆನೇ ಅದರ ಆ ಭಾವನೆ, ಉತ್ಸಾಹ ಹಾಗೂ ಪ್ರೇಕ್ಷಕರನ್ನು ಮುಗ್ಧಗೊಳಿಸುವ ಸಾಧನೆ ಇವು ಬಂದೇಬರುವುದು. ಮತ್ತು ಇಂಥ ನೃತ್ಯಕ್ಕೆಲ್ಲ ಹಾರ್ಮೋನಿಯಮಿನಂಥ ವಾದ್ಯಗಳಿರಬಾರದು. ಮೃದಂಗ, ತಬಲಾ, ಫಿಡ್ಲ್, ಸತಾರಾ, ವೀಣ ಖಂಜಿರ್, ಜಲತರಂಗ, ಮುರಲಿ ಇವೇ ಮೊದಲಾದ ವಾದ್ಯಗಳ ಸಂಗೀತವಿದ್ದರೆ ನೃತ್ಯಕ್ಕೆ ಇನ್ನೂ ಕಲೆಯೇರುವುದು. ಮಂಗಳೂರಲ್ಲಿ ಕೂಡಾ ಇಂಥ ನೃತ್ಯಶಾಲೆಯನ್ನು ನಮ್ಮ ಮಿತ್ರರ ವಿನಂತಿ ಮೇರೆಗೆ ಜೇಗನೇ ತೆರೆಯುವುದರಲ್ಲಿದ್ದೇನೆ. ಅದಕ್ಕೆ ಜನತೆಯ ಹೆಚ್ಚಿನ ಪ್ರೋತ್ಸಾಹವು ಸಿಕ್ಕೀತೆಂದು ನಮ್ಮ ಭರವಸೆ.

(ನೃತ್ಯಕಲೆಯ ವಿಷಯದಲ್ಲಿ ಇನ್ನು ಮುಂದಕ್ಕೆ 'ಪ್ರಭಾತ'ದಲ್ಲಿ ಆಗಾಗ ಹೆಚ್ಚಿನ ಲೇಖಗಳನ್ನು ಬರೆಯುವವರಿದ್ದೇವೆ. ನೃತ್ಯದ ವಿಷಯದಲ್ಲಿ ಹೆಚ್ಚಿನ ವಿಷಯಗಳನ್ನು ಕೇಳುವುದಿದ್ದರೆ 'ಪ್ರಭಾತ'ದ ಮೂಲಕ ಕೇಳಿದ್ದಲ್ಲಿ ಸಂತೋಷದಿಂದ ತಿಳಿಸಲಾಗುವುದು.)

ಭಾರತೀಯರ ವಿದ್ಯಾಭ್ಯಾಸದ ಹಿಂದು ಮುಂದು

ಪ್ರಾಚೀನ ಭಾರತದಲ್ಲಿ ಗುರುಶಿಷ್ಯರೊಳಗಣ ಸಂಬಂಧವು ಅತಿ ಮಹತ್ವದ್ದಾಗಿತ್ತು. ಇವರೊಳಗಿದ್ದ ನಿಕಟ ಪ್ರೇಮ ಸಂಬಂಧವು ನಮ್ಮ ವಿದ್ಯಾಭ್ಯಾಸ ಕ್ರಮದ ಒಂದು ಪ್ರಾಮುಖ್ಯ ಅಂಗ.........ನಮ್ಮ ದೇಶದ ಆದರ್ಶ ವಿದ್ಯಾಭ್ಯಾಸ ಕ್ರಮವೆಂದರೆ ಒಬ್ಬ ಗುರುವಿಗೆ ಒಬ್ಬನೇ ಶಿಷ್ಯನಿರುವುದು; ಅಂದರೆ ಈಗಿನ ಕ್ರಮದಂತೆ ಅನೇಕ ವಿದ್ಯಾರ್ಥಿಗಳನ್ನು ಒಂದೇ ಕಡೆಯಲ್ಲಿ ಕುಳ್ಳಿರಿಸಿ ಅವರೆಲ್ಲರಿಗೂ ಒಂದೇ ವಿಚಾರವನ್ನು ಒಂದೇ ರೀತಿಯಲ್ಲಿ ಹೇಳಿ ಕೊಡುವುದಲ್ಲ.........ನಮ್ಮಲ್ಲಿ ಹಿಂದೆ ಇದ್ದ ಗುರು ಶಿಷ್ಯರು ಆ ನಿಕಟ, ಪವಿತ್ರ ಸಂಬಂಧವನ್ನು ಪುನರುಜ್ಜೀವಿಸಬೇಕು.........ನಮ್ಮ ಹಿಂದಿನ ಮತ್ತು ಇಂದಿನ ವಿದ್ಯಾಭ್ಯಾಸ ಕ್ರಮಗಳ ನ್ಯಾಯವಾದ ಮತ್ತು ವಿಹಿತವಾದ ಸಮ್ಮಿಳನವು ನಮ್ಮ ದೇಶದ ಮುಂದಿನ ವಿದ್ಯಾಭ್ಯಾಸಕ್ಕೆ ಬಹಳ ಪ್ರಯೋಜನಕಾರಿಯಾಗುವುದು.



ಲೇಖಕರು: ಶ್ರೀ ಶೀನಪ್ಪ ಹೆಗ್ಡೆ, ವಿದ್ವಾನ್, ಅಧ್ಯಾಪಕ, ತರಬೇತಿ ಶಾಲೆ, ಗವರ್ನಮೆಂಟ್ ಕಾಲೇಜು, ಮಂಗಳೂರು.

ಹಿಂದೂದೇಶದಲ್ಲಿ ಬಹಳ ಕಾಲದ ಹಿಂದೆಯೇ ಬಳಕೆಯಲ್ಲಿದ್ದು ಇಂದಿನ ವರೆಗೂ ನಡೆದು ಬಂದ ಕೆಲವು ವಿದ್ಯಾಭ್ಯಾಸ ಕ್ರಮಗಳು ಗಮನಿಸತಕ್ಕವುಗಳಾಗಿವೆ. ಆದರೆ ಈ ಕ್ರಮವು ನಾಗರಿಕತೆಯು ಮುಂದುವರಿದಂತೆ ಮುಂದುವರಿಯಲಾಗದೆ ಹೋದುದರಿಂದ ಇದರಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡು ಸಾಲದುದಕ್ಕೆ ಪಾಶ್ಚಾತ್ಯ ವಿದ್ಯಾಭ್ಯಾಸ ಕ್ರಮಗಳನ್ನೂ ಇದರೊಂದಿಗೆ ಸೇರಿಸಿಕೊಳ್ಳಬೇಕಾಯಿತು. ಆದರೆ ಇಲ್ಲಿ ಬೇರೂರಿ ನಿಂತ, ನಮ್ಮದೇ ಆಗಿರುವ ಕೆಲವು ಅಭ್ಯಾಸ ಕ್ರಮಗಳು ಅಖಿಲ ಜಗತ್ತಿನ ವಿದ್ಯಾಭ್ಯಾಸ ಭಾಗದ ಮೇಲೆ ತಮ್ಮ ಪ್ರಭಾವವನ್ನು ತೋರಿಸಿವೆ ಎಂಬುದು ಭಾರತೀಯರಾದ ನಮಗೊಂದು ಹೆಚ್ಚಳದ ವಿಷಯ.

'ವಿದ್ಯಾಭ್ಯಾಸವೆಂದರೆ ಜೀವನ ನಡಿಸಲು ತಿಳಿಸುವ ಸಾಧನ' Education is preparation for complete living" ಎಂಬ ಮಾತನ್ನು ನಮ್ಮ ಪೂರ್ವಿಕರು ಒಪ್ಪಿದರೂ, ಆ ವಿದ್ಯಾಭ್ಯಾಸವು ಇಹಲೋಕದಲ್ಲಿ ಮಾತ್ರವಲ್ಲದೆ ಪರದಲ್ಲಿಯೂ ಸುಖವಾಗಿ ಬಾಳುವಂತೆ ಸಹಕರಿಸುವ ಸಾಧನವೆಂದು ತಿಳಿದಿದ್ದರು. ನಾವು ಹಿಂದುಗಳಾಗಿರುವುದರಿಂದ ಜನ್ಮಾಂತರಗಳಲ್ಲಿ ನಂಬಿಕೆ ಇಟ್ಟಿರುವೆವು. ಒಂದು ಜನ್ಮದ ಕರ್ಮಕ್ಕೆ ಸರಿಯಾಗಿ ಇನ್ನೊಂದು ಜನ್ಮದಲ್ಲಿ ಅದರ ಫಲವನ್ನು ಅನುಭವಿಸಬೇಕೆಂದು ನಂಬುವೆವು. ಹೀಗೆ ಪ್ರಕೃತ ಜನ್ಮವು ಮುಂದಿನ ಜನ್ಮದ ಸುಖದುಃಖಗಳಿಗೆ ಕಾರಣವಾಗುವುದರಿಂದ ವರ್ತಮಾನ ಜನ್ಮದ ವಿಚಾರದಲ್ಲಿ ನಂಬಿಕೆ ಇಡದೆ ಹೋದರು. ಹೀಗಾಗಿ ಪ್ರಕೃತ ಜನ್ಮದ ವಿಷಯದಲ್ಲಿ ಉಪೇಕ್ಷೆಯೂ ಭಾವೀ ಜನ್ಮದ ವಿಚಾರದಲ್ಲಿ ಹೆಚ್ಚಿನ ಶ್ರದ್ಧೆಯೂ ವಿದ್ಯಾಭ್ಯಾಸದ ವಿಚಾರದಲ್ಲಿ [Curriculum] ಸೇರಿಕೊಂಡಿತು.

ನಮ್ಮ ದೇಶದಲ್ಲಿ ನಾಲ್ಕು ಮುಖ್ಯ ವರ್ಣಗಳಿದ್ದು ಅವುಗಳಲ್ಲಿ ಬ್ರಹ್ಮ, ಕ್ಷತ್ರಿಯ ಮತ್ತು ವೈಶ್ಯರೆಂಬ ಮೂರು ವರ್ಗದವರು ಮಾತ್ರ ವಿದ್ಯಾಭ್ಯಾಸ ಪಡೆಯಲು ಅರ್ಹರಾಗಿದ್ದರೆಂದು ನಾವೆಲ್ಲಾ ತಿಳಿದ ವಿಷಯ. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವರ್ಣಧರ್ಮಕ್ಕೆ ವಿಹಿತವಾದ ಕೆಲಸವನ್ನೇ ಮಾಡಿಕೊಂಡಿರಬೇಕೆಂಬ ಸಮಾಜಕಟ್ಟಳೆಯೂ ಇತ್ತು. ಹೀಗೆ ಬ್ರಾಹ್ಮಣನಾದವನು ಧಾರ್ಮಿಕ ವಿಚಾರದಲ್ಲೂ, ರಾಜಕೀಯದಲ್ಲಿ ಬಹುಶಃ ಅರಸನ ಮಂತ್ರಿತ್ವದ ವರೆಗಿನ ಕೆಲಸವನ್ನು ಮಾಡಬಹುದಿತ್ತು. ಹೀಗೆ ಉಳಿದ ಎರಡು ವರ್ಗದವರು ಕ್ರಮವಾಗಿ ತಮ್ಮ ರಾಜ್ಯಪರಿಪಾಲನೆ, ವ್ಯಾಪಾರ ವಹಿವಾಟುಗಳಲ್ಲಿ ನಿರತರಾಗಿರಬೇಕಿತ್ತು. ಈ ವರ್ಣಭೇದವಲ್ಲದೆ ಮೇಲೆ ಹೇಳಿದ ಮೂರು ವರ್ಣದ ಪ್ರತಿಯೊಬ್ಬ ವ್ಯಕ್ತಿಗೂ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥಾದಿ ಆಶ್ರಮಗಳೆಂಬ ಜೀವನಕ್ರಮ ಭೇದಗಳೂ ಇದ್ದುವು. ಹೀಗೆ ಪ್ರತಿಯೊಬ್ಬನೂ ತನ್ನ ವರ್ಣಾಶ್ರಮ ಧರ್ಮಕ್ಕೆ ಸರಿಯಾಗಿಯೇ ನಡೆಯಬೇಕೆಂಬ ಗಡುತರವಾದ ಕಟ್ಟಳೆಯಿತ್ತು. ಹೀಗಾಗಿ ವಿದ್ಯಾಭ್ಯಾಸವೂ ಬೇರೆ ಬೇರೆ ಜನರಿಗೆ ಬೇರೆ ತೆರದ್ದಾಗಿತ್ತು ಮತ್ತು ಅವರವರಿಗೆ ಅಗತ್ಯವಿದ್ದ ವಿಚಾರಗಳನ್ನೇ ಹೇಳಿಕೊಡುತ್ತಿದ್ದರಲ್ಲದೆ ಅವರವರಿಗೆ ಸಂಬಂಧಿಸದ ಅನ್ಯ ವಿಚಾರವನ್ನು ಹೇಳಿಕೊಡುತ್ತಿದ್ದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜನ್ಮಸಿದ್ಧ ಹಕ್ಕಿನ ಸ್ಥಾನಮಾನಗಳನ್ನು ಪಡೆಯಲು ಬೇಕಾದ ವಿದ್ಯಾಭ್ಯಾಸವನ್ನು ಗಳಿಸುತ್ತಿದ್ದನಲ್ಲದೆ ಅದಕ್ಕಿಂತ ಹೆಚ್ಚಿನ ವಿಚಾರ ಕಲಿಯಬೇಕೆಂಬ ಆಶೆ ಪಡಲೂ ಇಲ್ಲ, ಆ ಸ್ಥಾನವನ್ನು ಸೇರುತ್ತಲೂ ಇರಲಿಲ್ಲ. ಇದರಿಂದಾಗಿ ಈಗ ಇರುವಂತೆ ಎಲ್ಲರಿಗೂ ಬೇಕಾದ ಸಾಮಾನ್ಯ ವಿದ್ಯೆಯು ವಿಶೇಷ ಪ್ರಚುರಗೊಳ್ಳದೆ ಸಂಕೋಚರೂಪದಲ್ಲೇ ಉಳಿಯಿತು.

ನಮ್ಮ ದೇಶದಲ್ಲಿ ವಿದ್ಯಾಪ್ರಚಾರಕ್ಕೆ ತಡೆಯಾಗಿ ನಿಂತವರೆಂದರೆ ನಮ್ಮ ಆದಿಯ ಗುರು[Teachers]ಗಳಾಗಿದ್ದ ಬ್ರಾಹ್ಮಣರು. ಯಾವುದಾದರೊಂದು ಹೊಸ ವಿಚಾರವನ್ನು ಶಿಷ್ಯರಿಗೆ ಹೇಳಿಕೊಡಬೇಕಾದರೆ, ಈ ವಿಷಯದಲ್ಲಿ ವೇದದ ಸಮ್ಮತಿ ಇದೆಯೇ ಎಂದು ನೋಡಿಕೊಳ್ಳುತ್ತಿದ್ದರು. ಅಲ್ಲದೆ ಮೇಲಾಗಿ ಹಾಗೆ ಹೇಳಿಕೊಟ್ಟುದರಿಂದ ತಮ್ಮ ಅಧಿಕಾರವು ಮುರಿದುಬೀಳದಂತೆ ಜಾಗ್ರತೆ ನೋಡಿಕೊಳ್ಳುತ್ತಿದ್ದರು. ಹೀಗೆ ವೇದ ಸಮ್ಮತವಾಗಿದ್ದು ತಮ್ಮ ಅಧಿಕಾರಕ್ಕೆ ಭಂಗತಾರದ ವಿಚಾರಗಳನ್ನೇ ಸರಿಯಾಗಿ ನೋಡಿಕೊಂಡು ಉಪದೇಶ ಮಾಡುತ್ತಿದ್ದರು. ಇದರಿಂದಾಗಿ ಹಿಂದೂದೇಶದ ವಿದ್ಯಾಭ್ಯಾಸ ಕ್ರಮವು ಹಿಂದಿನ ದಾರಿಯನ್ನೇ ನೋಡಿತಲ್ಲದೆ ಮುಂದೆ ನೋಡಿ ಹೊಸದಾರಿಗೆ ಕಾಲಿಡಲಿಲ್ಲ. ಹೇಳಿಕೊಡುವ ವಿಚಾರಗಳೂ ಹಳೆಯವುಗಳಾದುದರಿಂದ ವಿದ್ಯಾರ್ಥಿಗಳಿಗೆ ನಿಸ್ಸಾರವಾಗಿ ತೋರಿತು. ವಿದ್ಯಾಭ್ಯಾಸ ಮಾಡಿಸುವ ಕ್ರಮವೂ ಒಂದೇ ರೀತಿಯಲ್ಲಿ [Stereotype] ಉಳಿದು ಹೊಸ ಬೋಧನಾ ಕ್ರಮಗಳು ರೂಢಿಗೆ ಬಾರದೆಹೋದುವು.

ಹಿಂದುಗಳಲ್ಲಿ ಇಹಲೋಕದ ವಿಚಾರಕ್ಕಿಂತಲೂ ಪರಲೋಕದ ವಿಚಾರವೇ ಹೆಚ್ಚು ಬೇರೂರಿ ಇದ್ದುದರಿಂದ ವಿದ್ಯಾ ಸಂಸ್ಥೆಗಳನ್ನು ಇಂದಿನಂತೆ ದೊಡ್ಡ ದೊಡ್ಡ ಪಟ್ಟಣ ನಗರಗಳಲ್ಲಿ ಸ್ಥಾಪಿಸದೆ ಅದನ್ನು ನಿರ್ಜನವಾದ ಕಾಡುಗಳ ಮಧ್ಯದಲ್ಲಿರುವ ಋಷ್ಯಾಶ್ರಮಗಳಲ್ಲಿ ಇರಿಸಿದರು. ಕಾರಣವಿಷ್ಟೆ. ಪಟ್ಟಣಗಳಲ್ಲಿ ಅನೇಕ ದುರಾಚಾರಗಳಿರುವುದರಿಂದ ವಿದ್ಯಾರ್ಥಿಗಳಿಗೆ ಇವು ತಕ್ಕುದಾದ ಸ್ಥಳವಲ್ಲವೆಂದು ಅವರು ಸಂಪೂರ್ಣ ಮನಗಂಡಿರುವರು. ನಿರ್ಜನ ಕಾಡಿನಲ್ಲಿ ವಿದ್ಯಾರ್ಥಿಗಳ ಸೆರೆ ಹೊರೆಯೆಂದರೆ, ಬರೇ ಪ್ರಕೃತಿ, ಒಡನಾಡಿಗಳು ಅವರಂತೆಯೇ ಇರುವ ವಿದ್ಯಾರ್ಥಿಗಳು ಇಲ್ಲವೆ ಇಂದ್ರಿಯ ನಿಗ್ರಹ ಮಾಡಿದ ಅವರ ಗುರುವರ್ಗ. ನಾಲಂದ ವಿದ್ಯಾಪೀಠದಂತಹ ಕೆಲವು ಸಂಸ್ಥೆಗಳು ಪಟ್ಟಣದಲ್ಲಿ ಇದ್ದುವು. ಆದರೆ ಅಂತಹವುಗಳು ಬಹು ಕಡಿಮೆ, ಅಲ್ಲದೆ ಆದರ್ಶ ವಿದ್ಯಾ ಸಂಸ್ಥೆಗಳು ಋಷಿಗಳ ಆಶ್ರಮಗಳೆಂದೇ ಜನರ ಭಾವನೆ ಇತ್ತು.

ಪ್ರಾಚೀನ ಭಾರತದಲ್ಲಿ ಗುರುಶಿಷ್ಯರೊಳಗಣ ಸಂಬಂಧವು ಅತಿ ಮಹತ್ವದ್ದಾಗಿತ್ತು. ಇವರೊಳಗಿದ್ದ ನಿಕಟ ಪ್ರೇಮಸಂಬಂಧವು ನಮ್ಮ ವಿದ್ಯಾಭ್ಯಾಸಕ್ರಮದ ಒಂದು ಪ್ರಾಮುಖ್ಯ ಅಂಗ. ನಮ್ಮ ದೇಶದಲ್ಲಿ ಗುರುವಿನ ಮೇಲೆ ಭಕ್ತಿ ಇಡುವುದು ಧರ್ಮದ ಒಂದು ಅಂಗವೆಂದು ಭಾವಿಸುವೆವು. ಇದಕ್ಕೆ ಸರಿಯಾಗಿ ಹಿಂದೆ ಅನೇಕ ಶಿಷ್ಯರು ತಮ್ಮ ಗುರುಗಳಿಗೆ ಅಸಾಧ್ಯವಸ್ತುಗಳನ್ನು ಕೊಟ್ಟುದಿದೆ. ಗುರುಶಿಷ್ಯರ ಸಂಬಂಧವನ್ನು ಸಾಮಾನ್ಯವಾಗಿ ತಂದೆಮಕ್ಕಳ ಸಂಬಂಧಕ್ಕೆ ಹೋಲಿಸುವೆವು. ಶಿಷ್ಯನು ಗುರುವಿನೊಂದಿಗೆ ವಾಸಿಸಿ ಅವನ ಮನೆವಾರ್ತೆ ನಡಿಸುತ್ತಿದ್ದನು. ಗುರುವೂ ತನ್ನ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ವಿಚಾರದಲ್ಲಿ ಸಂಪೂರ್ಣ ಬಾಧ್ಯತೆ ವಹಿಸಿಕೊಂಡು ಆ ಎರಡು ಭಾಗದಲ್ಲೂ ಹೆಚ್ಚಿನ ಜಾಗರೂಕತೆಯನ್ನು ತೆಗೆದುಕೊಳ್ಳುತ್ತಿದ್ದನು.

ನಮ್ಮ ದೇಶದ ಆದರ್ಶ ವಿದ್ಯಾಭ್ಯಾಸ ಕ್ರಮವೆಂದರೆ ಒಬ್ಬ ಗುರುವಿಗೆ ಒಬ್ಬನೇ ಶಿಷ್ಯನಿರುವುದು. ಅಂದರೆ ಈಗಿನ ಕ್ರಮದಂತೆ ಅನೇಕ ವಿದ್ಯಾರ್ಥಿಗಳನ್ನು ಒಂದೇ ಕಡೆಯಲ್ಲಿ ಕುಳ್ಳಿರಿಸಿ ಅವರೆಲ್ಲರಿಗೂ ಒಂದೇ ವಿಚಾರವನ್ನು ಒಂದೇ ರೀತಿಯಲ್ಲಿ ಹೇಳಿಕೊಡುವುದಲ್ಲ. ಈ ಕ್ರಮದಲ್ಲಿರುವ ತಪ್ಪುಗಳು ಹಲವಿವೆಯೆಂದು ನಾವು ಬಲ್ಲೆವಷ್ಟೆ! ಒಬ್ಬ ಗುರುವಿಗೆ ಒಬ್ಬನೇ ಶಿಷ್ಯನಿರುವ ಕ್ರಮವು ಬಹಳ ವೆಚ್ಚಕ್ಕೆ ಕಾರಣವಾದುದರಿಂದ ಒಬ್ಬ ಗುರುವು ಕೆಲವು ಮಂದಿ ಶಿಷ್ಯರ ಭಾರವನ್ನು ಮಾತ್ರ ವಹಿಸುತ್ತಿದ್ದನು. ಈಗಿನ ನಮ್ಮ ಶಾಲೆಗಳಲ್ಲಿರುವಂತೆ ಒಂದು ತರಗತಿಯಲ್ಲಿ ನಲ್ವತ್ತು ಮಕ್ಕಳು ಅಗತ್ಯವಿದ್ದರೆ ವಿದ್ಯಾ ಅಧಿಕಾರಿಗಳ ವಿಶೇಷ ಅಪ್ಪಣೆ ಪಡೆದು ಇನ್ನೂ ಕೆಲವು ಮಕ್ಕಳನ್ನು ಕೂಡಿಸಿಕೊಂಡು, ಒಂದೊಂದು ವಿಚಾರವನ್ನು ಕಲಿಸಲು ಒಬ್ಬೊಬ್ಬ ಗುರುವು ನಿಶ್ಚಿತ ಸಮಯಕ್ಕೆ ನಾಟಕದ ಪಾತ್ರಗಳಂತೆ ಬಂದು ಎಲ್ಲರಿಗೂ ಒಂದೇ ವಿಚಾರವನ್ನು ಒಂದೇ ರೀತಿಯಲ್ಲಿ ಹೇಳಿ ಸಮಯವಾದೊಡನೆ ಹೊರಹೋಗುವ ಕ್ರಮವಲ್ಲ. ಇದು ಅನುಕೂಲ ಮತ್ತು ಲಾಭದಾಯಕ ಯೋಜನೆಯೇನೋ ಅಹುದು; ಆದರೆ ನಮ್ಮ ಪೂರ್ವ ಪದ್ಧತಿಗೆ ತೀರ ವಿರೋಧವಾದುದು. ನಮ್ಮಲ್ಲಿನ ಪ್ರಾಚೀನ ಕಾಲದ ವಿದ್ಯಾರ್ಥಿಗಳು ತಮ್ಮ ಗುರುವಿನಲ್ಲಿ

ಈಗಿನ ವಿದ್ಯಾರ್ಥಿಗಳು ತಮ್ಮ ಶಾಲೆಗಳಿಗೆ ತೋರಿಸುವ ಭಕ್ತಿಯನ್ನು ತೋರಿಸುತ್ತಿದ್ದರು. ಅಂದರೆ ಆಧುನಿಕ ವಿದ್ಯಾವಂತರು ತಾವು ಓಕ್ಸ್‌ಫೋರ್ಡಿನ ಇಲ್ಲವೇ ಕೇಂಬ್ರಿಜ್ಜಿನ ವಿದ್ಯಾರ್ಥಿಗಳೆಂಧು ತೋರಿಸಲು ತಮ್ಮ ಪದವಿಗಳ ಒತ್ತಿನಲ್ಲಿ M. A., B. A. (Cantab) ಎಂದು ಬರೆಯುವರು. ಆದರೆ ನಮ್ಮಲ್ಲಿ ಒಬ್ಬ ಶಿಷ್ಯನು ತನ್ನ ವಿದ್ಯೆಯ ಮಹತ್ವವನ್ನು ಶ್ರುತಪಡಿಸಬೇಕಾದರೆ, ತನ್ನ ಗುರುವಿನ ಹೆಸರನ್ನು ಹೇಳಿಕೊಳ್ಳುತ್ತಿದ್ದನು. ಉದಾಹರಣೆಗಾಗಿ ಭೀಷ್ಮನು ತಾನು ಭಾರ್ಗವರಾಮನ ಶಿಷ್ಯನೆಂದು ಹೇಳಿದಾಗ ಅವನ ವಿದ್ಯೆಗೆ ಎಷ್ಟು ಗೌರವವಿದೆ ಎಂದು ಅವನೂ ಅದನ್ನು ಕೇಳಿದವನೂ ಚೆನ್ನಾಗಿ ಬಲ್ಲರೆಂದು ಮಾತ್ರ ಹೇಳಬಹುದು.

ನಮ್ಮಲ್ಲಿ ಹಿಂದೆ ಹಿರೇಮಾಣಿಗಳಿಂದ (Monitors) ಲೂ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಈ ಹಿರೇಮಾಣಿಗಳು ಒಬ್ಬ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಆ ಗುರುವಿನಲ್ಲಿದ್ದ ಬೇರೆ ಬೇರೆ ಪ್ರಾಯದ [ತರಗತಿಯ] ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುತಿದ್ದರು. ಇದರಿಂದ ಈ ಹಿರೇ ಮಾಣಿಗಳೂ ಮುಂದೆ ಸ್ವತಂತ್ರವಾಗಿ ಪಾಠ ಹೇಳಿಕೊಡಲು ತಮ್ಮ ಗುರುಗಳಿಂದಲೇ ಪ್ರತ್ಯಕ್ಷವಾಗಿ ಅಲ್ಲಿ ಕಲಿತು ಮುಂದೆ ದೊಡ್ಡ ದೊಡ್ಡ ವಿದ್ಯಾರ್ಥಿಗಳಿಗೂ ವಿದ್ಯಾಭ್ಯಾಸ ಮಾಡಿಸಲು ಶಕ್ತರಾಗುತಿದ್ದರು. ಈಯೊಂದು ವಿಷಯವನ್ನು ನಮ್ಮ ಭಾವೀ ವಿದ್ಯಾಭ್ಯಾಸ ಕ್ರಮದಲ್ಲಿ ಸೇರಿಸಿಕೊಳ್ಳುವುದು ಉತ್ತಮವೆಂದು ತೋರುವುದು.

ಹೀಗೆ ಬೇರೆ ಬೇರೆ ಕಾರಣಗಳಿಂದಾಗಿ ಮುಖ್ಯವಾಗಿ ನಮ್ಮ ಪೂರ್ವದ ವಿದ್ಯಾವಿಚಾರದಲ್ಲಿ ಧಾರ್ಮಿಕ ವಿಚಾರವೂ ಸೇರಿದ್ದುದರಿಂದ ನಮ್ಮ ಹಿಂದಿನ ವಿದ್ಯಾಭ್ಯಾಸ ಕ್ರಮವು ಹಾಳಾಗಿ ಅಂತ್ಯವಾಯಿತು. ಹೇಳಿಕೊಡುವ ವಿಚಾರಗಳೂ ನಾಗರಿಕತೆಯ ಬೆಳವಣಿಗೆಗೆ ಸರಿಹೋಗುವಂತೆ ಹೊಸತಾಗಿರದೆ ಒಂದೇ ಆಗಿದ್ದು ಚರ್ವಿತ ಚರ್ವಣವಂತೆ ನಿಸ್ಸಾರವಾಗಿ ವಿದ್ಯಾವಿಷಯಕ ಚಟುವಟಿಕೆಯೂ ಸಂತುಹೋಯಿತು. ಪಾಶ್ಚಾತ್ಯ ವಿದ್ಯಾವಿಚಾರಗಳನ್ನು ಪಾಶ್ಚಾತ್ಯ ಬೋಧನಾ ಕ್ರಮದಲ್ಲಿ ಇಲ್ಲಿ ಬೋಧಿಸಲಾರಂಭವಾಯಿತು. ಇದು ನಮ್ಮ ಹಳೇ ವಿದ್ಯಾಕ್ರಮಕ್ಕೆ ಹೊಸ ಹುರುಪನ್ನು ಕೊಡುವುದಾಯಿತು. ಪಾಶ್ಚಾತ್ಯ ದೇಶಗಳಲ್ಲಿರುವ ಕಲಾಶಾಲೆಗಳ ಕ್ರಮದಲ್ಲೇ ಈ ದೇಶದಲ್ಲೂ ವಿದ್ಯಾಸಂಸ್ಥೆಗಳು ಸ್ಥಾಪಿತವಾಗಿ ಅವು ದಿನೇ ದಿನೇ ಬಲಗೊಳ್ಳುತ್ತಾ ಬಂದುವು. ಹೀಗೆ ಟೆನ್ನಿಸನನು ಹೇಳಿದಂತೆ (Old order changeth yeilding place to new) ಹಳೆ ಕ್ರಮಗಳೆಲ್ಲಾ ಮರೆಯಾಗಿ ಹೊಸ ಕ್ರಮಗಳು ಪ್ರಕೃತಿಯ ನಿಯಮಾನುಸಾರವಾಗಿ ಅವುಗಳ ಸ್ಥಾನವನ್ನು ಆಕ್ರಮಿಸಿದುವು.


ಆದರೆ ಸ್ಥಳೀಕ ಪರಿಸ್ಥಿತಿ, ಅಗತ್ಯ ಮೊದಲಾದುವುಗಳನ್ನು ಗಮನಿಸದೆ ಪಾಶ್ಚಾತ್ಯ ವಿದ್ಯಾಕ್ರಮವೇ ನಮಗೆ ಆದರ್ಶ ಕ್ರಮವೆಂದು ಅದನ್ನುಕುರುಡನ ಕೋಲಿನಂತೆ ಹಿಡಿದುಕೊಳ್ಳುವುದು ವಿವೇಕವಲ್ಲ. ನಮ್ಮ ಹಿಂದಿನ ವಿದ್ಯಾಭ್ಯಾಸ ಕ್ರಮಗಳಲ್ಲಿ ಉತ್ತಮವಾದುವನ್ನು ಆರಿಸಿಕೊಂಡು ಅವನ್ನು ಪಾಶ್ಚಾತ್ಯ ವಿದ್ಯಾಕ್ರಮದಲ್ಲಿ ನಮಗೆ ಸರಿಹೋಗುವ ಉತ್ತಮ ಕ್ರಮಗಳೊಂದಿಗೆ ಸೇರಿಸಿಕೊಂಡು ನಮ್ಮ ಮುಂದಿನ ವಿದ್ಯಾಭ್ಯಾಸ ಕ್ರಮವನ್ನು ಹೊಸತಾಗಿ ಮಾಡಿಕೊಳ್ಳುವುದು ಉತ್ತಮ. ನಮ್ಮ ವಿದ್ಯಾಭ್ಯಾಸ ಕ್ರಮವು ನಮ್ಮದೇ ಆಗಿರುವುದರಿಂದ ಪರಕೀಯವಾದ ಪಾಶ್ಚಾತ್ಯ ಕ್ರಮಕ್ಕಿಂತ ಹೆಚ್ಚಿನ ಪ್ರಯೋಜನಕಾರಿಯಾಗುವುದರಲ್ಲಿ ಸಂದೇಹವೇ ಇಲ್ಲ. ನಮ್ಮಲ್ಲಿ ಹಿಂದೆ ಇದ್ದ ಗುರು ಶಿಷ್ಯರ ಆ ನಿಕಟ, ಪವಿತ್ರ ಸಂಬಂಧವನ್ನು ಪುನರುಜ್ಜೀವಿಸಬೇಕು. ಹಿರೇ ಮಾಣಿಗಳಿಂದ ಪಾಠ ಹೇಳಿಸುವ ಕ್ರಮವನ್ನೂ ಪುನಃ ರೂಢಿಗೆ ತರುವುದರಿಂದ ನಮ್ಮ ಇಲಾಖೆಗೆ ಹೆಚ್ಚಿನ ಲಾಭವಾಗಬಹುದೆಂದೂ ಆಶಿಸಬಹುದು. ಸಾಧ್ಯವಿದ್ದರೆ ನಮ್ಮ ವಿದ್ಯಾಸಂಸ್ಥೆಗಳನ್ನು ನಮ್ಮ ಪೂರ್ವಿಕರು ಇರಿಸಿದಂತೆ ನಿರ್ಜನವಾದ ಸ್ಥಳ (ಕಾಡಿನ ಮಧ್ಯ)ದಲ್ಲಿರಿಸುವುದೂ ಉತ್ತಮ.

ಸಮಾಜವಾದಿಯ ಆಕಾಂಕ್ಷೆಗಳು

★

"ದೇಶವು ಪರಕೀಯರ ಅಧಿಕಾರ ವಶವಾಗಿರುವುದನ್ನು ಸಮಾಜವಾದಿಯು ಮೊದಲು ಕಂಡುಕೊಳ್ಳುವನು. ಆಳುವವ ಮತ್ತು ಆಳಲ್ಪಡುವವರ ವೈಬಣ್ಣದ ವ್ಯತ್ಯಾಸವೇನೊ ಇದೆ; ಆದರೆ ಸಮಾಜವಾದಿಯು ಆರ್ಥಿಕ ಮತ್ತು ರಾಜಕೀಯ ಸಂಬಂಧದಲ್ಲಿರುವ ವ್ಯತ್ಯಾಸವನ್ನು ಮಾತ್ರ ಆಳುವ ಆಳಲ್ಪಡುವ ಪಕ್ಷಗಳನ್ನು ಪ್ರತ್ಯೇಕಿಸುವಲ್ಲಿ ಪರಿಗಣಿಸುವನು."

ಈ ಲೇಖದಲ್ಲಿ ಬರೆಹಗಾರರು ಸಮಾಜವಾದಿಯ ಕೇಳಿಕೆಗಳೇನು, ಕೊಂಗ್ರೆಸಿನಲ್ಲಿ ಈ ಪಕ್ಷವು ಅವಶ್ಯವಾಗಿ ಇರಬೇಕು ಏಕೆ, ಎಂಬುದನ್ನು ಚೆನ್ನಾಗಿ ಪ್ರತಿಪಾದಿಸಿದ್ದಾರೆ.



ಲೇಖಕರು: ಶ್ರೀ ಎಸ್. ಎಸ್. ...

ಶಕ್ತಿಗೆ ತಕ್ಕ ಗೈಮೆ, ಅವಶ್ಯವಿದ್ದಷ್ಟು ಜೀವನ ಸೌಕರ್ಯಗಳು ಎಲ್ಲ ಪ್ರಜೆಗಳಿಗೂ ಒದಗಿಬರುವುದಕ್ಕೆ ಅನುಕೂಲವಾದ ಸಮಗ್ರ ಸಮಾಜಾಧಿಕಾರ ಸ್ಥಾಪನೆಯೇ ಸೋಶಿಯಲಿಸಮ್ಮಿನ ಮೂಲ ತತ್ವ. ಎಲ್ಲರಿಗೂ ಮಾನವ ಯೋಗ್ಯವಾದ ಸರ್ವಸಾಧಾರಣ ತೃಪ್ತಿಕರವಾದ ಜೀವನ ಸೌಕರ್ಯ—ಉಂಡು, ಉಟ್ಟು, ಹೊಂದಿರಬೇಕು ... ಮಾಡಿಕೊಂಡು ... ವಾಸಮಾಡಿಕೊಂಡು ದುಡಿದುಕೊಂಡಿರುವುದಕ್ಕೆ ಮಾತ್ರ ಬೇಕೆಂಬಷ್ಟು ಗೈಮೆಯ ಪ್ರತಿಫಲ ಹುಟ್ಟಬರಬೇಕು—ಕೆಲಸಕ್ಕೆ ಸಿಕ್ಕುವ ಮಜೂರಿ ಸಿಕ್ಕುತ್ತಿರಬೇಕು—ಮಾಡಿದ ಕೆಲಸಕ್ಕೆ ಸಿಕ್ಕುವ ಮಜೂರಿಯಿಂದ ಇಷ್ಟನೆಲ್ಲ ಕೊಂಡುಕೊಳ್ಳಲು ಸಾಧ್ಯವಾಗಬೇಕು—ಹೊಲಮಾಡುವ ರೈತನಿಗೆ ಹೊಲದ ಮೇಲಿನ ಅಧಿಕಾರವಿರಬೇಕು—ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಬೇಕು ಇವಿಷ್ಟು ಸೋಶಿಯಲಿಸ್ಟನ ಕೇಳಿಕೆಗಳು. ಇವಲ್ಲದೆ, ಪ್ರಜಾಜನರೆಲ್ಲರಿಗೂ ವಿದ್ಯೆ ದೊರೆಯಬೇಕೆಂದೂ, ಪ್ರತಿಯೋರ್ವ ವ್ಯಕ್ತಿಗೂ ತನಗಿಷ್ಟವಿದ್ದಂತೆ ಯೋಚಿಸುವ, ಮಾತಾಡುವ, ಬರೆಯುವ ಸ್ವಾತಂತ್ರ್ಯವಿರಬೇಕೆಂದೂ ಸೋಶಿಯಲಿಸ್ಟನು ಹೇಳುತ್ತಾನೆ.

ಇನ್ನೊಂದು ರೀತಿಯಲ್ಲಿ ಮೇಲಿನ ಕೇಳಿಕೆಗಳನ್ನು ಬರೆಯುವುದಿದ್ದರೆ, ಅರೆಹೊಟ್ಟೆಯ ಅನ್ನ ಕೂಡಾ ದೊರೆಯದ ಉಪವಾಸ ಬೀಳುವ ದುಃಸ್ಥಿತಿ ಹಾಗೂ ದಾರಿದ್ರ್ಯ ಇವುಗಳು ನಾಶವಾಗಬೇಕು. ವರ್ಗಭೇಧ, ಕೀಳುಮೇಲೆಂಬ ಸಮಾಜದ ಆಂತರಿಕ ವ್ಯತ್ಯಾಸಾದಿ ಅಸಮಾನತೆಗಳು ನಾಶವಾಗಬೇಕು. ರಾಷ್ಟ್ರಗಳ ಹಾಗೂ ಪ್ರಜಾಜನವರ್ಗದವರು ಸಾಮೂಹಿಕವಾಗಿ ಹಾಗೂ ಪ್ರತ್ಯಪ್ರತ್ಯೇಕವಾಗಿ ಪರಸ್ಪರ ಗಳಹಿಸುಕುವ ಮೇಲಾಟವು ನಿಂತುಹೋಗಬೇಕು. ನಿರ್ದಾಕ್ಷಿಣ್ಯವೂ ಅತಿನಿಷ್ಟುರವೂ ಅಮಾನುಷವೂ ಆದ ಸುಲಿಗೆ ಮತ್ತು ರಾಜಕೀಯ ಶಕ್ತಿಹೊಂದಿ ಒಂದು ಪಕ್ಷವು ಇನ್ನೊಂದು ಪಕ್ಷದ ಮೇಲೆ ದಬ್ಬಾಳಿಕೆ ನಡೆಸುವುದು ಇಲ್ಲದಾಗಬೇಕು.

ಸೋಶಿಯಲಿಸ್ಟ್ ಸಮಾಜವೆಂತಿರಬೇಕು?

ಪ್ರತಿಯೊಬ್ಬ ಮಾನವನಿಗೂ ಬೇಕಾದ ರೀತಿಯ, ಅವನ ಮೆಚ್ಚುಗೆಗೆ ಪಾತ್ರವಾಗುವ ಸಮಾಜವ್ಯವಸ್ಥೆಯು ಯಾವುದು? ಯಾವ ವ್ಯವಸ್ಥೆಯಂತೆ ಇಡೀ ಮಾನವ ಕುಲದ ಯಾವತ್ತೂ ಉಪಭೋಗಕ್ಕೆ ಅತ್ಯಾವಶ್ಯವಾಗಿರುವ ಸರ್ವಾದಿ ಸಂಪತ್ತು, ಅಂಥಾ ಸಂಪತ್ತನ್ನು ಉತ್ಪಾದನೆ ಮಾಡುವ ಯಾವತ್ತೂ ಉಪಕರಣ ವಿಶೇಷಾದಿಗಳು, ಅಂಥಾ ಸಂಪತ್ತನ್ನು ಮಾನವ ಕುಲದ ಪ್ರತಿಯೋರ್ವ ವ್ಯಕ್ತಿಯ ಅವಶ್ಯಕತೆಗೆ ಬೇಕಾದಂತೆ ವಿಭಜನೆಮಾಡಿ ಕೊಡುವ ಅಧಿಕಾರ ಮತ್ತು ಸಂಪತ್ತನ್ನು ಅತ್ತಿತ್ತ ವಿನಿಮಯಮಾಡುವ ಅಧಿಕಾರಗಳನ್ನು, ಮಾನವಜೀವಿಗಳನ್ನು ಗುಲಾಮಗಿರಿಯಿಂದ ಬಿಡಿಸುವಂತೆ, ಒಡೆತನ (Private ownership)ದ ಹಿಡಿತದಿಂದ ಬಿಡುಗಡೆಪಡಿಸಿ ಸಮಗ್ರ ಸಮಾಜದ ಅಧಿಕಾರದ ವಶಪಡಿಸಿಕೊಳ್ಳಬೇಕು. ಅರ್ಥಾತ್ ವರ್ಗವ್ಯತ್ಯಾಸವಡಗಿ ಸ್ವಾತಂತ್ರ್ಯ, ಅಧಿಕಾರ, ಜವಾಬ್ದಾರಿ, ಉಪಭೋಗ್ಯಾಧಿಕಾರ, ಸಂಪದುತ್ಪಾದನಾ ಶಕ್ತಿ ಪ್ರಯೋಗಾನುಕೂಲ್ಯಗಳು ಎಲ್ಲರಿಗೂ ಎಲ್ಲ ಪ್ರಜೆಗಳಿಗೂ ಯಾವ ಕಾರಣದಿಂದಲಾದರೂ ಯಾರಿಂದಾದರೂ ಎಷ್ಟು ಮಾತ್ರಕ್ಕೂ ನಿರಾಕರಿಸಲ್ಪಡದಂತಹ ಸಮಗ್ರ ಸಮಾಜಾಧಿಕಾರ ತತ್ವ ರೀತ್ಯಾ ಸುವ್ಯವಸ್ಥಿತ ಸಮಾಜ ಜೀವನವೇ ಸೋಶಿಯಲಿಸ್ಟನ ಆಕಾಂಕ್ಷೆಯಾಗಿದೆ.

ತನ್ನ ಇಚ್ಛಿತ ಫಲವನ್ನು ಪ್ರಾಪ್ತಿಸಿಕೊಳ್ಳುವುದಕ್ಕೆ ಪ್ರಕೃತದ ಪರಿಸ್ಥಿತಿಯಲ್ಲಿ ಯಾವ ದಾರಿಯನ್ನು ಹಿಡಿದರೆ ಸಾಧ್ಯ ಎಂಬ ವಿಚಾರ ಮಾಡುವ ಸಮಾಜವಾದಿಗೆ, ಇಂದಿನ ಸಮಾಜ ವ್ಯವಸ್ಥೆಯಲ್ಲಿ ಅಂಥಾ ಫಲ ದೊರಕಿಸಿಕೊಳ್ಳಲು ಎಷ್ಟು ಮಾತ್ರವೂ ಸಾಧ್ಯವೇ ಇಲ್ಲ ಎಂದು ಖಚಿತವಾಗುವುದು. ದೇಶವು ಪರಕೀಯರ ಅಧಿಕಾರ ವಶವಾಗಿರುವುದನ್ನು ಸಮಾಜವಾದಿಯು ಮೊದಲು ಕಂಡುಕೊಳ್ಳುವನು. ಆಳುವವ ಮತ್ತು ಆಳಲ್ಪಡುವವರ ವೈಬಣ್ಣದ ವ್ಯತ್ಯಾಸವೇನೊ ಇದೆ, ಆದರೆ ಸಮಾಜವಾದಿಯು ಆರ್ಥಿಕ ಮತ್ತು ರಾಜಕೀಯ ಸಂಬಂಧದಲ್ಲಿರುವ ವ್ಯತ್ಯಾಸವನ್ನು ಮಾತ್ರ ಆಳುವ ಆಳಲ್ಪಡುವ ಪಕ್ಷಗಳನ್ನು ಪ್ರತ್ಯೇಕಿಸುವಲ್ಲಿ ಪರಿಗಣಿಸುವನು.

ಹಿಂದೂ ದೇಶದ ರಾಜ್ಯಭಾರ ಕ್ರಮವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವ. ಬ್ರಿಟನಿನಲ್ಲಿ ತಯಾರಿಸಲಾದ ಸಿದ್ಧ ಪದಾರ್ಥಗಳನ್ನು ಬಿಕರಿಗೆ ಹಾಕುವ ವಿಶಾಲ ಸಂತೆಯಂತೆಯೂ ಕಡಿಮೆ ಮಜೂರಿಗೆ ಒದಗಿ ಬರುವ ಸೇರಾಕ ಅವ್ಯವಸ್ಥಿರ ಮಜೂರರನ್ನು ಚೆನ್ನಾಗಿದುರಿಸಿ ಹೆಚ್ಚಾಗಿ ಲಾಭಗಳಿಸುವ ಉದ್ದೇಶದಿಂದ (ಬ್ರಿಟನಿನಲ್ಲಿ ವ್ಯಾಪಾರಕ್ಕೆ ಹಚ್ಚಿ ಇನ್ನೂ ಉಳಿದ) ಮೂಲಧನವನ್ನು ವ್ಯಾಪಾರಕ್ಕೆ, ಕೈಗಾರಿಕೆಗೆ ಹಚ್ಚುವುದಕ್ಕೆ ಅನುಕೂಲ ಕ್ಷೇತ್ರದಂತೆಯೂ ಬ್ರಿಟಿಷರು ನಮ್ಮ ದೇಶವನ್ನು ಉಪಯೋಗಿಸಿಕೊಳ್ಳುತ್ತಿರುವರು. ಈ ರೀತಿಯ ಬಂಡವಲಶಾಹಿ ಹಾಗೂ ಸಾಮ್ರಾಜ್ಯ ಶಕ್ತಿಯು ಬ್ರಿಟಿಷ್ ಮಾತ್ರವಲ್ಲ. ಇದರ ಅನುಕೂಲಿಗಳಾಯದಾರರಾಗಿ ಹಿಂದೂ ದೇಶದ ರಾಜರುಗಳು, ಜಮೀನ್ದಾರರು ಮತ್ತು ದೊಡ್ಡ ವ್ಯಾಪಾರೀ ಬಂಡವಲಗಾರರೂ ಇದ್ದಾರೆ ಎಂದು ಸೋಶಿಯಲಿಸ್ಟನ ಸ್ಪಷ್ಟಾಭಿಪ್ರಾಯವಿದೆ.

ಈ ರೀತಿಯ ಸಾಮ್ರಾಜ್ಯ ಶಕ್ತಿಯ ಆಡಳಿತವು ಇಲ್ಲಿ ಇರುವಷ್ಟು ಕಾಲ ರೈತನಿಗೆ ಹೊಲ, ಹಸಿದವನಿಗೆ ಅನ್ನ ನಿರುದ್ಯೋಗಿಗೆ ಉದ್ಯೋಗಗಳನ್ನು ಒದಗಿಸಿ ಕೊಡುವುದೆಂದರೆ ಬರಿಯ ಕನಸಲ್ಲದೆ ಮತ್ತೇನು? ಹಿಂದೂದೇಶವನ್ನು ನಿರುದ್ಯೋಗ ಅವಿದ್ಯೆ, ದಾರಿದ್ರ್ಯ ಮತ್ತು ರಾಜಕೀಯ ದಾಸ್ಯದಲ್ಲಿರಿಸುವುದೇ ಸಾಮ್ರಾಜ್ಯ ಶಕ್ತಿ ವರ್ಧನೆಗೆ ಅತ್ಯಾವಶ್ಯಕವಾಗಿದೆ. ಸಾಮ್ರಾಜ್ಯ ಶಕ್ತಿಯು ಇಲ್ಲಿಂದ ಉಚ್ಚಾಟನೆ ಮಾಡಲ್ಪಡದಿದ್ದರೆ ದೇಶದ ದಾರಿದ್ರ್ಯ ಪರಿಹಾರವಾಗುವಂತಿಲ್ಲ.

ಭಾರತದಲ್ಲಿಯ ೩೬೦ ಮಿಲಿಯ ಪ್ರಜಾಜನರ ಆರ್ಥಿಕ ಜೀವನದ ಮಟ್ಟವನ್ನು ಸುಧಾರಿಸಬೇಕಾದರೆ ದೇಶದಲ್ಲಿ ದೊಡ್ಡ ಕೈಗಾರಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಜಾಗ್ರತೆಯಾಗಿ ಅಭಿವೃದ್ಧಿಗೊಳಿಸುವುದೂ ಒಂದು ದಾರಿಯಾಗಿದೆ.

ಅತಿ ಪ್ರಾಚೀನ ಕಾಲದ ರೀತಿಯ ಉಪಕರಣಗಳಿಂದಲೇ ಕೈಗಾರಿಕೆ ನಡೆಸುತ್ತಾ ಆಧುನಿಕ ಯಾಂತ್ರಿಕ ಉಪಕರಣಗಳ ಸಹಾಯವನ್ನು ಪಡೆಯದೇ ಇದ್ದರೆ ನಮ್ಮ ದೇಶದ ಇಷ್ಟು ಹೆಚ್ಚಿನ ಪ್ರಜಾಜನ ಸಮುದಾಯದ ಜೀವನ ಮಟ್ಟವು ಸುಧಾರಿಸಲ್ಪಡದು, ಇತರ ರಾಷ್ಟ್ರಗಳ ದೃಷ್ಟ್ಯಾ ನಾವು ಅಶಕ್ತರಾಗಿಯೇ ಉಳಿಯಬೇಕಾಗುವುದು, ರಾಷ್ಟ್ರ ರಕ್ಷಣಾ ವಿಚಾರದಲ್ಲೂ ನಾವು ಬಹಳ ಹಿಂದುಳಿಯಬೇಕಾದೀತು.

ಆದರೆ ನಮ್ಮ ಆರ್ಥಿಕ ಉನ್ನತಿಗೆ ಬೇಕಾದಂತೆ ರಾಷ್ಟ್ರೀಯ ಔದ್ಯೋಗಿಕರಣವೆಸಗಲು ಇಲ್ಲಿ ಈಗ ಇರುವ ಬ್ರಿಟಿಷ್ ಅಧಿಕಾರವು ಆತಂಕವಾಗಿದೆ. ನಾವು ಮರ ಕಡಿವ, ನೀರು ಹೊರುವ ಕೂಲಿಗಳು, ಸೇವಕರಾಗಿ ಉಳಿವುದೇ ಬ್ರಿಟಿಷ್ ಸಾಮ್ರಾಜ್ಯ ಶಕ್ತಿಗೆ ಬೇಕಾದುದಾಗಿದೆ. ಸಾಮ್ರಾಜ್ಯದ ಸೇವಕರಾಗಿ ನಾವು ಇರಬೇಕೆಂಬುದೇ ಸಾಮ್ರಾಜ್ಯದ ದಾಸ್ಯ ವೃತ್ತಿಯಲ್ಲೇ ನಾವು ಇನ್ನೂ ಸತ್ತು ಬಾಳು ಬಾಳಿಕೊಂಡಿರಬೇಕೆಂಬುದೇ ಬ್ರಿಟಿಷ್ ಸಾಮ್ರಾಜ್ಯ ಶಕ್ತಿಯ ಸಂಕಲ್ಪವಿದೆ.

ರಾಷ್ಟ್ರೀಯ ಸ್ವಾತಂತ್ರ್ಯ

ಆದುದರಿಂದ ಮೊತ್ತಮೊದಲಿನ ರಾಷ್ಟ್ರೀಯ ಸ್ವಾತಂತ್ರ ಬರಬೇಕು, ಬ್ರಿಟಿಷರ ಸಾಮ್ರಾಜ್ಯ ಶಕ್ತಿಯ ಮಾರಿಬಲೆಯಿಂದ ರಾಷ್ಟ್ರವು ಒಮ್ಮೆಗೆ ಬಿಡಿಸಿಕೊಂಡು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕು. ಸ್ವರಾಜ್ಯವಿಲ್ಲದೆ ಸಮಾಧಿಕಾರವು ಸ್ಥಾಪಿಸಲ್ಪಡಲು ಸಾಧ್ಯವೇಯಿಲ್ಲವೆಂಬುದಾಗಿ ಸೋಶಿಯಲಿಸ್ಟನು ತಿಳಿದಿರುವನು.

ರಾಷ್ಟ್ರದ ಆಡಳಿತದ ಉಪಕರಣವಾದ ಸರಕಾರವನ್ನು ವಶಪಡಿಸಿಕೊಳ್ಳುವುದು ಅರ್ಥಾತ್ ರಾಷ್ಟ್ರೀಯ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದು—ಸೋಶಿಯಲಿಸ್ಟನ ಆಧ್ಯ ಕರ್ತವ್ಯ ಮತ್ತು ತಾತ್ಕಾಲಿಕ ಧ್ಯೇಯವಾಗಿದೆ. ಮತ್ತು ಈ ಧ್ಯೇಯಸಾಧನೆಗಾಗಿ ಸುವಿಚಾರಿ ಸೋಶಿಯಲಿಸ್ಟನು ಚೈತನ್ಯಮಯ ರಾಷ್ಟ್ರೀಯತೆಯ ಕಡೆ ತ್ರಿಕರಣಪೂರ್ವಕ ಗಮನವನ್ನು ಕೊಡದಿರಲಾರನು.

ಇತರರಂತೆಯೇ ಸೋಶಿಯಲಿಸ್ಟನು ಕೂಡಾ ರಾಷ್ಟ್ರಪ್ರೇಮಾ ರಾಷ್ಟ್ರೀಯ ರಾಜಕೀಯ ಸ್ವಾತಂತ್ರ್ಯ ಗಳಿಸಕೊಳ್ಳಬೇಕೆಂಬ ಉತ್ಕಟೇಚ್ಛೆ, ಸಂಪೂರ್ಣ ಸ್ವತಂತ್ರವಾದ ಭಾರತ, ಸ್ವಾಭಾವಿಕವಾದ ಸ್ವಾಭಿಮಾನ, ರಾಷ್ಟ್ರಾಭಿಮಾನವುಳ್ಳವನಾಗಿದ್ದಾನೆ.

ಸ್ವರಾಜ್ಯ ಸಿದ್ಧಿಸಲ್ಪಡಬೇಕೆಂಬ ಸಂಕಲ್ಪ ಅವನದಿದೆ. ಹೀಗೆ ಗಳಿಸಿಕೊಳ್ಳಲಾಗುವ ಸ್ವರಾಜ್ಯವು ಮಾತ್ರ ಸಂಪೂರ್ಣ ಪ್ರಜಾಪ್ರಭುತ್ವ ರೀತಿಯಲ್ಲಿ ಮುನ್ನಡೆಸಲ್ಪಡುವ ಸಮಗ್ರ ಪ್ರಜಾಧಿಕಾರವಾದ ಸ್ವರಾಜ್ಯವಾಗಬೇಕೆಂಬುದು ಸೋಶಿಯಲಿಸ್ಟನ ಸಂಕಲ್ಪ.

ಬ್ರಿಟಿಷ್ ಅಧಿಕಾರದ ಬದಲು ಅದು ಈಗಿರುವ ಸ್ಥಾನದಲ್ಲಿ ಸಮಗ್ರ ಪ್ರಜಾಜನದ ಸಾಮಾಜಿಕ ಸರ್ವಾಧಿಕಾರವು ಸ್ಥಾಪಿಸಲ್ಪಡಬೇಕೆಂಬುದೇ ಸೋಶಿಯಲಿಸ್ಟನ ದೃಢಪ್ರತಿಜ್ಞೆಯಿದೆ.

ಸಶಕ್ತ ಕೊಂಗ್ರೆಸು

ಇಷ್ಟು ಧ್ಯೇಯಗಳನ್ನು ಮುಂದಿಟ್ಟುಕೊಂಡು ಇನ್ನು ಈ ಧ್ಯೇಯ ಅರ್ಥಾತ್ ರಾಷ್ಟ್ರೀಯ ರಾಜಕೀಯ ಸ್ವಾತಂತ್ರ್ಯ ಮತ್ತು ಸಮಗ್ರ ಸಮಾಧಿಕಾರ ಸ್ಥಾಪನೆ— ಸಾಧನೆಗಳಿಗಾಗಿ ಅನುಕೂಲವಾದ ಯೋಗ್ಯ ಉಪಾಯ ಹಾಗೂ ಉಪಕರಣಗಳ್ಯಾವುವೆಂದು ಸೋಶಿಯಲಿಸ್ಟನು ತಿಳಿದುಕೊಳ್ಳಲು ಪ್ರಯತ್ನಿಸುವಾಗ ಅವನಿಗೆ, ಅಂಥಾ ಉಪಕರಣವೆಂದರೆ ಕಾಂಗ್ರೆಸ್ಸೆಂದೂ, ಮೇಲ್ಕಾಣಿಸಿದ ಧ್ಯೇಯಸಾಧನೆಗಾಗಿ ಪರಿಣಾಮಕಾರಿ ಸಂಸ್ಥೆಯು ಹಾಗೂ ರಾಷ್ಟ್ರೀಯ ಸ್ವಾತಂತ್ರಬೇಕೆಂಬ ಇಚ್ಛೆಯುಳ್ಳ ಎಲ್ಲಾ ಪ್ರಜಾಜನ ವರ್ಗದವರು ಒಂದುಗೂಡಿ ಪ್ರಯತ್ನಿಸುವುದಕ್ಕೆ ಸಾಧ್ಯವಾದ ಏಕ ಮಾತ್ರ ಸಂಸ್ಥೆಯೇ ಈ ಕೊಂಗ್ರೆಸ್ಸೆಂದೂ ಖಚಿತವಾಗುವುದು.

ಇತ್ತ ಐವತ್ತು ವರ್ಷಗಳಿಂದ ನಡೆಸಲ್ಪಡುತ್ತಿದ್ದ ರಾಷ್ಟ್ರೀಯ ಚಳವಳವನ್ನು ರೂಪುಗೊಳಿಸಿ ಮುನ್ನಡೆಸಿಕೊಂಡು ಬಂದು ಮಹಾಜನ ಶಕ್ತಿಯೇ ಕಾಂಗ್ರೆಸ್ಸಿದೆ. ಈ ಸಂಸ್ಥೆಯನ್ನು ಇನ್ನಷ್ಟು ಬಲಗೊಳಿಸಿ ಇದರ ಅಸ್ತಿವಾರವನ್ನು ಇನ್ನಷ್ಟು ವಿಶಾಲವಾಗಿ ಮಾಡದೆ ಇಚ್ಛಿತ ಧ್ಯೇಯವನ್ನು ಸಾಧಿಸಿಕೊಳ್ಳುವುದು ಕಷ್ಟಸಾಧ್ಯವೆಂದು ಸೋಶಿಯಲಿಷ್ಟನ ಅಭಿಪ್ರಾಯ.


ಕೊಂಗ್ರೆಸು ಸದ್ಯಕ್ಕೆ ವಹಿಸಿರುವ ಎಲ್ಲಾ ಧೋರಣೆಗಳು ಕಾಂಗ್ರೆಸ್ಸನ್ನು ಸಂಪೂರ್ಣ ಸ್ವಾತಂತ್ರ್ಯ ಧ್ಯೇಯದ ಕಡೆ ಸಾಗಿಸಲು ಅನುಕೂಲವಾದವುಗಳಲ್ಲವೆಂದೂ ಕೆಲಮಟ್ಟಿಗೆ ಕಾರ್ಯಕ್ರಮ ಮತ್ತು ರೀತಿಗಳಲ್ಲಿ ಮೂಲ ಬದಲಾವಣೆಯು ಅವಶ್ಯವಿದೆಯೆಂದೂ ಅಂಥಾ ಬದಲಾವಣೆಯನ್ನು ತಂದುಕೊಂಡರೆ ಮಾತ್ರ ಧ್ಯೇಯ ಸಾಧಿಸಲು ಸುಲಭವಾದೀತೆಂದೂ ಸೋಶಿಯಲಿಸ್ಟನು ಕಂಡುಕೊಂಡಿರುವನು.

ಈ ಬದಲಾವಣೆಯನ್ನು ತಂದು ಕೊಳ್ಳುವುದು ಹೇಗೆ ಎಂಬ ಪ್ರಶ್ನೆ. ಕೊಂಗ್ರೆಸ್ಸಿನ ಬುನಾದಿಯನ್ನು ಇನ್ನಷ್ಟು ವಿಶಾಲವೂ ಸ್ಥಿರವೂ ಆಗಿ ಮಾಡುವುದು ಹೇಗೆ ಎಂಬುದೇ ಇನ್ನೊಂದು ಪ್ರಶ್ನೆ.

ಕೊಂಗ್ರೆಸು ಸೋಶಿಯಲಿಸ್ಟ್ ಪಕ್ಷ:— ಮೇಲಿನ ಪ್ರಶ್ನೆಗಳಿಗೆ ಸೋಶಿಯಲಿಸ್ಟನ ಉತ್ತರವು ಒಂದೇ. ಈಗ ಕಾಂಗ್ರೆಸ್ಸಿನಲ್ಲಿರುವ ರಾಷ್ಟ್ರಪ್ರೇಮಿಗಳು ನಡೆಸುತ್ತಿರುವ ಚಳವಳಕ್ಕೆ ಸಮಾಜಾಧಿಕಾರವಾದ ತತ್ವಗಳ ರೀತಿಯ ಮುನ್ನಡೆ, ಕಾರ್ಯಕ್ರಮ ಮತ್ತು ಉಪಾಯಾಂತರಗಳ ಪ್ರಯೋಗದ ವರ್ಚಸ್ಸನ್ನು ಕೊಟ್ಟು ಚಳವಳವನ್ನು ಇನ್ನಷ್ಟು ಸಮರ್ಪಕವೂ ಪರಿಣಾಮಕಾರಿಯೂ ಪ್ರಾಸಂಗಿಕವೂ ಆಗಿ ಮಾಡುವುದರಿಂದಾಗಿ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಗಳಿಸಲು ಇನ್ನಷ್ಟು ಅನುಕೂಲವಾಗುವುದೆಂದೂ ಆದುದರಿಂದ ರಾಷ್ಟ್ರೀಯ ಸ್ವಾತಂತ್ರ್ಯಾರ್ಜನೆಗಾಗಿ ನಡೆಸುತ್ತಿರು ವ ಚಳವಳದಲ್ಲಿ ಸೋಶಿಯಲಿಸ್ಟರ ಪಂಗಡವೊಂದು ಮೇಲ್ಕಾಣಿಸಿದ ರೀತಿಯಲ್ಲಿ ಆ ಉದ್ದೇಶಸಾಧನೆಗಾಗಿ ಪ್ರಯತ್ನಿಸುತ್ತಿರಬೇಕೆಂದೂ ಸೋಶಿಯಲಿಸ್ಟನು ಮನಗಂಡಿರುವನು. ಹೀಗೆ ರಾಷ್ಟ್ರೀಯ ಚಳವಳದಲ್ಲಿ ಸಮಾಜಾಧಿಕಾರ ತತ್ವದಂತೆ ವ್ಯವಸ್ಥೆ, ಕಾರ್ಯಕ್ರಮ, ವರ್ಚಸ್ಸುಗಳನ್ನು ತರಲು ಅದೆಷ್ಟು ಪ್ರವೀಣನಾದರೂ ಒಬ್ಬೊಬ್ಬ ವ್ಯಕ್ತಿಯಿಂದ ಸಾಧ್ಯವಿಲ್ಲವೆಂದೂ ಅದಕ್ಕಾಗಿ ಸಶಕ್ತಪಂಗಡವೊಂದು ಪ್ರಜಾಪ್ರಭುತ್ವ ತತ್ವರೀತ್ಯಾ ರಾಷ್ಟ್ರೀಯ ಚಳವಳನಡೆಸುವ ಇತರ ರಾಷ್ಟ್ರಪ್ರೇಮಿಗಳೊಡನೆ ಸಮೀಪ ಸಂಬಂಧ ಮತ್ತು ಸಕ್ರಿಯಾ ಸಂಪರ್ಕವನ್ನಿಟ್ಟು ಒಟ್ಟಿನಲ್ಲಿ ದುಡಿದುಕೊಂಡಿರುವುದು ಅತ್ಯಾವಶ್ಯಕವಾಗಿದೆಯೆಂದೂ ಅಂಥಾ ಆವಶ್ಯಕತೆಯನ್ನು ಕಾಂಗ್ರೆಸಿಗೆ ಒದಗಿಸಿಕೊಡುವುದೇ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಅಸ್ತಿತ್ವದ ಅರ್ಥವೆಂದೂ ತಿಳಿದುಕೊಳ್ಳತಕ್ಕದ್ದು.

> "...ದಿಗಂಬರ ತತ್ವವನ್ನು ನಾನೊಪ್ಪುತ್ತೇನೆ; ಆದರೆ ಎಲ್ಲ ಸಿದ್ಧಾಂತಗಳೂ ವ್ಯವಹಾರಿಕವಾಗಿಲ್ಲ. ಎಲ್ಲ ಜನರೂ ಸರಳ ಹೃದಯಿಗಳಲ್ಲ. ಈ ಕಾರಣಗಳಿಂದ ದಿಗಂಬರತ್ವವು ಗಂಡಾಂತರವನ್ನು ತಂದೊಡ್ಡಬಹುದು"
>
> ಮಹಾತ್ಮಾ ಗಾಂಧಿ.

ದಿಗಂಬರತ್ವದ ಗುಣದೋಷಗಳು



ಮಹಾತ್ಮಾ ಗಾಂಧಿ.

ಆರೋಗ್ಯ ಲಾಭಕ್ಕೆ ಇದು ಸಾಧನವಾದೀತೇ?

ನಾಗರಿಕತೆಯ ಗಂಧ ಗಾಳಿಯು ಬೀಸದ ಪ್ರಾಚೀನ ಕಾಲದಲ್ಲಿ ಜನರು ದಿಗಂಬರರಾಗಿಯೇ ಇದ್ದರು. ಆದಂ ಮತ್ತು ಹವ್ವರೂ ಮೊದಲು ನಗ್ನರಾಗಿಯೇ ಇದ್ದರೆಂಬುದು ಗಮನಾರ್ಹವಾಗಿದೆ.

ಕಾಲವು ಕಳೆದಂತೆ ಇವರಲ್ಲಿ ಮೋಹವು ಉತ್ಪನ್ನವಾಯಿತು. "ಮಾನ ಮರ್ಯಾದೆ"ಯನ್ನು ಕಾಪಾಡಿಕೊಳ್ಳಲು ಮಾನವನು ಮರದ ತೊಗಟೆ, ವಲ್ಕಲ ಎಳತಳಿರು, ಸೊಪ್ಪುಸೌದೆ, ವನ್ಯ ಜಂತುಗಳ ಚರ್ಮ ಇವನ್ನು ಧರಿಸಿಕೊಂಡನು. ಇಲ್ಲಿ ಮಾನವ ಬುದ್ಧಿಯ ವಿಕಾಸ ಇಲ್ಲವೇ ಪ್ರಗತಿಯ ಮೂಲವಾಯಿತೆಂದು ಹಲವು ತರ್ಕಶಾಸ್ತ್ರಿಗಳ ಅಂಬೋಣ.

"ನಾಗರಿಕತೆಯು" ಬೆಳೆಯುತ್ತಾ ಹೋದಂತೆ ನಾನಾ ರೀತಿಯ ಉಡುಪುಗಳು ಬಳಕೆಯಲ್ಲಿ ಬಂದುವು. ಎಲಿಜಬೆತ್ ರಾಣಿಯ ಕಾಲದಲ್ಲಿ ಸ್ತ್ರೀಪುರುಷರು ಎಷ್ಟೋ ರೀತಿಯಾಗಿ ಉಡಿಗೆತೊಡಿಗೆಗಳನ್ನು ಧರಿಸುತ್ತಿದ್ದರೆಂದು ಇತಿಹಾಸಕಾರರು ಸೂಚಿಸಿದ್ದಾರೆ.

ದಿಗಂಬರ ತತ್ವ ಪ್ರಚಾರ

ಆದರೆ ಮಹಾಯುದ್ಧವು ಪರಿಸಮಾಪ್ತಿಗೊಂಡೊಡನೆ ಜನರಲ್ಲಿ ದಿಗಂಬರತ್ವವು ಪ್ರಚಾರಕ್ಕೆ ಬಂದಿತು. ನಾಲ್ಕು ವರ್ಷಗಳ ವರೆಗೆ ಅವಿಚ್ಛಿನ್ನವಾಗಿ ಯುದ್ಧವು ನಡೆದುದರಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿದ್ದ ಔದ್ಯೋಗಿಕ ಕಾರಖಾನೆಗಳು, ಗಿರಣಿಗಳು, ಮೂಲೆ ಗುಂಪಾಗಿ ಬಿದ್ದು, ಸಾಕಷ್ಟು ಬಟ್ಟೆ ದೊರೆಯದೆ ಹೋಯಿತು. ಈ ಸಮಯದಲ್ಲಿ ದಿಗಂಬರ ಸಂಘ, ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಈಗ ಈ ವಿಷಯಕ್ಕೆ ಸಂಬಂಧಿಸಿದ ಸಾವಿರಾರು ಪತ್ರಿಕೆಗಳು ಪ್ರಸಿದ್ಧಿಸಲ್ಪಡುತ್ತಿವೆ. ಈ ಪತ್ರಿಕೆಗಳಿಗಿರುವ ಚಂದಾದಾರರ ಅಂಕೆ ಸಂಖ್ಯೆಗಳನ್ನು ತುಸು ವಿಚಾರಿಸಿದಲ್ಲಿ ನಗ್ನ ತತ್ವ ಪ್ರಚಾರವು ಜನಮನವನ್ನು ಹೇಗೆ ಮೋಹಿಸಿಬಿಟ್ಟಿದೆಯೆಂಬುದು ಮನದಟ್ಟಾಗುವುದು.

ಪಂಡಿತರ ಸಿದ್ಧಾಂತ

ಆರೋಗ್ಯ ಲಾಭಕ್ಕೂ, ನೈತಿಕ ಶಕ್ತಿಯ ಬೆಳವಣಿಗೆಗೂ ದಿಗಂಬರರಾಗಿರುವುದು ಯೋಗ್ಯವೆಂದು ಇತ್ತೀಚೆಗೆ ಹಲವು ಘನ ಪಂಡಿತರೂ ಅಭಿಪ್ರಾಯಪಟ್ಟಿರುವರು. ಅವರ ಸಿದ್ಧಾಂತ, ವಾದ ವಿವಾದ, ತರ್ಕ ಇವುಗಳು ಯಾರ ಮನಸ್ಸನ್ನೂ ಆಕರ್ಷಿಸುವುದರಲ್ಲಿ ಏನೇನೂ ಸಂದೇಹವಿಲ್ಲ. ತತ್ಸಂಬಂಧ ಮಹಾತ್ಮಾಗಾಂಧಿಯವರ ಅಭಿಪ್ರಾಯವೇನೆಂದು "ಗೃಹಸ್ಥ"ರೊಬ್ಬರು ಪತ್ರದ್ವಾರಾ ಈ ರೀತಿ ಕೇಳಿಕೊಂಡರಂತೆ.

"ಉಡಿಗೆತೊಡಿಗೆಗಳು ಅಸ್ವಭಾವಿಕ ಮತ್ತು ಅನಾರೋಗ್ಯಕರ. ಮಾನವ ಜನಾಂಗದ ಅಧಃಪತನಕ್ಕಾಗಿ ಅವನು ನಿರ್ಮಿಸಿದ ಕೃತಕ ಮುಸುಕು, ದೇಹದಾರ್ಢ್ಯತೆಯನ್ನು ಪಡೆಯಲು ಸಾಧ್ಯವಾಗುವಂತೆ ಶರೀರಕ್ಕೆ ಗಾಳಿ, ಬಿಸಿಲು, ಚೆನ್ನಾಗಿ ದೊರೆಯಬೇಕು. ಅರಿವೆಗಳಿಂದ ಮುಚ್ಚಿಕೊಳ್ಳುವುದರಿಂದ ಚರ್ಮಕ್ಕೆ ಸಾಕಷ್ಟು ಬಿಸಿಲಿನ ಶಾಕ, ಗಾಳಿ ಸಿಗದೆ ಹೋಗುವುದು;

ಶರೀರದ ಅಂಗಾಂಗಗಳನ್ನೂ ಮರೆಮಾಡಿಕೊಳ್ಳುವುದರಿಂದ, ಸ್ತ್ರೀಪುರುಷರು ಯೌವನಾವಸ್ಥೆಗೆ ಕಾಲಿಟ್ಟೊಡನೆ ಅವರಲ್ಲಿ ಸ್ವಾಭಾವಿಕ ಪರಸ್ಪರ ಕುತೂಹಲವುಂಟಾಗಿ, ವಿಷಯ ವಾಸನೆಯುಂಟಾಗುವುದು. ಮೊದಲಿಂದಲೂ ಸ್ತ್ರೀಪುರುಷರು ಬಳಕೆಯಲ್ಲಿದ್ದರೆ ಅವರಲ್ಲಿ ಅಲಕ್ಷ್ಯ, ತಿರಸ್ಕಾರ ಭಾವನೆಯು ಬೆಳೆಯುತ್ತದೆ.

ಸ್ತ್ರೀಪುರುಷರು "ಫ್ಯಾಶನ್ನಿಗೆ" (Fashion) ಮರುಳಾಗಿ, ಹೆಚ್ಚಿನ ಹಣವನ್ನು ಅರಿವೆಗಳಿಗಾಗಿ ದುರ್ವ್ಯಯ ಮಾಡುತ್ತಿರುವರು. ಬೌದ್ಧಿಕ ವಿಕಾಸಕ್ಕೆ ಎಡೆಗೊಡದೆ, ಶರೀರ ಶೃಂಗಾರಕ್ಕಾಗಿ ತಾಸುತಾಸುಗಳನ್ನು ಕಳೆವರು. ಹಿಂದೂಸ್ಥಾನದಲ್ಲಿ ಬಡತನವು ಎಲ್ಲೆಲ್ಲೂ ತಾಂಡವಾಡುತ್ತಿದೆ. ಒಪ್ಪತ್ತು ಹೊಟ್ಟೆಗೆ ಹಿಟ್ಟು ಸಿಗದೆ ಮಿಲಿಯಾಂತರ ಜನರು ಸಾಯುವ ಇಂದಿನ ಪರಿಸ್ಥಿತಿಯಲ್ಲಿ ಅಂದಚಂದದ ಉಡುಗೆತೊಡಿಗೆಗಳಿಗಾಗಿ ಹಣವನ್ನು ವಿನಿಯೋಗಿಸುವುದು ದುಃಖದಾಯಕವಾಗಿದೆ. ಇದೇ ಹಣವನ್ನು ಅನಾಥ ಜನರಿಗಾಗಿ ಉಪಯೋಗಿಸಿದರೆ ಅವರ ಉದ್ಧಾರವಾದಂತೆಯೇ ಸರಿ!

ವೇಶಭೂಷಣವನ್ನು ಧರಿಸುವುದು ಇಂದು ರೂಢಿಯಲ್ಲಿ ಬಿದ್ದುಹೋಗಿದೆ. ಅಥವಾ ಸಮಾಜ ಸಂಪ್ರದಾಯ [ಪದ್ಧತಿ] ಸೂತ್ರಗಳಿಗೆ ಸಿಲುಕಿದೆ. ಸ್ವಚ್ಛವಾದ ಉಡುಪುಗಳನ್ನು ಪಡೆಯಲು ಅಸಮರ್ಥರಿರುವ ದೀನ ದರಿದ್ರರು ಈ ಪದ್ಧತಿಯ ನಿರ್ಬಂಧಕ್ಕೆ ಬಿದ್ದು ಕೊಳಕು ಬಟ್ಟೆಗಳನ್ನುಪಯೋಗಿಸಿ ರೋಗಕ್ಕೆ ತುತ್ತಾಗುವುದು ಅಸಂಭವವಲ್ಲ.

ನಾವು ಹುಟ್ಟುವಾಗ ದಿಗಂಬರರಾಗಿಯೇ ಇರುವೆವು. ದೇವರು ನಿರ್ಮಿಸಿದಂತೆಯೇ ಇರುವುದನ್ನು ಬಿಟ್ಟು, ದರ್ಜಿ (Tailor)ಯ ಶರಣು ಹೊಕ್ಕಿರುವೆವು; ವಿಚಿತ್ರ ಪೋಷಾಕುಗಳನ್ನು ತೊಟ್ಟು ವಿಚಿತ್ರ ಪುರುಷರಾಗಿರುವೆವು;

ಇಷ್ಟೇ ಅಲ್ಲ; ದಿಗಂಬರತ್ವವು ಹಿಂದೂ ಧರ್ಮದಲ್ಲೂ ಮಾನ್ಯತೆ ಪಡೆದಿದೆ. ಜೈನರೂ ಈ ತತ್ವಕ್ಕೆ ಬೆಂಬಲವನ್ನಿತ್ತಿರುವರು."

ಗಾಂಧಿಜಿಯವರು

ಈ ಪತ್ರಕ್ಕೆ ಉತ್ತರ ಕೊಡುತ್ತಾ ಹೀಗೆಂದಿರುವರು:—"ಈ ವಿಷಯಕ್ಕೆ ಸಂಬಂಧಿಸಿದ ತತ್ವವನ್ನು ನಾನೊಪ್ಪುತ್ತೇನೆ; ಆದರೆ ಯಾವಾಗಲೂ ಸಿದ್ಧಾಂತಗಳನ್ನು ವ್ಯವಹಾರದಲ್ಲಿ ತರಲು ಸಾಧ್ಯವಿಲ್ಲ. ರೇಖಾಗಣಿತದಲ್ಲೂ ಸಿದ್ಧಾಂತಗಳು ಕೆಲವೆಡೆ ಅವ್ಯವಹಾರ್ಯವಾಗಿವೆ.

ರೇಖಾಗಣಿತದ ಆಧಾರದ ಮೇರೆಗೆ ನಾವೊಂದು ಮನೆಯನ್ನು ರಚಿಸುವೆವು. ಆದರೆ ನಿಜವಾದ ಮನೆಯನ್ನು ಕಟ್ಟಲು ಬಡಗಿಗಳೇ ಬೇಕು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಲ್ಲವೇ ಹಿಂದೂಸ್ಥಾನದಲ್ಲಿ ದಿಗಂಬರತ್ವವನ್ನು ಪ್ರಚಾರದಲ್ಲಿ ತರಲು ಸಮ್ಮತಿ ದೊರೆತಿಲ್ಲ. ಎಲ್ಲ ಜನರೂ ಸರಳ ಹೃದಯರಾಗಿರುವರೆಂಬುದು ತಪ್ಪು ಗ್ರಹಿಕೆ. ಈ ಕಾರಣಗಳಿಂದ ದಿಗಂಬರತ್ವ ಗಂಡಾಂತರವನ್ನು ತಂದೊಡ್ಡಬಹುದು."



ಮೈಸೂರು ಶ್ರೀಮನ್ಮಹಾರಾಜರವರು. ಚಾಮುಂಡೀ ರಥೋತ್ಸವದಲ್ಲಿ ಇವರೂ ರಥವನ್ನೆಳೆವರು.

ಚಾಮುಂಡೇಶ್ವರಿಯ ಉತ್ಸವ ಶ್ರೀಮನ್ಮಹಾರಾಜರು ರಥವೆಳೆವರು.

★

ನಿಂತುಹೋದ ರಥವು ಮಹಾರಾಜರು ಕೈಕೊಡುತ್ತಲೇ ಚಲಿಸತೊಡಗಿದ ಅದ್ಭುತ!



ಚಾಮುಂಡೇಶ್ವರಿಯ ರಥವು ಚಲಿಸುತ್ತಿದೆ: ರಥವೆಳೆವವರಲ್ಲಿ ಮಹಾರಾಜರೂ ಒಬ್ಬರು.

ದೇವಾಲಯವಿದ್ದಲ್ಲಿ ಜಾತ್ರೆಯಿದೆ. ಜಾತ್ರೆಗಳಲ್ಲಿ ರಥೋತ್ಸವವು ಮುಖ್ಯವಾದುದು ಎಂಬ ಅಭಿಪ್ರಾಯವು ಜನರಲ್ಲಿ ಇದೆ. ಇಂಥ ಅಭಿಪ್ರಾಯವು ಸಾಧಾರಣವಾದುದಾಗಿ ಇದೆ. ನಮ್ಮ ಜಿಲ್ಲೆಯ ಉತ್ಸವಾದಿಗಳನ್ನೇ ದೃಷ್ಟಾಂತವಾಗಿ ನೋಡುವುದಿದ್ದರೂ, ಕದಿರೆ, ಬಪ್ಪನಾಡು, ಮಂಗಳೂರು ರಥೋತ್ಸವಗಳು ತುಂಬ ಪ್ರಖ್ಯಾತವಾಗಿವೆ.

ಈ ಸಂದರ್ಭದಲ್ಲಿ ಮೈಸೂರಿನ ಕಡೆಯ ರಥೋತ್ಸವದ ಮಹಿಮೆಯನ್ನು ನಾವು ತಿಳಿದುಕೊಳ್ಳಬೇಕು. ಬೇರೆ ಊರುಗಳಲ್ಲೂ ಇಂಥ ಉತ್ಸವಾದಿಗಳನ್ನು ನಡೆಸುವರೆಂಬುದನ್ನು ನಾವು ಮರೆಯದಿದ್ದಲ್ಲಿ ಸ್ವಾಭಿಮಾನದೊಡನೆ ಇತರರನ್ನು ಗೌರವಿಸುವ ಸುಜನಪ್ರಭಾವವೂ ನಮ್ಮ ಸುಪ್ರಸ್ಥಿತ ರೀತಿಯಲ್ಲಿ ಅಭಿವೃದ್ಧಿಯಾಗುವುದು.



ಮದ್ರಾಸಿನಲ್ಲಿ ನಡೆದ ರಥಜಾತ್ರೆಯ ಒಂದು ದೃಶ್ಯ.

ರಥೋತ್ಸವದ ದಿನದ ಶೋಭೆಯು ಎಲ್ಲ ದಿನಗಳ ಆನಂದವನ್ನೂ ಮೀರಿಸುವಂತಹುದಿದೆಯೆಂದು ಮೈಸೂರು ಬಾಂಧವರ ಮತ.

ತೇರು ನಿಂತುಹೋಯಿತು:—ರಾಜನೇ ತೇರನ್ನು ಎಳೆಯುವುದು ಬಲು ವಿಶೇಷ. ಆದುದರಿಂದಲೇ ಈ ದಿನದ ಉತ್ಸವಕ್ಕೆ ಅಷ್ಟು ಪ್ರಾಮುಖ್ಯತೆ. ಪ್ರಜಾಜನರೊಡನೆ ತಾನೂ ಬೆರೆತು ಸಂತೋಷಪಡುವ ಸುಯೋಗವು ಅರಸನಿಗೆ ಒದಗಿಬರುವ ಸುದಿನಗಳಲ್ಲಿ ಇದೊಂದು. ಇದೊಂದು ಪೂರ್ವ ಪದ್ಧತಿ. ಈ ಪದ್ಧತಿಯ ಹಿಂದೊಂದು ಕತೆಯೂ ಇದೆ.

ಹಿಂದೊಮ್ಮೆ ಈ ರಥೋತ್ಸವದ ದಿನ ದೇವಿಯ ಪೂಜಾ ವಿಗ್ರಹವನ್ನು ರಥಾರೋಹಣ ಮಾಡಿಸಿ ಭಕ್ತಾದಿಗಳೆಲ್ಲ ರಥವನ್ನು ಎಳೆಯಲು ಅನುವಾದರಂತೆ. ಎಷ್ಟು ಎಳೆದರೂ ರಥವು ಕದಲಲಿಲ್ಲ. ಈ ವಿಚಾರವು ರಾಜನ ವರೆಗೂ ಹೋಯಿತು. ತಾಯಿಗೆ ಅದೇನೋ ಕೋಪ ಬಂದಿರಬಹುದೆಂದು ಭಕ್ತಾದಿಗಳು ಹೇಳಿದರಂತೆ. ಆಗ ಮಹಾರಾಜನೇ ಬಂದು ದೇವಿಯನ್ನು ಪ್ರಾರ್ಥಿಸಿ ರಥದ ಹಗ್ಗವನ್ನು ಹಿಡಿದು ಎಳೆದನಂತೆ. ಭಕ್ತಾದಿಗಳು ಎಳೆದರೆಲ್ಲ. ಕೂಡಲೇ ರಥ ಸಾಗತೊಡಗಿತು. ಜನರಿಗೆ ತುಂಬ ಆನಂದವಾಯಿತು. ಅಂದಿನಿಂದ ಮೈಸೂರಿನ ಮಹಾರಾಜರು ವರ್ಷ ಪ್ರತಿ ವರ್ಷವೂ ಈ ದಿನದಲ್ಲಿ ದೇವಿಯ ರಥವನ್ನು ಎಳೆವುದು ರೂಢಿಯಾಗಿ ನಿಂತಿದೆ. ಮುಹೂರ್ತವು ಸನ್ನಿಹಿತವಾದೊಡನೆಯೇ



ಪುರಿ ಜಗನ್ನಾಥ ದೇವಾಲಯದ ರಥೋತ್ಸವವು ಪ್ರಪಂಚ ವಿಖ್ಯಾತವಾಗಿದೆ. ಇಂಥ ರಥವೂ ರಥೋತ್ಸವದಲ್ಲಿ ಇಲ್ಲಿರುವಷ್ಟು ಜನಸಂದಣಿಯೂ ಮತ್ತಾವ ಕಡೆಯಲ್ಲಿಯೂ ಇಲ್ಲ. ಇದು ಪುರಿ ಜಗನ್ನಾಥ ಸ್ವಾಮಿಯ ರಥೋತ್ಸವದ ಒಂದು ದೃಶ್ಯ.

ಮುಖ್ಯವಾಗಿ ಮೈಸೂರಲ್ಲಿ ಇಂಥವೊಂದು ರಥೋತ್ಸವವು ವರ್ಷಂಪ್ರತಿ ಜರಗುವುದು. ಉತ್ಸವದಲ್ಲಿ ಮಹಾರಾಜರೇ ಭಾಗವಹಿಸುವುದರಿಂದ ಈ ಜಾತ್ರೆಗೆ ಅಲ್ಲಿ ಇನ್ನಷ್ಟು ಪ್ರಾಮುಖ್ಯತೆ ಇದೆ. ಪ್ರಾಚೀನ ಪದ್ಧತಿಯಂತೆ ಮಹಾರಾಜರು ರಥವನ್ನು ಎಳೆಯುವ ಕೆಲಸದಲ್ಲಿ ಭಾಗವಹಿಸುವರು.

ಚಾಮುಂಡೇಶ್ವರಿಯು ಮೈಸೂರು ರಾಜಮನೆತನದ ಕುಲದೈವ. ಈಗಿನ ಮನೆತನದ ಆದಿಯಿಂದ ಇಂದಿನ ವರೆಗೂ ಅರಮನೆಯವರು ಶ್ರೀ ದೇವಿಯ ಅನನ್ಯ ಭಕ್ತರೇ ಇದ್ದಾರೆ.

ಮಹಿಷಾಸುರನನ್ನು ಮರ್ದಿಸುವ ಸಲುವಾಗಿ ಜಗನ್ಮಾತೆಯು ಇಪ್ಪತ್ತು ಕೈಗಳುಳ್ಳ ಭಯಂಕರ ರೂಪವನ್ನು ತಾಳಿ ಬಂದು ಆ ರಾಕ್ಷಸನ ಉಪಟಳವನ್ನು ಆತನ ಜೀವದೊಡನೆ ಅಡಗಿಸಿಬಿಟ್ಟು ಆಕೆಯ ಮಕ್ಕಳಾದ ಭಕ್ತಾದಿಗಳ ಭಯನಿವಾರಣೆ ಮಾಡಿದ ಸ್ಥಳವೇ ಚಾಮುಂಡಿ ಬೆಟ್ಟವೆಂದು ಪುರಾಣ ಕಥೆಯಿದೆ. ದಸರೆಯ ಉತ್ಸವಾದಿಗಳು ಮೈಸೂರಲ್ಲಿ ಬಹಳ ವಿಜೃಂಭಣೆಯಿಂದ ಜರಗುವದಾದರೂ ಈ

ಮಹಾರಾಜರು ಬಂದು ತೇರಿನ ಹಗ್ಗವನ್ನು ಹಿಡಿವರು. ಕೂಡಲೇ ಭಕ್ತಾದಿಗಳು ಹಗ್ಗಕ್ಕೆ ಕೈಕೊಟ್ಟು ತೇರನ್ನು ಎಳೆವರು. ಉತ್ಸವವು ಈ ರೀತಿ ಅಲ್ಲಿ ನಡೆಸಲ್ಪಡುವುದು. ಇಂಥ ಮಹೋತ್ಸವಗಳು ಪ್ರಜಾಜನ ಮನೋರಂಜನೆ, ಈಶ ಭಕ್ತಿ ವರ್ಧನೆಗೆ ತುಂಬ ಅನುಕೂಲವಾಗಿವೆ.



ಇಂದಿಗೆ 36 ವರ್ಷಗಳ ಹಿಂದೆ ಮಂಗಳೂರಿನಲ್ಲಿ ನಡೆದ ರಥೋತ್ಸವದ ದೃಶ್ಯವಿದು.

ರತ್ನಾಕರವರ್ಣಿಯ ರಸಿಕತೆ

★

ರಸಿಕನಾದ ಕವಿಯಮಾತು ಸುಲಭವಾಗಿ ಶೀಘ್ರದಲ್ಲಿನಮ್ಮನ್ನುಆನಂದಾನುಭವದ ಗುರಿಗೆ ಮುಟ್ಟಿಸಬಲ್ಲುದು. ರತ್ನಾಕರ ವರ್ಣಿಯ ರಸಿಕತೆಯೇ ಆತನ ವೈಶಿಷ್ಟ್ಯ..........ಪುರಾಣಕತೆಯನ್ನು ಅಧ್ಯವತ್ತಾಗಿಯೂ ಆಧ್ಯಾತ್ಮಿಕ ವಿಚಾರಗಳನ್ನು ಲೌಕಿಕರ ಮನಸ್ಸೊಪ್ಪುವಂತೆಯೂ ಕನ್ನಡದ ಸೊಗಸನ್ನು ಕನ್ನಡಿಯಂತೆಯೂ ನಿರೂಪಿಸಿದ ರತ್ನಾಕರ ವರ್ಣಿಯು ಕೃತಕೃತ್ಯನು.



ಲೇಖಕರು: ಟಿ. ನಾರಾಯಣ ಭಟ್ಟರು.

'ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು । ರಯ್ಯಾ ಮಂಚಿದಿಯೆನೆ ತೆಲುಗಾ ॥
ಅಯ್ಯಯ್ಯ ಎಂಚಾಪೊರ್ಲಾಂಡೆಂದು ತುಳುವರು । ಮೆಯ್ಯುಬ್ಬಿ ಕೇಳಾಬೇಕಣ್ಣಾ ॥–'

ಇಂತಹ ಆದರ್ಶವನ್ನಿಟ್ಟುಕೊಂಡು ಕಾವ್ಯರಚನೆ ಮಾಡಿದವನು ರತ್ನಾಕರ ವರ್ಣಿ. 'ಸಕಲ ಲಕ್ಷಣಕ್ಕಾಗಿ ಬಿರುಸು ಮಾಡಿದರೆ, ಪುಸ್ತಕದ ಬದನೆಕಾಯಹುದು' ಎಂಬುದರಿಂದ ವರ್ಣಕಕ್ಕೆ ಒಂದಿಷ್ಟು ಲಕ್ಷಣ 'ವಿಕಳವಾದರೂ ದೋಷವಿಲ್ಲ'ವೆಂದು ಅವನ ಎಣಿಕೆ. ಆತನವು ನಾಡವರೊಳಗೆ ಬಳಕೆಯಾದ ಹಾಡುಗಬ್ಬ. ಚಂಪೂ ಕವಿಗಳನೇಕರು ವಿದ್ವಾಂಸರನ್ನೂ ರಾಜಸಭಿಕರನ್ನೂ ಮೆಚ್ಚಿಸಿ ತಲೆದೂಗಿಸಿದರೆ ತಾವು ಕೃತಕೃತ್ಯರಾದೆವೆಂದು ಭಾವಿಸುತ್ತಿದ್ದರು. ರತ್ನಾಕರ ವರ್ಣಿಯ ಕಾವ್ಯೋದ್ದೇಶದಲ್ಲಿ ಜನತೆಯ ಮೆಲ್ಮಟ್ಟದವರನ್ನ ಮೆಚ್ಚಿಸಬೇಕೆಂಬ ಹಟವಿರಲಿಲ್ಲ. ಸಾಮೂಹಿಕವಾಗಿ ಎಲ್ಲರೂ ಕೇಳಿ ಆನಂದಿಸಬೇಕೆಂದಿದ್ದಾನೆ. ಆದುದರಿಂದಲೇ ಅವನು ಕನ್ನಡಿಗ ತೆಲುಗ ತುಳುವರ ಪ್ರಸ್ತಾವವೆತ್ತಿದುದು. ರತ್ನಾಕರ ವರ್ಣಿಯು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿದ್ದವನು. ಆಗ ಕನ್ನಡದ ಬಳಕೆ ತೆಲುಗರಲ್ಲಿ ಅಷ್ಟಿಷ್ಟು ಇದ್ದಿರಬೇಕು; ತುಳುವರಲ್ಲಿ ಧಾರಾಳವಾಗಿದ್ದುದೆಂಬುದರಲ್ಲಿ ಸಂದೇಹವಿಲ್ಲ. ಕವಿ ಸ್ವತಃ ತುಳುನಾಡಿನ ಮೂಡಬಿದಿರೆಯವನು. ಕನ್ನಡವನ್ನು ಸಾಮಾನ್ಯವಾಗಿ ತಿಳಿಯಬಲ್ಲವರೆಲ್ಲರಿಗೂ ತನ್ನ ಹಾಡುಗಬ್ಬವು ರುಚಿಸುವಂತಾಗಬೇಕೆಂದು ಆತನು ಅಪೇಕ್ಷಿಸಿದುದು ಹೆಚ್ಚಲ್ಲ.

ಕಾವ್ಯವನ್ನು ಓದುವುದರ ಹಾಗೂ ಕೇಳುವುದರ ಗುರಿ ಆನಂದಾನುಭವವು. ರಸಿಕನಾದ ಕವಿಯ ಮಾತು ಸುಲಭವಾಗಿ ಶೀಘ್ರದಲ್ಲಿಯೇ ನಮ್ಮನ್ನು ಆ ಗುರಿಗೆ ಮುಟ್ಟಿಸಬಲ್ಲುದು. ರತ್ನಾಕರ ವರ್ಣಿಯ ರಸಿಕತೆಯೇ ಆತನ ವೈಶಿಷ್ಟ್ಯ. 'ಭರತೇಶ ವೈಭವ'ದಲ್ಲಿ ಕಥಾನಾಯಕನಾದ ಭರತೇಶನ ಶೃಂಗಾರ ಜೀವನ ಸ್ರೋತವನ್ನು ಅವನು ಗಂಗೆಯಾಗಿಸಿದ್ದಾನೆ. ಮೇಲಿಂದ ಮೇಲೆ ನೋಡಿದರೆ, ಶೃಂಗಾರ ರಸವನ್ನು ಬಹು ವಿಸ್ತಾರವಾಗಿ ಅವನು ನಿರೂಪಿಸಿರುವುದು ಕಂಡುಬರುತ್ತದೆ. ಆದುದರಿಂದ ಅವನು ಶೃಂಗಾರಕವಿಯೆನ್ನಿಸಿದನು. ಆದರೆ ಕವಿಯ ಜೀವನದ ಹಿನ್ನೆಲೆಯ ಜತೆಗೆ ಕಾವ್ಯವನ್ನು ಪರಿಶೀಲಿಸಿದರೆ, ಕೇವಲ ಲೌಕಿಕ ಶೃಂಗಾರವನ್ನು ಚಿತ್ರಿಸುವುದು ಆತನ ಉದ್ದೇಶವಾಗಿರಲಿಲ್ಲವೆಂದು ತೋರುವುದು. 'ಕವಿತಾಸಮಯವನ್ನನುಸರಿಸಿ 'ಅಮೃತ ಕಾಂತೆಯೊಳು ಚಕ್ರೇಶನು ರಮಿಸಿದಂದವನಿಷ್ಟು' ಹೇಳಿದುದನ್ನು ನೋಡಿದರಂತೂ ರತ್ನಾಕರವರ್ಣಿಯ ದೃಷ್ಟಿಯಲ್ಲಿದ್ದುದು ದಿವ್ಯ ಶೃಂಗಾರವೆಂದು ಸ್ಪಷ್ಟವಾಗುವುದು. ಶೃಂಗಾರ ಸಿದ್ಧನಾದ ಭರತೇಶನು ಕೇವಲಜ್ಞಾನೋದಯಗೊಂಡು ಮುಂಬರಿಯುವಾಗ, ಕ್ಷಮ ಸಿರಿತ್ರಿಗಳೆಂಬ ದೂತಿಯರು ಮುಕ್ತ್ಯಂಗನೆಯೊಡನೆ ರಮಣನ ಬರವನ್ನು ಉಸುರುತ್ತಾರೆ. 'ದಮೆ, ಶಾಂತಿ, ಕಾಂತಿ, ಸನ್ಮತಿ, ಋದ್ಧಿ, ಬುದ್ಧಿ ಯೆಂಬವುಳ ವಿಳಾಸಿನಿಯರಂದವು ಒಪ್ಪೆಸುವುದು. "ಶೃಂಗಾರ ವಡೆದ ವಿದ್ಯಾ ದೇವಿಯರು ಮುಂದೆ । ಶೃಂಗಾರಧವಳ ಪಾಡೆ ॥ ಶೃಂಗಾರ ರಸದ ಸೋನೆಯ ಕರೆವುತ ದಿವ್ಯ ಶೃಂಗಾರೆ ಬಂದಳೋಜೆಯೊಳು" ಎಂದು ಮೊದಲಾಗಿ ಮುಕ್ತ್ಯಂಗನೆಯ ವಿಲಾಸವನ್ನು ಬಣ್ಣಿಸುವುದನ್ನು ನೋಡಿದರೆ, ರತ್ನಾಕರವರ್ಣಿಯ ಶೃಂಗಾರ ರಸದ ಹೊಲಬು ಮನದಟ್ಟಾಗುವುದು. ಕಥಾನಾಯಕನ ಭೋಗಯೋಗಗಳ ಜೀವನಚಿತ್ರವನ್ನು ಮಹಾಕಾವ್ಯದ ವಿಸ್ತಾರವಾದ ತಡಿಕೆಯಲ್ಲಿ ಚಿತ್ರಿಸುವಾಗ ಕವಿಯು ವರ್ಣನೆಯ ಬಣ್ಣಗಳ ಉಪಯೋಗವನ್ನು ಧಾರಾಳವಾಗಿ ಮಾಡಿಕೊಂಡಿದ್ದಾನೆ. ಅದು ಗುಣವೋ ದೋಷವೋ ಎಂಬ ವಿಚಾರವು ವಾಚಕರ ನೋಟದಲ್ಲಿದೆ.

ಪ್ರಕೃತ ವಿಷಯವು ರತ್ನಾಕರವರ್ಣಿಯ ರಸಿಕತೆ. ಯಾವುದಾದರೂ ಒಂದು ರಸವನ್ನಾಗಲಿ ಒಂದು ಬಗೆಯ ವರ್ಣನೆಯನ್ನಾಗಲಿ ಹೇಗೆ ಸಾಧಿಸಿ ಪೂರೈಸಿದ್ದಾನೆ, ಎಷ್ಟು ಸಫಲನಾಗಿದ್ದಾನೆ ಎಂಬುದು ಇಲ್ಲಿ ವಿಷಯವಲ್ಲ. ಸಮಗ್ರವಾಗಿ 'ಭರತೇಶವೈಭವ'ದ ಓದಿನಿಂದ ಓದುಗನ ಹೃದಯದಲ್ಲಿ ರಸದೊಸರನ್ನು ಕವಿಯು ಚಿಮ್ಮಿಸುವುದಕ್ಕೆ ಹೇಗೆ ಸಮರ್ಥನಾಗಿರುವನೆಂಬುದನ್ನಿಷ್ಟು ಇಲ್ಲಿ ದಿಗ್ದರ್ಶಿಸಬೇಕಾಗಿದೆ. 'ಭರತೇಶ ವೈಭವ'ದಲ್ಲಿ ಕಥಾಭಾಗವು ಬಹು ಸ್ವಲ್ಪ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿ ವಿಜಯಗಳಂಥ ಐದು ಕಲ್ಯಾಣಗಳು ೯೯೬೭ ಪದ್ಯಗಳಲ್ಲಿ ೮೦ ಸಂಧಿಗಳಾಗಿ ಪೋಣಿಸಿವೆ. ಎಲ್ಲ ಪದ್ಯಗಳೂ ಸಾಂಗತ್ಯದ ಒಂದೇ ಧಾಟಿಯಲ್ಲಿವೆ. ಕಥಾವಸ್ತು ಜೈನರ ಪವಿತ್ರ ಪುರಾಣಗಳಲ್ಲೊಂದಾದ ಭರತೇಶ ಚರಿತೆ. ಪುರಾಣ ಕಥೆಯನ್ನು ವಸ್ತುವಾಗಿಟ್ಟುಕೊಂಡು ಕವಿಯು ಹಾಡುವುದಾದರೂ ತನ್ನ ದೇಶಕಾಲಗಳ ಜನಜೀವನದ ಪರಿಸ್ಥಿತಿಗಳು ಕವಿಯ ಮೇಲೆ ವರ್ಚಸ್ಸನ್ನು ಬೀರದಿರುವುದಿಲ್ಲ. ಸಾಂಪ್ರದಾಯಿಕವಾಗಿ ಕವಿಗಳು ಭಾರತದ ದೇಶ ವಿದೇಶಗಳನ್ನು ಬಣ್ಣಿಸುವಲ್ಲಿ ಅಂಗ ವಂಗ ಕಳಿಂಗ ಇತ್ಯಾದಿಯಾಗಿ ಉತ್ತರೇಯ ರಾಜರನ್ನೂ ಕೇರ ಚೋಳ ಪಾಂಡ್ಯ ಇತ್ಯಾದಿಯಾಗಿ ದಾಕ್ಷಿಣಾತ್ಯ ಪ್ರಭುಗಳನ್ನೂ ಹೆಸರಿಸುವುದುಂಟು. ರತ್ನಾಕರ ವರ್ಣಿಯು ಇಂಥ ಸಂದರ್ಭದಲ್ಲಿ ಹೊಸತನವನ್ನು ತೋರಿಸಿದ್ದಾನೆ. 'ಐವತ್ತಾರು ದೇಶದ ಧರಣಿಪರು' ಭರತೇಶನನ್ನು ಓಲಗಿಸುವ ಪ್ರಸಂಗದಲ್ಲಿ ಸಾಂಪ್ರದಾಯಿಕವಾಗಿ ಹೇಳಲ್ಪಡದಿರುವ ತಿಗುಳ (ತಮಿಳ) ತೆಲುಗ ತುರುಕ ಮೊದಲಾದ ಅರಸರು ಅವನ ಬಳಿಗೆ ಬಂದರೆನ್ನುತ್ತಾನೆ. ಪಾಂಡ್ಯಕಳಿಂಗಪಾರಸಿನಾಡ ರಾಜರನ್ನು ಪ್ರತೀಕವಾಗಿ ಹೇಳಿದ್ದಾಗಿದ್ದರೂ ತನ್ನ ಕಾಲದ ತಮಿಳನ್ನಾಡುವ, ತೆಲುಗನ್ನಾಡುವ ತುರುಕನುಡಿಯನ್ನಾಡುವ ಜನರಿಗೆ ಒಂದಿಷ್ಟು ಪ್ರಾತಿನಿಧ್ಯಕೊಡುವುದವಶ್ಯವೆಂದು ಅವನಿಗೆ ತೋರಿರಬೇಕು. ತುರುಕರ ರಸನ್ನು ರತ್ನಾಕರವರ್ಣಿಯು ಹೀಗೆ ಚಿತ್ರಿಸಿದ್ದಾನೆ:—

'ತುರುಕ ಸಿಂಗಾಡಿ ಛೇಡೆಯಲಾಳಿ ಕೋಲನಿ । ಪ್ಪುರವಾಕ್ರದಾಳ್ಗೊಗ್ಗಿಸೊಳು ॥
ಚುರಚುರನೆಯ್ದಿ ಕೈಮುಗಿದು ಗಡ್ಡದ ದೊಡ್ಡ । ತುರುಕರರಸು ಕೋಲಗಿದನು' ॥

ಜನರ ನಡೆನುಡಿ ವೇಷಭೂಷಣಾದಿಗಳನ್ನು ಹೇಳುವಲ್ಲಿ ರತ್ನಾಕರವರ್ಣಿಯು ತನ್ನ ಕಾಲಕ್ಕೆ ಅಧ್ಯವತ್ತಾಗಿರುವಂತೆ ಹೇಳಿರುವ ಹಲವು ಸಣ್ಣ ಸಣ್ಣ ಸಂಗತಿಗಳು ಕೂಡ ಕವಿಯ ರಸಿಕತೆಯನ್ನು ಸೂಚಿಸುತ್ತವೆ. ಕಥಾನಾಯಕನ ಬಿರುದಾಗಿ ಅಲ್ಲಲ್ಲಿ 'ವಿನೋದಾರ್ಥಕೋವಿದ' 'ವಿನೋದಾರ್ಥಿ' 'ರಸಿಕ' ಮೊದಲಾಗಿ ಹೇಳಿ ಆತನಿಂದ ನುಡಿಯಿಸಿದ ಮಾತುಗಳಲ್ಲಿಯೂ ಮಾಡಿಸಿದ ಮಾಡಿಕೆಗಳಲ್ಲಿಯೂ ಕವಿಯ ವಿನೋದಪ್ರಿಯತೆಯು ತೋರುವುದು. ಭರತೇಶನ ರೂಪನ್ನು ಬಗೆಬಗೆಯಾಗಿ ವರ್ಣಿಸುತ್ತಾ ಒಂದೆಡೆ ಹೀಗೆನ್ನುವನು:—

'ಹೆಂಗಳ ರೂಪು ಗಂಡರಿಗೆ ಗಂಡರ ರೂಪು । ಹೆಂಗಳ ಸೋಲಿಪುದೆಂಬ ॥
ಪಾಂಗಲ್ಲವವನ ಚೆಲ್ವಿಕೆ ಗಂಡುಪೆಣ್ಗಳ । ಹಿಂಗದೆ ಸೆರೆವಿಡಿದಿಹುದು ॥
ಬಿಟ್ಟಿಸಿದರೆ ಮುತ್ತುಮುದುಕಿಗಾದರು ಜುಂಮು ! ಧಟ್ಟಿಸುತಿಹುದು ರೂಪವನ ।
ಬಟ್ಟ ಜವ್ವನೆಯರಂತಿಂತಾದರೆಂದು ಬಾ । ಯ್ಬಿಟ್ಟನ್ನು ನುಡಿಯಲದೇಕೆ ।

ಭರತೇಶನ ಸಭೆಯನ್ನು ವರ್ಣಿಸುವಾಗ ಮುಂದುವರಿಸುತ್ತಾ ಜನಸಮ್ಮಿಸಿರ್ದುದನ್ನು ಹೇಳುವಲ್ಲಿ 'ಕಿಂಮೆನಬಾರದು ನಗಬಾರದತ್ತಿತ್ತ । ನೆಮ್ಮಬಾರದು ಸಭೆಯೊಳಗೆ' ಎಂದು ಅಂದವಾಗಿ ಹೇಳಿದ್ದಾನೆ. ಆಸ್ಥಾನದಲ್ಲಾದ ವೀಣಾಗಾನವನ್ನು 'ಚೆನ್ನಾಯ್ತು ಸೊಬಗಾಯ್ತು ಸೊಗಸಾಯ್ತು ಲೇಸು ಲೇ । ಸಿನ್ನೊಮ್ಮೆಯೆಂದು ಕೇಳ್ವಂತೆ' ಸಭೆಯೆಲ್ಲ ಕೇಳಿ ಆನಂದಿಸುತ್ತಿರುವುದು. 'ಸಂಗೀತಗೋಷ್ಠಿ ನಿಂದು' 'ಸಾಹಿತ್ಯ ಸುಸಂಗತಿಗೆ' ಭರತೇಶನು ಎಳಸಿದೊಡನೆ ದಿವಿಜಕಳಾಧರನೆಂಬ ಕವಿಯು ಭಾವವನ್ನರಿತು ನುಡಿಯುವಂತೆ, ರತ್ನಾಕರವರ್ಣಿಯು ಯೋಚಿಸಿಕೊಂಡು ಕಥಾನಾಯಕನ ಭೋಗಯೋಗಗಳ ಸಮರಸ ಜೀವನವನ್ನೂ ಆತನ ಆಧ್ಯಾತ್ಮಿಕಪ್ರವೃತ್ತಿಯನ್ನೂ ನಿರೂಪಿಸುತ್ತ ಹೀಗೆನ್ನುವನು:—

'ಮೊಲೆ ಮುಡಿ ಮುಖ ನಖ ಕಟಿ ತುಟಿ ಯೆಂದರೆ । ಒಲಿದೀವರುಂಟುಲೋಕದೊಳು ।
ಒಳಹೊರಗಾತ್ಮ ಶರೀರವೆಂಬೀ ನುಡಿ । ಗೊಲಿದೀವರಾರು ನಿನ್ನಂತೆ ॥

ಹೆಣ್ಣ ಬಣ್ಣಿಸಿದರಂತಿಂತು ಲೇಸಂದೆದೆ | ಹೆಣ್ಣಾಗಿ ಕೇಳುವರುಂಟು |
ಬಣ್ಣಿಸಲಾತ್ಮತತ್ವಕೆ ಮೆಚ್ಚಿ ಕಿವಿಗೊಡು | ವಣ್ಣಂದಿರಾರು ನಿನ್ನಂತೆ |

x x x x x x x

ನಳಿತೋಳ್ಗಳೆನೆತಕ್ಕೆಯಾದಂತೆ ಪೊಂಗೊಡ | ಮೊಲೆಯೆಂದರೆದೆ ಸೋಂಕಿದಂತೆ |
ತಳಿರ್ದುಟಿಯೆನಲು ಚುಂಬಿಸಿದಂತೆ ನಲಿವರುಂ | ಟೊಲಿವರಾರಧ್ಯಾತ್ಮರಸಕೆ ||'

ರತ್ನಾಕರವರ್ಣಿಯು ಅಲ್ಲಲ್ಲಿ ನಗೆಮಾತಿಗೆ ಧಾರಾಳ ಎಡೆಗೊಟ್ಟಿರುತ್ತಾನೆ.

ಆರೋಗಣೆಯ ಸಂಧಿಯಲ್ಲಿ ತನ್ನ ಪತ್ನಿಯರಿಗೆಲ್ಲ ತನ್ನ ಹಂತಿಯಲ್ಲೇ ಉಣಿಸಾಗ ಬೇಕೆಂದು ಇಚ್ಛಿಸಿ ಭರತೇಶನು ಅವಳಿವಳನ್ನು ಕರೆಯುವಂತೆ ಹೇಳುವಲ್ಲಿ ಕೊನೆಗೆ ಹೀಗೆನ್ನುವ ನುಡಿಜೋಡಣೆಯ ಹಾಸ್ಯವನ್ನು ನೋಡಬಹುದು:—

'ಕರೆ ಕರೆ ರತ್ನಮಾಲೆಯ ಮಣಿಮಾಲೆಯ | ಕರೆಕರೆ ಕಾಂತಿಮಾಲೆಯನು |
ಕರೆದ ನೋಲವರಿತ್ತ ಬಾರದರೆಮಗೆ | ಕರಕರೆಯೆನೆ ನಕ್ಕರೆಲ್ಲ || '

ಭರತೇಶನು ಮುಂದೆ ಉಪ್ಪರಿಗೆಯೇರಿದಾಗ ಸರಸವಾಡುತ್ತ ಅವನನ್ನನುಸರಿಸಿದ ಸತಿಯರ ತಂಡವೂ ಆ ಮೇಲೆ ಅವರು ಒಬ್ಬೊಬ್ಬರಾಗಿ ಬಂದು ಕಾಣ್ಕೆಯಿಕ್ಕುವುದೂ ಕವಿಯ ರಸಿಕತೆಯ ಪ್ರದರ್ಶನಕ್ಕೆ ಬೇಕಾದಷ್ಟು ಇಂಬುಗೊಟ್ಟಿವೆ. 'ಕೆಂಪಿಯೋರ್ವಳು ಬಂದು ರಾಯನ ಹಸ್ತಕೆ | ಸಂಪಗೆ ಹೂಗಳ' ನೀಡುತ್ತಾಳೆ; 'ಕರಿಯಳೊಬ್ಬಳು ಬಂದು ಚಕ್ರವರ್ತಿಗೆ ತನ್ನ | ಕರಕಮಲದೊಳು ರಚಿಸಿದ || ಸುರಗಿಯ ಮಾಲೆಯನ್ನಿತ್ತಳು.'

'ಎಲ್ಲರ ಮುಂದೋರ್ವ ಮುಗ್ಧೆ ನಾಚುತ ಬಂದು | ಮಲ್ಲಿಗೆಸರಗೊಡುವಾಗ |
ಮಲ್ಲಿಗೆ ಜಾರಿತು ಜಾರಿದರೇನದೆ | ಮ್ಮಲ್ಲಿಗೆಯೆಂದನು ನೃಪತಿ || '

ಒಬ್ಬಳು ಮುತ್ತಿನ ಮಣಿಯೊಂದನ್ನು ನೃಪನ ಕೈಗಿತ್ತು ಕೈಮುಗಿದುದನು ನೋಡಿ ಒತ್ತಿನೊಳಿದ್ದ ಪಂಡಿತೆ ಹೀಗೆ ಬಿನದದ ಮಾತನ್ನಾಡಿ ನಗಿಸುತ್ತಾಳೆ:—

'ವದನವದನ ಸೋಂಕಿ ಮುತ್ತ ಕೊಡುವುದುಲೋ | ಕದೊಳುಂಟು ಭರತಚಕ್ರೇಶ |
ಇದು ಚಿತ್ರಕರಯುಗ ಸೋಂಕಿ ಮುತ್ತೀವುದೆಂ | ದೆದೆಯೊಳಿನಿಸು ನಗಿಸಿದಳು ||'

ಇದೇ ರೀತಿಯಲ್ಲಿ ಕಾವ್ಯದುದ್ದಕ್ಕೂ ಸರಸವಿನೋದದ ನುಡಿಯಾಟಗಳು ನಡೆದಿವೆ. ಪೂರ್ವ ನಾಟಕ ಉತ್ತರ ನಾಟಕ ಸಂಧಿಗಳಲ್ಲಿ ನಾಟಕಶಾಲೆ, ನರ್ತಕಿಯರು, ನೃತ್ಯ, ಸಂಗೀತ ಮುಂತಾದವುಗಳ ವರ್ಣನೆಯಲ್ಲಿ ರತ್ನಾಕರವರ್ಣಿಯ ವಿಶಿಷ್ಟತೆ ತೆರೆದು ಕಾಣಿಸಿಕೊಂಡಿದೆ. ಪೂರ್ವನಾಟಕದಲ್ಲಿ ನೃತ್ಯವಿದ್ಯಾಧರನೆಂಬ ನಟ್ಟುವನು ನೇತ್ರಮೋಹಿನಿ, ಚಿತ್ರಮೋಹಿನಿಯೆಂಬ ಪಾತ್ರದ ತರುಣಿಯರಾದ ತನ್ನ ಪುತ್ರಿಯರನ್ನು ಪರಿಚಯಮಾಡಿ ಕೊಡುತ್ತಾನೆ. ಸಂಜೆಗೆಂಪು ಒಲೆವಂತೆ ತೆರೆ ತೊಲಗುವುದು. ಆಗ ಪುಷ್ಪಾಂಜಲಿ ಮಾಡಿ ಆ ನರ್ತಕಿಯರು ಮುಖದೋರಿಸುತ್ತಾರೆ.

'ನಡುವಿನೊಳಿಟ್ಟ ಹಸ್ತಗಳು ಪಸರಿಸಿದ | ತೊಡೆ ಸಾರ್ದಮಡಗಳಿಂದಾಗ |
ಮಿಡುಕದೆ ನಿಲುವಿನ ರೇಖೆದೋರಿದರುಮು | ಪ್ಪೊಡವಿಯಂದವ ತೋರುವಂತೆ' ||
'ನೋಟದೊಳಗೆ ಕೊಂದರೊಮ್ಮೆ ನೋಟಕರನು | ನಾಟಿಸಿ ನಸುನಗೆಯಿಂದ |
ಊಟಿಮಾಡಿದರು ಮೈಯೊಲೆದಾಟದಿಂದೆದೆ | ಗೋಟಿಯ ಕೊಂಡರೇನೆಂಬೆ' ||

ಬಳಿಕ ಒಮ್ಮೆ ಅವರಿಬ್ಬರೂ ಬಲಮುರಿಯೆಡಮುರಿಯಾಗಿ ಚಾರಿವರಿದು ನಿಂದು ತಿರುಗಿ ನೇತ್ರಮೋಹಿನಿ ನರ್ತಿಸುವಳು:—

'ಎತ್ತ ನೀಡಿತು ಹಸ್ತವತ್ತ ದೃಷ್ಟಿಗಳಲ್ಲಿ | ಚಿತ್ತವೆಲ್ಲವು ಭಾವರಸವು |
ತತ್ತತ ತಿತ್ತಿತಿ ಯಾರೆ ಯಾರೆಯೆನ | ಲತ್ತಿತ್ತಲೊಲೆದು ಹರಿದಳು' ||

ಆಕೆಯ ನೃತ್ಯವನ್ನು ಬೇಕಾದಂತೆ ವರ್ಣಿಸಿದ ಬಳಿಕ ಆಕೆಯನ್ನು ಬದಿಗೆ ಸರಿಸಿ ಚಿತ್ರಮೋಹಿನಿಯನ್ನು ಕವಿರಂಗಕ್ಕೆ ತರುವನು. ಚಿತ್ರಮೋಹಿನಿಯ ನೃತ್ಯದ ಮಾದರಿಯನ್ನು ಕವಿಯ ಮಾತಿನಲ್ಲೇ ಹೇಳುವುದು ಉಚಿತ.

'ದಿಗಿದಿಗಿನೊಡನಿದಿರಾಗಿ ಬಹಳು ನಸು | ನಗುತ ರಾಯನನಪ್ಪುವಂತೆ |
ಭುಗಿಲನೆ ತಿರುಗುವಳರಸನೊಳ್ಮನಿದಷ್ಟ | ಮೊಗವಿಕ್ಕಿ ಹೋಹಳೆಂಬಂತೆ' ||
'ಬಾಹಾಗ ಮೊಗಮೊಲೆನಡುಪಜ್ಜೆಗಳ ನೋಡಿ | ಮೋಹಿಸುವರು ರಾಜಸುತರು |
ಹೋಹಾಗ ಮುಡಕಟಿಮುಡಿಜೆನ್ನ ನೋಡಿಯು | ತ್ಸಾಹಿಸುತಿಹರೇನನೆಂಬೆ' ||
'ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬು | ಹಾರಿಸುವಳು ನಸುನಗುತ |
ಹಾರುವುದೊಡನವರೆದೆ ತನ್ನ ತೋಳೆತ್ತಿ | ನೀರೆ ಕೊಲ್ಲಣಿಸಿ ಸುತ್ತುವಳು' ||

ಉತ್ತರ ನಾಟಕಸಂಧಿಯಲ್ಲಿ ಹದಿನಾರು ಪಾತ್ರಗಳಿಂದ ಕವಿ ನೃತ್ಯಮಾಡಿಸುತ್ತಾನೆ. ಇವರ ಹಾವಭಾವ, ಭಂಗಿಬೆಡಗುಗಳು ಪೂರ್ವನಾಟಕದ ಪಾತ್ರದವುಗಳನ್ನು ಮೀರಿಸುತ್ತವೆ. ಹದಿನಾರು ಮಂದಿ ಒಟ್ಟೊಟ್ಟಾಗಿಯೂ ಬೇರೆಬೇರಾಗಿಯೂ ನರ್ತಿಸುವ ಬಗೆಬಗೆಯ ಬಣ್ಣನೆಯನ್ನು ಮಾಡಿ ಕವಿ ದಣಿದಿದ್ದಾನೆ; ಓದುಗರನ್ನು ತಣಿಸಿದ್ದಾನೆ. ಒಬ್ಬಾಕೆಯ ನೃತ್ಯವಿಲಾಸವನ್ನು ಕುರಿತು ಕವಿ ಹೀಗೆನ್ನುತ್ತಾನೆ:—

'[illegible] ತೋರ್ಪಂತೆ | ನಾರಿ [illegible] |
ನಾರಿ ಸುತ್ತುವರಸನ [illegible] | [illegible] ತೋರ್ಪಂತೆ' ||

ರತ್ನಾಕರವರ್ಣಿಯು ತಾನು ಕೈಯಿಕ್ಕುವಲ್ಲೆಲ್ಲಾ ತನ್ನ ರಸಿಕತೆಯನ್ನು ಚಿಮ್ಮಿಸದಿರುವುದಿಲ್ಲ. ಸುಲಭವಾದ ಸರಳಾರ್ಥ [illegible]ಯಲ್ಲಿ ಅವನು ಪ್ರವೀಣನು. ಗಾದೆಗಳೂ ನುಡಿಗಟ್ಟುಗಳೂ ಅವನ ಕರಗತವಾಗಿವೆ. [illegible] ವಿಸ್ತರಿಸುತ್ತ ಹೋದರೂ ರಬ್ದದೌಚಿತ್ಯದ ಬಾಧೆ ಅವನಿಗೆ ತಟ್ಟುವುದಿಲ್ಲ. ಸಾಮಾನ್ಯ ಶಬ್ದಗಳು ಕೂಡ ಅವನ ಕೈಯಲ್ಲಿ ಸಿಕ್ಕಿ ಕಳೆಗೊಂಡಿವೆ. '[illegible]ಯರು ತಾವಾರನಾರಿಯರೋ?' 'ಬಗ್ಗಿವಾಗಲೆ ಬಾಗಿಲಹುದೆ?' 'ನೋಡ ಬಂದವರು ನೋಯಿಸಿ ಹೋದರೆಂಬಂತೆ' 'ನೇಮಗಾಣದ ಕಲೆ [illegible]ಯು ಹೊಯ್ದಂತೆ' 'ಹೂರಿಗೆಯೆಂದರೆ ಗಬಕ್ಕೆಂಬ ಗಾದೆ' 'ಎಳಿಯೆಂಬ ರಾಜನಿಗೆ ತುಳಿಯೆಂಬ ಮಂತ್ರಿ'— ಇಂತಹ ಹಲವು ಮಾತುಗಳನ್ನು ಪ್ರಯತ್ನವಿಲ್ಲದೇ ಕವಿತೆಯಲ್ಲಿ ಬಳಸಿಕೊಂಡಿರುವುದು ಬಹು ಅಂದವಾಗಿ ತೋರುತ್ತಿದೆ.

'ಭರತೇಶವೈಭವ'ವು ಬಹು ವಿಸ್ತಾರವಾದುದು. ಅಲಂಕಾರದ ಸಂಕಲೆಗಳಿಲ್ಲದಿದ್ದರೂ ಅತಿವ್ಯಾಪ್ತವಾದ ಬಣ್ಣನೆಗಳಿಂದ ಬಳಲಿಕೆಗೆಡೆಮಾಡುವಷ್ಟು ನೀಳ್ಪತೆಯುಳ್ಳುದು. ಕಥಾಯೋಜನೆಯಲ್ಲಾಗಲಿ ಸನ್ನಿವೇಶ ಕಲ್ಪನೆಯಲ್ಲಾಗಲಿ ಸೊಗಸು ದೋರುವ ಅಂಶಗಳಿಂದ ಕೂಡಿರುವುದಿಲ್ಲ. ಈ ಕಾರಣಗಳಿಂದ ಇದು ಕೆಲವಟ್ಟಿಗೆ ವಾಚಕರಿಗೆ ರುಚಿಸಲಾರದಂತಾಗಿದೆಯೆಂದೂ ಕೆಲವರಿಗೆ ತೋರಬಹುದು. ಆದರೆ ಕವಿಯ ರಸಿಕತೆಯು ಮೇಲೆ ಹೇಳುವ ದೋಷಗಳನ್ನು ಮರೆಯಿಸುವಷ್ಟು ಮಟ್ಟಿಗೆ ಮೇಲುಗೈಯಾಗಿ ಕಾವ್ಯದಲ್ಲಿ ಹರಿದಿದೆ ಎನ್ನುವುದನ್ನು ಮರೆಯಲಾಗದು. ಪುರಾಣ ಕಥೆಯನ್ನು ಅದ್ಯವತ್ತಾಗಿಯೂ ಆಧ್ಯಾತ್ಮಿಕ ವಿಚಾರಗಳನ್ನು ಲೌಕಿಕರ ಮನಸೊಪ್ಪುವಂತೆಯೂ ಕನ್ನಡದ ಸೊಗಸನ್ನು ಕನ್ನಡಿಯಂತೆಯೂ ನಿರೂಪಿಸಿದ ರತ್ನಾಕರವರ್ಣಿಯು ಕೃತಕೃತ್ಯನು.

★ ನಮ್ಮ ಮಡಿವಾಳನಿಗೆ ಬಹಿರಂಗ ಪತ್ರ ★

ಯಾವ ತರದ ಸಂಬೋಧನೆಯಿಲ್ಲದೇ ಪತ್ರವನ್ನಾರಂಭಿಸಿದ್ದೆನಂತ ಸಾಧನ ಸಂಘದವರಂತೆ ‘ಹಮ್, ದಮ್’ ಎಂತ ಹಾರಬೇಡ. ನಿನ್ನನ್ನು ಹೇಗೆ ಸಂಬೋಧಿಸಬೇಕೆಂದು ನಾನಿದುವರೆಗೂ ಗೊತ್ತು ಮಾಡಿಕೊಂಡಿಲ್ಲ. ಗೊತ್ತು ಮಾಡಿಕೊಳ್ಳುವದಕ್ಕೆ ತೊಡಗುವದಕ್ಕೆ ತೊಡಗಲು ಬಿಡುವೂ ಇಲ್ಲ. ಹೀಗೆ ಅಂದುಕೊಂಡೆನೆಂತ ನಾನು ನ್ಯಾಯವಿಧಾಯಕ ಸಭೆಯ ಮುಖ್ಯ ಸಚಿವನೆಂದಾಗಲೀ,



ತ್ರಿಪುರಿ ಕೊಂಗ್ರೆಸ್ ಸಿದ್ಧತೆಗಳು: ನರ್ಬದಾನದಿಯಿಂದ ವಿಷ್ಣುದತ್ತ ನಗರದ ವರೆಗೆ ಒಂದು ರಸ್ತೆಯು ರಚನೆಯಾಗುತ್ತಿದೆ.

ಕ್ಯಾನ್ವಾಸಿಂಗ್ ಏಜಂಟನೆಂದಾಗಲೀ ತಿಳಿಕೊಳ್ಳಬೇಡ. ನಾನು ಯಾರೆಂಬುದು ನಿನಗೆ ಚೆನ್ನಾಗಿ ಗೊತ್ತದೆ. ಇಲ್ಲವಾದ ಪಕ್ಷ ನೀನು ಈ ರೀತಿ ಬಹಿರಂಗಪತ್ರಕ್ಕೆ ಅವಕಾಶ ಕೊಡುತ್ತಿದ್ದಿಲ್ಲ. ನನ್ನ ಅಂತರಂಗವನ್ನು ಬಹಿರಂಗಕ್ಕೆ ತರುವ ನಿನ್ನ ಸಾಹಸವೇ ಸಾಹಸ! ದಸರೆ ದಾಟಿಹೋಯಿತು. ಯಕ್ಷಗಾನದಲ್ಲಿ ನೀನು ಮುಖ್ಯ ಭಾಗವಹಿಸಿಕೊಂಡಿದ್ದೆಯೆಂಬುದು ನನಗೆ ತಿಳಿದಿರುತ್ತದೆ. ಆದುದರಿಂದಲೇ ಮೂರು ತಿಂಗಳ ಹಿಂದೆ ಕೊಟ್ಟ ಬಟ್ಟೆಗಳನ್ನು ನಿನಗೆ ತರಲಾಗಲಿಲ್ಲವೆಂಬುದೂ ನನಗೆ ಗೊತ್ತು. ನನ್ನ ಬಟ್ಟೆಗಳಿಗೂ ನಿನ್ನ ಬೇಯಿಸುವ ಗೂಡಿಗೂ ಹೆಚ್ಚಿನ ನಂಟು ಬೀಳುವದಿಲ್ಲವೆಂಬುದನ್ನು ನನ್ನ ಸುಟ್ಟುಹೋದ ಖಾದಿ ಅಂಗಿಗಳೇ ಹೇಳುತ್ತಿವೆ. ನಿನ್ನ ಮನೆಯ ಕಸದ ಮೂಲೆಗೂ ನನ್ನ ಬಟ್ಟೆಗಳಿಗೂ ಅದೆಂತಹ ನೆಂಟಸ್ತಿಕೆಯೋ ಕಾಣೆ! ಅಂಟಿನಂತದೆ! ಹೀಗಾಗಿ ಅವುಗಳಿಗೆ ಆ ಮೂಲೆ ಬಿಟ್ಟು ಹೊರಡಲು ಮನಸ್ಸೇ ಇಲ್ಲವೆಂಬಂತೆ ‘ದಸರೆಗಾದರೂ ತೆಗೆದುಕೊಂಡು ಬರಬೇಕು’ ಎಂದು ಹೇಳಿದ್ದ ಬಟ್ಟೆಗಳು ದಸರೆಮುಗಿದು ಮೊಸರುಕುಡಿಕೆ ಒಡೆವರೂ ಇನ್ನೂ ನಿನ್ನಲ್ಲೇ ಇರುವವೆಂಬುದು ನಿನಗೆ ನೆನಪಿರುವದಷ್ಟೇ? ನಿನಗೆ ಇತ್ತೀಚೆಗೆ ನೆನಪೇ ಕಡಿಮೆಯಾಗಿರುವದನ್ನು ನಾನು ಮೊನ್ನೆ ಮೊನ್ನೆ ಕಂಡಿಲ್ಲವೇ? ಇಲ್ಲವಾದರೆ ನೂರು ಬಟ್ಟೆಗಳ ಮಜೂರಿ ಇನ್ನೂ ತನಗೆ ಬರಬೇಕೆಂದು ರಂಪಮಾಡುತ್ತಿದ್ದಿಯಾ? ನಿನ್ನ ಗಲಾಟೆ ಬೇಡವೆಂದು ನಾನೇನೋ ಬಿಸಾಡಿದೆ ನಿನ್ನ ಮಜೂರಿ. ಅದರೊಂದಿಗೆ ನಿನ್ನನ್ನೂ ಬಿಸಾಡಬೇಕೆಂದಿದ್ದೆ. ಬಡವ-ಗಿಡವ ಎಂದು ರಂಭಾಟ ಮಾಡಿದೆ. ಹೋಗಲಂತ ಪುನಃ ನಿನ್ನ ಹತ್ತಿರವೇ ಬಟ್ಟೆಗಳನ್ನೊಗೆಯಲು ಕೊಟ್ಟೆ. ಕೆಟ್ಟೇ ಹೋಗಲಿ. ಈಗ ದೀಪಾವಳಿ ಹಬ್ಬ ತೀರಾ ಹತ್ತಿರ ಬಂದಿತು. ಆಗಲಾದರೂ ಮಡಿಮಾಡಿ ಕೊಡವೆಯಾ? ಅಲ್ಲವೆ ‘ದಿವಾಳಿ’ಯೆಂತ ಸೋಡಾಚೀಟು ಹಾಕುವೆಯಾ?

ಮಹಾರಾಯಾ ಇನ್ನಾದರೂ ನಿನಗೆ ಬುದ್ಧಿ ಒಳ್ಳೇದು ಬಂದೀತಂತ ಯೋಚಿಸಿಕೊಂಡಿದ್ದೆ—ಅದೇ ಬಂತು! ನೀನು ಮಾತ್ರ ಇನ್ನೂ ಬಟ್ಟೆಗಳನ್ನು (ಯಾರ ಯಾರ ಬಾಡಿಗೆಗೆ ಕೊಡುವ ಕ್ರಮ ಬಿಟ್ಟಿಲ್ಲವಲ್ಲ—ನಿನಗಂತೂ ಬಟ್ಟೆಬರೆಗಳನ ಕೊಂಡುಕೊಳ್ಳುವ ಯೋಜನೆಯೂ ಇಲ್ಲ—ಅಗತ್ಯವೂ ಇಲ್ಲವನ್ನು—ನದಿಗೆ ಒಗೆಯಲಿಕ್ಕೆ ಹೋದಾಗಿ ಒಮ್ಮೊಮ್ಮೆ ಪರಾಮೋಶಿಯಿಂದ ಕೆಲಬಟ್ಟೆಗಳು ನಿನ್ನ ಹಾಗಿ ಕಟುಕನ ಹೊಡೆತದ ಗೋಳು ಬೇಡವೆಂದು ಜಾರಿ, ತೇಲಿಹೋಗುವದುಂಟು—ಏನ ಮಾಡಲಾದೀತು? ಬಟ್ಟೆ ಹ್ಯೋತಂತ ಜೀವ ಎರವು ಹಾಕಲಿಕ್ಕೆ ಬಂದೀತೇ? ಬಟ್ಟೆ ಬೇರೆ ನಿನ್ನದೇನಲ್ಲ—ಆ ಮೇಲೇನು? ಹೋದದ್ದು ಹೋದವರಿಗೆ ಉಳಿದದ ನೀನು ಹಿಂದೆ ತಂದು ಕೊಡುವವರಿವಿಗೂ ನಿನಗೆ-ನಿನ್ನ ಮನೆಯವರಿಗೆ-ಬಾಡಿಗೆ

ಅಲ್ಲ—ಕಳ್ಳನಾದರೆ, ಪಕ್ಕಾ ಕಳ್ಳನಾಗಬೇಕು—ಕದಿಯಲಿಕ್ಕೆ ಬಂದರೂ ಕದಿಯಲಿಲ್ಲವೆಂದಾಗಬೇಕು. ನೀನು ನನ್ನ ಬಟ್ಟೆಗಳಲ್ಲಿ ಕೆಲವು ಖದ್ದರ್ ಅಂಗಿ ಮತ್ತು ಟೊಪ್ಪಿಗಳನ್ನು ಯಾರಿಗೆ ಬಾಡಿಗೆಗೆ ಕೊಟ್ಟಿರುವೆ ಗೊತ್ತೆ? ಚುನಾವಣಾ ಕಾಲದ ‘ಹುಲಿವೇಷ’ಗಳಿಗೆ ಕೊಟ್ಟಿಯಲ್ಲಾ—ತಿಳಿಯದೇ ಹೋದಿತೇ? ನಾನೂ ‘ಕಾಂಗ್ರೆಸ್’ ಅಂತ ನನ್ನ ಉಡುಪು ತೊಡುಪುಗಳಿಂದ ನೀನಿಷ್ಟರೊಳಗೆ ಗ್ರಹಿಸಿಕೊಂಡಿರಬೇಕು. ಕಾಂಗ್ರೆಸ್ಸಿನ ಜನ ಪೂರಾ ನನ್ನ ಹತ್ತಿರವೇ ಮಡಿ ಮಾಡಿಸಿಕೊಳ್ಳುತ್ತಾರಂದ ನಿನ್ನ ‘ಸಂಜೆ ಕಾಫಿ ಹೊಟೇಲು’ ಅಲ್ಲಿ ದಬಾಯಿಸುತ್ತಿದ್ದೆಯಂತೆ. ಇಷ್ಟಿದ್ದರೂ ನನ್ನ ಉಡಿಗೆ ತೊಡಿಗೆಗಳನ್ನು, ನನ್ನ ಕೇರಿಯಲ್ಲಿ ನನ್ನ ಕಣ್ಣಮುಂದಿರುವ, ಕಣ್ಣಿಗೆ ಬೀಳುವ ‘ಆಸಾಮಿ’ಗಳಿಗೆ ಬಾಡಿಗೆಗೆ ಕೊಡುವದು ನ್ಯಾಯವೇ? ನೀತಿಯೇ? ರೀತಿಯೇ? ಮೇಲೆ ನನ್ನ ವಸ್ತ್ರಗಳಲ್ಲಿ ಸಂಪೂರ್ಣ ಹೆಸರವೆಯೆಂಬುದನ್ನು ನೀನು ಮರೆತಿರ ಬೇಕು.

ಇನ್ನಾದರೂ ಹಾಗೆ ಮಾಡಬೇಡವೆಂದು ಹೇಳುವದು ವ್ಯರ್ಥ! ಚುನಾವಣಾ ಕಾಲಕ್ಕಾದರೂ ನಿನ್ನಿಂದಾಗುವ ಸಹಾಯ ನೀನು ಮಾಡಲೇ ಬೇಕೆಂದಿರುವೆಯಾದರು ಮಾಡಲೇ ಬೇಕಷ್ಟೇ? ಯಾರ ಯಾರ ಖದ್ದರ್ ಬಟ್ಟೆ ಬರೆಗಳನ್ನು ಬಾಡಿಗೆಗೆ ಕೊಡುವದೇ ನಿನ್ನ ಸಹಾಯ -ಮಹಾರಾಯಾ ಇಂಥ ಹುಲಿವೇಷಗಳು ಎಲ್ಲೆಲ್ಲೂ ಅವೆ. ಆದುದರಿಂದ ಚುನಾವಣಾ ಕಾಲಕ್ಕೆ ಒಂದು ತಿಂಗಳಿಂದ ಮುಂದಾಗಿ ಊರು ಬಿಟ್ಟು ಪರಊರಿಗೆ ಹೋಗಿ ಅಲ್ಲಿಂದ ಆರ್ಡರಗಳನ್ನು ಪಡಕೋ. ಅಂದರೆ ಊರವರಿಗೆ ತಿಳಿಯಲಿಕ್ಕಿಲ್ಲ ನೋಡು. ಬುದ್ಧಿವಂತಿಕೆಬೇಕು. ತಲೆಯಿದ್ದರೆ ಸಾಲದು. ಗೊತ್ತೇ? ಹೀಗೆ ಮಾಡಿದರೆ ನಿನ್ನ ನೆಪವೂ ಹಿಡಿಯುತ್ತೆ— ನಿನ್ನಿಂದ ದೇಶ ಸೇವೆಯೂ ಆಗುತ್ತೆ—ನಿನ್ನ ಜೇಬೂ ತುಂಬುತ್ತೆ. ‘ಹುಲಿವೇಷ’ದವರು ಆ ‘ಗೋಣಿ ವಸ್ತ್ರದಿಂದ ತೊಡಿಗೆಗಳನ್ನು ಹೋಲಿ ಕೊಳುವದೂ ಉಳಿಯುತ್ತೆ. ಅಂತೂ ಅವರ ಕೆಲಸವಾಗುತ್ತೆ—ಆದರೆ,—

ಈ ಮಧ್ಯೆ ವಸ್ತ್ರ ಮಡಿಗೆ ಕೊಟ್ಟು ನಾವು ಮಾತ್ರ ನಿನ್ನ ಆಗಮನವನ್ನು ಹಾರೈಸಿ, ಬಾಗಿಲು ಸದ್ದಾದ ಕೂಡಲೇ ಹಾರಿ ಬಂದಾ, ಖಂಡಿತ ಬಂದಾ—ಅವನೆಯಾಗಿರಬೇಕು ಅಂತ ಕಾದುಕೊಂಡಿರ ಬೇಕಾಗುತ್ತೆ. ಆಗಾಗ್ಯೆ ಬೀದಿ ಬಾಗಿಲು ವರೇಗೆ ಬಂದು ನಿನ್ನ ಸವಾರಿ ಕಾಣುತ್ತೊ ಅಂತ ದಾರಿಯುದ್ದಕ್ಕೂ ನೋಡುತ್ತಿರ ಬೇಕಾಗುತ್ತೆ—ಈ ನಮ್ಮ ಆತುರವನ್ನು ಕಂಡು ನೆರೆಮನೆಯವರು ನಮಗೇನು ‘ಗೋವಾ ಲಾಟರಿ’ ಎದ್ದಿರಬಹುದೆಂದೇ ಅಲ್ಲವೇ ಸ್ವಲ್ಪ ಒಂದು ಸುತ್ತು ಹಿಂದೆ ಅಂತ ನೆನಸದೇ ಇದ್ದರೆ ನಿನ್ನ ಉಪಕಾರ.

ಹೇಗೂ ದೀಪಾವಳಿಗಾದರೂ ಬಟ್ಟೆ ತಾರದಿರಬೇಡ—ನೀನು ತರುವದಿಲ್ಲವೆಂಬುದು ಖಂಡಿತಗೊತ್ತಿದ್ದರೂ ಶಿಷ್ಟಾಚಾರಕ್ಕೆ ತಕ್ಕುದಾಗಿ, ಸಭ್ಯತೆಯಿಂದ ಹೇಳಲೇ ಬೇಕಾಗುತ್ತೆ—ಹೇಳಿದೆ. ಇನ್ನು ನಿನ್ನ ಹುಟ್ಟಿಸಿದ ದೇವರು ನಿನಗೆ ಹೇಗೆ ಬುದ್ಧಿ ಕೊಡುತ್ತಾರೋ ಹಾಗೆ ಮಾಡು.

—ಇತಿ **ಬಟ್ಟೆಗಳ ಧನಿ.**

ವಿ. ಸೂ. (ನಾನೋ, ನೀನೋ? ಎಂಬುದರಿಂದ, ಸಣ್ಣಕ್ಷರದಲ್ಲಿ ಬರೆಯಬೇಕಾಯಿತು. ನಿನ್ನ ಕಣ್ಣಿಗೂ ಸ್ವಲ್ಪ ಜಡ್ಡು ಹತ್ತಿರುವದಂತ ಆಗಾಗ ಹೇಳುತ್ತಿದ್ದೆ—ಆ ಮಾತನ್ನು ನಂಬಲು ಸಾಧ್ಯವಿಲ್ಲ—ಹೀಗಾಗಿ ನೀನು ಜಬರದಸ್ತಿಗೆ ಬಂದರೆ ನಾನು ಸಿದ್ಧನಾಗಿಲ್ಲ—ಹೀಗಾಗಿ ಮುಂಜಾಗ್ರತೆ)



...ಗ್ರೆಸ್ ಸಿದ್ಧತೆಗಳು: ಜಿ. ಐ. ಪಿ. ರೈಲ್ವೆ ಆಫೀಸರರೊಬ್ಬರು ಕೊಂಗ್ರೆಸ್ ಅಧಿಕಾರಿಗಳೊಡನೆ, ಮದನ್ ಮಹಾಲ್ ಸ್ಟೇಷನ್ ಬಳಿ ಅತಿಥಿಗೃಹ ರಚನೆಯ ವಿಷಯವಾಗಿ ಚರ್ಚಿಸುವುದು.

ಮಲಬಾರಿನಲ್ಲಿ ಯೆಹೂದ್ಯರು

*

ಮೂರು ಸಾವಿರ ವರ್ಷಗಳ ಹಿಂದೆಯೂ ನೆಲಸಿದ್ದರು

ಕೊಚ್ಚಿಯಲ್ಲಿ ಯೆಹೂದ್ಯರ ಸ್ಥಾನಮಾನಗಳು.

ಯೂರೋಪಿನಲ್ಲಿಂದು ಯೆಹೂದಿಯರ ಮೇಲೆ ಅವ್ಯಾಹತ ದಬ್ಬಾಳಿಕೆಯು ನಡೆಸಲ್ಪಡುತ್ತಿರುವುದರಿಂದ ಅವರನ್ನ ಕಣ್ಣೀರಾಗಿದೆ. ಪ್ರಪಂಚದ ಇನ್ನಿತರ ಪ್ರದೇಶಗಳಿಗೆ ಯೆಹೂದಿಯರು ಪ್ರಯಾಣ ಬೆಳೆಸುತ್ತಿದ್ದಾರೆ. ೩ ಸಾವಿರ ವರುಷಗಳ ಹಿಂದೆಯೇ ಯೆಹೂದಿಯರು ಹಿಂಸೆಗೆ ಗುರಿಯಾಗಿ ಭಾರತಕ್ಕೆ ಬಂದು ಮಲಬಾರಿನಲ್ಲಿ ಸ್ಥಾನಮಾನವನ್ನು ಗಳಿಸಿ ವಾಸಿಸಿದರೆಂಬುದು ಇತಿಹಾಸ ಪ್ರಸಿದ್ಧವಾಗಿದೆ. ಈ ಲೇಖವು ಮಲಬಾರಿಗೆ ಬಂದು ನೆಲಸಿದ ಯೆಹೂದ್ಯರ ವಿಷಯವನ್ನು ಮಾತ್ರ ವಿಶದಗೊಳಿಸುತ್ತಿದೆ.

ಯೂರೋಪಿನ ದಬ್ಬಾಳಿಕೆಗೆ ತುತ್ತಾದ ಯೆಹೂದಿಯರಿಗೆ ಸ್ಥಾನಮಾನಗಳನ್ನು ದೊರಕಿಸಲು ಭಾರತವೂ ಇನ್ನಿತರ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳೊಡನೆ ಸಹಕರಿಸಿದರೆ ಹಿಂದುಸ್ಥಾನವು ಯೆಹೂದಿಯರಿಗೆ ಎರಡನೇ ಬಾರಿ ಆಶ್ರಯ ನೀಡಿದಂತಾಯಿತು.



ಬೊಂಬಾಯಿಯ ಜೋಗೇಶ್ವರಿ ಆಶ್ರಮದ ಸ್ವಾಮಿ ಕೃಷ್ಣಾನಂದರು ತಮ್ಮ ಹುಲಿ ಮತ್ತು ನಾಯಿಯೊಂದಿಗೆ ಕುಳಿತಿರುವರು. ಇವರು ಯಾವ ಕಾಡುಜಂತುಗಳನ್ನೂ ದೃಷ್ಟಿ ಮಾತ್ರದಿಂದ ಪಳಗಿಸ ಬಲ್ಲರು.

ಕೊಚ್ಚಿಯಲ್ಲಿರುವ ಯೆಹೂದಿಯರ ಪ್ರಾರ್ಥನಾ ಮಂದಿರ (ಸಿನೆಗೋಗ್) ವನ್ನು ಸಂದರ್ಶಿಸಿ ಅಲ್ಲಿಯ ಕೆತ್ತಲ್ಪಟ್ಟ ತಾಮ್ರ ಶಿಲಾಶಾಸನದ ರಿಕಾರ್ಡುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇಸಾಯೇಲರ ಕಾಲದಲ್ಲಿ ಹಿಂಸೆಗೆ ಪಾತ್ರರಾದ ಯೆಹೂದಿಯರು ಕೊಚ್ಚಿ ಪ್ರಾಂತ್ಯಕ್ಕೆ ಓಡಿಬಂದಿದ್ದರೆಂಬುದು ವಿಶದವಾಗುತ್ತದೆ.

1695ರಲ್ಲಿ ಕೊಚ್ಚಿ ಡಚ್ ಗವರ್ನರರಾದ "ವ್ಯಾನ್ ಹೀರ್‌ವಾನ್ ರೀಡ್" ಇವರು ಈ ಹೀಬ್ರು ಭಾಷೆಯನ್ನು ಡಚ್ ಭಾಷೆಗೆ ಭಾಷಾಂತರ ಮಾಡಿಸಿದ್ದರಂತೆ. "ನೆಬುಕದ್‌ನೇಜರ್" ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿ ಬೇಬಿಲೋನ್ ಮಹಾನಗರವನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡು ಆಳುತಿದ್ದಾಗ, ಯೆಹೂದಿಗಳ ಮೇಲೆ ದಬ್ಬಾಳಿಕೆಯ ಧೋರಣವನ್ನು ಕೈಕೊಂಡುದರಿಂದ 2 ಲಕ್ಷ ಯೆಹೂದಿಯರು ಈ ಹಿಂಸೆಯನ್ನು ಸಹಿಸಲಾರದೆ, ತಮ್ಮ ಪತ್ನೀ ಪುತ್ರರನ್ನೊಡಗೊಂಡು ಬೇಬಿಲೋನಿನಿಂದ ಪ್ರಯಾಣ ಬೆಳೆಸಿದರೆಂದೂ, ಮಲಬಾರ್ ಪ್ರಾಂತದತ್ತ ಕಡೆ ಬಂದು ಸೇರಲು ಅವರಿಗೆ 3 ವರುಷಗಳು ಹಿಡಿದುವೆಂದೂ, ಡಚ್ ಗವರ್ನರರು ಭಾಷಾಂತರ ಮಾಡಿಸಿದ್ದ ರಿಕಾರ್ಡುಗಳಿಂದ ಸಮರ್ಥಿಸಬಹುದಾಗಿದೆ.

ಮಲಬಾರ್ ಕರಾವಳಿಯಲ್ಲಿ ವಾಸಿಸುತ್ತಿರುವ ಯೆಹೂದಿಗಳು ಕ್ರಿಸ್ತ ಪೂರ್ವ ೬ನೇ ಶತಮಾನದಲ್ಲಿ ಸೈರಸ್ ಅರಸನ ದಬ್ಬಾಳಿಕೆಯನ್ನು ತಡೆಯಲಾರದೆ ಬಂದವರೆಂದು ಸರ್ ಡಬ್ಲ್ಯೂ. ಹಂಟರ್ ಎಂಬ ಬ್ರಿಟಿಷ್ ಇತಿಹಾಸಕಾರರು ಬರೆದಿರುವುದನ್ನು ನೋಡಿದರೆ ಇವರು ಭಾರತಕ್ಕೆ ಎಂದು ಬಂದರೆಂಬ ಬಗ್ಗೆ ಅಭಿಪ್ರಾಯ ಭೇದವುದ್ಭವಿಸಿದೆಯೆಂದು ತೋರುತ್ತಿದೆ. ಅದೇನೇ ಇರಲಿ; ಕ್ರಿಸ್ತಪೂರ್ವ ೨೦೦ರ ಮೊದಲಿಂದಲೇ ಯೆಹೂದಿಯರು ಮಲಬಾರದಲ್ಲಿದ್ದರೆಂದು ಆಧಾರ ಗ್ರಂಥಗಳಿಂದ ತಿಳಿದುಬಂದಿದೆ. ಕ್ರಿಸ್ತಶಕ ೨೦೦ರಲ್ಲಿ ಮಲಬಾರದಲ್ಲಿದ್ದ ಯೆಹೂದಿ ವಸಾಹತನ್ನು ರೋಮನ್ ವ್ಯಾಪಾರಿಗಳು ಕಂಡು ಹಿಡಿದಿರುವರು. ರೋಮನರು ಕ್ರಿ. ಪೂ. ೧೦೦೦ ವರುಷಗಳ ಹಿಂದಿನಿಂದಲೂ ಮಲಬಾರ್‌ದೊಂದಿಗೆ ವ್ಯಾಪಾರ ವಹಿವಾಟುಗಳನ್ನು ನಡೆಸುತಿದ್ದರೆಂಬುದನ್ನು ಮರೆಯಲಾಗುವುದಿಲ್ಲ. ಸೊಲೊಮನ ದೊರೆಯಲ್ಲಿದ್ದ ಅತಿ ಅಮೂಲ್ಯ ರತ್ನ ಒಡವೆ ವಸ್ತುಗಳು ಮಲಬಾರದಿಂದ ಬಂದುವು ಎಂಬುದನ್ನು ಇತಿಹಾಸಕಾರರು ಒಪ್ಪಿದ್ದಾರೆ.

ಕೊಚ್ಚಿಯಲ್ಲಿ ಅವರ ಸ್ಥಾನಮಾನ

ಕೊಚ್ಚಿಯಲ್ಲಿ ಯೆಹೂದಿಗಳಿಗೆ ಸ್ವರ್ಗವೇ ದೊರೆತಂತಾಯಿತು. ಕ್ರಿಸ್ತಶಕ ೩೭೯ರಲ್ಲಿ ಕೊಚ್ಚಿಯ ದೊರೆಯಾಗಿದ್ದ ಚೆರೂಮನ್ ಪೆರುಮಾಳ್ ಅರಸರು ಯೆಹೂದಿಯರಲ್ಲಿ ಪ್ರಮುಖರಾದ ಇಸುಪು ರಬ್ಬನ್ (ಜೋಸೆಫ್ ರಬ್ಬಾನಿ) ಇವರಿಗೆ ರಾಜಕುಮಾರ ಸ್ವಾಗತವನ್ನು ಕೊಟ್ಟಿದ್ದರಂತೆ. ಸೂರ್ಯಚಂದ್ರರಿರುವ ವರೆಗೆ ಅಂಜಾಮನ್ನಂ ಪ್ರದೇಶವನ್ನು ಈ ಯೆಹೂದಿ ಪ್ರಮುಖರಿಗೆ ಅರಸರು ಜಹಗೀರಾಗಿ ಬಿಟ್ಟುಕೊಟ್ಟದ್ದರು.

ಯೆಹೂದಿಯರು ಈ ಪ್ರಾಂತದಲ್ಲ ಜನಾದರಕ್ಕೆ ಪಾತ್ರರಾಗಿ ಸುಖಸಂತೋಷದಿಂದ, ಇನ್ನಿತರರೊಂದಿಗೆ ಸ್ನೇಹಭಾವದಿಂದ ವರ್ತಿಸುತಿದ್ದರು. ಹಲವು ಘನಪಂಡಿತರು ಅರಸರಮಂತ್ರಿಪದವಿಯನ್ನು ಭೋಗಿಸಿದ್ದರೆಂಬುದು ಗಮನಾರ್ಹವಾಗಿದೆ.

ಪೋರ್ಚುಗೀಸರು ಬರುವ ವರೆಗೆ ಯೆಹೂದಿಯರಿಗೆ ಯೋಗ್ಯ ನಾಗರಿಕ ಹಕ್ಕು ಸಂರಕ್ಷಣೆಯಿತ್ತು. ಮುಂದೆ ಅಂಜಾಮನ್ನಿಂದ ಅವರನ್ನು ಓಡಿಸಲಾಯಿತು. ಕ್ರಾಂಗನೂರಿನಲ್ಲಿದ್ದ ಅವರ ವಸಾಹತು ನಾಶವಾಯಿತು.

ಪೋರ್ಚುಗೀಸರ ಆಡಳಿತ ಹಾಗೂ ಮತೋನ್ಮಾದನೆಯ ಫಲವಾಗಿ ಯೆಹೂದಿಯರ ಅನ್ನ ಕಣ್ಣೀರಾಯಿತು. ಪ್ರಾರ್ಥನಾ ಮಂದಿರಗಳು ಅಗ್ನಿನಾರಾಯಣನಿಗೆ ಆಹುತಿಯಾದುವು; ಆಸ್ತಿಪಾಸ್ತಿಗಳು ಕೈಬಿಟ್ಟು ಹೋದುವು.

ಇಷ್ಟರಲ್ಲಿ ಡಚ್ಚರು ಹಿಂದುಸ್ಥಾನಕ್ಕೆ ಕಾಲಿಟ್ಟರು. ಪೋರ್ಚುಗೀಸರನ್ನು



ಪಂಡಿತ ಜವಾಹರಲಾಲರು—ಅಬುಲ್ ಕಲಂ ಅಜಾದರೊಂದಿಗೆ—ಬೊಂಬಾಯಿಯಲ್ಲೊಂದು ಕಡೆ ಭಾಷಣ ಮಾಡುವಾಗ ತೆಗೆದ ಭಾವಚಿತ್ರ.

ಅಪ್ಪಳಿಸಿ ತಮ್ಮ ವ್ಯಾಪಾರಾಭಿವೃದ್ಧಿಯನ್ನು ಮಾಡಲು ಡಚ್ಚರು ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡಿದ್ದರು. ಯೆಹೂದಿಯರು ಈ ಸಮಯವನ್ನು ಸಾಧಿಸಿ, ಡಚ್ಚರಿಗೆ ಸಹಾಯ ಕೈನೀಡಿದುದರ ಪ್ರತಿಫಲವಾಗಿ ಕೊಚ್ಚಿಯಲ್ಲಿ ಅವರಿಗೆ ಪುನಃ ಆಸ್ತಿ ಪಾಸ್ತಿಗಳು ಕೊಡಲ್ಪಟ್ಟುವು. ಪೋರ್ಚುಗೀಸರು ಕಾಲಿಗೆ ಬುದ್ಧಿ ಹೇಳಬೇಕಾಯಿತು.

ಪ್ರಾರ್ಥನಾ ಮಂದಿರಗಳನ್ನು ಪುನಃ ರಚಿಸಲು ಡಚ್ಚರು ಯೆಹೂದಿಯರಿಗೆ ಪ್ರೋತ್ಸಾಹಿಸಿ, ಸಹಾಯವನ್ನಿತ್ತರು. ಡಚ್ಚರು ಆಗ್ಗೆ ದಾನಕೊಟ್ಟ ಗಡಿಯಾರವೊಂದು ಈಗಲೂ ಕೊಚ್ಚಿಯಲ್ಲಿರುವ ಯೆಹೂದಿ ಪ್ರಾರ್ಥನಾ ಮಂದಿರದಲ್ಲಿ ಶೋಭಿಸುತ್ತಿದೆ; ಗತ ಇತಿಹಾಸವನ್ನು ಸ್ಮೃತಿಪಥಕ್ಕೆ ತಂದೊಡ್ಡುತ್ತದೆ.

ಹಂಚುಗಳ ಕಥೆ

ಈ ಪ್ರಾರ್ಥನಾ ಮಂದಿರಗಳನ್ನು ಪುನರ್ರಚಿಸುವ ಕಾಲದಲ್ಲಿ ಯೆಹೂದಿಯರು ಅವಿವೇಕದಿಂದ, ತುಸು ಸ್ವಾರ್ಥದಿಂದ ವರ್ತಿಸಿದ ಫಲವಾಗಿ ಕೆಲವು ಕಡೆ ಹೇಗೆ ಜನರ ವಿರೋಧಕ್ಕೆ ಪಾತ್ರರಾದರೆಂಬುದನ್ನು ಚಿಕ್ಕ ದೃಷ್ಟಾಂತವೊಂದನ್ನು ಸೂಚಿಸಿ ತಿಳಿಸಬಹುದಾಗಿದೆ.

ದರ್ಬಾರನ್ನು ಮನಮೋಹಕವಾಗಿ ಕಟ್ಟುವ ಉದ್ದೇಶದಿಂದ ಡಚ್ ವ್ಯಾಪಾರಿಗಳ ಮೂಲಕ ಕೊಚ್ಚಿ ಅರಸರು ಉತ್ತಮ ಚೀನಾ ಹಂಚುಗಳನ್ನು ತರಿಸಿದರಂತೆ. ಅದರಿಂದ ತಮ್ಮ ಪ್ರಾರ್ಥನಾ ಮಂದಿರವನ್ನು ರಚಿಸಬೇಕೆಂಬ ದುರಾಭಿಲಾಷೆಯು ಯೆಹೂದಿಗಳಲ್ಲಿ ಹುಟ್ಟಿ ಕೆಲವರು ಅರಸನಲ್ಲಿ ತೆರಳಿ ಆ ಹಂಚುಗಳನ್ನು ತಯಾರಿಸಲು ಎತ್ತಿನ ರಕುತವನ್ನು ಪ್ರಯೋಗಿಸಲಾಗುತ್ತಿದೆಯೆಂದು ತಿಳಿಸಲು, ಎಲ್ಲ ಹಂಚುಗಳನ್ನೂ ಅರಸರು ಯೆಹೂದಿಯರಿಗೆ ಕೊಟ್ಟುಬಿಟ್ಟರಂತೆ. ಇದರಿಂದ ಯೆಹೂದಿಗಳು ತಮ್ಮ ಮಂದಿರವನ್ನು ಕಟ್ಟಿಸಿಕೊಂಡರು!

ಕೊಚ್ಚಿ ಯೆಹೂದಿಗಳಲ್ಲಿ ಪ್ರಾಚೀನ "ಸೆಫೆರ್ ತೊರ್ರಾ" ಎಂಬ ಪವಿತ್ರ ಗ್ರಂಥವೊಂದು ಈಗಲೂ ಇದೆಯೆಂದು ಹಲವರು ನುಡಿಯುತ್ತಾರೆ. ಪೋರ್ಚುಗೀಸರು ತಮ್ಮ ಮಂದಿರಗಳನ್ನು ಸುಟ್ಟಾಗ ಅವು ನಾಶವಾಗಿವೆಯೆಂದು ಯೆಹೂದಿಯರ ಹೇಳಿಕೆ. ಆದರೆ ತಮ್ಮ ಎಲ್ಲ ಸಲಕರಣೆಗಳನ್ನೆ ಕೊಂಡೊಯ್ಯಲು ಯೆಹೂದಿಯರಿಗೆ ೮ ದಿನದ ಸಮಯಾವಧಿಯನ್ನು ಕೊಟ್ಟಿದ್ದರೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ರಾಜಾ ಲಖಾಜಿಯ ಪುನರುತ್ಥಾನ

★

(ಒಂದು ಚಿಕ್ಕ ದೃಶ್ಯ)

ಬರೆದವರು: M. H.

(ರಾಜಕೋಟವು ಕತೇವಾಡ ಸಂಸ್ಥಾನಗಳಲ್ಲೊಂದು: ರಾಜ ಲಖಾಜಿಯು ಅಲ್ಲಿಯ ಹಿಂದಿನ ದೊರೆ. ಮಹಾತ್ಮರ ತಂದೆ, ಕಾಬಾ ಗಾಂಧಿಜಿಯವರು ಇಲ್ಲಿ ಸ್ವಲ್ಪ ಸಮಯದ ವರೆಗೆ ದಿವಾನರಾಗಿದ್ದರು. ರಾಜಾ ಲಖಾಜಿ ೧೯೩೦ನೇ ಇಸವಿಯಲ್ಲಿ ಮರಣ ಹೊಂದಿದುದರಿಂದ ಈಗಿನ ತರುಣ ಠಾಕೋರ್ ಸಾಹೇಬರು ಪಟ್ಟಕ್ಕೆ ಬಂದರು. ಲಖಾಜಿಯ ಆಡಳಿತದಲ್ಲಿ ರಾಜಕೋಟವು ಸುಧಾರಣೆಗಳ ತವರೂರಾಗಿದ್ದು ಬ್ರಿಟಿಷ್ ಪ್ರಾಂತಗಳಿಗಿಂತಲೂ ಪ್ರಗತಿ ಹೊಂದಿತು. ಠಾಕೋರ್ ಸಾಹೇಬರು ಪಾಶ್ಚಾತ್ಯ ಶಿಕ್ಷಣವನ್ನು ಪಡದುದರಿಂದ ಬ್ರಿಟಿಷ್ ಸರಕಾರದ ಕೈಗೊಂಬೆಗಳಾಗಿ ವರ್ತಿಸಿದರು. ಪ್ರಜೆಗಳಿಗಿದ್ದ ಅಲ್ಪ ಸ್ವಲ್ಪ ಹಕ್ಕು ಸ್ವಾತಂತ್ರ್ಯಗಳೂ ಮಾಯಗೊಂಡುವು. ಇದರಿಂದ ಸಂತಪ್ತರಾದ ಪ್ರಜೆಗಳು ತಮ್ಮ ಮುಖಂಡರಾದ ದೇವಬಾರ್‌ರವರ ನೇತೃತ್ವದಲ್ಲಿ ಭೀಕರ ಆಂದೋಲನವನ್ನೆಬ್ಬಿಸಿದ್ದರು. ಆ ಚಳವಳಿಗೆ ಈ ದೃಶ್ಯವು ಸಂಬಂಧಿಸಿದೆ. ಇಲ್ಲಿ ಗುಜರಾಥಿಯೇ ಪ್ರಧಾನ ಭಾಷೆ.)

ರಾಜಕೋಟ ಅರಮನೆಯ ಮುಂಭಾಗದಲ್ಲಿ
ದ್ವಾರಪಾಲಕರಿಬ್ಬರು—ಮಧ್ಯರಾತ್ರಿ—ಶುಕ್ಲಪಕ್ಷ

ಲಕಮ ಗೌಡ:—ನಾನು ಹೇಳಿದರೆ ನೀನು ನಂಬಲಾರೆಯಣ್ಣ. ನಾನು ನಿದ್ದೆಗಣ್ಣಿನಲ್ಲಿರುವೆನೆಂದು ತಿಳಿದೆಯಾ? ಹರಟೆ ಹೊಡೆಯುವೆನೆಂದು ನೀನು ನಂಬಿರಬೇಕು; ನಿನ್ನೆ ಇದೇ—ಇದೇ ಹೊತ್ತಿಗೆ ಆ ಪ್ರೇತವು ಕಾಣಿಸಿಕೊಂಡಿತು. ನನ್ನನ್ನೆ, ನನ್ನನ್ನೆ ಕಣ್ಣುರೆಪ್ಪೆ ಹೊಡೆಯದೆ ನೋಡಿತು. ಅಯ್ಯೋ, ಕೆಂಡದಂತಹ ಕಣ್ಣುಗಳು! ಹುಬ್ಬು ಗಂಟಿಕ್ಕಿದ ಮೋರೆ! ಕೆದರಿದ ಕೂದಲು! ಇನ್ನಾರಾದರೂ ಆಗುತಿದ್ದರೆ ಬೆದರಿ, ಅಲ್ಲೆ ಮೂರ್ಛೆ ಹೋಗುತಿದ್ದರು. ನಾನೇನು ಹೆದರಲಿಲ್ಲ. ಆದರೆ ಆ ವ್ಯಕ್ತಿಯನ್ನು ಕಂಡೊಡನೆ ರೋಮಾಂಚನವಾಯಿತು.

ಫಕೀರ:—ಹೇಗಿತ್ತು ಆ ವ್ಯಕ್ತಿ?

ಲಖು:— ಹಣ್ಣು ಹಣ್ಣಾದ ಸುಕ್ಕುಗಟ್ಟಿದ ಮೋರೆ. ರಾಜವೇಷ!

ಫಕೀರ:—ರಾಜವೇಷವನ್ನು ಧರಿಸಿದ್ದಿತೇ?

ಲಕಮ:—ಹೌದು! ದೊರೆಯ ಉಡಿಗೆ ತೊಡಿಗೆ. ಅಷ್ಟೇ ಅಲ್ಲ. ಒರೆಯಿಂದ ಹಿರಿದ ಕತ್ತಿ!

ಫಕೀರ:—ಮುಂದೇನಾಯಿತು?

ಲಖಮ:—ನನ್ನ ಕಡೆ ಬಂದಿತು: ನಾನು ಬಹು ಕಳವಳಗೊಂಡೆ.

ಫಕೀರ:—ಅಬ್ಬಬ್ಬ ಅದರ ಧೈರ್ಯವೇ!. ನೀನು ಗುಂಡು ಹಾರಿಸಿದೆಯೇನು?

ಲಖಮ:—ಹುಂ! ಗುಂಡು ಹಾರಿಸೋಣವೆಂದು ಒಮ್ಮೆ ಯೋಚಿಸಿದೆ: ಆದರೆ ರಾಜವೇಷ ಭೂಷಣ ಕಂಡು ಹಿಂಜರಿದೆ: ಮುಂದೆ ನೋಡೋಣವೆಂದು ಧೈರ್ಯ ತಂದುಕೊಂಡೆ.

ಫಕೀರ:—ನಿನ್ನೊಡನೆ ಮಾಡಿನಾಡಿತೇ?

ಲಖಮ:—ಮತ್ತೆ? ಮಾಡಿನಾಡಿತು. ಸಿಡಿಲಿನಂತಹ ನುಡಿಗಳು.

ಫಕೀರ:—ಅದರ ಭಾಷೆಯು ನಿನಗರ್ಥವಾಯಿತೇ?

ಲಖಮ:—ನಮ್ಮ ಭಾಷೆಯನ್ನೆ ಆಡಿತು. "ನನಗೆ ಅರಮನೆಯೊಳಗೆ ಪ್ರವೇಶಿಸ ಬೇಕಾಗಿದೆ. ಹೆಬ್ಬಾಗಿಲನ್ನು ತೆರೆ" ಎಂದು ಅಪ್ಪಣೆ ವಿಧಿಸಿತು. ಕ್ರೂರ ದೃಷ್ಟಿ; ಕೈಯಲ್ಲಿ ಕತ್ತಿ; ಅದೂ ಮಧ್ಯ ರಾತ್ರಿ! ಏನು ಗಂಡಾಂತರ ಒದಗುವುದೋ ಏನೋ ಎಂದು ನಾನು ಗಾಬರಿಗೊಂಡು, "ಇಲ್ಲ ಬಿಡಲೊಲ್ಲೆ" ಎಂದೆ.

ಫಕೀರ:—ಬಲಾತ್ಕಾರ ನಡೆಸಿತೇ?

ಲಖಮ:—ಛೀ, ಛೀ! ಪ್ರೇತಕ್ಕಾದರೂ ಅಂಜಿಕೆಯಿಲ್ಲವೇ? ನಾವು ಹೆದರಿದರೆ ಅದರ ದರ್ಪ. ಆದರೆ ವಿಚಿತ್ರ ನುಡಿಗಳನ್ನಾಡಿತು: "ಏನು? ನಿನ್ನ ದೊರೆಗೆ ಅರಮನೆಯೊಳಗೆ ತೆರಳಲು ಅಧಿಕಾರವಿಲ್ಲವೇ ಅಪ್ಪಣೆಯಿಲ್ಲವೇ? ಅಯ್ಯೋ?" ಎಂದು ಬಲವಾದ ನಿಟ್ಟುಸಿರಿಟ್ಟಿತು.

ಫಕೀರ:—ದೊರೆ?

ಲಖಮ:—ಹೌದು, ನಾನು ನಿಮ್ಮ ದೊರೆ. ರಾಜಕೋಟದ ದೊರೆಯೆಂದಿತು. ಠಾಕೋರ್ ಸಾಹೇಬರು ನನ್ನನ್ನು ಪರೀಕ್ಷೆ ನಡೆಸಲು ಈ ರೀತಿ "ಫಾರ್ಸು" ಮಾಡುತ್ತಿರುವರೋ ಏನೋ ಎಂದು ಮೊದಲು ನಾನು ದಿಗ್ಭ್ರಾಂತನಾದೆ, ಎವೆಯಿಕ್ಕದೆ ನೋಡಿದೆ. ಅಲ್ಲ ನಮ್ಮ ದೊರೆಯಲ್ಲ. ಮತ್ತೆ ನೋಡು ನೋಡುತ್ತಿದ್ದಂತೆ ಆ ಪ್ರೇತ ಮಾಯವಾಯಿತು.

ಫಕೀರ:—ಏನೋ ಅಪ್ಪಾ, ನನಗೊಂದೂ ಅರ್ಥವಾಗಲೊಲ್ಲದು!

ಲಖಮ:—ಹುಂ, ನೀನೆ ನೋಡುತಿದ್ದರೆ ಹೇಳುತಿದ್ದೆ; ನಂಬುತಿದ್ದೆ. ನಿನ್ನೆ ಇದೇ ಹೊತ್ತಿನಲ್ಲಿ ಕಾಣಿಸಿಕೊಂಡಿತು. ನೋಡು ಆ ಮರದ ಬುಡದಿಂದ ಎದ್ದು ಬಂದಂತೆ ತೋರಿತು. [ಇಬ್ಬರೂ ಆ ಮರದತ್ತ ನೋಡುವರು]

ಲಖಮ:—ಅದೋ! ಅಲ್ಲಿ, ಅಯ್ಯೋ! ನಾನು ನಿಲ್ಲಲಾರೆ. [ಒಳಗೆ ಓಡುವನು]

ಫಕೀರ:—ನನ್ನ ದೊರೆ! ನನ್ನ ದೊರೆಗೆ ಜಯವಾಗಲಿ!

ರಾಜಾಲಖಾಜಿ:—[ನಿಷ್ಠುರ ಮೋರೆಯಿಂದ ಸುತ್ತಲೂ ನೋಡುವನು]

ಫಕೀರ:—ತಂದೆ, ಇಂದೇಕಿಷ್ಟು ಕೋಪ?

ರಾಜಾ:—ನನ್ನ ಗುರುತು ಹಿಡಿದೆಯಾ ಮಗನೇ?

ಫಕೀರ:—ತಾಯಿಯ ಗುರುತು ಕರುವಿಗೆ ಸಿಗದೇ ದೊರೆಯೇ?

ರಾಜಾ:—ಬೆದರಿದೆಯಾ ಗೆಳೆಯಾ?

ಫಕೀರ:—ಇಲ್ಲ ತಂದೆ! ಆದರೆ ನಿಮ್ಮ ಕೈಯಲ್ಲಿರುವ ಈ ಕತ್ತಿಯನ್ನು ಕಂಡು ಕಳವಳಗೊಂಡಿರುವೆ. ನಿಮ್ಮ ಸಿಟ್ಟಿನ ಮೋರೆ ದಿಟ್ಟಿಸಿ, ದಿಗಿಲುಗೊಂಡಿರುವೆ.

ರಾಜಾ:— ಹೌದು. ಸಿಟ್ಟು ಬಂದಿದೆ ನನಗೆ. 8 ದಿನ ನಾನು ಮನೆಯಲ್ಲಿ ಇಲ್ಲದೆ ಹೋದರೆ ಎಷ್ಟು ಗೊಂದಲವೇಳುತ್ತಿದೆ. ಇಲ್ಲ. ಇದನ್ನು ಸಹಿಸಲಾರೆ.

ಫಕೀರ:—(ಕಂಬನಿ ಸುರಿಸುವನು)

ರಾಜಾ:—ಅಲ್ಲಿ ಕೆಂಪು ಕೆಂಪಾಗಿ ಕಾಣಿಸುತ್ತಿರುವುದೇನು?

ಫಕೀರ:—ಅರಮನೆಯಲ್ಲಿ ಬೆಳಗುತ್ತಿರುವ ದೀಪಗಳ ಮಾಲೆ ತಂದೆ.

ರಾಜ:—ವಿದ್ಯುದ್ದೀಪಗಳು? ದೀಪಗಳಲ್ಲ ಕೆನ್ನೀರು. ನನ್ನ ಮಕ್ಕಳ ರಕುತ. ನನ್ನ ಮಕ್ಕಳ ರಕುತವು ಹರಿಯುತ್ತಿರುವುದನ್ನು ಈ ಕಣ್ಣಿನಿಂದ ನೋಡಬೇಕಾಯಿತು ನಾನು. ಇದೆಲ್ಲವನ್ನು ನೋಡಿ ನನ್ನ ಹೃದಯ ಕುದಿಯುತ್ತಿದೆ. ನನಗೊಂದಿಷ್ಟು ದೊರಕಿದ ಶಾಂತಿಯೂ ದೂರಾಯಿತು. ಮಲಗಿದರೆ ನಿದ್ದೆ ಹಿಡಿಯದು. ಹುಚ್ಚನಂತೆ ಅಲೆದಾಡಿದೆ. ಅಲೆದಾಡುತ್ತಾ, ಅಲೆದಾಡುತ್ತಾ ಮೊನ್ನೆ ನನ್ನೂರ ಹಳ್ಳಿಗೆ ತೆರಳಿದ್ದೆ. ಆ ಪ್ರಕೃತಿ ಸೌಂದರ್ಯ, ಮಧುಮಾಸ, ಮಂದಮಾರುತ, ತಿಳಿ ಕೊಳದಿಂದ ಶಾಂತಿ ದೊರಕಬಹುದೆಂದು ತೆರಳಿದ್ದೆ. ಅಯ್ಯೋ ಅಲ್ಲಿ ನೋಡುವುದೇನನ್ನು ಮಗನೇ? ನನ್ನ ಮಗಳು ಒಂದೆಡೆ ರೋಧಿಸುತಿದ್ದಳು. ಅಯ್ಯೋ ನನ್ನ ರಾಜ್ಯದಲ್ಲಿ ಅಳುವವರುಂಟೇ ಎಂದು ನಾನು ದುಃಖಗೊಂಡೆ! ಏನಾಯಿತು? ಹೇಳು ಚಿನ್ನ! ಎಂದು ಮಗಳನ್ನು ವಿಚಾರಿಸಿದೆ. ಖೂನೀ ಮಾಡಿದನೇ ಎಂದು ಕೇಳಿದೆ. ಇಲ್ಲವೆಂದಳು. ದರೋಡೆ ಮಾಡಿದನೇ? ಎಂದು ಪ್ರಶ್ನಿಸಿದೆ. ತಲೆಯಲ್ಲಾಡಿಸಿದಳು. ಮತ್ತೆ ಎಲ್ಲವನ್ನೂ ವಿವರಿಸಿದಳು. ನನ್ನ ಆಗಮನವನ್ನು ಕೇಳಿ ಒಕ್ಕಲಿಗರೆಲ್ಲ ಓಡಿಬಂದರು: "ತಂದೆ, ನೀವು ನಮ್ಮನ್ನು ಬಿಟ್ಟು ಹೋದಿರಿ. ತಾಯಿಯನ್ನಗಲಿ ಕರು ಇರಲಾರದು. ನಮ್ಮನ್ನು ಕರೆದೊಯ್ಯಿರಿ. ನಮಗೀ ಬಾಳು ಬೇಡಾಗಿದೆ ಅಪ್ಪಾ" ಎಂದು ಮೊರೆಯಿಟ್ಟರು. ಅಯ್ಯೋ, ಆ ದೃಶ್ಯವನ್ನು ಕಂಡು ನನಗೆ ಸಿಡಿಲು ಬಡಿದಂತಾಯಿತು. ನನ್ನ ಮಕ್ಕಳ ದೇಹದ ಎಲುಬು ಗೂಡುಗಳೆಲ್ಲವೂ ಹೊರಗೆ ಕಾಣಿಸುತ್ತಿತ್ತು. ಇದನ್ನು ಹೇಗೆ ಸಹಿಸಲಿ ಮಗನೇ?

ಫಕೀರ:—(ಬಿಕ್ಕಿ ಬಿಕ್ಕಿ ಅಳುವನು)

ರಾಜಾ:—ಇಲ್ಲ. ಎಂದೆಂದೂ ಸೈರಿಸಲಾರೆ. ನನ್ನ ಮಕ್ಕಳ ಸುಖ ಸಂರಕ್ಷಣೆಯೇ ನನ್ನ ಸುಖ. ನಿಮಗಾಗಿ, ನಿಮ್ಮ ಸೇವೆಗಾಗಿ ಈ ಬಾಳನ್ನು ಮುಡಿಪಾಗಿ ಇಡುವೆ.

(ದೇವಬಾರ್ ರಾತ್ರಿ ಮಲಗಿರುವರು. ಕನಸಿನ ರಾಜ್ಯದಲ್ಲಿ)

ದೇವಬಾರ್:—ರಾಜನಿಗೆ ಜಯವಾಗಲಿ. ತಂದೆ ಚಿತ್ತೈಸಿರಿ. ಬಡವನ ಮನೆಗೆ ಪರಮಾತ್ಮನು ಬಂದಂತಾಯಿತು.

ರಾ. ಲಖಾಜಿ:—(ನಿಷ್ಟುರತೆಯಿಂದ, ಅದೇ ಕಠಿನತೆಯಿಂದ ದಿಟ್ಟಿಸುವನು.

ದೇವ:—ಈ ಆಸನವನ್ನು ಸ್ವೀಕರಿಸಿರಿ ದೊರೆಯೇ!

ರಾಜಾ:—ಆಸನ? ಈ ಮುಳ್ಳಿನ ಆಸನವನ್ನು ನಾನೊಲ್ಲೆ. ಈ ರಕುತಮಯ ಆಸನವನ್ನು ಸ್ಪರ್ಶಿಸಲಾರೆ. ನನಗೇಕೆ ಹಂಸತೂಲಿಕಾ ತಲ್ಪ? ನಾನಾರು? ನಿಮ್ಮಂತೆ ಸಾಮಾನ್ಯ ಮನುಷ್ಯನಲ್ಲವೇ? ನೀವು ದುಡಿದು ಆರ್ಜಿಸಿದ ಧನ ಸುರಿಸಿ

ರಕುತವನ್ನು ಗಳಿಸಿದ ಹೊನ್ನು. ಅದನ್ನು ಕಿತ್ತುಕೊಂಡು ರಚಿಸಿದ ಈ ಸಿಂಹಾಸನ! ನಾನೊಲ್ಲೆ ದೇವಬಾರ್!

ದೇವ:—ತಂದೆ! ಏನಿದು? ತುಸು ಶಾಂತರಾಗಿರಿ!

ರಾಜಾ:—ಸಮಾಧಾನ? ತೃಪ್ತಿ? ಅಯ್ಯಯ್ಯೊ ಅವನ್ನು ಅನುಭವಿಸಲು ನನಗಿಲ್ಲ ಭಾಗ್ಯ. ನಾನು ದುರ್ದೈವಿ. ಹಾಗಿದ್ದರೆ ಈ ಮಧ್ಯ ರಾತ್ರಿ ಸಂಚರಿಸುತ್ತಿರುವೆನೇ ಮಗನೇ?

ದೇವ:—ಏನಾಯಿತು ತಂದೆ ನಿಮಗೆ? ಹೊರಗೆ ಕಾಲಿಡಲು ಮೈ ಜುಮ್ಮೆನಿಸುವುದು. ಚಳಿಗಾಳಿ ರಕುತವನ್ನೆ ಹೀರಿಬಿಡುವುದು. ನಾನೇ ನಿಮ್ಮಲ್ಲಿ ಬಳುವವನಿದ್ದೆ. ಪೋಲೀಸರು ಕಳುಹಿಸಲು ಒಮ್ಮೆ ಯೋಚಿಸಿದರು. ಆದರೆ ಮತ್ತೇಕೋ ಅಧಿಕಾರಿಗಳು ಮನಸ್ಸು ಬದಲಾಯಿಸಿದರು. ನಿದ್ದೆ ಮಾಡದೆ ಈ ರಾತ್ರಿ ಯಾಕಾಗಿ ಬಂದಿರಿ ತಂದೆ?

ರಾಜಾ:—ಗಾಢ ನಿದ್ದೆಯಲ್ಲಿದ್ದೆ ಮಗನೆ ನಾನು. ಅಮಿತಾನಂದವೆಂಬ ಮೃದು ತಲ್ಪದಲ್ಲಿ ಶೇಷಶಾಯಿಯಂತೆ ಮಲಗಿದ್ದೆ. ಶೇಷಶಾಯಿಯ ಮೇಲೆ ಸಾಗರದ ಅಲೆಗಳು ಒಡೆದು ಅವನ ಉಡಿಗೆ ತೊಡಿಗೆಗಳು ಒದ್ದೆಯಾದಂತೆ ನನ್ನ ರಾಜ ವೇಷವೆಲ್ಲವೂ ರಕುತದಿಂದ ತೊಯ್ದಿತು. ನಿದ್ದೆ ಚದರಿತು. ತಲೆ ಕೆಟ್ಟಿತು. ರಕುತ ನದಿಯ ಮೂಲವನ್ನು ಹುಡುಕುತ್ತ ಬಂದೆ. ರಕುತ ನದಿಯ ಉಗಮ ಸ್ಥಾನ ಇಲ್ಲಿ! ನನ್ನ ರಾಜ್ಯದಲ್ಲಿ! ಅಯ್ಯಯ್ಯೋ! ದೇವಬಾರ್ ಈ ವೇದನೆಯನ್ನು ಹೇಗೆ ಸಹಿಸುವೆ? ನನ್ನ ಮಕ್ಕಳು ಅಯ್ಯೋ ಎಂದು ರೋಧಿಸುತ್ತಿರುವುದನ್ನು ಕಂಡೆ. ನನ್ನ ಮುದ್ದು ಪುತ್ರಿಯರ ತಲೆಯೊಡೆದು ಅವರು ನರಳುತ್ತ ಹೊರಳುತ್ತಿರುವುದನ್ನು ನೋಡಿದೆ. ನನ್ನ ಪ್ರಾಣ, ನನ್ನ ಜೀವನಾಧಾರ, ನನ್ನ ನಚ್ಚಿನ ಮಕ್ಕಳು ಸಂಕಟ ಸಮುದ್ರದಲ್ಲಿ ಮುಳುಗೆದ್ದು ತೇಲುತಿದ್ದಾಗ ನಾನು ಆನಂದ ಕಡಲಲ್ಲಿ ವಿಹರಿಸಬೇಕೇ? ನಾನು ಮುದ್ದು ಮಮತೆಯಿಂದ ಸಾಕಿ ಸಂರಕ್ಷಿಸಿದ ಚೆಲು ಕುವರಿಯರು ಯಮಯಾತನೆಗೊಳಗಾದ ಸ್ವರ್ಗ ಸುಖವು ನನಗೆ ಬೇಕೇ? ದೇವಬಾರ್, ನನ್ನ ವಿರಹದಲ್ಲಿ ಏನೇನಾಯಿತು?

ದೇವಬಾರ್:—(ಕಣ್ಣೀರು ಸುರಿಸುವನು.)

ರಾಜಾ:—ಹೇಳು, ದೇವಬಾರ್. ನನ್ನೆಂಟು ದಿನದ ವಿರಹದಲ್ಲಿ ಏನೇನೆಲ್ಲಗೊಂದಲ ನಡೆಯಿತು!

ದೇವಬಾರ್:—ಏನೆಂದು ಹೇಳಲಿ ದೊರೆಯೇ! ನೀವು ಕಟ್ಟಿದ ಸುಧಾರಣೆಯ ಕಟ್ಟಡವನ್ನು ಕಿತ್ತೊಗೆಯಲಾಯಿತು. ಪ್ರಜೆಗಳಿಗೆ ಕಾರಭಾರದಿಂದ ಅನ್ನ ಕಣ್ಣೀರಾಯಿತು. ಸುಂಕದ ಹೊರೆ ಬೆಳೆದು ಕೈಗಾರಿಕೆಗಳ ಅಧಃಪತನವಾಯಿತು. ಬಡತನ, ನಿರುದ್ಯೋಗ, ರೋಗರುಜೆ, ನಿರಕ್ಷರತೆ, ಅಜ್ಞಾನ ಇವು ಹೆಚ್ಚಾಯಿತು. ಕುದುರೆ ಮನಬಂದಂತೆ ತಿರುಗಾಡಿತು. ನಡೆನುಡಿಗೆ ತಡೆ. ತಂದೆ, ನಿಮ್ಮ ಮಕ್ಕಳಿಂದು ಗುಲಾಮರಿಗಿಂತಲೂ ಕಡೆಯಾಗಿರುವೆವು.

ರಾಜಾ:—ಕಡಿವಾಣ ಹಾಕಿದ್ದೆನಲ್ಲಾ ಮಗನೇ!

ದೇವಬಾರ್:—ನಿಮ್ಮೊಂದಿಗೆ ಬರಲಿಲ್ಲವೇ ದೊರೆಯೇ?

ರಾಜಾ!—ಹಾಳಾಯಿತು! ಎಲ್ಲವೂ ಮಣ್ಣಾಯಿತು!

ದೇವಬಾರ್:—ಅದನ್ನು ಏನೆಂದು ಹೇಳಲಿ ಅರಸೇ. ಹೊಲವನ್ನು ಮನಬಂದಂತೆ ಮೇವ ಕುದುರೆಗೆ ಕಡಿವಾಣ ಹಾಕೋಣವೆಂದರೆ ಬಿಳಿನಾಯಿಗಳು ಕಚ್ಚಿ ಹರಿದೊಗೆಯಲು ಬರುವವು. ಕುದುರೆಯನ್ನೋಡಿಸಿ ಪೈರು ಸಂರಕ್ಷಿಸದಿದ್ದರೆ ಇತ್ತ ಜಮೀನುದಾರರ ಒದೆತ ತಿನ್ನಬೇಕು! ನಮಗೆ ಬಾಳುಬೇಡಾಗಿದೆ ತಂದೆ. ನಿಮ್ಮ ಮಕ್ಕಳೊಂದು ದಿನ ಸುಖಸಂಪತ್ತು, ಕೀರ್ತಿ ಗೌರವದ ಉಪ್ಪರಿಗೆಯಲ್ಲಿ ಮೆರೆಯುತ್ತಿದ್ದವು. ಈಗ, ಅವೆಲ್ಲವೂ ಸ್ವಪ್ನ ಸೀಮೆಯಲ್ಲಿ ಅನುಭವಿಸಿದಂತೆ ಕಾಣಿಸುವುದು.

ರಾಜಾ:—(ಕಂಬನಿ ಸುರಿಸುತ್ತಾ ಮೋರೆಯನ್ನು ಒಂದೆಡೆ ತಿರುಗಿಸುವನು ದೂರದಲ್ಲಿ ಅವನಿಗೇನೋ ಕಾಣಿಸುವುದು.) ಅಲ್ಲೇನು? ಅಲ್ಲೇನು? ಕೂಗು!

ದೇವಬಾರ್:—(ಅತ್ತ ದೃಷ್ಟಿಪಸರಿಸಿ) ಸತ್ಯಾಗ್ರಹಿಗಳ ಮೇಲೆ ಕುದುರೆ ಸವಾರರನ್ನು ಓಡಿಸುತ್ತಿದ್ದಾರೆ.

ರಾಜಾ:—ಆಂ. ನನ್ನ ಮಗನೆಲ್ಲಿ ದೇವಬಾರ್?

ದೇವಬಾರ್:—ದೊರೆಯೇ! ಅಲ್ಲಿ ನೋಡಿ. ಆ ಅರಮನೆಯ ಕಿಟಕಿಯಿಂದ ಹಣಿಕಿ ನೋಡುತ್ತಿರುವರು.

ರಾಜಾ:—ನೋಡುತ್ತಿರುವನೇ? ಸ್ತ್ರೀಪುರುಷರ ಮೇಲೆ ದೌಡು ನಡೆಸುತ್ತಿರುವುದನ್ನು ನೋಡುತ್ತಿರುವನೇ ನನ್ನ ಕುಮಾರ? ನನ್ನ ಮಗ ಅವನಲ್ಲ ದೇವಬಾರ್! ನೀವು ಬೇರೆ ಯಾರನ್ನಾದರೂ ನೋಡಿ ನನ್ನ ಮಗನೆಂದು ತಪ್ಪು ನುಡಿದಿರಬಹುದು.

ದೇವಬಾರ್:—(ಮೋರೆ ತಗ್ಗಿಸಿ ಬಿಸುಸುಯ್ಯುವನು.)

ರಾಜಾ:—(ಪುನಃ ದಿಟ್ಟಿಸಿ) ಹೌದು! ನನ್ನ ಮಗ! ನನ್ನ ಮಗನು ಅವನೇ! ಏನಿದು ಅನರ್ಥ! ನಾನು ತಿಳಿಯಲೊಲ್ಲೆ. ಅವನು ನಿಂತಿದ್ದ ಕಟ್ಟಡವು ಅಲುಗುತ್ತಿದೆ. ನೀವು ದಂಗೆಯೆದ್ದಿರೇ ದೇವಬಾರ್?

ದೇವಬಾರ್:—ನಾವು ಮಾಡಿದ ತಪ್ಪನ್ನು ಮನ್ನಿಸುವುದು ದೊರೆಯೇ! ನಮ್ಮ ಕೈಯೊಳಗೆ ಚಿನ್ನದ ಹಣ್ಣನ್ನು ಕೊಟ್ಟಿರಿ. ನಾವು ಅದನ್ನು ತಿನ್ನಲೆತ್ನಿಸಿದಾಗ ಕಿತ್ತುಕೊಂಡರು. ನಮಗೆ ಸಲ್ಲಬೇಕಾದ ಹಣ್ಣು. ನಾವು 365 ದಿವಸ ಸಾವಿರ ಹನಿ ಬೆವರು ಸುರಿಸಿ, ಸಾವಿರ ಹನಿ ರಕುತ ಸುರಿಸಿ ನೀರೆರೆದು ಬೆಳೆಸಿದ ಮಾವಿನ ಫಲ. ಕೊಡಿರಿ ನಮ್ಮದು ಎಂದು ಬೇಡಿದೆವು. ಆಗ್ರಹ ಹಿಡಿದೆವು. ನಮಗಾಗಿ ಅದನ್ನು ತಂದೆ ಕೊಟ್ಟಿಹರು ಎಂದು ಪ್ರಾರ್ಥಿಸಿದೆವು. ಕೊಡದಿದ್ದರೆ ನಾವು ಸಾಯುವೆವು ಎಂದು ಮೌನವ್ರತ ತಾಳಿ ಒಂದೆಡೆ ಸುಮ್ಮನೆ ಕುಳಿತೆವು. ಇದು ದಂಗೆಯೇ ತಂದೆ? ಹೌದು ದಂಗೆ! ನಾವು ದ್ವೇಷಿಸುವುದಿಲ್ಲ; ನಿಂದಿಸುವುದಿಲ್ಲ; ಹಾನಿಮಾಡಲು ಕೂಡ ಯೋಚಿಸಲಾರೆವು. ಆದರೆ ಕೊಡದಿದ್ದರೆ ಪಡೆಯುವೆವು. ನಿಮ್ಮಲ್ಲಿಷ್ಟು ಪ್ರೀತಿ, ಆದರ, ವಿಶ್ವಾಸ, ಮಮತೆ, ಭಕ್ತಿ ಇದೆಯೆಂಬುದನ್ನೂ ಬಲ್ಲಿರಿ ದೊರೆಯೇ! ಅದಕ್ಕಿಂತ ಎಳ್ಳಷ್ಟು ಕಡಿಮೆಯಾಗಿಲ್ಲ ನಿಮ್ಮ ಮಗನಲ್ಲಿ! ನಾವಿದ್ದರೆ ನಮಗೆ ದೊರೆ. ಹಸಿವೆ ಹಸಿವೆಯೆಂದು ಜನ ಬ್ಯಾ ಬ್ಯಾ ಬಿಟ್ಟಾಗ ಮತ್ತೊಬ್ಬ ಹಬ್ಬದೂಟವನ್ನು ಮಾಡಿದರೆ ಸಹಿಸುವರೇ ತಂದೆ? ನೀರು ನೀರೆಂದು ಜನಸಾಯುತ್ತಿದ್ದಾಗ ಅಲ್ಲೊಬ್ಬ ಹಾಲನ್ನು ಕುಡಿವರೇ ದೊರೆಯೇ?

ರಾಜಾ:—ಈಗ ಫಲಬಿಟ್ಟೀತು! ಈಗ ಹಣ್ಣು ಕೊಟ್ಟೀತು ಎಂದು ಸಾಕಿ ಸಂರಕ್ಷಿಸಿದ ಮರ ಕೊನೆಗೆ ಕಾಸರಕನ ಮರವಾಯಿತೇ?

ದೇವಬಾರ್:—ಇಲ್ಲ ತಂದೆ ಮಾವಿನ ಮರವೇ! ನೀವು ಕಾಸರಕನ ಮರವನ್ನಾದರೂ ಬೆಳೆಯಿಸುವಿರೇ? ಎಂದೆಂದಿಗೂ ಇಲ್ಲ. ಆದರೆ ಕಾಸರಕನ ಹಣ್ಣನ್ನು ಕಸಿಮಾಡಿ ಕೊಟ್ಟಿರುವರು.

ರಾಜಾ:—ದುರ್ಬೋಧನೆಗೆ ಬಲಿಯಾದನೆ ನನ್ನ ಕುಮಾರ?

ದೇವಬಾರ್:—ಹೇಳಿದರೆ ನೀವು ನಂಬಲಾರಿರಿ ದೊರೆಯೇ. ನಿಮಗೆ ಮಗನ ಮೇಲಿನ ಮೋಹ ಹೆಚ್ಚು. ನಾನು ಏನಾದರೆಂದರೆ ರೊಚ್ಚಿಗೆದ್ದೀರಿ.

ರಾಜಾ:—ಇಲ್ಲ. ನಿಮ್ಮ ಮಾತುಗಳನ್ನು ನಂಬಲಾರದ ಮೂರ್ಖನು ನಾನಲ್ಲ. ಆದರೆ ಹೀಗೇಕಾಯಿತು ದೇವಬಾರ್. ನೀವೂ ಬುದ್ಧಿಹೇಳಲಿಲ್ಲವೇ?

ದೇವಬಾರ್:—(ಕಂಬನಿಯನ್ನೊರಸಿಕೊಂಡು) ಬೇಕಾದಂತೆ ಹೇಳಿದೆ ದೊರೆಯೇ! ಪ್ರಜೆಗಳನ್ನು ಮಕ್ಕಳಂತೆ ಪಾಲಿಸಬೇಕು ಎಂದು ಪ್ರಾರ್ಥಿಸಿದೆ. ಅವರು ಹಸಿದ ಜನವೆಂದೆ. ಪ್ರಜೆಗಳು ರಾಜನ ವಿರುದ್ಧ ಕತ್ತಿಕಟ್ಟಿದ ದಂಗೆಖೋರರಾನೆಂದರು. ಅನ್ನಲಿ! ಅನ್ನಲಿ! ಅದಕ್ಕಿಂತಲೂ ಕಠಿಣೋಕ್ತಿಗಳನ್ನಾಡಲಿ. ಎಷ್ಟೆಂದರೂ ನನ್ನ ದೊರೆ. ನೀವೂ ಬುದ್ಧಿ ಹೇಳಲಿಲ್ಲವೇ ಎಂದು ತಂದೆ ನನ್ನನ್ನು ಪ್ರಶ್ನಿಸಿಯಾರು ಎಂದೂ ಹೇಳಿಬಿಟ್ಟೆ. ಎಲ್ಲವೂ ನಿಷ್ಫಲವಾಯಿತು. ಅವರನ್ನು ದೂರಿ ಫಲವೇನು? ಇದು ದುರ್ಬೋಧನೆಯ ಫಲ. ನಿಮ್ಮ ರಾಜ್ಯ ಒಂದು ಒಳಸಂಚಿನ ವ್ಯೂಹ. ನೋಡಿ, ಅಲ್ಲಿಂದ ಸಿಮ್ಲಾದ ವರೆಗೆ ತಂತಿ ಕಂಬಗಳಿವೆ. ಸಿಮ್ಲಾದಿಂದ ಆ ಬಂಗ್ಲೆಯ ವರೆಗೂ ಟೆಲಿಫೋನ್ ಇದೆ.

ರಾಜಾ:—ನನ್ನ ರಾಜ್ಯದಲ್ಲಿ ಲಕ್ಷ್ಮಿಯು ನಲಿದಾಡುವಂತೆ ಮಾಡಿದೆ. ಸರಸ್ವತಿಯು ನೆಲಸಲು ಯೋಗ್ಯ ಸುಂದರ ಉದ್ಯಾನವನವನ್ನು ರಚಿಸಿದೆ. ಅವಳನ್ನು ಇದಿರುಗೊಳ್ಳಲು ಸುಧಾರಣೆಯ ವೃಕ್ಷಗಳನ್ನು ಆ ಉದ್ಯಾನವನದಲ್ಲಿ ಬೆಳೆಸಿದೆ. ದೇವಿಗೆ ಕುಡಿಯಲು ಜ್ಞಾನನಿಧಿಗಳೆಂಬ ಹಲವು ಸರೋವರಗಳನ್ನು ಕೊರೆಸಿದೆ. ಹೆಚ್ಚೇನು ಹೇಳಲಿ ದೇವಬಾರ್, ಮಣ್ಣನ್ನು ಹೊನ್ನು ಮಾಡಿದೆ.

ದೇವ:—ಹೌದು ತಂದೆ. ಪ್ರಜೆಗಳು ಖನಿಯಿಂದ ಹೊನ್ನೆತ್ತಿದರು. ನಿಜ. ಎತ್ತಿದೆವೆಂಬ ಸಂತೋಷ ಮಾತ್ರ ಅವರಿಗೆ. ಅವರು ಭೋಗಿಸಲಿಲ್ಲ. ಮತ್ತೆ ನೋಡಲೇ ಇಲ್ಲ. ಹೊನ್ನು ಹೆರವರ ಸೊತ್ತಾಯಿತು. ಪ್ರಜೆಗಳಿಗೆ ಖನಿಯಲ್ಲಿ ಉಳಿಯುವುದು ಮತ್ತೆ ಮಣ್ಣೆ. ನಮಗಿಂದು ಎಲ್ಲೆಲ್ಲು ಕಾಣಿಸುತ್ತಿರುವುದು ಬರೇ ಮಣ್ಣು ದೊರೆಯೇ !

ರಾಜಾ:—[ಬಿಕ್ಕಿ ಬಿಕ್ಕಿ ಅಳುವನು] ನಾನು ಹೋದರೆ ನನ್ನ ಮಗನು ಉಲಕ್ಷಿಸ ಬಹುದೇ ಮಿತ್ರ?

ದೇವಬಾರ್:—ತಂದೆಯಲ್ಲವೇ? ಅದರದಿಂದ ಸ್ವೀಕರಿಸಲೂ ಬಹುದು. ಆದರೆ ನೀವು ಈ ದೇಶೀಯ ವೇಷಭೂಷಣದಲ್ಲಿ ಹೋದರೆ ಒಳಗೆ ಪ್ರವೇಶ ದೊರೆವುದೇ ಕಷ್ಟ. ನೀವು ಮಾತೃಭಾಷೆಯನ್ನಾಡಿದರೆ ನಿಮ್ಮ ಮಗನಿಗೆ ಅರ್ಥವಾಗಲೊಲ್ಲದು. ಅವರ ಆಚಾರ ಪದ್ಧತಿಯಂತೆ ವರ್ತಿಸದಿದ್ದರೆ ಅಯ್ಯೋ, ನಾನೇಕೆ ಬಂದೆ ಎಂದು ಮತ್ತೆ ನೀವು ಚಿಂತಿಸಬಹುದು.

ರಾಜಾ:—ದೇವಬಾರ್, ನನ್ನೆದೆಯಲ್ಲೇಕೋ ಸಂಕಟವುಂಟಾಗಿದೆ. ತಲೆ ತಿರುಗುತ್ತಿದೆ. ನಿಲ್ಲಲಾರೆ ಇದೋ.

ದೇವ:—ಡಾಕ್ಟರ್, ಡಾಕ್ಟರ್ ಹಲೋ.

(ದೇವಬಾರ್ ಹಾಸಿಗೆಯಿಂದ ಹಾರಿ ಬೀಳುವರು. ಅಷ್ಟರಲ್ಲಿ ಅವರ ಧರ್ಮ ಪತ್ನಿ ಓಡಿ ಬರುವರು.)

ಪ್ರಾಂತಿಕ ಸರಕಾರಗಳ ಧುರೀಣರಲ್ಲಿ
ಅತಿ ಚತುರರು.
ಮದ್ಯಪಾನ ನಿಷೇಧಕರಲ್ಲಿ ಅಗ್ರಗಣ್ಯರು.
ಸತತ ಖಾದಿಧಾರಿಗಳು.
ಭಾಷಣಗಾರರಲ್ಲಿ ಅತಿ ನಿಪುಣರು.

ಪ್ರಧಾನ ಸಚಿವರಾದ "ಸಿ. ಆರ್." ಅವರು



ನಾಮದಾರ ಶ್ರೀ! ಸಿ. ರಾಜಗೋಪಾಲಾಚಾರ್ಯರು

ಮದ್ರಾಸು ಸರಕಾರದ ಪ್ರಧಾನ ಸಚಿವರಾದ ನಾಮದಾರ್ ಸಿ. ರಾಜಗೋಪಾಲಾಚಾರ್ಯರು ಇಂದಿನ ಪ್ರಾಂತಿಕ ಸರಕಾರಗಳ ಧುರೀಣರಲ್ಲಿ ಅತಿಚತುರರೂ ಜನಪ್ರಿಯರೂ ಆಗಿರುವರು. ಅವರು ಪ್ರಧಾನ ಮಂತ್ರಿಗಳಾದಂದಿನಿಂದ ಪ್ರಾಂತಿಕ ಶಾಸನಾಧಿಕಾರದಲ್ಲಿ ಅತ್ಯುತ್ತಮವಾದ ರೀತಿಯಲ್ಲಿ ಕಾರ್ಯಸಿದ್ಧಿಯನ್ನು ಪಡೆದು ಸಾಮಾಜಿಕ ಅಭ್ಯುದಯದಲ್ಲಿ ಜನರ ಅಭಿರುಚಿಯನ್ನು ಎಚ್ಚರಗೊಳಿಸಿರುವರು. ಅವರ ರಾಜಕೀಯ ವಿವೇಕವು, ಸಾಹಸದ ನಾಮಪತ್ರವೂ, ಅಸಮಾನ್ಯ ಗುಣವೂ ಸ್ನೇಹ ಸಂಪಾದಿಸುವ ಶಕ್ತಿಯೂ ಅವರ ಜಯಕ್ಕೆ ಮುಖ್ಯ ಕಾರಣಗಳು. ಈ ಗುಣಗಳ ದೆಸೆಯಿಂದ ಅವರಿಗೆ ಮಹಾರಾಜರ ಬೆಂಬಲವೂ ಪೂರ್ಣ ಸಹಕಾರವೂ ದೊರಕಿದೆ.

'ಸಿ. ರ್' ಎಂದು ಎಲ್ಲರೂ ಅವರನ್ನು ಬಲ್ಲರು. ಅವರು ಸೇಲಂ ಜಿಲ್ಲೆಯ ಹೊಸೂರ್ ಗ್ರಾಮದ ನಿವಾಸಿ. ಅವರು ಜನ್ಮವೆತ್ತಿದುದು ೧೮೭೯ರಲ್ಲಿ, ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿ ಅವರು ಬೆಂಗಳೂರಿನ ಸೆಂಟ್ರಲ್ ಕೋಲೇಜನ್ನೂ, ಮದ್ರಾಸಿನ ಪ್ರೆಸಿಡೆನ್ಸಿ ಕೋಲೇಜನ್ನೂ ಪ್ರವೇಶಿಸಿದರು. ತನ್ನ ೧೯ನೇ ವಯಸ್ಸಿನಲ್ಲಿ ಬಿ. ಎ. ಪರೀಕ್ಷೆ ಉತ್ತೀರ್ಣರಾಗಿ 'ಲೊ' ಕೊಲೇಜನ್ನು ಸೇರಿದರು. ಬಿ. ಎಲ್. ಆದೊಡನೆ ಸೇಲಮಿನಲ್ಲಿ ವಕಾಲತು ನಡಿಸಿದರು. ಸ್ವಲ್ಪ ಸಮಯದಲ್ಲೇ ಅವರಿಗೆ ಹೆಚ್ಚು ವಕಾಲತೂ, ಇನ್ನು ಹೆಚ್ಚು ಸಂಪಾದನೆಯೂ ಬರತೊಡಗಿ ಜಿಲ್ಲೆಯ ಮತ್ತು ಆಧಿಪತ್ಯದ ವಕೀಲರಲ್ಲಿ ಅವರು ನಾಯಕರೆನಿಸಿಕೊಂಡರು.

ಅವರು ಮೊದಲಿನಿಂದಲೂ ಪ್ರಜಾಧರ್ಮದಲ್ಲಿಯೂ ದೇಶಸೇವೆಯಲ್ಲಿಯೂ ಆಸಕ್ತಿ ತೋರಿಸಿದರು. ಮೊದಲು ಸೇಲಂ ಮುನಿಸಿಪಾಲಿಟಿಯ ಮೆಂಬರರಾಗಿ ಹಲವು ಸಾರ್ವಜನಿಕ ವಿಚಾರಗಳಲ್ಲಿ ಅವರು ಭಾಗವಹಿಸಿದರು. ಜಿಲ್ಲೆಯ ಮತ್ತು ದೇಶದ ಅಭ್ಯುದಯದ ಯೋಜನೆಗಳ ಮತ್ತು ಸಮಾಜ ಸುಧಾರಣೆಯ ವಿಚಾರಗಳಲ್ಲಿ ಅವರು ಅಗ್ರಗಣ್ಯರೆನಿಸಿದರು. ಜಿಲ್ಲೆಯ ಹಿತಚಿಂತಕರು ಅವರ ಆಲೋಚನೆಯನ್ನು ಪಡೆಯದೇ ಮುಂದರಿಸುತ್ತಿದ್ದಿಲ್ಲ,

ರಾಷ್ಟ್ರಧುರೀಣರಾಗುವ ಸಂದರ್ಭವು ಅವರಿಗೆ ೧೯೧೯ರಲ್ಲಿ ದೊರಕಿತು. ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯೊಡನೆ ಅವರು ಸಮೀಪದ ಸಹಕಾರವನ್ನು ಬಳಿಸಿ ಬಂದುದರಿಂದ ತನ್ನ ಲಾಭಕರವಾದ ವಕಾಲತನ್ನು ತ್ಯಜಿಸಿ ದೇಶಸೇವಾ ನಿರತರಾಗಬೇಕೆಂದು ಅವರಿಗೆ ಅನ್ನಿಸಿತು.

ಮಹಾತ್ಮಾ ಗಾಂಧಿಯವರು ಹೂಡಿದ ಸತ್ಯಾಗ್ರಹ ಚಳವಳಕ್ಕೆ ಇವರು ತಮ್ಮ ಪೂರ್ಣ ಬೆಂಬಲವನ್ನು ಕೊಟ್ಟರು. ಸೇಲಂ ಜಿಲ್ಲೆಯ ನಾಯಕರಾದವರು ಅಂದಿನಿಂದ ದೇಶದ ಧುರೀಣರಾದರು. ತನ್ನ ಜಿಲ್ಲೆಯ ಸೇವೆ ಮಾತ್ರವಲ್ಲದೆ ದೇಶದ ಎಲ್ಲಾ ಜಿಲ್ಲೆಗಳ ಸೇವೆಯಲ್ಲಿ ಚಟುವಟಿಕೆಯನ್ನು ತೋರಿಸಿದರು. ಮಹಾತ್ಮರ ಅಹಿಂಸಾ ಮತ್ತು ಸತ್ಯಾಗ್ರಹದ ಧ್ಯೇಯಗಳನ್ನು ಅವರು ಸ್ವೀಕರಿಸಿ ಕಷ್ಟಪರಂಪರೆಯನ್ನೂ ಕಾರಾಗ್ರಹವಾಸವನ್ನೂ ಅನುಭವಿಸಿದರು. ಮಹಾತ್ಮರು ಜೈಲುವಾಸಿಗಳಾಗಿದ್ದ ವೇಳೆಯಲ್ಲಿ 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿದರು.

೧೯೨೧–೨೨ರಲ್ಲಿ ಇವರ ಕಾರ್ಯದಕ್ಷತೆಯನ್ನು ಕಂಡುಹಿಡಿದ ಕಾಂಗ್ರೆಸ್ ರಾಷ್ಟ್ರೀಯ ಸಭೆಯು ಇವರನ್ನು ಜನರಲ್ ಕಾರ್ಯದರ್ಶಿಯಾಗಿ ಆರಿಸಿತು. ಅಂದಿನಿಂದ ಅವರು ಅಖಿಲಭಾರತ ಕಾಂಗ್ರೆಸ್ ಸಭೆಯ ಕಾರ್ಯಕಾರೀ ಮಂಡಳಿಯ ಪ್ರಮುಖ ಮೆಂಬರರಾಗಿ ಕಾಂಗ್ರೆಸ್ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಲು ಸಹಾಯಮಾಡಿರುವರು. ಖದ್ದರ್ ಧರಿಸುವ ಗಾಂಧಿಜಿಯವರ ಮೊದಲನೆಯ ಅನುಯಾಯಿಗಳು ರಾಜಗೋಪಾಲಾಚಾರ್ಯರು. ಅಖಿಲ ಭಾರತದ ನೂಲುವವರ ಸಂಘಸ್ಥಾಪನೆಯಾದಂದಿನಿಂದ ಅವರು ಆ ಸಂಸ್ಥೆಯ ಒಬ್ಬ ಪ್ರಮುಖ ಮೆಂಬರರು. ಖದ್ದರ್ ಪ್ರಚಾರವಾದಂದಿನಿಂದ ಗ್ರಾಮದ ಕೈಗಾರಿಕೆಗೆ ತುಂಬಾ ಪ್ರೋತ್ಸಾಹ ಸಿಕ್ಕುವುದೆಂದೂ ಇದರಿಂದ ದೇಶಿಯ ಕೆಲಸಗಾರರ ಆರ್ಥಿಕೋನ್ನತಿಯಾಗುವುದೆಂದೂ ಅವರ ಅಭಿಪ್ರಾಯ.

ಶ್ರೀಮಾನ್ ರಾಜಗೋಪಾಲಾಚಾರ್ಯರು ಮದ್ಯಪಾನ ನಿಷೇಧಕರು. ಗ್ರಾಮಸ್ಥರ ದಾರಿದ್ರ್ಯಕ್ಕೂ ಅನಾಚಾರಗಳಿಗೂ ಮದ್ಯವೇ ಕಾರಣವೆಂದು ಅವರು ದೃಢವಾಗಿ ನಂಬುತ್ತಾರೆ. ಹಿಂದೀ ರಾಷ್ಟ್ರೀಯ ಕೊಂಗ್ರೆಸ್ಸಿನ ಮದ್ಯಪಾನ ನಿಷೇಧದ ಚಳವಳದ ಧುರೀಣರಾಗಿಯೂ, ಮದ್ಯಪಾನ ನಿಷೇಧದ ಸಂಘದ ಕಾರ್ಯದರ್ಶಿಯರಾಗಿಯೂ ಹಲವು ವರ್ಷಗಳಿಂದ ಮದ್ಯಪಾನ ನಿಲ್ಲಿಸಲು ಶತ ಪ್ರಯತ್ನ ಮಾಡಿರುವರು. ಮದ್ಯಪಾನದ ಚಟವನ್ನು ನಿಲ್ಲಿಸಲು ಸರಕಾರವೇ ಕೈಹಚ್ಚಿ ತಡೆಯಬೇಕೆಂದು ಅವರ ನಿಶ್ಚಲವಾದ ಭಾವನೆಯಾಗಿದೆ.

ಅಸ್ಪೃಶ್ಯರ ಸಲುವಾಗಿಯೂ ಅನೇಕ ವರ್ಷಗಳಿಂದ ಅವರು ಹೇಚಾಡುತ್ತಿರುವರು. ಆತ್ಮ ಗೌರವನ್ನು ಪ್ರತಿ ಒಬ್ಬ ವ್ಯಕ್ತಿಯಲ್ಲಿ ಅಭಿವೃದ್ಧಿಗೊಳಿಸಲು ಅಸ್ಪೃಶ್ಯತಾ ನಿವಾರಣೆಯಾಗಬೇಕೆಂದು ಅವರು ಎಣಿಸುತ್ತಾರೆ.

ರಾಷ್ಟ್ರೀಯತೆಯ ಮತ್ತು ಸಮಾಜ ಸುಧಾರಣೆಯ ಪ್ರಾರಂಭದ ದಿನಗಳಿಂದ ಈ ಧ್ಯೇಯದಲ್ಲಿ ಅವರು ವಿಶ್ವಾಸವಿಟ್ಟಿರುವರು. ಅಸಹಕಾರ ಚಳವಳದ ಕಾಲದಲ್ಲಿ ಅವರು ನಿರ್ಗತಿಕರ ಮತ್ತು ದೀನರ ಉದ್ಧಾರ ಮಾಡಲು ಯುವಕರನ್ನು ತರಬೇತು ಮಾಡಲು ಒಂದು ಆಶ್ರಮವನ್ನು ಸ್ಥಾಪಿಸಿದರು. ಈ ಆಶ್ರಮವು ಸೇಲಂ ಜಿಲ್ಲೆಯ ಟಿರುಚಂಗೋಡು ಎಂಬಲ್ಲಿದೆ. ಶಾಂತವಾಗಿರುವ ಗ್ರಾಮದ ಪ್ರದೇಶದಲ್ಲಿ ನೂಲುವುದನ್ನೂ, ಅಸ್ಪೃಶ್ಯತಾನಿವಾರಣೆಯನ್ನೂ ನೋಡಲು ಒಂದು ವಸತಿಯು ಸ್ಥಾಪಿತವಾಗಿದೆ. ಇಲ್ಲಿ ಯುವಕರಾದ ಸ್ವಯಂಸೇವಕರ ಪಂಗಡವೊಂದು ವಾಸಮಾಡಿಕೊಂಡಿದೆ. ಗ್ರಾಮದ ಕಲೆಯನ್ನೂ ಕೈಗಾರಿಕೆಯನ್ನೂ ಕಲಿಯುವ ಉತ್ಸಾಹದಿಂದ ಬರುವ ಗ್ರಾಮಸ್ಥರಿಗೆಲ್ಲಾ ಇವರು ಕಲಿಸಿಕೊಡುತ್ತಾರೆ. ಮುಖ್ಯವಾಗಿ ಹತ್ತಿಯ ನೂಲು ತೆಗೆಯುವುದನ್ನೂ ಚರ್ಮದ ಕೆಲಸವನ್ನೂ ಅವರು ಹೇಳಿಕೊಡುತ್ತಾರೆ. ಆಶ್ರಮದಲ್ಲಿ ಜಾತಿಭೇದಗಳಿಲ್ಲ. ಸ್ಥಾಪಕರ ದಯಾಭಾವವೂ ಸರಳತೆಯೂ ಎಲ್ಲೆಲ್ಲಿಯೂ ಕಾಣುತ್ತದೆ.

ರಾಜಕೀಯ ವಾತಾವರಣವು ಅವರನ್ನು ಆಶ್ರಮದಲ್ಲಿ ಉಳಕೊಳ್ಳಲು ಬಿಡಲಿಲ್ಲ. ಗಾಂಧಿಜಿಯವರ ಕರೆಯನ್ನು ಕೇಳಿ ಸತ್ಯಾಗ್ರಹ ಚಳವಳದಲ್ಲಿ ಭಾಗವಹಿಸಿ 1929—30ರಲ್ಲಿ 21 ತಿಂಗಳ ಸಜೆಯು ಅವರಿಗೆ ಲಭಿಸಿತು. ಗಾಂಧಿ–ಇರ್ವಿನ್ ಒಪ್ಪಂದದ ದೆಸೆಯಿಂದ 1931ರಲ್ಲಿ ಅವರ ಬಿಡುಗಡೆಯಾಯಿತು. ಸ್ವಲ್ಪ ಕಾಲದಲ್ಲಿ [1922ರಲ್ಲಿ] ಅವರನ್ನು ಪುನಃ ಸೆರೆಹಿಡಿದರು. ಆಗಲೂ ಸಜೆಯು ವಿಧಿಸಲ್ಪಟ್ಟಿತು. ಅದು ಮುಗಿದ ಬಳಿಕ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷಸ್ಥಾನವನ್ನು ಅವರು ವಹಿಸಬೇಕಾಯಿತು. ಕೆಲವೇ ದಿನಗಳಲ್ಲಿ ರಾಜೇಂದ್ರ ಪ್ರಸಾದರಿಗೆ ಅಧ್ಯಕ್ಷಸ್ಥಾನವನ್ನು ಬಿಟ್ಟುಕೊಟ್ಟು ಚಳವಳದಲ್ಲಿ ಪುನಃ ಭಾಗವಹಿಸಿದರು. 1933ರ ಅಗೋಸ್ತು ತಿಂಗಳಲ್ಲಿ ಶಾಸನಭಂಗದ ಚಳವಳದಲ್ಲಿ ಭಾಗವಹಿಸಿ ಇನ್ನೊಂದು ಸಲ ಕಾರಾಗೃಹಕ್ಕೆ ಒಯ್ಯಲ್ಪಟ್ಟರು. ಅಲ್ಲಿ 1934ರ ಫೆಬ್ರವರಿಯವರೆಗೆ ಉಳಕೊಳ್ಳಬೇಕಾಯಿತು.

1935ರಲ್ಲಿ ಶ್ರೀಮಾನ್ ರಾಜಗೋಪಾಲಾಚಾರ್ಯರ ರಾಜಕೀಯ ಜೀವನದಲ್ಲಿ ಹೊಸ ಮಾರ್ಪಾಟಾಯಿತು. ಸರಕಾರದೊಡನೆ ಅಸಹಕಾರ ಯುದ್ಧವನ್ನು ಹೂಡಿದ ಪ್ರಖ್ಯಾತ ಯೋಧರು ಸರಕಾರದೊಡನೆ ಸಹಕರಿಸುವದೆಂದು ನಿಶ್ಚಯವಾಯಿತು. ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಸದಸ್ಯರಾಗಲು ಚುನಾವಣೆಗೆ ನಿಲ್ಲಲು ಅವರು ಸಿದ್ಧರಾದರು. ಬಹು ಸಂಖ್ಯಾಖರಮತದಿಂದ ಚುನಾಯಿತರಾಗಿ ಕಾಂಗ್ರೆಸ್ ಪಕ್ಷದ ನಾಯಕರಾದರು. ಬಹುಪಕ್ಷದವರು ಕಾಂಗ್ರೆಸಿನವರಾದುದರಿಂದ ರಾಜಗೋಪಾಲಚಾರ್ಯರೇ ಪ್ರಧಾನ ಸಚಿವರಾಗಿ ನೇಮಕಹೊಂದಿದರು.

ಸಾರ್ವಜನಿಕ ಹಿತಕ್ಕಾಗಿಯೂ, ರಾಷ್ಟ್ರದ ಉನ್ನತಿಗೂ, ಸಮಾಜ ಸುಧಾರಣೆಗೂ, ಅವಶ್ಯಕವಿರುವ ಹಲವು ಯೋಜನೆಗಳನ್ನು ಮುಂದೊತ್ತಲು ಅವರಿಗೆ ಜನಬೆಂಬಲವೂ, ಮಂತ್ರಿಮಂಡಲದ ಸಂಪೂರ್ಣ ಸಹಕಾರವೂ ಇದೆ. ಪ್ರಧಾನ ಸಚಿವರಾಗಿ ಅವರು ಮೊದಲು ಮಾಡಿದ ಸುಧಾರಣೆಯು ಸೇಲಂ ಜಿಲ್ಲೆಯ ಮದ್ಯಪಾನ ನಿಷೇಧವು. ಈ ಪ್ರಯೋಗವನ್ನು ನಡಿಸಲು ಒಬ್ಬ ಸ್ಪೆಶಲ್ ಆಫೀಸರರನ್ನು ನೇ

ಮುಕ ಮಾಡಿದರು. ಪೊಲೀಸ್ ಅಧಿಕಾರಿಗಳು ಕಾನೂನನ್ನು ಜಾರಿಗೆ ತಂದು ತಪ್ಪಿತಸ್ಥರನ್ನು ದಂಡಿಸಿದರು. ಮಧ್ಯಪಾನ ನಿಷೇಧದ ಗುಣಗಳನ್ನು ಬೋಧಿಸಲು ಪ್ರಚಂಡ ಕೆಲಸವೂ ನಡೆಯಿತು. ಪ್ರಯೋಗವು ಜಯಹೊಂದಿದೆಯೆಂದು ಖಚಿತವಾಗಿದೆ. ಶುಭಶಾಂತಿಯೂ, ಅಭ್ಯುದಯವೂ ಜನರಲ್ಲಿ ಹೆಚ್ಚಾಗಿದೆಂದು ತೋರುತ್ತದೆ. ಸೇಲಂ ಜಿಲ್ಲೆಯ ಈ ಜಯವು ಸರಕಾರಕ್ಕೆ ಮದ್ಯಪಾನ ನಿಷೇಧವನ್ನು ಇನ್ನೆರಡು ಜಿಲ್ಲೆಗಳಲ್ಲಿ ಹೊರಡಿಸಲು ಅನುಕೂಲಿಸಿತು.

'ಸಿ. ಆರ್' ರು ಮುಂಚಿನಿಂದಲೂ ವ್ಯವಸಾಯಗಾರನ ಹಿತಚಿಂತಕರು. ಅವನನ್ನು ಸಾಲದಿಂದ ವಿಮೋಚನೆ ಮಾಡಿ ಸಾಲ ಕೊಡುವವರ ಬಾಯಿಯಿಂದ ತಪ್ಪಿಸಲು ಹೊಸವಾದ ಜನಪ್ರೀತಿಯ ಮುಸೂದೆಯೊಂದನ್ನು ಅವರು ಮಂಜೂರು ಮಾಡಿರುವರು.

ಹಿಂದೀ ಭಾಷೆಯನ್ನು ಕೆಲವು ಹ್ಯಾಸ್ಕಲುಗಳಲ್ಲಿ ಕಡ್ಡಾಯ ಶಿಕ್ಷಣಕ್ಕಾಗಿ ಇಟ್ಟಿರುವುದು ವಿರೋಧವನ್ನು ಹಲವು ಕಡೆಗಳಲ್ಲಿ ಎಬ್ಬಿಸಿದೆ. ಇದರಿಂದ ಮಾತೃಭಾಷೆಗೆ ಪೆಟ್ಟು ಬೀಳುವುದೆಂದು ಕೆಲವರ ಅಭಿಪ್ರಾಯ. 'ಸಿ. ಆರ್.'ರು ಹೀಗೆ ಆಗುವುದಕ್ಕೆ ಆಸ್ಪದವಿಲ್ಲೆಂದೂ ಹಿಂದಿಯಂಥಾ ಭಾಷೆಯಿಂದ ರಾಷ್ಟ್ರೀಯ ಐಕ್ಯತೆಯಾಗುವುದೆಂದೂ ಅವರ ಭರವಸೆ. ದಕ್ಷಿಣ ಹಿಂದುಸ್ಥಾನದವರು ಹಿಂದಿಯನ್ನೇ ಕಲಿಯಬೇಕೆಂದು ಅವರ ಆತುರ. ಅವರ ಯೋಜನೆಗಳೆಲ್ಲಾ ಕಾರ್ಯ ರೂಪವಾಗಲು ಅವರಿಗೆ ಸಿವಿಲ್ ಸರ್ವಿಸಿನಲ್ಲಿ ಪೂರ್ಣ ಅಧಿಕಾರವನ್ನು ನೀಡಿರುವರು. ಅವರ ಕಾರ್ಯದಕ್ಷತೆಯೇ ಅದಕ್ಕೆ ಕಾರಣವು. ಸಿ. ಆರ್.ರ ಮಾನ, ಸ್ಥಾನ, ಅಧಿಕಾರ ಇವೆಲ್ಲಾ ಅವರ ಸರಳಜೀವನದ ಧ್ಯೇಯವನ್ನು ಬಾಧಿಸಲಿಲ್ಲ. ಅವರು ಖದ್ದರ್ ಧಾರಣೆಮಾಡುವರು. ಗ್ರಾಮಸಂಚಾರಮಾಡುವಾಗಲೂ, ದೊಡ್ಡ ಸಮಾರಂಭ ಕಾಲಗಳಲ್ಲಿಯೂ ಅವರು ಧರಿಸುವುದು ಒಂದು ಜಬ್ಬಾ ಮತ್ತು ದೋತಿ. ಅವರು ನಸುಬಣ್ಣದ ಕನ್ನಡಕವನ್ನು ಇಟ್ಟುಕೊಂಡು ಯಾವಾಗಲೂ ಹಸನ್ಮುಖಿಯಾಗಿದ್ದಾರೆ.

ಅವರ ಜೀವನವು ಭಾವೀ ಜನಾಂಗಕ್ಕೊಂದು ಆದರ್ಶಸ್ವರೂಪವಾಗಿದೆ. ಖದ್ದರ್ ಧರಿಸುವ ಪ್ರಧಾನಸಚಿವರ ದೇಶಸೇವೆಯ ಮೌಲ್ಯವು ಚರಿತ್ರೆಯಲ್ಲಿ ಮುಂದೆ ತಿಳಿಯುವುದು.

ಟಿ. ಸಿ. ನಾಗಲಿಂಗಪ್ಪಾ ಎಂಡ್ ಕೋ., ಮದರಾಸು.

ರೋಲ್ಡ್ ಗೋಲ್ಡ್ ಆಭರಣ ಮತ್ತು ಪ್ರಸಿದ್ಧ ಮದರಾಸು ನಸ್ಯದ ವ್ಯಾಪಾರ ಮಾಡುವ ಈ ಸಂಸ್ಥೆಯು 1904ರಲ್ಲಿ ಶ್ರೀ। ಟಿ. ಸಿ. ನಾಗಲಿಂಗಪ್ಪನವರಿಂದ ಸ್ಥಾಪಿಸಲ್ಪಟ್ಟು, ಅಂದಿನಿಂದಲೂ ವರ್ಷೇ ವರ್ಷೇ ದೇಶದಲ್ಲಿ ಸುಪರಿಚಿತವಾಗುತ್ತಾ ಬಂದಿದೆ.



ಶ್ರೀ। ಟಿ. ಸಿ. ನಾಗಲಿಂಗಪ್ಪನವರು.

ಈ ಸಂಸ್ಥೆಯು ಆರಂಭವಾದ ಕಾಲದಲ್ಲಿ ಮದರಾಸಿನಲ್ಲಿ ಇಂತಹ ಸಂಸ್ಥೆಗಳು ಕೆಲವೇ ಇದ್ದುವೆನ್ನಬಹುದು. ಇಂತಹ ವ್ಯಾಪಾರವು ಇಲ್ಲಿ ಸಾಧ್ಯವೇ ಎಂಬುದನ್ನು ಕೂಡ ತಿಳಿದಿರದ ಕಾಲದಲ್ಲಿ ವಾಣಿಜ್ಯ ವಿಶಾರದರಾದ ಶ್ರೀ ಟಿ. ಸಿ. ನಾಗಲಿಂಗಪ್ಪನವರು ತಮ್ಮ ಉದ್ಯಮವನ್ನು ಆರಂಭಿಸಿ, ನಿಸ್ಸಹಾಯಶೂರರಾಗಿ ಅದನ್ನು ಮುನ್ನಡೆಸಿ ತಂದರು. ಆರಂಭದಲ್ಲಿ ಇವರು ಸುಗಂಧ ನಸ್ಯ ಮತ್ತು ಯುಕಲಿಪ್ಟಸ್ ತೈಲದ ವ್ಯಾಪಾರವನ್ನೂ ಮಾತ್ರ ಮಾಡುತಿದ್ದರು. ಯುಕಲಿಪ್ಟಸ್ ತೈಲದ ವ್ಯಾಪಾರವು ಇದು ಅತಿ ಸುಲಭವಾಗಿರುವುದಾದರೂ ಹಳೆಯ ಆ ಗಾಂಭೀರ್ಯವನ್ನು ಕಳಕೊಂಡಿದೆಯೆನ್ನಬಹುದು. ಶ್ರೀ. ನಾಗಲಿಂಗಪ್ಪನವರು ಈ ವ್ಯಾಪಾರ ಆರಂಭಿಸಿದಾಗ ಅದಕ್ಕೊಂದು ಇಯತ್ತೆಯಿತ್ತು. ಮುಂದೆ ಈ ವ್ಯಾಪಾರವು ಪ್ರಾಂತ್ಯದಲ್ಲೆಲ್ಲ ಹರಡಿ ಸಾಮಾನ್ಯರಾರೂ ಚಿಕ್ಕ ಬಂಡವಾಳದಿಂದ ಆರಂಭಿಸಬಹುದೆಂಬಷ್ಟಕ್ಕೆ ಬಂದರೂ, ಶ್ರೀ. ಟಿ. ಸಿ. ನಾಗಲಿಂಗಪ್ಪನವರು ಮಾತ್ರ ಈ ವ್ಯಾಪಾರದ ಇಯತ್ತೆ—ಗಾಂಭೀರ್ಯಗಳೇನೂ ಕೆಡದಂತೆ ಜಾಗರೂಕತೆ ವಹಿಸಿ ಅಂತೇ ತಮ್ಮಿಂದ ಸಾರ್ವಜನಿಕರಿಗೊಪ್ಪಿಸಲ್ಪಡುವ ವಸ್ತುವಿನ ಗುಣದಲ್ಲೂ ಕುಂದುಬಾರದಂತೆಯೂ ನೋಡಿ—ಕಾಲಕ್ಕೆ ತಕ್ಕಂತೆ ಸುಧಾರಣೆಗಳನ್ನು ಮಾಡಿಕೊಂಡ ಬಂದರು.

ಇತ್ತೀಚೆಗೆ, ಕಳೆದ ಐದು ವರ್ಷಗಳಿಂದ ಈ ಸಂಸ್ಥೆಯು ರೋಲ್ಡ್ ಗೋಲ್ಡ್ ಆಭರಣಗಳ ವ್ಯಾಪಾರವನ್ನೂ ಪ್ರಚಂಡ ರೀತಿಯಲ್ಲಿ ನಡೆಸುತ್ತಿದೆ. ಇವರ ಆಭರಣಗಳು—ಅವುಗಳ ರಚನೆ ಮೊದಲಾದುವುಗಳು ಸಂಸ್ಥಾನದಲ್ಲೆಲ್ಲ ಬಹು ಪ್ರೀತವಾಗಿವೆ. ಈ ಸಂಸ್ಥೆಗೆ ಉತ್ತರೋತ್ತರವನ್ನು ಬಯಸುವೆವು.



ಲೇಖಕರು.

ನಾಝೀ ಜರ್ಮನಿಯಲ್ಲಿ

ಲೇಖಕರು: ಮಿ| ಜೋರ್ಜ್ ಹರ್ಬರ್ಟ್.


ನಾಝೀ ಜರ್ಮನಿಯು ಸ್ವತಂತ್ರ ಅಭಿಪ್ರಾಯಗಳಮೇಲೂ ಬಂಧನವಿರಿಸಲಾಗಿದೆ. ಪ್ರಜೆಗಳು ಮನಸ್ಸಾಕ್ಷಿಯನ್ನು ಮರೆಸಿ ಜೀವಿಸಬೇಕಾಗಿದೆ. ಹೊರಗಿಂದ ಸಮೃದ್ಧಿಯ ಚಿಹ್ನ ಕಾಣುತ್ತಿದೆ. ಆದರೆ ಮಹಾಯುದ್ಧಕಾಲದಲ್ಲಿ ಸಂಕಷ್ಟಕ್ಕೊಳಪಟ್ಟ ರೈತರು ಇನ್ನೂ ಮುಂಚಿನ ಸ್ಥಿತಿಗೆ ಬಂದು ಮುಟ್ಟಿಲ್ಲ.

ಜರ್ಮನ್ ದೇಶದಲ್ಲಿ ಸಾಮಾನ್ಯರನ್ನು ಅಂಟಿಕೊಂಡಿರುವ ಮನೋಭಾವಗಳು.

ಯುದ್ಧಗಳ ಮೋಡಗಳಿಂದ ಮಬ್ಬಾಗಿರುವ ಈಗಿನ ಯುರೋಪಿನ ವಾತಾವರಣದಲ್ಲಿ ನಾಝಿ ಆಳಿಕೆಗೊಳಪಟ್ಟ ಜರ್ಮನರೊಳಗೆ ಈ ಆಳಿಕೆಯ ಮೇಲೆ ಸಂಪೂರ್ಣವಾದ ಸ್ವಾತಂತ್ರ್ಯವೂ, ಸತ್ಯವಾದ ಮಮತೆಯೂ ಸ್ಥಿರವಾದ ಸಂತೃಪ್ತಿಯೂ ಇರುತ್ತದೆಯೋ ಎಂದು ಪರಿಶೀಲಿಸಿ ನೋಡುವುದು ಪ್ರಕೃತದ ಸಂದರ್ಭದಲ್ಲಿ ಅಗತ್ಯವಿದೆ.

ನಾಝಿ ಆಡಳಿತೆಯೊಳಗಿರುವ ಜರ್ಮನ್ ಸಾಮ್ರಾಜ್ಯವು ಸಂಪೂರ್ಣ ಶಾಂತತೆ, ಸಮಾಧಾನ ಸಂತುಷ್ಟಿಗಳಿಂದ ಕೂಡಿರುವ ಸ್ವರ್ಗ ರಾಜ್ಯವಾಗಿರುವುದಿಲ್ಲವೆನ್ನುವುದಕ್ಕೆ ಏನೇನೂ ಸಂದೇಹವಿಲ್ಲ. ಸ್ವರ್ಗದಲ್ಲಿಯೂ ಅಸಂತುಷ್ಟಿ ಅಸಮಾಧಾನ, ವೈಮನಸ್ಸಿನ ಕುರುಹುಗಳು ಕಂಡುಬರುವುದಾದರೆ ನಾಝಿ ಜರ್ಮನಿಯ ಪಾಡೇನು? ಆದರೆ, ಹಿಟ್ಲರನ ನಾಝಿ ಆಳಿಕೆಯನ್ನು ಕುರಿತು ಖಂಡಿಸಿ ಮಾತನಾಡಲು ಧೈರ್ಯಪಟ್ಟವರ ಮೇಲೆ ಸರಕಾರವು ಹೊರಿಸುವ ಕಠಿಣ ಹಿಂಸೆಗಳೂ ಬರ್ಲಿನ್ ಮುಂತಾದ ದೊಡ್ಡ ನಗರಗಳಲ್ಲಿ ಕೂಡಾ ಜನರ ಅಭಿಪ್ರಾಯಗಳನ್ನು ಗೊತ್ತುಹಚ್ಚಿ ವಿರೋಧ ಪಕ್ಷದವರನ್ನು ವಿಚಾರಣೆ ಇಲ್ಲದೆ ಸೆರೆಹಿಡಿಯುವರೆ ನೇಮಿಸಲ್ಪಟ್ಟ ಅಸಂಖ್ಯಾತ ಗೂಢಚಾರರ ಸಂಖ್ಯೆಯೂ ಅಲ್ಲಿ ಜಾರಿಯಲ್ಲಿರುವ ಅವಿವೇಕತೆಯು ಸರಕಾರವೂ ದೊಡ್ಡ ದೊಡ್ಡವರು ಕೂಡಾ ತಮ್ಮ ಬಾಯಿಗಳನ್ನು ಬಿಗಿಹಿಡಿದು ಮನಸ್ಸಾಕ್ಷಿಯನ್ನು ಕೊಂದು ಮೂಕರುಗಳಾಗಿ ವರ್ತಿಸುವಂತೆ ಮಾಡಿವೆ. ಧೀರರಾದ ಕೊಂಚ ಮಂದಿ ಮಾತ್ರವೇ ತಮ್ಮ ಅಭಿಪ್ರಾಯಗಳನ್ನು ಹೇಳುವರೆ ಧೈರ್ಯಪಟ್ಟರೂ ಕೂಡಾ, ಅವರಾದರೂ ತಮ್ಮ ಅಭಿಪ್ರಾಯಗಳನ್ನು ಪ್ರಚುರಗೊಳಿಸುವಷ್ಟು ಧೈರ್ಯದಿಂದ ಕೂಡಿರುವುದಿಲ್ಲ. ತನ್ನ [illegible], ತಾನು ನುಡಿದದ್ದೇ ವೇದವಾಕ್ಯ—ತನ್ನ ಇಚ್ಛೆಯೇ ಪರಮಾತ್ಮನ [illegible] ಹಿಟ್ಲರರ ಮತ್ತು ಅವರ ಹಸ್ತಕರ ಮುಂದೆ ಧೈರ್ಯದಿಂದ [illegible] ಬಹುಮಂದಿ ಇನ್ನೂ ಸೆರೆಮನೆಗಳಲ್ಲಿ [illegible]. ಈ ರೀತಿಯ ಬಲಾತ್ಕಾರದಿಂದ ಮೌನಾವಸ್ಥೆಗೆ ಇಳಿಸಲ್ಪಟ್ಟ ಜರ್ಮನರ ಮನಸ್ಸಿನ ಅಸಮಾಧಾನವು ಬೂದಿಯಿಂದ ಮುಚ್ಚಲ್ಪಟ್ಟ [illegible], ಮುಂದೆ ಅನುಕೂಲವಾದ ಗಾಳಿ ಬೀಸಲು ನಾಝಿ ಸರಕಾರವನ್ನು ಸುಟ್ಟುಬಿಡುವ ಬೆಂಕಿಯಾಗಿ ಪರಿಣಮಿಸುವುದು ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಬಹಳವಾಗಿ ನಾಜಿ ಸರಕಾರವನ್ನು ಎದುರಿಸುವವರಲ್ಲಿ ಮುಂಚಿನ ಕೈಸರರ ದೊರೆತನದಲ್ಲಿ ದೊಡ್ಡ [illegible] ಅಧಿಕಾರದಲ್ಲಿದ್ದು ಈಗಿನ ನಾಝಿ ಸರಕಾರದಲ್ಲಿ ಸಕಲವನ್ನು ಕಳಕೊಂಡು ಬಡತನದಲ್ಲಿ ಜೀವನ ಕಳೆಯುವವರೇ ಮುಖ್ಯಸ್ಥರೆನ್ನಬಹುದು.

ಹೊರಗಿನ ತೋರುವಿಕೆಗೆ ನಾಝಿ ಸರಕಾರದೊಳಗೆ ಜರ್ಮನಿಯಲ್ಲಿ ಸಮೃದ್ಧಿ ಸಂತುಷ್ಟಿಯ ಚಿಹ್ನೆಗಳು ತೋರಿದರೂ ನಿಜಸ್ಥಿತಿಯನ್ನು ವಿಚಾರಿಸಲು ಬಹು ಬಡತನವೂ ತುಂಬಾ ಅಸಂತೃಪ್ತಿಯೂ ಉಂಟೆಂಬುದನ್ನು ತಿಳಿಯಬಹುದು. ಮಹಾಯುದ್ಧದ ಕಾಲ ಬಹು ಸಂಕಷ್ಟಕ್ಕೆ ಒಳಪಟ್ಟ ಜರ್ಮನ್ ಬೇಸಾಯಗಾರರು ಇಷ್ಟರ ತನಕವೂ ಮುಂಚಿನ ಸ್ಥಿತಿಗೆ ಬಂದು ಮುಟ್ಟಿಲ್ಲ. ಮುಂದಕ್ಕೆ ನಾಝಿ ಸರಕಾರವನ್ನು ಯಾರೂ ಸೋಲಿಸಲಾರರು, ಶಾಶ್ವತವಾದ ಶಾಂತಿಯು ಬೇಗನೆ ಸ್ಥಾಪನೆ ಆಗುವುದು, ಸಮೃದ್ಧಿಯ ವರುಷಗಳು ತಮ್ಮ ಮುಂದೆಯೇ ಇವೆ; ಎಂಬಿತ್ಯಾದಿ ನಾಝಿ ಉದ್ಯೋಗಸ್ಥರ ಹೆಗ್ಗಳಿಕೆಯ ಹುರಿದುಂಬಿಸುವ ಮಾತುಗಳಿಗೆ ಮರುಳಾಗಿ ತಮ್ಮ ಸಂಕಷ್ಟಗಳನ್ನು ತಾಳ್ಮೆಯಿಂದ ಸಹಿಸುತ್ತಲಿದ್ದಾರೆ—ವರ್ಸೆಲ್ಲಿ ಒಪ್ಪಂದದ ಸಂಕೋಲೆಗಳಿಂದ ಹಿಟ್ಲರರು ರಾಜ್ಯವನ್ನು ಬಿಡುಗಡೆಪಡಿಸಿ ರಾಜ್ಯಕ್ಕೆ ಗೌರವವನ್ನು ಹೆಚ್ಚಿಸಿರುವರೆಂಬುದು ಹೆಮ್ಮೆಯ ಪ್ರತಿ ಒಬ್ಬ ನಾಝಿಯಲ್ಲಿ ತುಂಬಿ ತುಳುಕುತ್ತಿರುವುದು. ನಾಝಿ ಸರಕಾರವು ತನ್ನ ನಿದಾಕ್ಷಿಣ್ಯ ಧರ್ಮದಿಂದ ಹೆಚ್ಚೆಚ್ಚು ಮಧ್ಯ ತರಗತಿಯ ಜರ್ಮನರನ್ನು ಸಿಟ್ಟಿಬ್ಬಿಸುತ್ತಾ ಇದೆ. ೫೦ ವರುಷ ಪ್ರಾಯದ ಕೆಳಗಿನ ಜರ್ಮನ್ ಕೆಳತರಗತಿಯ ಕೂಲಿಕಾರರಿಗೆ ಮಹಾಯುದ್ಧದ ಕಾಲ ಜರ್ಮನಿಗೆ ಬಂದೊದಗಿದ ಸಂಕಷ್ಟಗಳೇ ಈಗ ಇವೆ, ಹೊರತು ಅದರ ಹಿಂದಿನ ಸ್ಥಿತಿಗತಿಗಳೇನೂ ಅವರ ನೆನಪಿನಲ್ಲಿ ಇರುವುದಿಲ್ಲ.



ವಿಲ್ಹೆಮ್ ಕೈಝರರು.
ಕೈಝರರಷ್ಟು ಕೀರ್ತಿಯ ಅರಸು ಇತ್ತೀಚೆಗಾರೂ ಇರಲಿಲ್ಲ. ಮಹಾಯುದ್ಧವು ಇವರ ಆಡಳಿತದ ಅಂತ್ಯವನ್ನು ಕಂಡಿತು. ಈಗ ಇವರು ರಾಜ್ಯ ತೊರೆದು ಡುರ್ನ್ ಎಂಬಲ್ಲಿರುವರು

ನಾಝಿಮತವು ಜರ್ಮನಿಯ ಹಳ್ಳಿಹಳ್ಳಿಯ ಎಲ್ಲಾ ಜನರನ್ನೂ ತುಂಬಿಕೊಂಡಿದೆ. ಹೀಗಿದ್ದರೂ ಅನೇಕರಲ್ಲಿ ಪೊಲೀಸ ಅಧಿಕಾರಿಗಳ ಆಳಿಕೆಯು ತಿರುಗಿ ಬಂದರೆ [illegible] ಅಭಿಪ್ರಾಯವಿದೆ. ತಮ್ಮ ಸ್ವಾತಂತ್ರ್ಯ ಅಭಿಪ್ರಾಯಗಳನ್ನು ರಾಜಕೀಯ ವಿಚಾರಗಳಲ್ಲಿ ಮಾತ್ರವೇ ಅಲ್ಲ, ಇತರ ವಿಚಾರಗಳಲ್ಲಿಯೂ ಹೇಳುವ ತಿಳಿಸುವ ಅಧಿಕಾರವನ್ನು ತಾವು ನಾಝಿ ಸರಕಾರದಲ್ಲಿ ಕಳಕೊಂಡರೂ ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಯು ತಮಗೆ ಇಲ್ಲ—ಅರ್ಧ ಊಟವಾದರೂ ತಮಗೆ ಸಿಕ್ಕುತ್ತದಲ್ಲಾ ಎಂಬುವ ಸಮಾಧಾನವು ಅನೇಕರಲ್ಲಿದೆ. ಸ್ವರ್ಗ ಸುಖವಿಲ್ಲದಿದ್ದರೆ ನರಕಯಾತನೆ ಹಾಗೂ ಇಲ್ಲವಲ್ಲಾ ಎಂದು ಅನೇಕರು ಆದರ್ಶನೆ ಹೊಂದುತ್ತಿದ್ದಾರೆ. ಇಂಗ್ಲೀಷರ ಜೀವನದ ಸ್ಥಿತಿಯನ್ನೂ ಜರ್ಮನರ ಜೀವನದ ಸ್ಥಿತಿಯನ್ನೂ ಸರಿಹೋಲಿಸಿದರೆ ಜರ್ಮನರು ಅರಿಷ್ಟ ಅವಸ್ಥೆಯಲ್ಲಿದ್ದಾರೆನ್ನಬೇಕು—ಈಗ ಅವರಿಗೆ ಸಿಕ್ಕುವ ಸಂಬಳವು ಬರೇ ಕಡಿಮೆ. ಆದರೆ ಈಗಿನ ಅರ್ಧ ಹೊಟ್ಟೆಯನ್ನೂ ಅಲ್ಪ ಬಟ್ಟೆಯನ್ನೂ ಯುದ್ಧದ ಕಾಲದ ಬರೇ ಹೊಟ್ಟೆಯನ್ನೂ ಬಟ್ಟೆಯಿಲ್ಲದ ಬರೇ ಮೈಯನ್ನೂ ಆಲೋಚಿಸುವಾಗ ಎಂತವನಿಗಾದರೂ ಒಂದು ವಿಧದ ಸಂತೃಪ್ತಿಯು ಬರುವುದು ಸಹಜ. ನಾಝಿ ಸರಕಾರವನ್ನು ವಿರೋಧಿಸಿ ಮಾತನಾಡಿದವನಿಗೆ ಈಗಲೂ ಕೂಡ ಬಂಧಿಖಾನೆ, ಗಡಿಪಾರು ಅಥವಾ ಗಲ್ಲಿಯ ಮೇಲೆ ಸ್ಥಳವಲ್ಲದೆ ಬೇರೆ ಗತಿ ಇಲ್ಲ.

ಜರ್ಮನರಿಗೆ ಯುದ್ಧವೆಂದರೆ ರೋಮಾಂಚನವಾಗುತ್ತಿದೆ. ಯುದ್ಧದ ಸಂಕಷ್ಟಗಳನ್ನು ಅವರು ಇನ್ನೂ ಮರೆತಿಲ್ಲ. ಆದರೆ ತಮ್ಮ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕಾಗಿ ಕೋವಿಯನ್ನೂ ಖಡ್ಗವನ್ನೂ ಈಗಲಾದರೂ ಧರಿಸುವರೆ ಅವರು ಹಿಂಜರಿಯುವ ಹಾಗಿಲ್ಲ. ಸಮತಾವಾದಿ ತತ್ವವೂ, ಹೆಚ್ಚುತ್ತಿರುವ ದೇಶಾಭಿಮಾನವೂ, ಈ ಎಲ್ಲಾ ಅಸಮಾಧಾನಗಳ ಮಧ್ಯೆ ಜರ್ಮನಿಯ ಯುವಕರನ್ನು ಯುದ್ಧಕ್ಕಾಗಿ ಹುರಿದುಂಬಿಸುತ್ತಿದೆ. ಮುಂದಿನ ಯುದ್ಧವು ಕೊಂಚಕಾಲದೊಳಗೆ ಕೊನೆಗಾಣಿಸುವುದಾದರೆ ಜರ್ಮನಿಯು ಗೆಲುವುದೆಂಬುದು ಜರ್ಮನರ ನಿಸ್ಸಂದೇಹವಾದ ವಿಶ್ವಾಸ. ಆದರೆ ಯುದ್ಧವು ದೀರ್ಘಕಾಲಕ್ಕೆ ಮುಂದರಿವುದಾದರೆ ತಮ್ಮ ಜಯದ ಕುರಿತು ಅವರೊಳಗೆನೇ ಅಪನಂಬಿಕೆ ಸಂಶಯವಿದೆ. ಅದಕ್ಕಾಗಿಯೇ ಇಂಗ್ಲಿಷರೂ, ಫ್ರೆಂಚರೂ ಜೆಕೊಸ್ಲೊವೆಕಿಯದೊಂದಿಗೆ ಕೂಡಬಾರದೆಂದು ಜರ್ಮನರು ಆಶಿಸುವುದು. ಈ ಎರಡು ರಾಜ್ಯಗಳನ್ನು ಸುಮ್ಮಗಿರಿಸು

ಶ್ರೀ ರಾಮೇಶ್ವರ ದೇವಸ್ಥಾನ

ಹಿಂದುಗಳ ಮಹಾ ಪುಣ್ಯ ಯಾತ್ರಾ ಸ್ಥಳ:

●

ರಾಮಾಯಣ ಕಾಲದಿಂದ ರಾಮೇಶ್ವರವು ಹಿಂದುಗಳ ಪುಣ್ಯ ಯಾತ್ರಾಸ್ಥಳವಾಗಿದೆ. ಭೂಮಿಯನ್ನು ಉಳುವುದೂ ಇಲ್ಲಿ ಪಾಪವೆಂದು ಪರಿಗಣಿಸಲ್ಪಟ್ಟಿದೆ. ದ್ರಾವೀಡ ಜನಾಂಗದ ಶಿಲ್ಪ ಕಲಾಕೃತಿ ಚಾತುರ್ಯ ವೈಭವಕ್ಕೆ ರಾಮೇಶ್ವರವೊಂದು ನಿದರ್ಶನ. ರಾಮತೀರ್ಥದಲ್ಲಿ ಮಿಂದರೆ ಸರ್ವರೋಗಗಳೂ ಪರಿಹಾರವಾಗುವುವೆಂಬ ಭಕ್ತಿ ಹಲವರಲ್ಲಿದೆ. ಅವಸಾನ ಕಾಲದಲ್ಲಿ ಈ ತೀರ್ಥವನ್ನು ಕೊಡಲು ಸಾಧ್ಯವಾಗುವಂತೆ ತಂಬಿಗೆಗಳಲ್ಲಿ ಸಾವಿರಾರು ಮೈಲು ಒಯ್ಯುವ ಜನರಿಗೆ ಕಡಿಮೆಯಿಲ್ಲ.



ರಾಮೇಶ್ವರದ ದೇವಾಲಯ.

ರಾಮಾಯಣ ಮಹಾ ಕಾವ್ಯದ ಕಥಾನಾಯಕನಾದ ಶ್ರೀ ರಾಮನು ಲಂಕಾ ರಣರಂಗದಲ್ಲಿ ರಾವಣ ಹಾಗೂ ಇನ್ನಿತರ ರಾಕ್ಷಸರನ್ನು ಕೊಂದ ಪಾಪದ ಪ್ರಾಯಶ್ಚಿತ್ತಕ್ಕಾಗಿ "ಲಿಂಗ"ವೊಂದನ್ನು ಪೂಜಿಸಬೇಕೆಂದು ಋಷಿಗಳು ಸಲಹೆಕೊಟ್ಟರು. ಬಂಗಾಳ ಕೊಲ್ಲಿಯಲ್ಲಿರುವ ಮಹೋದಧಿ ಪ್ರದೇಶವು "ಲಿಂಗ ಪ್ರತಿಷ್ಠೆ"ಗೆ ಯೋಗ್ಯ ಪುಣ್ಯಸ್ಥಳವೆಂದು ಶ್ರೀ ರಾಮನು ನಿರ್ಧರಿಸಿ, ಲಿಂಗವನ್ನು ಕೈಲಾಸದಿಂದ ತರುವಂತೆ ಹನುಮಂತನಿಗೆ ಆಜ್ಞಾಪಿಸಿದನು.

ಸುಮುಹೂರ್ತದೊಳಗಾಗಿ ಹನುಮಂತನು ಹಿಂದೆ ಬಾರದೆ ಇದ್ದುದರಿಂದ ಸೀತಾದೇವಿಯು ಹೊಯಿಗೆಯಿಂದಲೇ ಲಿಂಗವೊಂದನ್ನು ರಚಿಸಿದಳು. ಮುಹೂರ್ತಕ್ಕೆ ಸರಿಯಾಗಿ ಲಿಂಗವನ್ನು ಪ್ರತಿಷ್ಠಿಸಲಾಯಿತು. ಹನುಮಂತನು ಕೈಲಾಸದಿಂದ ಲಿಂಗವನ್ನು ಹಿಡಿದುಕೊಂಡು ಬಂದಾಗ ಈ ಸೈಕಿತ ಲಿಂಗವನ್ನು ನೋಡಿ, ಅತಿ ರೋಷದಿಂದ ಅದನ್ನು ಕಿತ್ತು ಎಸೆಯಲು ಪ್ರಯತ್ನಿಸಿದರೂ ವಿಫಲವಾಯಿತು. ಕಾಲಾನಂತರ ಜನರು ಇಲ್ಲೇ ಒಂದು ದೇವಸ್ಥಾನವನ್ನು ಕಟ್ಟಿಸಿ ಲಿಂಗ ಸ್ಥಾಪಕರಾದ ಶ್ರೀ ರಾಮರ ಸ್ಮರಣಾರ್ಥವಾಗಿ ದೇಗುಲಕ್ಕೆ ರಾಮೇಶ್ವರಂ ಎಂಬ ಹೆಸರನ್ನು ಕೊಟ್ಟರು.



ಸ್ವರ್ಣ ದೇವಾಲಯ, ಕಾಶಿ.

ಹಿಂದುಗಳ ಯಾತ್ರಾಸ್ಥಳ

ಇಂದಿಗೆ ಹಲವು ಶತಮಾನಗಳು ದಾಟಿರುವುದಾದರೂ ರಾಮೇಶ್ವರವು ಇಂದು ಹಿಂದುಗಳ ಅತ್ಯಂತ ಆದರ, ಭಕ್ತಿ, ಮತ್ತು ವಿಶ್ವಾಸಕ್ಕೆ ಪಾತ್ರವಾದ ಪವಿತ್ರ ಪುಣ್ಯಸ್ಥಳವಾಗಿದೆ. ಹಿಂದುಸ್ಥಾನದೆಲ್ಲ ಭಾಗಗಳ ಯಾತ್ರಿಕರು ದೇವ ದರ್ಶನವನ್ನು ಪಡೆಯಲು ಬರುವರು. ರಾಮೇಶ್ವರವು ಸುತ್ತಲೂ ಸಮುದ್ರದಿಂದೊಪ್ಪುವ ಚಿಕ್ಕ ದ್ವೀಪ. ದ್ವೀಪವೇ ಬಹು ಪವಿತ್ರ ಸ್ಥಳವೆಂಬ ದೃಢಭಾವನೆಯು ಜನರಲ್ಲಿರುವುದರಿಂದ ಇಲ್ಲಿ ಭೂಮಿಯನ್ನುಳುವದೂ ಪಾಪವೆಂದು ಪರಿಗಣಿಸಲ್ಪಟ್ಟಿದೆ.

ದೇಗುಲದ ಕಲಾಕೃತಿ

ದ್ವೀಪದ ಈಶಾನ್ಯ ದಿಕ್ಕಿಗೆ ನೀಡಿರುವ ದೇವಸ್ಥಾನವು ಚಿಕ್ಕ ಬಂಡೆಯ ಮೇಲೆ ಕಟ್ಟಲ್ಪಟ್ಟಿದೆ. ಚೌಕೋನಾಕಾರವುಳ್ಳ ನಾಲ್ಕು ಅಂಗಣವಿದೆ. ಹೊರ ಅಂಗಣವೊಂದೇ ೨೦೦ ಅಡಿ × ೧೦೦೦ ಅಡಿ ವಿಶಾಲವುಳ್ಳದ್ದಾಗಿದೆ. ನಾಲ್ಕು ಬದಿಯಲ್ಲೂ ಹೆಬ್ಬಾಗಿಲುಗಳಿದ್ದು ಗೋಪುರಗಳು ಗಗನವನ್ನು ಮುಟ್ಟಿವೆ. ಫೆರ್ಗ್ಯುಸನ್‌ರವರು ಈ ದೇಗುಲದ ಶಿಲ್ಪ ಹಾಗೂ ಕೆತ್ತನೆ ಕೆಲಸಗಳನ್ನು ನೋಡಿ ಹೀಗೆಂದಿರುವರು: "ದ್ರಾವಿಡ ಶೈಲಿಕ್ಕೆ ಸಂಬಂಧಿಸಿದ ಎಲ್ಲ ಸುಂದರ ಕಲೆ, ಕಲಾಕೃತಿಗಳಿಂದ ತುಂಬಿದ್ದ ಒಂದು ದೇಗುಲವನ್ನು ಚುನಾಯಿಸುವದಿದ್ದರೆ ಇದನ್ನು ಚುನಾಯಿಸಬೇಕಾದೀತು. ನಕ್ಷೆಯಲ್ಲಿರುವ ಕುಂದುಕೊರತೆಗಳ ಉದಾಹರಣೆಯುಳ್ಳ ದೇಗುಲವನ್ನು ತೋರಿಸಬೇಕಾದರೆ ಅದಕ್ಕೂ ರಾಮೇಶ್ವರಕ್ಕೇ ಬರಬೇಕು."

ದೇಗುಲದ ನಿಜವಾದ ವೈಭವವು ಆ ಪಾರದಲ್ಲಿ ಕಾಣಬಹುದಾಗಿದೆ. ಕಂಬಗಳಲ್ಲಿ ಪ್ರದರ್ಶಿಸಲ್ಪಟ್ಟಿರುವ ಶಿಲ್ಪಕಲೆಯನ್ನು ಇನ್ನೆಲ್ಲಿಯೂ ಕಾಣಲಸಾಧ್ಯ. ಗರ್ಭಗುಡಿಯ ಹೊರಗಿನ ಆವಾರದಲ್ಲಿ ೧೭ನೇ ಶತಮಾನದ ರಾಮನಾಡಿನ ರಾಜರ ಹಾಗೂ ದಿವಾನರ ಚಿತ್ರಗಳನ್ನು ಚಿತ್ರಿಸಲಾಗಿದೆ. ರಾಮನಾಡಿನ ಅರಸರನ್ನು "ಸೇತುಪತಿಗಳು" ಎಂಬ ನಾಮಾಂಕಿತದಿಂದ ಕರೆಯಲಾಗುತಿತ್ತು! ದೇವಸ್ಥಾನದ ಉತ್ತರದಿಕ್ಕಿಗೆ ಈ ಅರಸರ ಅರಮನೆಯ ಭಗ್ನಾವಶೇಷಗಳು ಈಗಲೂ ಕಂಡುಬರುತ್ತವೆ.

ವಾರ್ಷಿಕ ಉತ್ಸವಗಳು

ವರ್ಷಂಪ್ರತಿ ಜರುಗುವ ಉತ್ಸವ ಸಮಾರಂಭಕ್ಕೆ ಸಾವಿರಗಟ್ಟಲೆ ಯಾತ್ರಿಕರು ಆಗಮಿಸುವರು. ಒಂದು ಉತ್ಸವವು ಫೆಬ್ರವರಿ ಮತ್ತು ಮಾರ್ಚ ತಿಂಗಳೊಳಗೂ, ಇನ್ನೊಂದು ಜುಲೈ-ಆಗೋಸ್ತುಗಳೊಳಗೂ ಮಹಾ ವಿಜ್ರಂಭಣೆಯಿಂದ ನಡೆವುದು. ಈ ಜಾತ್ರೆಯ ಸಮಯ ದ್ವೀಪದಲ್ಲಿ ಭಾರತೀಯ ರೀತಿನೀತಿ, ಆಚಾರ ಪದ್ಧತಿಗಳು ಪ್ರದರ್ಶನಕ್ಕಿಟ್ಟಂತೆ ಕಾಣಿಸುವುದರಲ್ಲಿ ಸಂದೇಹವಿಲ್ಲ. ದಿನಾಲೂ ೬ ಬಾರಿ ಪೂಜೆಪುನಸ್ಕಾರಗಳೇ ನಡೆಯುವವು. ಮೆರವಣಿಗೆಗೆ ಇಲ್ಲಿ ತುಂಬಾ ಮಹತ್ವವಿದೆಯೆಂದು ಯಾತ್ರಿಕರು ಹೇಳದೆ ಇಲ್ಲ!

ದೇವತೆಯ ಗರ್ಭಗೃಹದ ಮುಂಬಾಗದಲ್ಲಿ "ನವಶಕ್ತಿ ಮಂಟಪ"ವಿದೆ. ದೇವತಾ ವಿಗ್ರಹವನ್ನು ಪ್ರತಿರಾತ್ರಿಯೂ ಈ ಮಂಟಪದಲ್ಲಿ ಇರಿಸಿ, ಮತ್ತೆ ಚಿನ್ನದ ತೊಟ್ಟಿಲಲ್ಲಿ ದೇವಸ್ಥಾನದ ಸುತ್ತಲೂ ಮೆರವಣಿಗೆಯನ್ನೊಯ್ಯುವುದು ಉತ್ಸವ ಕಾಲದ ಪದ್ಧತಿ.


ರಾಮೇಶ್ವರದಿಂದ ೧೮ ಮೈಲು ದಕ್ಷಿಣಕ್ಕೆ ಸ್ನಾನಘಟ್ಟ ಧನುಶ್ಕೋಡಿಯಿದೆ. ಇಲ್ಲಿ ಸ್ನಾನಮಾಡಿದರೆ ನಾನಾ ರೋಗಗಳೂ ವಾಸಿಯಾಗುವುದೆಂದು ಯಾತ್ರಿಕರಲ್ಲಿ ಬಲವಾದ ಭಾವನೆಯಿದೆ; ಭಕ್ತಿಯಿದೆ; ಸಾವಿರಾರು ಯಾತ್ರಿಕರು ಚಿಕ್ಕ ಚಿಕ್ಕ ತಂಬಿಗೆಗಳಲ್ಲಿ ಈ ಪವಿತ್ರ ತೀರ್ಥವನ್ನು ಸಾವಿರಾರು ಮೈಲುಗಳವರೆಗೆ ಒಯ್ದು ತಮ್ಮ ಬಂಧುಬಳಗದವರಿಗೆ ಕೊಡುವರು. ಅವಸಾನಕಾಲದಲ್ಲಿ ಈ ತಂಬಿಗೆಯಲ್ಲಿ ಕಾಪಾಡಿಕೊಂಡಿದ್ದ ರಾಮೇಶ್ವರ ತೀರ್ಥವನ್ನು ಬಾಯಿಗೆ ಎರೆಯುವುದೂ ರೂಢಿಯಲ್ಲಿದೆ.

(67ನೇ ಪುಟದಿಂದ)

ವುದಕ್ಕಾಗಿ ಜರ್ಮನರು ಭಗೀರಥ ಪ್ರಯತ್ನಮಾಡುತ್ತಿದ್ದಾರೆ. ದೇಶದೊಳಗೆ ತುಂಬಾ ಅಸಮಾಧಾನ ಇರುವ ಈ ಸಮಯ ಹಿಟ್ಲರರ ಹೊರಗಿನ ಗಂಭೀರವಾದ ಭಯಾಸ್ಪದದ ನುಡಿಗಳಿಗೆ ಯಾರೂ ಬೆದರುವರೆ ಕಾರಣವಿರುವುದಿಲ್ಲ. ಇಂಗ್ಲೀಷರಾದರೂ ಗೋಡೆಯ ಮೇಲೆ ಕುಳಿತು ಆಚೆಗೋ ಈಚೆಗೋ ಅನುಕೂಲವಾದ ಕಡೆಗೆ ಹಾರುವರೆ ಯತ್ನಿಸುವುದು ಅವರ ಚರಿತ್ರೆಯಲ್ಲಿ ಒಂದು ಹೊಸ ಸಾಧನೆಯಲ್ಲ. ವ್ಯಾಪಾರಿಗಳಾದ ನಮ್ಮ ಬ್ರಿಟಿಷರು ಬಲಹೀನರನ್ನು ಚನ್ನಾಗಿ ಬಡೆಯಬಲ್ಲರಾದರೂ ಬಲಾಢ್ಯರಿಗೆ ಹೆದರುತ್ತಿರುವರು ಎಂಬುದು ಅಬಿಸೀನಿಯ ದೇಶದ ಯುದ್ಧದಿಂದ ಮನವರಿಯಬಹುದು. ಆದರೆ ಪ್ರಖ್ಯಾತ ಜೋತಿಷ್ಯರೊಬ್ಬರ ಪ್ರವಾದದಂತೆ ಮೇರೆಗೆ ಹಿಟ್ಲರರ ದಿವಸಗಳು ಎಣಿಸಲ್ಪಟ್ಟಿರುವುವು. ಲೋಕಶಾಂತಿಯು ಸಮೀಪಿಸಲಿರುತ್ತಿರುವುದು.

ಹಿಂದುಗಳ ಪುಣ್ಯ ಸ್ಥಳ
ಬದ್ರಿನಾಥ

ಹಿಮವತ್ಪರ್ವತಗಳು ಹಿಂದೂ ತ್ರೈಯ್ಯೈಕತ್ವದ ಮೂಲವಾಗಿದೆ. ಅಸಾಧಾರಣ ಶಿಲ್ಪಗಳಿಂದ ಕಂಗೊಳಿಸುವ ಈ ದೇವಸ್ಥಾನಗಳನ್ನು ರಚಿಸಿದ ಕೌಪೀನಧಾರಿ ಋಷಿಗಳ ಶಕ್ತಿ ಎಂತಹುದೋ! ಗಂಗಾದೇವಿ ನಿರ್ಮಲ ಜಲದಿಂದ ದೇಗುಲವನ್ನು ತೊಯಿಸಿ ಕೃತಕೃತ್ಯಳಾಗಿದ್ದಾಳೆ. ಈ ಪುಣ್ಯಜಲದಲ್ಲಿ ಮಿಂದು ಪಾವನರಾದ ಯಾತ್ರಿಕರೆಷ್ಟೋ! ಭಗವತ್ ಪ್ರಾರ್ಥನೆಗೆ ಇಂತಹ ಶಾಂತಿಯ ಸದನ ಇನ್ನೆಲ್ಲಿ ದೊರಕೀತು?



ಪುರಿಯ ಜಗನ್ನಾಥ ದೇವಾಲಯವು ಜಗದ್ವಿಖ್ಯಾತವಾದುದು. ಇಲ್ಲಿಯ ರಥೋತ್ಸವವು ಹಿಂದಿನಂತೆ ಇಂದೂ ಭಾರತದಲ್ಲಿ ನಡೆವ ರಥಜಾತ್ರೆಗಳಲ್ಲೆಲ್ಲ ವಿಶೇಷವೆನಿಸಿದೆ. ಪುರಿಯ ಜಗನ್ನಾಥ ದೇವಾಲಯದ ಹೊರಗಿನ ದೃಶ್ಯವಿದು.

ಕ್ರಿಸ್ತ ಪೂರ್ವ ಸಾಧಾರಣ ಎರಡು ಸಾವಿರ ವರ್ಷಗಳ ಹಿಂದೆ ಹಿಂದುಸ್ಥಾನದ ಮೇಲೆ ಧಾಳಿಯಿಟ್ಟ ಆರ್ಯರು ಗಂಗಾ (ಗೇಂಜಸ್) ನದಿಯ ಫಲವತ್ತಾದ ಕಣಿವೆ ಪ್ರದೇಶಗಳಲ್ಲಿ ನೆಲಸಿದರು. ಮೂಲ ಜನಾಂಗವಾದ ದ್ರಾವಿಡರಂತೆಯೇ ಇವರು ಪಂಚ ಭೂತೋಪಾಸಕರಾಗಿದ್ದರು. ಪುರಾಣ ಪುಣ್ಯಕತೆ, ದಂತಕತೆ ಮೊದಲಾದುವುಗಳಲ್ಲಿ ಇವರಿಗೆ ಭಕ್ತಿ ನಂಬಿಗೆಯುಂಟಾಯಿತು.

ಬೆಟ್ಟ ಪ್ರದೇಶಗಳಲ್ಲಿ ಪ್ರಾಕೃತಿಕ ಶಕ್ತಿಯೆಂತಹದೆಂಬುದನ್ನು ಮನಗಾಣಬಹುದು. ಜೀವನಾಧಾರವಾದ ಸಮಸ್ತ ವಸ್ತುಗಳ ಬೆಳವಣಿಗೆಗೆ ಆವಶ್ಯವಿದ್ದ ಗಂಗಾನದಿಯ ತಡಿ ಪ್ರದೇಶದಲ್ಲಿ ವೇದ ಹಾಗೂ ಹಿಂದೂಪುರಾಣ ಕತೆಗಳಿಗೆ ಸಂಬಂಧಪಟ್ಟ ನಾನಾ ದೇವತೆಗಳನ್ನು ಪೂಜಿಸುವ ಜನರು ವಸಾಹತುಗಳನ್ನು ಸ್ಥಾಪಿಸಿದರು. ಹಿಮಾಲಯ ಪರ್ವತಗಳಲ್ಲಿ ಅತ್ಯುನ್ನತ ಶಿಖರಗಳಲ್ಲೊಂದಾದ ಬದ್ರಿನಾಥವು 23 ಸಾವಿರ ಅಡಿ ಎತ್ತರ ಬೆಳೆದಿದೆ. ಈ ಪರ್ವತ ಸಮುದಾಯಗಳಲ್ಲಿ ನಿರಂತರ ಹಿಮವು ಬೀಳುತ್ತಿರುವುದರಿಂದ ಹಿಮ ಪ್ರವಾಹವು ಕೆಳಗೆ ಹರಿದು ಗಂಗಾ, ಮೊದಲಾದ ನಾನಾ ನದಿಗಳು ಜನ್ಮವೆತ್ತಿದುವು ಎಂಬುದನ್ನು ಮರೆಯಲಾಗುವುದಿಲ್ಲ. ಈ ಹಿಮರಾಶಿಗಳಿಂದ ಕೂಡಿದ ಮಹಾ ಶಿಖರವು ಹಿಂದೂ ತ್ರೈಯ್ಯೈಕತ್ವ (ತ್ರಿಮೂರ್ತಿ ತತ್ವ)ದ ಮೂಲವಾಗಿದೆ.

ಆರ್ಯರು ಹಿಂದುಸ್ಥಾನದ ಉತ್ತರ ಭಾಗವನ್ನು ಅತಿಕ್ರಮಿಸುವ ಮೊದಲೇ ಪವಿತ್ರ ಘನಪಂಡಿತರೂ, ಮಹಾ ಋಷಿವರ್ಯರೂ, ಗಂಗಾನದಿಯನ್ನು ಜಲಸಮುದಾಯದಿಂದ ಪೋಷಿಸುವ ಅಲಕನಂದ ಮತ್ತು ಬಾಗೀರಥೀ ಹಿಮಸಾಗರಗಳ ಕಣಿವೆಗಳನ್ನೂ ಪ್ರವೇಶಿಸಿದ್ದರು. ಕ್ರಿಸ್ತ ಶಕದ ಪೂರ್ವದಲ್ಲೇ ಗಂಗಾನದಿಯ ಮೂಲ ಹಾಗೂ ಇನ್ನಿತರ ಉಪನದಿಗಳ ಉಗಮಸ್ಥಾನದ ಭೂಗೋಲವನ್ನು ಶೋಧಿಸಲಾಗಿತ್ತೆಂಬುದು ವೇದಕಾಲದ ರಿಕಾರ್ಡುಗಳಿಂದ ಸಮರ್ಥಿಸಬಹುದಾಗಿದೆ. ಪ್ರತಿಯೊಂದು ಭವ್ಯ ನೋಟ, ಜಲಪಾತ ಇವುಗಳಿಗೆ ದೇವತೆಗಳ ಜೀವನದ ಕೆಲವು ಘಟನೆಗಳ ಸಂಬಂಧವನ್ನು ಕೊಡಲಾಯಿತಲ್ಲದೆ, 23 ಸಾವಿರಡಿಗಳಲ್ಲಿಯೂ ಬದ್ರಿನಾಥ ಮೊದಲಾದ ದೇವಾಲಯಗಳನ್ನು ಸ್ಥಾಪಿಸಲಾಯಿತು.

ಕ್ರಿಸ್ತಪೂರ್ವ 7ನೇ ಶತಮಾನದಲ್ಲಿ ಬೌದ್ಧಮತವು ಜನ್ಮವೆತ್ತಿತು. ಈ ನವಜೂಪ ಇಲ್ಲವೇ ತತ್ವವು ಜನಾದರಕ್ಕೆ ಪಾತ್ರವಾಯಿತು. ಆದಿಧರ್ಮವು ಇದರಿಂದ ತುಸುಮಟ್ಟಿಗೆ ಮೂಲೆಗೆ ಸೇರಿತೆಂದು ಹೇಳಿದರೂ ಹೇಳಬಹುದಾಗಿದೆ. ಸಾವಿರಾರು ವರ್ಷಗಳವರೆಗೆ ಈ ಬದ್ರಿಯಲ್ಲಿದ್ದ ಪುಣ್ಯ ದೇವಸ್ಥಾನಗಳನ್ನು ಸಂದರ್ಶಿಸುವವರೇ ವಿರಳವಾಯಿತು. ಅಷ್ಟರಲ್ಲಿ ಶಂಕರಾಚಾರ್ಯರೆಂಬ ಮಹಾಸುಧಾರಕರು ತಮ್ಮ ತಪೋಮಹಿಮೆಯಿಂದಲೂ, ಅಸಾಧಾರಣ ಪ್ರತಿಭೆ, ಪ್ರತಿಷ್ಠೆಯಿಂದಲೂ, ಅವ್ಯಾಹತವಾಗಿ, ಅವಿಶ್ರಾಂತವಾಗಿ ಹೋರಾಡಿದುದರಿಂದ ಹಿಂದೂಧರ್ಮದ ಪುನರುಜ್ಜೀವನವಾಯಿತು.

ಹಿಂದೂ ಧರ್ಮದ ಪುನರುಜ್ಜೀವನ

ಸ್ವಾಮಿ ಶಂಕರಾಚಾರ್ಯರು ಬರೇ 32 ವರುಷಗಳ ವರೆಗೆ ಬಾಳಿದರು. ಆದರೆ ಈ ಅತ್ಯಲ್ಪ ಸಮಯದಲ್ಲಿ ಗಂಗಾನದಿಯ ಬೇರೆಬೇರೆ ಪ್ರದೇಶಗಳಲ್ಲಿ ಹಲವು ದೇವಸ್ಥಾನಗಳನ್ನು ಕಟ್ಟಿಸಿದರಲ್ಲದೆ ಯಾತ್ರಾ ಪದ್ಧತಿಗೆ ಜೀವಕಳೆಯನ್ನು ಕೊಟ್ಟರು. ಬದ್ರಿನಾಥ, ಕೇದಾರ್‌ನಾಥ, ಗಂಗೋತ್ರಿ ಮೊದಲಾದ ಹಲವು ಇನ್ನಿತರ ಪ್ರದೇಶಗಳಲ್ಲಿ ರಚಿಸಲ್ಪಟ್ಟ ಅಸಾಧಾರಣ ಶಿಲ್ಪ ಹಾಗೂ ಕೆತ್ತನೆ ಕೆಲಸಗಳಿಂದ ಮನರಂಜಿಸುವ, ಕಂಗೊಳಿಸುವ ದೇವಾಲಯಗಳು ಸ್ವಾಮಿ ಶಂಕರಾಚಾರ್ಯರ ಅಪ್ರತಿಮ ಸಾಹಸದ ಸ್ಮಾರಕಗಳಾಗಿವೆ!

ಯಾತ್ರಾಮಾರ್ಗ

ಅಂದಿನಿಂದ ವಸಂತಕಾಲದಲ್ಲಿ ಪ್ರಯಾಣ ಬೆಳೆಸುವ ಯಾತ್ರಾರ್ಥಿಗಳಿಗೆ ಕಡಿಮೆಯಿಲ್ಲ. ಎಪ್ರೀಲ್ ಮತ್ತು ಆಗೋಸ್ತ್ ತಿಂಗಳವರೆಗೆ ಹರಿದ್ವಾರದಿಂದ ಬದ್ರಿನಾಥ ಮತ್ತು ಕೇದಾರ್‌ನಾಥಕ್ಕೆ ನೀಡಿರುವ 140 ಮೈಲುಗಳಲ್ಲಿ ಯಾತ್ರಾರ್ಥಿಗಳ ಪ್ರವಾಹವು ದೃಷ್ಟಿಪಥಕ್ಕೆ ಬೀಳುತ್ತಿದೆ.



ದ್ವಾರಕೆಯ ಒಂದು ದೃಶ್ಯ.

ಈ ಪುಣ್ಯ ಮಾರ್ಗದಲ್ಲಿ ಹಿಂದುಸ್ಥಾನದೆಲ್ಲ ಪ್ರದೇಶಗಳಿಂದಲೂ ಆಗಮಿಸಿರುವ, ಅಷ್ಟು ಏಕೆ ಪ್ರಪಂಚದ ಇನ್ನಿತರ ಭಾಗಗಳಿಂದ ಬಂದಿರುವ ಯಾತ್ರಾರ್ಥಿಗಳನ್ನೂ ಕಾಣಬಹುದಾಗಿದೆ. ಅನಾರೋಗ್ಯಕ್ಕೆ ತುತ್ತಾಗಿದ್ದವರನ್ನು ನಾಲ್ಕು ಕೂಲಿಗಳು ಡೋಲಿಯಲ್ಲಿ ಒಯ್ಯುವರು; ಪ್ರಾಯ ಪ್ರಬುದ್ಧರನ್ನು ದೃಢಕಾಯ ಕೂಲಿಗಳು ತಮ್ಮ ಬೆನ್ನಿನ ಮೇಲೆ "ಕೂಸು ಮರಿಯಂತೆ" ಇಲ್ಲವೇ ಬುಟ್ಟಿಯಲ್ಲಿ ಕೂಡ್ರಿಸಿ ಕರೆದೊಯ್ಯುವರು. ಆದರೆ ಹೆಚ್ಚಿನವರು ಪಾದಚಾರಿಗಳಾಗಿಯೇ ತೆರಳುವರು. ಈ ಯಾತ್ರಾರ್ಥಿಗಳಲ್ಲಿ ವೃದ್ಧ ಸ್ತ್ರೀ ಪುರುಷರಿಗೆ ಕಡಿಮೆಯಿಲ್ಲ.

ಅಸಾಧ್ಯ ಪ್ರಯಾಣದಿಂದ ಅವರು ತೀರ ಕಂಗೆಟ್ಟು ಹೋಗುವುದು ಆಶ್ಚರ್ಯವಲ್ಲ. ಹಲವು ವೃದ್ಧರು ಏಕಾಂಗಿಗಳಾಗಿಯೇ ಹೋಗಿ ಹಿಂದೆ ಬರುತ್ತಿರುವುದು ಹೆಮ್ಮೆ ಪಡತಕ್ಕ ವಿಷಯವೇ ಸರಿ!

ಹರಿದ್ವಾರವು ಅಲ್ಕಾನಂದ ನದಿಯ ಉಗಮಸ್ಥಾನ ನಿಜವಾಗಿ ಹೇಳುವುದಾದರೆ ಪ್ರಯಾಣ ಮಾಡಲು ಇಲ್ಲಿಂದಲೇ ಕಷ್ಟ. ಹರಿದ್ವಾರದಿಂದ 10 ದಿವಸಗಳ ದಾರಿಯನ್ನು ಅತಿಕ್ರಮಿಸಿದಾಗ ಸಮುದ್ರ ಮಟ್ಟದಿಂದ 3 ಸಾವಿರ ಅಡಿ ಉನ್ನತದಲ್ಲಿರುವ ಚಾಮೋಲಿ ಕಣಿವೆಗೆ ಪ್ರವೇಶಿಸುವೆವು. ಸೂರ್ಯನ ತಾಪಕ್ಕೆ ಸಿಕ್ಕಿ ನುಚ್ಚುನೂರಾಗಿರುವ ಕೊರಕಲಾಗಿರುವ ಈ ಪಾದೆಯಲ್ಲಿ ನಡೆಯುವುದೆಂದರೆ ವಿನೋದವಲ್ಲ. ಇಲ್ಲಿ ದಾರಿ ಕವಲೊಡೆದಿದೆ. ಪಶ್ಚಿಮ ದಾರಿಯನ್ನು ಹಿಡಿದು ಹೋದರೆ ಪ್ರಶಾಂತವಾದ, ಗಂಭೀರ ಹಸುರು ಅರಣ್ಯದ ಮೂಲಕ ಕೇದಾರ್‌ನಾಥವನ್ನು ಸೇರುವೆವು. ಇಲ್ಲಿ ಕೊರಕಲಾದ ಹಿಮರಾಶಿಯಿಂದ ತುಂಬಿದ್ದ ಅಪಾಯಕರ ಡೊಂಕು ದಾರಿಯಲ್ಲಿ ಮುಂದೆ ಸಾಗಬೇಕಾಗುತ್ತದೆ. ಹಲವು ಯೋಗ್ಯ ರಮಣೀಯ ಪ್ರದೇಶಗಳಲ್ಲಿ ಪುರಾತನ ದೇವಸ್ಥಾನಗಳು [illegible] ಸಲ್ಪಟ್ಟಿವೆ. ಭಗವತ್ ಪ್ರಾರ್ಥನೆಗೆ ಇಂಥಾ ನಿರ್ಜನ, ಶಾಂತಿಮಯ ತಪ್ಪಲು ತಾನೇ ದೊರೆಯಬೇಕು?



ಬುದ್ಧಗಯೆಯ ಮಹಾ ದೇವಾಲಯ.

ಗಂಗಾನದಿಯು ದೇವಸ್ಥಾನದ ಬದಿಯಲ್ಲೇ ಹರಿಯುತ್ತ ತನ್ನ ನಿರ್ಮಲ ಜಲದಿಂದ ದೇವದೇವನ ಸೇವೆಮಾಡಿ ಪಾವನಳಾಗುತ್ತಾಳೆ. ಈ ಪುಣ್ಯ ಹಿಮ ನದಿಯಲ್ಲಿ ಯಾತ್ರಿಕರು ಸ್ನಾನವನ್ನು ಮಾಡಿ, ವಿಷ್ಣು ದೇವರನ್ನು ವಂದಿಸಿ ಕೃತಕೃತ್ಯರಾಗುತ್ತಾರೆ. ಎಷ್ಟು ಶತಮಾನಗಳಿಂದ ಅದೆಷ್ಟು ಕೋಟಿ ಕಟ್ಟಲೆ ಯಾತ್ರಿಕರು ಈ ಪವಿತ್ರ ಸ್ನಾನವನ್ನು ಮಾಡಿರುವರೋ! ಇಲ್ಲಿಂದ ಮೂರು ಮೈಲು ಮುಂದರಿದರೆ ಗಂಗಾನದಿಯ ಮೂಲವನ್ನು ಕಾಣಬಹುದು. ಚಿಕ್ಕದೊಂದು ಕೆಸರಿಂದ ತುಂಬಿದ್ದ ಕೆರೆಯಿಂದ ಗಂಗೆ ಜನ್ಮವೆತ್ತುತ್ತಾಳೆ! ಅದರೆ [illegible] ವಾಸುಧರ ಜಲಪಾತವಿದೆ ವಿಷ್ಣುವಿನ [illegible]ದಿಂದ ಹರಿವ ನೀರು ಇಲ್ಲೇ ಎಂದು ಯಾತ್ರಿಕರು ಪೂಜಿಸುತ್ತಾರೆ. ಈ [illegible] ಸುತ್ತುಮುತ್ತಲಿರುವ ಕಲ್ಲಿನ ಪೊಟರೆಯಲ್ಲಿ ನಿಶ್ಚಿಂತರಾಗಿ [illegible] ಮಗ್ನರಾದ ಹಿಂದೂ ಋಷಿಗಳನ್ನೊಬ್ಬಿಬ್ಬರನ್ನು [illegible].

ಕೊನೆಯ 7 ಮೈಲುಗಳ ಕಡಿದಾದ ದಾರಿಯನ್ನು ಆಕ್ರಮಿಸುವುದು ಬಹುದೊಡ್ಡ ಸಂಕಷ್ಟವೇ ಸರಿ. ಇಲ್ಲೇ 3 ಸಾವಿರ ಎತ್ತರವೇ [illegible] ಪ್ರಪಾತ [illegible]. [illegible] ಪ್ರಶಾಂತ [illegible] ಕಾಣುವಿರಿ. ಹಿಮರಾಶಿಯಿಂದ ನಿಬಿಡವಾಗಿರುವ ಕೇದಾರ್‌ನಾಥ ಗಿರಿಯನ್ನು ಇಲ್ಲಿಂದ ನೋಡಬಹುದು. ಇಲ್ಲಿ ಕಲ್ಲಿನಿಂದಲೇ ಕಟ್ಟಲ್ಪಟ್ಟ ದೇವಸ್ಥಾನವೊಂದಿದೆ. ಅದರ ಸುತ್ತುಮುತ್ತಲೂ ಪ್ರಯಾಣಿಕರಿಗೆ ಉಳಕೊಳ್ಳಲು ನಿರ್ಜನ ವಿಶ್ರಾಂತಿ ಗೃಹಗಳಿವೆ. ಯಾತ್ರಿಕರು ವೇಗಿಲಡ ಮುಂದಿರುವ ಪ್ರವಾಹದಲ್ಲಿ ಮಿಂದು ಶುಚಿರ್ಭೂತರಾಗಿ ಶಿವನಿಗೆ ನಮಸ್ಕಾರವಂ ಮಾಡಿ ಪುನಃ ಚಾಮೋಲಿಗೆ ಹಿಂದೆ ರಳುವರು.



ದ್ವಾರಕೆಯು ಹಿಂದುಗಳ ಪ್ರಾಮುಖ್ಯ ಯಾತ್ರಾಸ್ಥಳಗಳಲ್ಲಿ ಒಂದು. ಈ ಚಿತ್ರದಲ್ಲಿ ಕಾಣುತ್ತಿರುವುದು ದ್ವಾರಕೆಯ "ಜಗನ್ಮಂದಿರ" ಎಂಬ ದೇವಾಲಯ. ಅಲ್ಲಿಯ ದೇವಾಲಯಗಳಲ್ಲಿ ಇದು ಮುಖ್ಯ.

ಬದ್ರಿನಾಥ

ಚಾಮೋಲಿಯಿಂದ ಪೂರ್ವಕ್ಕೆ ತೆರಳುವ ದಾರಿಯು ಬದ್ರಿನಾಥಕ್ಕೆ ಕರೆದೊಯ್ಯುವುದು. ಈ ಮಾರ್ಗವು ತೀರ ಅಪಾಯಕರ. ಆಳಬುಡದಲ್ಲಿ ಭೋರ್ಗರೆಯುತ್ತ ನೊರೆಯನ್ನು ಪ್ರೋಕ್ಷಿಸುತ್ತ ರಭಸದಿಂದ ಹರಿವ ನದಿ. ಜೋಶೀನಾಥವೆಂಬ ಸ್ಥಳದಲ್ಲಿ ಋಷಿ ಗಂಗಾನದಿಯೊಡನೆ ಸಂಗಮವಾಗುವುದು. ಇದರ ನಡುವೆ ಇರುವ ಅಗಾಧಶಿಲ್ಪಿಯಾದ ಪ್ರಕೃತಿದೇವಿ ರಚಿಸಿರುವ ಕಲ್ಲಿನ ಸೇತುವೆಯಿಂದ ಹೋಗಬೇಕು. ಕೆಳಗೆ ಎರಡು ಗಂಡು ನದಿಗಳ ಸಂಗಮಸ್ಥಾನ. ದೊಡ್ಡ ಬಿಸಿ ನೀರಿನ ಕಡಾಯಿಯಂತೆ ಕುದಿವ ನೊರೆನೀರಿನ ನೋಟವನ್ನು ಬಣ್ಣಿಸಲು ಯಾವ ಮಹಾ ಕವಿಯಿಂದಲೂ ಅಸಾಧ್ಯವೆಂದೆನ್ನಬೇಕು.

ಅಲ್ಲಿಂದ ಮತ್ತೆ ಮೂರು ದಿನಗಳ ಪ್ರಯಾಣಮಾಡಿದಾಗ ಇಬ್ಬದಿಗಳಲ್ಲೂ ಗಗನಕ್ಕೇರಿರುವ ಹಿಮ ಪರ್ವತಗಳ ನಡುವೆ ಇರುವ ಕಣಿವೆಗೆ ಬರುವೆವು. ಇದನ್ನು ದಾಟಿ ಮುಂದೆ ಬಂದಾಗ ಹಸುರು ಹುಲ್ಲುಗಾವಲಿನ ಇಳಿ ಪ್ರದೇಶದಲ್ಲಿ ತಾನೇ ತಾನಾಗಿ ಮೆರೆವ ಎರಡು ಗೋಪುರ ಶಿಖರಗಳಿಂದ ಒಪ್ಪುವ ಬದ್ರಿನಾಥ ದೇವಸ್ಥಾನವು ಯಾತ್ರಿಕನ ಕಣ್ಮನವನ್ನೆ ಮೋಹಿಸಿ, ಅವನ ಹೃದಯದಲ್ಲಿ ಒಂದು ರೀತಿಯ ಸಮಾಧಾನ, ಶಾಂತಿ, ತೃಪ್ತಿಯನ್ನುಂಟುಮಾಡುವುದೆಂದರೆ ಅತಿಶಯೋಕ್ತಿಯಾಗಲಾರದು. ಒಂದು ಚಿನ್ನದಿಂದ ಕಟ್ಟಿದ ಗೋಪುರ ಶಿಖರ ಇನ್ನೊಂದು ಚಂದ್ರಕಾಂತ ಶಿಲೆಯಿಂದ ಕಟ್ಟಲ್ಪಟ್ಟಿದೆ. ಇದರ ಸುತ್ತಮುತ್ತಲೂ ಕಲ್ಲಿನಿಂದಲೇ ವಿರಚಿತವಾದ, ಮರದ ಮಾಡುಗಳಿಂದ ಮುಚ್ಚಲ್ಪಟ್ಟ ಚಿಕ್ಕ ಕುಟೀರಗಳಿವೆ.

ಬದ್ರಿನಾಥ, ಕೇದಾರ್‌ನಾಥ ಮತ್ತು ಗಂಗೋತ್ರಿಗಳಿಗೆ ನಟ್ಟಗಿರುವ ಪರಸ್ಪರ ದೂರ 20 ಮೈಲು. ಈ ಮೂರು ದೇವಸ್ಥಾನಗಳಲ್ಲೂ ಪ್ರಾಚೀನ ಕಾಲದಲ್ಲಿ ಒಬ್ಬನೇ ಪೂಜಾರಿ ಪೂಜೆಯನ್ನು ನಡೆಸುತ್ತಿದ್ದನೆಂಬ ಕಥೆಯಿದೆ.

ಯಾತ್ರಿಕರಿಗೆ ಒದಗಿಸಲಾದ ಸೌಕರ್ಯಗಳು

ಪ್ರಾಚೀನ ಕಾಲದಲ್ಲಿ ಯಾತ್ರೆಯನ್ನು ಮಾಡುತ್ತಿದ್ದ ಪ್ರಯಾಣಿಕರು ಚಳಿಗಾಳಿ ಬಿಸಿಲಿನ ಏಟಿಕ್ಕೆ ಸಿಕ್ಕಿ ನಾನಾರೋಗಗಳಿಂದ ನರಳುತ್ತಿದ್ದರು. ಆದರೆ ಈಗ ಸ್ವಾಭಾವಿಕ ಸಂಕಷ್ಟಗಳನ್ನು ಅನುಭವಿಸಬೇಕಾಗಿದೆ. ಮಾತ್ರ ಅಲ್ಲಲ್ಲಿರುವ ವಿಶ್ರಾಂತಿ ಗೃಹಗಳಿಗೆ ನೆಳದ ಮೂಲಕ ಹಿಂದುಸ್ಥಾನ ಸರಕಾರ [illegible] ಒದಗಿಸಿಕೊಟ್ಟಿದೆ. ಮಾರ್ಗ ಮಧ್ಯೆ ಅಲ್ಲಲ್ಲಿ ಯೋಗ್ಯ ವೈದ್ಯರು [illegible] ಚಿಕಿತ್ಸೆಯನ್ನು ಕೊಡುವರು.

ಈ ರೀತಿ ನಡೆಯುತ್ತಿದೆ ಅಲ್ಲಿಯ ಪ್ರಪಂಚ. ನಂದಾದೇವಿ ಮೊದಲಾದ ಎಷ್ಟೋ ಪವಿತ್ರ ಪ್ರದೇಶಗಳನ್ನು ಪಾಶ್ಚಾತ್ಯರು ಪತ್ತೆಹಚ್ಚಿ ಶೋಧಿಸಿರುವರು. ಆದರೂ ಮಿಲಿಯಾಂತರ ಜನರಿಗೆ ಇನ್ನೂ ಭಕ್ತಿಯಿದೆ. ಬ್ರಹ್ಮ ವಿಷ್ಣು ಮಹೇಶ್ವರ ನಿವಾಸಸ್ಥಾನವಿದುವೆಂಬ ಅವರ ಹೃದಯದಲ್ಲಿ ಮೂರ್ತಿಮತ್ತಾಗಿ ನಿಂತಿದೆ ಭಕ್ತಿ!

ಆಗಸ್ಟ್ ತಿಂಗಳಲ್ಲಿ ಮೇಲೆ ಚಳಿಗಾಲ ಪ್ರಾಪ್ತವಾಗುವುದರಿಂದ ಯಾತ್ರಿಕರು ಪ್ರಯಾಣ ಬೆಳೆಸುವುದಿಲ್ಲ. ದೇವಸ್ಥಾನಗಳಲ್ಲಿ ಬಾರಿಸಲ್ಪಡುತ್ತಿರುವ ಗಂಟೆಗಳು ಮೌನ ವ್ರತವನ್ನು ಆಚರಿಸುವವು. ಪ್ರವಾಹಗಳು ಅಲ್ಲಲ್ಲಿ ಭೂದೇವಿಯ ಉದರವನ್ನು ಪ್ರವೇಶಿಸಿ ಅವಳ ತೆಕ್ಕೆಯಲ್ಲಿ ವಿಶ್ರಾಂತಿ ಹೋಗುವವು. ಮಹಾ ಹಿಮವತ್ಪರ್ವತಗಳು ಸುಖ ನಿದ್ದೆಯನ್ನು ಗೈಯುವವು. ಸದ್ದಿಗೆ ಅಡ್ಡಿಯಿಲ್ಲ; ಎಲ್ಲವೂ ಮೌನ; ಎಲ್ಲೆಲ್ಲೂ ನೀರವತೆ.

ಆಫ್ರಿಕವು ಆಫ್ರಿಕಾನರಿಗೆ

ಬರೆದವರು: ಶ್ರೀ। ವೇಣುಗೋಪಾಲ ರಾವ್

ಆಫ್ರಿಕವು ಆಫ್ರಿಕಾನರಿಗೇ ಇದೆ. ಆವರೆ, ಬ್ರಿಟಿಷರು ಆಫ್ರಿಕಾನರಲ್ಲ. ಆಫ್ರಿಕದಲ್ಲಿ ಬಿಳಿಯರ ಕುಹಕೋಪಾಯಗಳು ಹೆಚ್ಚಿವೆಯೆಂಬುದನ್ನು, ಈ ಲೇಖಕರು ವಿವರಿಸುತ್ತ, ಈ ಸಂದರ್ಭದಲ್ಲಿ ಗಾಂಧಿ ಆಗಾಖಾನರೊಳಗೇನೋ ಮಾತುಕತೆಗಳು ನಡೆದುವು-ಗುಟ್ಟಾಗಿ; ಈ ರಹಸ್ಯವು ಸಲ್ಲದು. ಶ್ರೀ ಪಟೇಲಜೀಯವರೂ ಆಫ್ರಿಕಕ್ಕೆ ತೆರಳುವವರಿದ್ದಾರೆ. ಇವರು ಟಂಗನ್ಯಿಕವನ್ನು ಜರ್ಮನಿಗೆ ಬಿಟ್ಟುಕೊಡಬಾರದೆಂಬ ಚಳವಳಕ್ಕಾಗಿ ಹೋಗುವುದಾದರೆ ಅರ್ಥವೇ ಕೆಡುವುದು.

ಆಫ್ರಿಕದ ರೂಪವನ್ನೇ ಬದಲಿಸಿಬಿಡಬೇಕೆಂದು ಒಂದೆಡೆ ಮುಸಲಿನಿಯು ಅತಿ ಕ್ರೂರ ರೀತಿಯಲ್ಲಿ ಕಚ್ಚಾಟವಾಡುತ್ತಿದ್ದಾನೆ. ಆಫ್ರಿಕವು ಶ್ವೇತವರ್ಣೀಯ ಐರೋಪ್ಯರದಾಗಬೇಕೆಂಬುದು ಅವನ ದುರಾಗ್ರಹ. ಈ ಪಶುಬಲಪ್ರೇರಿತ ದುಷ್ಟ ಪ್ರಯತ್ನ ಹಾಗೂ ದುರಿಚ್ಛೆಯನ್ನು ಹಿಟ್ಲರನ ಹೇಯ ಸ್ವಾರ್ಥವು ಮುಂದರಿಸುತ್ತಿದೆ. ಅರ್ಥಾತ್ ಆಫ್ರಿಕವನ್ನು ಐರೋಪ್ಯಮಯವಾಗಿ ಮಾಡುವುದರಲ್ಲಿ



ಕಾಂಚನ ಗಂಗಾ ಶಿಖರದ ಒಂದು ನೋಟ

ಮುಸಲಿನಿಗೆ ಅವನೂ ನೆರವಾಗಿದ್ದಾನೆ. ಇವರೆಲ್ಲ, ಆಫ್ರಿಕವು ಆಫ್ರಿಕಾನ್ ಪ್ರಜೆಗಳಿಗೇ ಸೇರಿರುವುದೆಂದೂ, ಆ ದೇಶದ ಮೇಲಿನ ಅವರ ಅಧಿಕಾರವು ಸಿರ್ಪವಾದವಿದೆಯೆಂದೂ ಏಕಕಾಲದಲ್ಲಿ, ಆ ದೇಶದ ಪ್ರಜಾಜನರಿಗೆ ಏನೇನೂ ಅನ್ಯಾಯವಾಗದ ರೀತಿಯಲ್ಲಿ, ಅಲ್ಲಿ ಹೋಗಿ ನೆಲೆಸಿಲ್ಲಲು ಹಿಂದೀಯರಿಗೂ ಅವಕಾಶವಿರಬೇಕೆಂದೂ, ದುಷ್ಟ ಸ್ವಾರ್ಥಪ್ರೇರಿತ ಅಮಾನುಷೀ ಚಿತ್ತವೃತ್ತಿಯ ಪಾಶ್ಚಾತ್ಯ ಶಕ್ತಿಗಳು ಸಂಪೂರ್ಣ ದುರ್ಲಕ್ಷಿಸುತ್ತಾರೆ.

ಆಫ್ರಿಕದಲ್ಲಿ ಐರೋಪ್ಯನು ತನ್ನ ನಿರಂಕುಶಾಧಿಕಾರವನ್ನು ಇತ್ತ ಬಹು ಕಾಲದಿಂದ ನಿರಾತಂಕವಾಗಿ ನಡೆಸುತ್ತಾ ಬಂದಿದ್ದಾನೆ. ಅಂಥ ವಿಸ್ತಾರವಾದ ಭೂಖಂಡವನ್ನು ಸಂಪೂರ್ಣ ತನ್ನ ದಾಸ್ಯದ ಕಟ್ಟಿಗೆ ಸಿಲುಕಿಸಿ ಆ ರಾಷ್ಟ್ರದ ಸೂರೆಮಾಡುತ್ತಿರುವ ಈ ಐರೋಪ್ಯನ ಕೈತಡೆದವರು ಇಷ್ಟರ ವರೆಗಿಲ್ಲ. ಅನ್ಯಾಯವೆಂದು ಇದಿರಾಡಿದ ಸಶಕ್ತ ಸ್ವರವೊಂದೂ ಇಷ್ಟರ ವರೆಗೆ ಕೇಳಿಬಂದುದಿಲ್ಲ. ಸರಿಯೆಂದು ಹೇಳಲು ಏನೇನೂ ಆಧಾರವಿಲ್ಲದಿರುವ ರೀತಿ ಐರೋಪ್ಯನ ವರ್ತನೆಯಿದ್ದರೂ ಇತರ ಚಿಕ್ಕಪುಟ್ಟ ಅನ್ಯಾಯಗಳನ್ನು ಖಂಡಿಸುವದರಲ್ಲಿ ಸಿಟ್ಟಿನ ಕಿಡಿ ಕಾರುವುದಕ್ಕೂ ಸಿದ್ಧವಿರುವ ಅನ್ಯೈರೋಪ್ಯ ರಾಷ್ಟ್ರೀಯರು ಐರೋಪ್ಯರ ಆಫ್ರಿಕಾಹರಣ ಧೋರಣೆಯ ವಿಚಾರದಲ್ಲಿ ಮೌನಸಮ್ಮತಿಯನ್ನು ತೋರಿ ತೆಪ್ಪಗೆ ಕುಳಿತಂತಿದೆ. ಅದೇಕೆ? ಇದಕ್ಕೆ ಕಾರಣವೇನು? ಕಾರಣ ಹುಡುಕಲು ದೂರಹೋಗಬೇಕಾಗಿಲ್ಲ. ಇತರರು ಮುಖ್ಯವಾಗಿ ಅನ್ಯೈರೋಪ್ಯ ರಾಷ್ಟ್ರಗಳು ಐರೋಪ್ಯರ ಔಡುಧಾಳಿಯನ್ನು ಒಪ್ಪಿಕೊಂಡು ಸುಮ್ಮನಾದುದಲ್ಲಿ ಕ್ರೌರ್ಯವೇ ರೂಪಾಂತು ಬಂದಿರುವ ಆಧುನಿಕ ನಾಗರಿಕತೆಯೇ ಅಂಥ ಹೊಸತೊಂದು ಪೈಶಾಚಿಕ ಅಮಾನುಷ ಅಧಿಕಾರವೇ, ಅಲ್ಪಬಲರನ್ನು ಅಧಿಕಬಲರು ತಮ್ಮ ಲೋಹಮುಷ್ಟಿಯೊಳಗೆ ಅಮುಕಿ ಬಿಗಿಹಿಡಿದುಕೊಳ್ಳುವ ಇಂದಿನ ಐರೋಪ್ಯರಾಷ್ಟ್ರಗಳ ರಾಕ್ಷಸೀಮಹತ್ವಾಕಾಂಕ್ಷೆಯೇ ಕಾರಣ. ಯಾರು ಸಂಸ್ಕೃತರು ಯಾರು ಅನಾಗರಿಕರೆಂದು ನಿರ್ಧರಿಸುವ ಸರ್ವಾಧಿಕಾರವನ್ನು ಐರೋಪ್ಯನು ತನ್ನ ಸ್ವಾರ್ಥದ ಒರೆಗಲ್ಲಿನಲ್ಲಿ ಅಳೆವ ನಿಸವಿಂದಿಸದು. ಸರ್ವನಾಶಕವಾದ ರೀತಿಯ ದುಷ್ಟ ಶಾಸನಾಧಿಕಾರದಿಂದ ಐರೋಪ್ಯನು ರಾಷ್ಟ್ರ ರಾಷ್ಟ್ರಗಳನ್ನೇ ತನ್ನ ದಾಸ್ಯದಲ್ಲಿ ಸಿಕ್ಕುನರಳುವಂತೆಸಗುವ ರಾಕ್ಷಸೀ ಬಲವನ್ನುಪಯೋಗಿಸುವುದೇ ತನ್ನ ಸರ್ವಸ್ವವೆಂದು ತಿಳಿದಿದ್ದು ಲೋಕದಲ್ಲಿ ತಾನೇ ತಾನಾಗಿ ಶ್ವೇತವರ್ಣೀಯನು ಅಧಿಕಾರ ನಡೆಸುವ ಸಲುವಾಗಿಯೇ ಹುಟ್ಟಿರುವನೆಂದು ಐರೋಪ್ಯನು ತಿಳಿದಂತಿದೆ. ಆಫ್ರಿಕಾನರು ಅತಿ ಅವನತಿ ಸ್ಥಿತಿಗೆ ಇಂದು ಇಳಿದಿದ್ದಾರೆ. ಇನ್ನೂ ಅವರ ಸ್ಥಿತಿ ಹಾಳಾಗಲು ಸಾಧ್ಯವಿಲ್ಲ. ಐರೋಪ್ಯರ ದಬ್ಬಾಳಿಕೆಯು ಪರಮಾವಧಿಗೆ ಇಂದು ಮುಟ್ಟಿದೆ. ಇನ್ನು ಅವರ ಕೈಚಳಕ ನಡೆಯಬಿಡಲು ಬಾರದು. ಅವರಿಗೂ ಮುಂದರಿಯದಂತೆ ಎಲ್ಲೆಡೆಗಳವರೂ ಘಂಟಾಘೋಷವಾಗಿ ಸಾರಬೇಕಾಗಿದೆ. "ಆಫ್ರಿಕದಲ್ಲಿ ಬಿಳಿಯರ ಆಧಿಪತ್ಯವು ಇನ್ನು ಸಾಕು" ಎಂದು ಲೋಕವೇ ಹೇಳಬೇಕಾಗಿದೆ. ಅನ್ಯೈರೋಪ್ಯ ರಾಷ್ಟ್ರಗಳವರೆಲ್ಲ, ಮುಖ್ಯವಾಗಿ ಹಿಂದೀಯರು (ಪ್ರಾಚೀನ ಸಾಮ್ರಾಜ್ಯಶಕ್ತಿಯಾಗಿದ್ದು ಇಂದಿಗೆ ಆ ರಾಜಕೀಯ ಪ್ರಾಧಾನ್ಯವು ನಶಿಸಿಹೋದವರಾಗಿರುವ ಗುಲಾಮ ವ್ಯಾಪಾರಿ ಅರಬರ ಹೊರತು) ತಾವು ನಿರುಪದ್ರವ ರೀತಿಯಲ್ಲಿ ಆಫ್ರಿಕದಲ್ಲಿ ನೆಲಸುವ [illegible]ರವನ್ನು ತಮ್ಮ ಪಾಲಿಗೆ ಇರಿಸಿಕೊಂಡು ಆಫ್ರಿಕದ ಸಂಪೂರ್ಣ ಅಧಿಕಾರವು ಆಫ್ರಿಕಾನರಿಗೇ ಸಿಕ್ಕಬೇಕೆಂಬ ಬಗ್ಗೆ ತಂತಮ್ಮ ಸಂಪೂರ್ಣ ನೈತಿಕ ಮಾನಸೀಬಲವನ್ನು ಆಫ್ರಿಕದ ಅನುಕೂಲಪ್ರದವಾಗಿ ಸದುಪಯೋಗಗೊಳಿಸುವ ಸುಸಂಧಿಯು ಇಂದು ಒದಗಿದೆ.

೧೯೩೨ರಲ್ಲಿ ಕೇಪ್ಟನ್ ಸ್ಕೊಟನು ಬೆಳಕಿಗೆ ತಂದಿರ ಚರಿತ್ರೆಗೆ ಸಂಬಂಧಪಟ್ಟ ಗ್ರಂಥಪ್ರಮಾಣಗಳ ಆಧಾರದಲ್ಲಿ ಕಂಡುಬರುವಂತೆ ಹಿಂದೀಯರಿಗೂ ಅತಿ ಪ್ರಾಚೀನ ಕಾಲದಿಂದಲೂ ವಾಣಿಜ್ಯ ಸಂಬಂಧವಿತ್ತು. ಅಲ್ಲಿನವರು ಇಲ್ಲೂ ಇಲ್ಲಿನವರು ಅಲ್ಲೂ ಹೋಗಿ ಬಂದು ನೆಲೆನಿಲ್ಲುತ್ತಿದ್ದರು ಎಂಬುದು ಸ್ಪಷ್ಟವಿದೆ.

ಆಫ್ರಿಕದಲ್ಲಿ ಸಂಪೂರ್ಣ ಕೃಶವಾಗಿ ಇನ್ನೂ ಉಳಿದಿರಬಹುದಾದ ಮಾಂಸದ ಚೂರನ್ನು ಎಲುಬಿನ ವರೆಗೂ ಕಿತ್ತು ತಿನ್ನುವ ನೆವದಿಂದ ಐರೋಪ್ಯನು "ಆಸ್ಯದ ಹೆಮ್ಮಾರಿ" ಎಂದು ಹಿಂದೀಯರನ್ನು ಆಫ್ರಿಕದಿಂದ ಓಡಿಸುವ ಪ್ರಯತ್ನವನ್ನು ಯಶಸ್ವಿಯಾಗಿಯೇ ನಡೆಸಿದುದೊಂದಲ್ಲದಿರುತ್ತಿದ್ದುದೇ ಆಗಿದ್ದರೆ ಮೊದಲಿನಂತೆಯೇ ಇಂದಿಗೂ ಹಿಂದೀಯರ ಸಮೀಪ ಸಂಬಂಧವು ಆಫ್ರಿಕಾನರೊಡನೆ ಚಿರವಾಗಿ ಸ್ಥಿರವಾಗಿ ಉಳಿಯುತ್ತಿತ್ತು. ಆಫ್ರಿಕಾನರೊಡನೊಂದುಗೂಡಿ ನಡೆಯಲು ಅವರ ರೀತಿ ನೀತಿಗಳನ್ನು ಕ್ರಮ ನಿಯಮಗಳನ್ನು ತನ್ನದಾಗಿ ಮಾಡಿಕೊಂಡು ಸರಾಗವಾಗಿ ಸಂಕೋಚವಿಲ್ಲದೆ ಅಲ್ಲಿಯವರೊಡನೆ ಕಲೆತು ತನ್ನ ವೈಶಿಷ್ಟ್ಯವನ್ನು ಬದಿಗಿಟ್ಟು ಸುಖಬಾಂಧವ್ಯದಿಂದ ಆಫ್ರಿಕಾನರೊಡನೆ ಕುಟುಂಬಿಕ ಪ್ರೇಮಪುರಸ್ಸರವಾಗಿ ವಾಸಿಸಲು ಹಿಂದೀಯನಷ್ಟು ಯೋಗ್ಯನು ಬೇರಾವ ರಾಷ್ಟ್ರೀಯನೂ ಇಲ್ಲ.

ಆಫ್ರಿಕಾನರಾದ ಐರೋಪ್ಯರು ಮಿಗಿಲೆಂದು ಉದ್ಧಟತನದಿಂದ ತಮ್ಮ ಮೇಲ್ಮೆಯನ್ನು ವಾದಿಸುವ ಶ್ವೇತವರ್ಣೀಯರು ಆಫ್ರಿಕಾನರ ಸಹವಾಸವನ್ನು ಸಹಿಸರು. ಆದರೆ ಕರಿಜಾತಿಗೆ ಸೇರಿದ ಹಿಂದೀಯನು ಆಫ್ರಿಕಾನರೊಡನೆ ತನ್ನನ್ನೊಂದುಗೂಡಿಸಿಕೊಳ್ಳಲು ಎಂದಿಗೂ ಹೇಸನು. ಮನುಷ್ಯರನ್ನು ಹಿಡಿದು

ತಿನ್ನುವ ನರಭಕ್ಷಕರು ಆಫ್ರಿಕಾನರೆಂದು ಐರೋಪ್ಯನು ಲೋಕಕ್ಕೇ ಸಾರುತ್ತಿರುವನು. ಆದರೆ ಐರೋಪ್ಯರಿಂದ ನರಭಕ್ಷಕರೆಂದು ಕರೆಯಲ್ಪಡುವ ಆಫ್ರಿಕಾನರ ನಡುವೆ ವ್ಯಾಪಾರವು ಪೂರ್ಣ ನಡೆಸಿಕೊಂಡು ಹಿಂದೀಯನು ನಿರಾತಂಕವಾಗಿ ಜೀವಿಸಿಕೊಂಡಿರುವನು. ತನ್ನ ಹಕ್ಕು ಮತ್ತು ಆಫ್ರಿಕಾನರ ಹಕ್ಕುಗಳಿಗಾಗಿ ಇಂದು ಅಲ್ಲಿರುವ ಹಿಂದೀಯನು ಅರಣ್ಯರೋಧನ ಮಾಡಬೇಕಾದ ಸ್ಥಿತಿ ಬಂದಿದೆ.

ಚೀನದಲ್ಲಿ, ಅರೇಬಿಯದಲ್ಲಿ ಚೀನೀ ಅರಬೀ ಪ್ರಜೆಗಳ ರಾಷ್ಟ್ರೀಯಾಧಿಕಾರಕ್ಕೆ ಪರಕೀಯರಿಂದ ಹಾನಿತಟ್ಟಲಾಗದೆಂದು ಉದ್ಘೋಷಿಸುವ ನಮ್ಮ ಕೊಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳು ಬಿಳಿಯನು ಆಫ್ರಿಕದ ಗೋಜಿಗೆ ಹೋಗಬಾರದು. ಆಫ್ರಿಕದಿಂದ ಬಿಳಿಯನ ಅಧಿಕಾರವು ಹೊರದಬ್ಬಲ್ಪಡಲಿ" ಎಂದು ಸಾರಿ ಆ ಉದ್ದೇಶದಿಂದ ಪ್ರಯತ್ನ ನಡೆಸಿದುದೇ ಆದರೆ ಮಾತ್ರ ಲೋಕದಲ್ಲಿ ಶಾಂತಿ, ನ್ಯಾಯ ಅಹಿಂಸೆಗಳು ನೆಲೆನಿಲ್ಲುವುದಕ್ಕೆ ಸಹಾಯಕರಾದಂತಾದೀತು. ಆಫ್ರಿಕದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಮುಸ್ಲಿಮ್ ಬಂಧುಜನಗಳಿಗೆ ಮತ್ತು ಆಫ್ರಿಕದಲ್ಲಿ ಹಿಂದೀಯರು ನೆಲಸುವ ಲೋಕವೇ ಒಪ್ಪಿಕೊಳ್ಳತಕ್ಕ ಹಕ್ಕನ್ನು ಕಾದುಕೊಟ್ಟಂತಾದೀತು. ಆಫ್ರಿಕದ ಟಂಗನಿಕಾ ಪ್ರದೇಶವನ್ನು (ಈಗ ಇದು ಬ್ರಿಟಿಷರ ವಶವಿದೆ) ಜರ್ಮನಿಗೆ ಬಿಟ್ಟುಕೊಡುವ ವಿಚಾರದ ವಿರೋಧ ಚಳವಳವನ್ನು ನಡೆಸುವುದಕ್ಕಾಗಿ ಅಲ್ಲಿರುವ ಹಿಂದೀಯರನ್ನು ತಿದ್ದಿಬೇತುಮಾಡಲು ಶ್ರೀ। ವಲ್ಲಭಭಾಯಿ ಪಟೇಲರನ್ನು ಅಲ್ಲಿಗೆ ಕಳುಹಿಸಿಕೊಡುವೆನೆಂದು ಮಹಾತ್ಮಾಜಿಯುರು ಒಪ್ಪಿದ್ದಾರೆಂಬೊಂದು ವಾರ್ತೆಯು ನಮ್ಮನ್ನೆಲ್ಲ ದಿಗಿಲುಗೊಳಿಸಿದೆ. ಈ ವಾರ್ತೆಯೇನೋ ನಿಜವಲ್ಲವೆಂದು ಈಗಾಗಲೇ ಬಲು ಪ್ರಕಟವಾಗಿ ಪ್ರಚಾರ ನಡೆದಿದೆ. ಅದೇನೇ ಇರಲಿ. ಹೀಗೆ ಟಂಗನಿಕಾದ ರಾಜಕೀಯ ಭವಿತವ್ಯವನ್ನು ರೂಪಿಸುವುದರಲ್ಲಿ ಮಹಾತ್ಮಾಜಿಯರು ಅಪ್ರತ್ಯಕ್ಷವಾಗಿ ಸಹಭಾಗಿಗಳಾಗುವವರಿದ್ದಾರೆಯೆಂಬ ಅಂತರಂಗವಾರ್ತೆಯೊಂದು ಎಲ್ಲರನ್ನೂ ದಿಗಿಲುಗೊಳಿಸತಕ್ಕದ್ದೇ ಇದೆ. ಬ್ರಿಟನ್ ಸಾಮ್ರಾಜ್ಯಶಕ್ತಿಯನ್ನು ಆಫ್ರಿಕದ ಉದ್ದಗಲಕ್ಕೂ ಚಿರಸ್ಥಾಯಿಯಾಗಿ ಮಾಡುವ ಪ್ರಯತ್ನದಲ್ಲಿ ಗಾಂಧಿಜಿಯು (ಮಹಾಯುದ್ಧದ ಕಾಲದಲ್ಲಿ ಇವರು ವಹಿಸಿದ ಧೋರಣೆಯಿಂದ ಇವರ ಬ್ರಿಟಿಷ್ ಅನುಕೂಲ ಚಿತ್ತವೃತ್ತಿಯು ವ್ಯಕ್ತವಾಗಿದೆ) ಹಿಡಿದ ಹಟ ಬಿಡಲು ತಿಳಿಯದ ಸ್ವಭಾವದ ಛಲದಂಕಮಲ್ಲ ಸರ್ದಾರರನ್ನು ಆಫ್ರಿಕಕ್ಕೆ ಈಗ ಕಳುಹಿಸಿದರೆಂದಾದರೆ ಕಳೆದುಕೊಂಡ ವಸಾಹತುಗಳನ್ನು ಮತ್ತೊಮ್ಮೆ ದೊರಕಿಸಿಕೊಳ್ಳಬೇಕೆಂಬ ಜರ್ಮನಿಯ ಆಗ್ರಹವು ಮಣ್ಣುಪಾಲಾಗಿ ಮೂರು ದಿನವಾಯಿತೆನ್ನಲು ಏನೇನೂ ಸಂಶಯವಿಲ್ಲ. ಆದರೆ ಮಹಾತ್ಮರ ಈ ಧೋರಣೆಯಿಂದಾಗಿ ಆಫ್ರಿಕದ ಹಿಂದೀಯರ ಸ್ವಾತಂತ್ರ್ಯ, ಹಕ್ಕುಗಳಿಗೆ ಮತ್ತಷ್ಟು ಹಾನಿಬರುವುದೆಂಬುದು ಮಾತ್ರ ಸ್ಪಷ್ಟವಿದೆ. ಮಹಾಯುದ್ಧದ ಕಾಲದಲ್ಲಿ ಮಹಾತ್ಮಾಜಿಯವರು ವಹಿಸಿದ ಧೋರಣೆಯನ್ನೇ ಮತ್ತೊಮ್ಮೆ ಅವರು ಈ ಸಂದರ್ಭದಲ್ಲಿ ಪ್ರಕಟಿಸಿದಂತೆ ಕಂಡುಬರುತ್ತದೆ. ನಿಜವಾಗಿಯೂ ಶ್ರೀ। ಪಟೇಲಜೀಯನ್ನು ಆಫ್ರಿಕಕ್ಕೆ ಕಳುಹಿಸುವುದೆಂದರೆ, ಆಫ್ರಿಕದಲ್ಲಿ ಇತರ ಐರೋಪ್ಯ ರಾಷ್ಟ್ರಗಳಿಗಿಂತ ಬ್ರಿಟಿಷರಿಗೆ ಹೆಚ್ಚು ಶಕ್ತಿಯುಂಟಾಗುವಂತೆ ಮಾಡುವುದಕ್ಕಾಗಿ ಪ್ರಯತ್ನಿಸಿದಂತಾಗುವುದು. ಒಂದು ಸಾಮ್ರಾಜ್ಯದ ವಿರೋಧ ಪ್ರವೃತ್ತಿತೋರುವುದರಿಂದಾಗಿ ಇನ್ನೊಂದು ಅಂಥ ಸಾಮ್ರಾಜ್ಯಕ್ಕೆ ಅನುಕೂಲ ಕಾರ್ಯವೆಸಗಿದಂತಾಗುವುದು.•

ನಮ್ಮ ರಾಷ್ಟ್ರೀಯ ಗೌರವವನ್ನೇ ವಿನಾಶಗೊಳಿಸುವ, ಆಫ್ರಿಕದಲ್ಲಿರುವ ಹಿಂದೀಯರ ಆರ್ಥಿಕ ದುರ್ದಶೆಗೇ ಕಾರಣರಾದ ಬ್ರಿಟಿಷರ ಅನುಕೂಲ ಧೋರಣೆಯನ್ನು ವಹಿಸಿ ಆಫ್ರಿಕಾನರ ಮತ್ತು ಹಿಂದೀಯರ ಹಿತವನ್ನು ಸಾಮ್ರಾಜ್ಯಶಕ್ತಿ ವರ್ಧನೆಗಾಗಿ ಬಲಿಕೊಟ್ಟಂತಾಗುವುದು.

"ಹಿಂದೀ ಸೈನ್ಯವು ಆಫ್ರಿಕದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಸ್ಥಾಪಿಸಲು ಸಾಹಸಪಟ್ಟುದಕ್ಕಾಗಿ ಟಂಗನಿಕಾದ ಆಡಳಿತೆಯ ಅಧಿಕಾರವನ್ನು ಇಂಡಿಯಾ ಸರಕಾರಕ್ಕೆ ಬಿಟ್ಟುಕೊಡಬೇಕೆ"ಂದು ದಿವಂಗತ ಮಿ। ಮೊಂಟೆಗೋರವರು ಪ್ರಯತ್ನ ನಡೆಸಿದ್ದರು. ಅವರ ಆ ಪ್ರಯತ್ನಗಳನ್ನು ಗಾಂಧಿಜೀಯರು ವಿರೋಧಿಸಿದ್ದರು. ಪರಿಣಾಮವಾಗಿ ಅಲ್ಲಿ ಆಗ ಇದ್ದ ಹದಿನೈದು ಸಾವಿರ ಹಿಂದೀ ಸೈನ್ಯವು (ಅಲ್ಲಿನೇ ನಿಲ್ಲಬೇಕೆಂದು ಆ ಸೈನಿಕರ ಇಚ್ಛೆಯಿತ್ತು.) ಹಿಂದಿರುಗಬೇಕಾಯಿತು" ಎಂದು ಕೆನ್ಯಾ ಹಿಂದೀಯರ ಪ್ರತಿನಿಧಿಯು ಜ್ಯೊಂಟ್ ಪಾರ್ಲಿಮೆಂಟರಿ ಕಮಿಟಿಯ ಮುಂದೆ ಪೂರ್ವ ಆಫ್ರಿಕದ ವಿಚಾರ ಸಾಕ್ಷಿ ಹೇಳುವಾಗ ತಿಳಿಸಿದ್ದರು. ಇದು ನಿಜವಿದ್ದರೆ ಆಫ್ರಿಕದ ಹಿಂದೀಯರು ಇದನ್ನು ಇಷ್ಟರಲ್ಲೇ ಸಂಪೂರ್ಣ ಮರೆತಿರಲಿಕ್ಕಿಲ್ಲ. ಆದುದರಿಂದ ಶ್ರೀ। ಪಟೇಲರು ಅವರ ಪ್ರಕೃತದ ಕಾರ್ಯದಲ್ಲಿ ಅದೆಷ್ಟು ಜಯಶೀಲರಾದಾರೆಂದು ನಾನು ಹೇಳಲಾರೆ.

ಮೇಲಿನ ಕತೆಯು ಅದೆಷ್ಟು ಮಟ್ಟಿಗೆ ಸತ್ಯವೆಂದು ಹೇಳುವುದೂ ನನಗೆ ಸಾಧ್ಯವಿಲ್ಲ. ಆದರೆ ಇದು ಸತ್ಯವೆಂದು ಅಲ್ಲಿನ ಹಿಂದೀಯರು ಆಣೆಯಿಟ್ಟು ಹೇಳುವುದನ್ನು ನಾನು ಕೇಳಿದ್ದೇನೆ.

ಪತ್ರಿಕಾ ಪ್ರತಿನಿಧಿಯಾಗಿ ನಾನು ಪೂರ್ವ ಆಫ್ರಿಕಕ್ಕೆ ಹೋಗಿದ್ದ ವೇಳೆ ಅಲ್ಲಿನ ಆಫ್ರಿಕಾನರು ಹಾಗೂ ಹಿಂದೀಯರ ಹಿತಕ್ಕೆ ಸಂಪೂರ್ಣ ವಿನಾಶಕಾರಿ ರೀತಿ ಪರಿಸ್ಥಿತಿ ಬಂದಿದ್ದ ವಿಚಾರವನ್ನು ನಾನು ಕಣ್ಣಾರೆ ಕಂಡಿದ್ದೆ. ಹೀಗಿರುತ್ತಾ ಈಗ ಮಹಾತ್ಮರು ನಿರ್ಧರಿಸಿದಂತೆ ಕಂಡುಬರುತ್ತಿರುವ ಇವರ ಧೋರಣೆಯನ್ನು ಬೇರೆ ಮಾಡಿ, ಬ್ರಿಟಿಷ್ ಸಾಮ್ರಾಜ್ಯ ರಕ್ಷಣಾಚಾರ್ಯರ ಭೂಮಿಕೆ ವಹಿಸುವುದನ್ನುಳಿದು ಆಫ್ರಿಕದಲ್ಲಿ ಆಫ್ರಿಕಾನರಿಗೆ ಸ್ವಲ್ಪ ಮಟ್ಟಿಗಾದರೂ ಸ್ವಾತಂತ್ರ್ಯವೊದಗಿ ಬರುವ ರೀತಿಯ ಪ್ರಯತ್ನಗಳಲ್ಲಿ ತಮ್ಮ ಅಪಾರವಾದ ವರ್ಚಸ್ಸನ್ನು ಹಾಗೂ ಶಕ್ತಿಯನ್ನು ಸದ್ವಿನಿಯೋಗಿಸಿ, ಇಂದಿಗೆ ಬಿಳಿಯರನ್ನು ಸಂಪೂರ್ಣವಾಗಿ ತನ್ನ ಸ್ವಾಧೀನಪಡಿಸಿಕೊಂಡಿರುವ ಆಫ್ರಿಕವನ್ನು ಅಲ್ಲಿಯ ದೇಶೀಯರಿಗೆ ಬಿಡಿಸಿಕೊಡುವುದು ಎಷ್ಟೋ ಶ್ರೇಯಸ್ಕರವಿದೆಯೆಂದು ನನಗನ್ನಿಸುತ್ತಿದೆ.

ತಾನು ಕೈಕೊಳ್ಳುವ ಕಾರ್ಯಕ್ರಮವು ಅದೆಷ್ಟು ವಿಡಂಬನಾತ್ಮಕವಾದುದೆಂಬುದನ್ನು ಮನಗಾಣದೆ ಶ್ರೀ। ಪಟೇಲರು ಪೂರ್ವ ಆಫ್ರಿಕಕ್ಕೆ ಹೋಗುವುದು ಸಿದ್ಧವೆಂದೇ ಆದರೆ ಆಗ ಅಲ್ಲಿ ಹೋಗಿ, ಪರಿಸ್ಥಿತಿಯನ್ನು ಕಣ್ಣು ಮುಟ್ಟಿ ನೋಡಿ ಮನಮುಟ್ಟಿ ತಿಳಿದುಕೊಂಡು ಆ ಮೇಲಾದರೂ ಜಾತಿ ವೈಷಮ್ಯದ ನಿಷ್ಟುರತೆಯ ಅಪಘಾತಕ್ಕೆ ಸಿಕ್ಕಿ ನಜ್ಜುಗುಜ್ಜಾಗುವುದೆಂದರೇನೆಂಬುದರ ಪ್ರತ್ಯಕ್ಷ ಅನುಭವವನ್ನು ಹೊಂದದಿರಲಾರರೆಂದು ನನಗೆ ಸಂಪೂರ್ಣ ಖಚಿತವಿದೆ

ಹಿಂದೀಯರಿಗೆ ತಿಲಾಂಶವೂ ಅನುಕೂಲವಿಲ್ಲದೆ, ಆಫ್ರಿಕಾನರಿಗೆ ಕಷ್ಟದಲ್ಲಿ ಉಂಡು ಬದುಕುವುದಕ್ಕೆ ಬೇಕಾದ ಆವಶ್ಯಕತೆಗಳನ್ನು ನಿರಾಕರಿಸುವಷ್ಟರವರೆಗಿನ ಕಠಿಣಕರ ಧೋರಣೆಯನ್ನು ವಹಿಸಿದ ಫ್ರಾನ್ಸಿಸ್ ಸ್ಕೋಟ್ ಪ್ರಭುವಿನ ನಾಯಕತ್ವದಲ್ಲಿರುವ ಆಫ್ರಿಕ ವಾಸಿಗಳಾದ ಸ್ವಭಾವತಃ ಉದ್ಧಟರೂ ಸ್ವಾರ್ಥಿಗಳೂ ನಿಷ್ಟುರರೂ ಆದ ಐರೋಪ್ಯರ ವಿರೋಧಕಾರ್ಯ ನಡೆಸುವುದೆಂದರೆ ಹಿಂದೂದೇಶದಲ್ಲಿ ಅವರ ಕಾರ್ಯಕಲಾಪಗಳಿಂದ ಅನೇಕ ಪಾಲು ಹೆಚ್ಚು ಕಷ್ಟಸಂಕೀರ್ಣವಾದುದೆಂದು ಅವರ ಅನುಭವಕ್ಕೆ ಬಾರದಿರಲಿಕ್ಕಿಲ್ಲ.

ಟಂಗನಿಕಾವನ್ನು ಬ್ರಿಟಿಷರ ಕೈಯಿಂದ ತಪ್ಪಿಸಬೇಕು. ಆದರೆ ಅದನ್ನು ಜರ್ಮನಿಯ ಕೈಗೆ ಕೊಡಬಾರದು; ಬದಲು ಇಂಡಿಯ ಸರಕಾರದ ಅಧೀನ ಆಡಳಿತೆಗೆ ತರಬೇಕು. ಹಾಗೆ ಮಾಡಿ ನಮ್ಮ ದೇಶದಿಂದ ಅವರು ಆಫ್ರಿಕದಲ್ಲಿ ಹೋಗಿ ನೆಲಸಲು ನಿರಾತಂಕವಾಗಬೇಕು. ಆದರೆ ಹದಿನೈದು ವರ್ಷಗಳ ನಮ್ಮ ಆಡಳಿತ ಅವಧಿಯೊಳಗಾಗಿ ಅಲ್ಲಿನ ಆರ್ಥಿಕ ಪುನರ್ಘಟನಾ ಕಾರ್ಯವನ್ನು ಮಾಡಿ ಪರಿಣಾಮವಾಗಿ ಸಶಕ್ತರಾಗುವ ಅಲ್ಲಿನ ಪ್ರಜಾಜನರಿಗೆ ಆ ಹದಿನೈದು ವರ್ಷಗಳ ಅಂತ್ಯದಲ್ಲಿ ಸಂಪೂರ್ಣ ಪ್ರಜಾಪ್ರಭುತ್ವ ತತ್ವಾನ್ವಿತ ರಾಜ್ಯಘಟನೆಯನ್ನು ಕೊಡಲಾದೀತೆಂದು ವಾಗ್ದಾನ ಮಾಡಬೇಕು. ಈ ಹದಿನೈದು ವರ್ಷ ಅಲ್ಲಿನ ಆರ್ಥಿಕ ಉನ್ನತಿಯ ಕಾರ್ಯವನ್ನು ಬಹಳ ಜೋರಿನಿಂದ ನಡೆಸಬೇಕು; ಅವರ ಸಾಂಸ್ಕೃತಿಕ ಸ್ಥಿತಿ ಬಲು ಸುಧಾರಿಸುವುದಕ್ಕೆ ಬೇಕಾದ ಕಾರ್ಯಕಲಾಪಗಳನ್ನು ನಡೆಸಬೇಕು. ಹೀಗೆ ಮಾಡದಿದ್ದರೆ, ಈಗಾಗಲೇ ಸಂಪೂರ್ಣ ನಿರ್ಮೂಲವಾಗುವುದಕ್ಕೆ (ಐರೋಪ್ಯರಿಂದಾಗಿ) ಸಿದ್ಧವಾಗಿರುವ ಆಫ್ರಿಕಾನರ ಸ್ವಾತಂತ್ರ್ಯ ಮತ್ತು ಹಿತವನ್ನು ಉಳಿಸಿ ಅವರಿಗೆ ಅವರ ರಾಷ್ಟ್ರವಾದ ಆಫ್ರಿಕದ ಸಂಪೂರ್ಣ ಅಧಿಕಾರವನ್ನು ಗೇದುಕೊಡುವುದು ಏನೇನೂ ಸಾಧ್ಯವಿಲ್ಲ. ಇದಲ್ಲದೆ ಆಫ್ರಿಕವನ್ನು ಆಫ್ರಿಕಾನರಿಗೆ ಮರಳಿ ಕೊಡಿಸುವ ಬೇರಾವ ಉಪಾಯವೂ ಇಲ್ಲ.

ಆಫ್ರಿಕದಲ್ಲಿ ಬಿಳಿಯರ ಕುಹಕೋಪಾಯಗಳನ್ನು ಬಹಿರಂಗಪಡಿಸುವ ಸಲುವಾಗಿ ಹಿಂದೀಯರೂ ಆಫ್ರಿಕಾನರೂ ಒಂದುಗೂಡಿ ಬಿಳಿಯರ ಪಾರುಪತ್ಯವನ್ನು ಹೊಡೆದಟ್ಟಲು ಪ್ರಯತ್ನಿಸಬೇಕಾದ ಈ ಸಮಯದಲ್ಲಿ ಗಾಂಧಿ-ಆಗಾಖಾನರ ಮಾತುಕತೆಗಳ ವಿಚಾರವು ಬಲು ಗುಟ್ಟಾಗಿ ಹೆದರಿ ಮರೆಯಲ್ಲಿ ಕೂಡಿದಂತಿದೆಯೆಂಬುದು ವಿಚಿತ್ರವಿದೆ. ಶ್ರೀ। ಪಟೇಲರು ಅಲ್ಲಿ ಹೋದಾಗ ಆಫ್ರಿಕಾನರ ಮುಂದಾಳುವಾಗಿರುವ ಹೆರ್ರಿತಾಕು ಅವರನ್ನು ಕಂಡು ಮಾತಾಡಿ ಅವರನ್ನು ನಮ್ಮ ತ್ರಿಪುರಿ ಕಾಂಗ್ರೆಸ್ಸಿಗೆ ಆಹ್ವಾನಿಸುವುದು ಬೇಕೆಂದು ನನಗನ್ನಿಸುತ್ತಿದೆ. ಅದಲ್ಲದೆ ಟಂಗನಿಕಾವನ್ನು ಜರ್ಮನಿಗೆ ಬಿಟ್ಟುಕೊಡಬಾರದೆಂಬ ಚಳವಳವನ್ನು ನಡೆಸುವ ಶಕ್ತಿಯನ್ನು ಸಂಘಟಿಸುವುದಕ್ಕಾಗಿ ಶ್ರೀ। ಪಟೇಲರು ಅಲ್ಲಿ ಹೋಗುವುದಾದರೆ ಇವರ ಈ ನಿರ್ಧಾರವು ಹಾಸ್ಯಾಸ್ಪದವಾಗುವುದು. ಕಾರಣ ಅಲ್ಲಿರುವ ಹಿಂದೀಯರಿಗೆ ಅಲ್ಲಿನ ಪಾರುಪತ್ಯವು ಯಾರ ವಶವಿರಬೇಕೆಂದು ಹೇಳುವ ಅಧಿಕಾರವಿರುವುದಾದರೆ ಅಂತಹ ಅವರ ಆ ಅಧಿಕಾರವನ್ನು ಸಂಪೂರ್ಣ ಅಲಕ್ಷಿಸಿ ತಮ್ಮ ಮಾತನ್ನೇ ನಡೆಸಿಬಿಟ್ಟು ಆಫ್ರಿಕದಲ್ಲಿ ಬ್ರಿಟಿಷರ ಆಧಿಪತ್ಯವು ಟಂಗನಿಕಾದಲ್ಲಿ ಚಿರಸ್ಥಾಯಿಯಾಗುವುದಕ್ಕೆ ಬೇಕಾದ ಎಲ್ಲಾ ಪ್ರಯತ್ನವನ್ನೂ ಬ್ರಿಟಿಷನು ಮಾಡಿಯೇ ಮಾಡುವನು.

—ಆಫ್ರಿಕದಲ್ಲಿ ಬ್ರಿಟಿಷರ ಅಧಿಕಾರವನ್ನು ಅಚಲವಾಗಿ ಮಾಡುವ ನಿಮಿತ್ತ ಫ್ರಾನ್ಸಿಸ್ಕೋಟ್ ಪ್ರಭುವಿನ ಸೊಸೆಯ ಗಂಡನೂ ಇಂಗ್ಲಂಡಿನ ಅರಸನ ಸಹೋದರನೂ ಆಗಿರುವ ಡ್ಯೂಕ್ ಒಫ್ ಕೆಂಟನು ಆಫ್ರಿಕಾ ಸಂದರ್ಶನ ಮಾಡಲಿದ್ದಾರೆ.

ಖಗೋಲ ಶಾಸ್ತ್ರದ ಗುಟ್ಟು

ನಮ್ಮ ಪ್ರಾಚೀನರು ಈ ಗುಟ್ಟನ್ನು ಹೇಗೆ ಶೋಧಿಸಿದರು ?

ನಭೋಮಂಡಲದಲ್ಲಿ ರಾರಾಜಿಸುವ ನಕ್ಷತ್ರಗಳ ಗುಟ್ಟನ್ನು ಅರಿತವರು ಭಾರತೀಯರು ಮೊದಲು. ಈ ಗ್ರಹಗಳ ಆಧಾರದಿಂದ ಮಾಸ, ವರುಷ, ಋತುಗಳನ್ನು ಲೆಕ್ಕಿಸಿದರು. ಸೂರ್ಯಗ್ರಹಣ, ಚಂದಗ್ರಹಣ, ಗ್ರಹಗಳ ಚಲನ ವಲನ ಇವುಗಳನ್ನು ಶೋಧಿಸಿದರು. ಹಿಂದುಗಳ ಹಬ್ಬ ಹುಣ್ಣಿಮೆಗಳೂ ಈ ಋತು ಮಾಸ ವರುಷಗಳಿಂದಲೇ ಜನ್ಮವೆತ್ತಿದೆ. ಆದರೆ ಖಗೋಲ ಶಾಸ್ತ್ರಾಭ್ಯಾಸವೇ ನಮ್ಮಿಂದ ದೂರಾಗಿ ಹೋಗಿದೆ ಈಗ. ಕೆಲವು ಹಳ್ಳಿಗಳಲ್ಲಾದರೂ ಖಗೋಲ ಶಾಸ್ತ್ರದ ನಿಜ ಗುಟ್ಟನ್ನರಿತ 'ಘನ ಪಂಡಿತರಿರುವರೆಂಬುದನ್ನು ನಂಬುವಿರಾ ?

ಮೋಡ ವಿರಹಿತ ನಿಶೆಯಲ್ಲೊಂದು ದಿನ ನಭೋ ಮಂಡಲದಲ್ಲಿ ರಾರಾಜಿಸುವ ನಕ್ಷತ್ರ ಸಮೂಹವನ್ನು ನೋಡಿ ನಮ್ಮ ಹೃದಯ ನಲಿಯುವುದು; ಆ ರಮಣೀಯ ಮಿನುಗುವ ತಾರೆಗಳೇನೆಂದು ಕೇಳಿದರೆ ಇದು ದೇವದೇವನ ಮಾಯೆಯೆಂದು ಹಲವರು ಹೇಳುವರೇ ಹೊರತು ತೃಪ್ತಿಕರ ಉತ್ತರವನ್ನು ಕೊಡಲಾರರು; ಪುಣ್ಯಾತ್ಮಗಳು ಧ್ರುವ ತಾರೆಯಂತೆ ಅಲ್ಲಿ ಶೋಭಿಸುವವೆಂದು ನಂಬುವ ಹಿಂದುಗಳಿಗೆ ಕಡಿಮೆಯಿಲ್ಲ. ನಮ್ಮ ಪ್ರಾಚೀನ ಖಗೋಲ ಶಾಸ್ತ್ರಜ್ಞರು ಇವುಗಳ ಗುಟ್ಟನ್ನು ಸಂಪೂರ್ಣ ಅರಿತಿದ್ದರೆಂದರೆ ಮಿಥ್ಯೆಯಾಗಲಾರದಷ್ಟೆ. ಈ ಗ್ರಹಗಳ ಆಧಾರದಿಂದಲೇ ತಿಂಗಳು, ವರುಷ, ಕಾಲ, ಗಳಿಗೆ, ಋತು ಪಂಚಾಂಗಗಳನ್ನು ಅವರು ಶೋಧಿಸಿದ್ದರೆಂಬುದನ್ನು ಮರೆಯಲಾಗದು.

ಆದಿಯಲ್ಲಿ ನಕ್ಷತ್ರಗಳಲ್ಲಿ ನಿಯತತ್ವವಿದೆಯೆಂದು ಅಭಿಪ್ರಾಯಪಟ್ಟರು. ಕೊನೆಕೊನೆಗೆ ಇವುಗಳಲ್ಲಿ ಸರಿಯಾದ ಕ್ರಮವಿಲ್ಲವೆಂದು ಅವರಿಗೆ ತಿಳಿದುಬಂದಿತು. ಭೂಮಿಯು ತನ್ನ ಅಚ್ಚಿನಲ್ಲಿ ತಿರುಗುತ್ತಿದೆ. ಹೀಗೆ ಒಂದು ಸುತ್ತು ತಿರುಗಲು ಅದಕ್ಕೆ ಒಂದು ದಿನ ಬೇಕಾಗುವುದು. ಸೂರ್ಯಗ್ರಹವನ್ನು ಸುತ್ತಲು ಒಂದು ವರುಷ ಬೇಕಾಗುವುದೆಂಬುದನ್ನು ಭಾರತೀಯ ಖಗೋಲಜ್ಞರು ಕಂಡುಹಿಡಿದಿದ್ದರು. ಇದರ ಆಧಾರದಿಂದಲೇ ಸೂರ್ಯಗ್ರಹಣ ಚಂದ್ರಗ್ರಹಣವನ್ನು ಶೋಧಿಸುತಿದ್ದರು.

ಭಾರತೀಯ ಖಗೋಲಜ್ಞರಲ್ಲಿ ಆವಾಗ ಸರಿಕರ ಣೆಗಳಿದ್ದುವೆಂದು ತಿಳಿದು ಬರುವುದಿಲ್ಲ. ದೂರದರ್ಶಕ ಯಂತ್ರವು ಪಾಶ್ಚಾತ್ಯರಿಂದ ಶೋಧಿಸಲ್ಪಟ್ಟ ಮೇಲೆ ಖಗೋಲ ಶಾಸ್ತ್ರಕ್ಕೆ ಸಂಬಂಧಪಟ್ಟ ಹಲವು ಮಹತ್ವದ ಶೋಧಗಳನ್ನು ನಡಿಸಲಾಯಿತು. ಈಗ ಇದರ ಸಹಾಯಕ್ಕೆ ನಾನಾ ಯಂತ್ರಗಳು ದೊರೆತಿರುವುದರಿಂದ ಈ ಗ್ರಹಗಳ ವಿಸ್ತಾರವೆಷ್ಟು, ಅವುಗಳಿಗೂ ಭೂಮಿಗೂ ಇರುವ ಅಂತರವೆಷ್ಟು, ಗ್ರಹಗಳು ಎಂಥಾ ಪದಾರ್ಥಗಳಾಗಿವೆ ಎಂಬುದನ್ನು ಕಂಡುಹಿಡಿಯಲು ಸಾಧ್ಯವಾಗಿದೆ.

ಸೂರ್ಯಚಂದ್ರಾದಿ ನಕ್ಷತ್ರಗಳೇ ಮೂಡು ದಿಕ್ಕಿನಲ್ಲಿ ಉದಯಿಸಿ ಪಶ್ಚಿಮದಲ್ಲಿ ಮುಳುಗುವವೆಂದು ಹಿಂದಿನಿಂದಲೂ ಜನಸಾಮಾನ್ಯರಲ್ಲಿರುವ ಭಾವನೆ. ಆದರೆ ಕೆಲವು ನಕ್ಷತ್ರಗಳು ಆಕಾಶದ ಕೆಲವು ಭಾಗದಲ್ಲೇ ಇದ್ದುವು. ಇವುಗಳ ಸಹಾಯದಿಂದ ದಿಕ್ಕುಗಳನ್ನು ಕಂಡುಹಿಡಿದರು. ಇವು ಪ್ರಯಾಣಿಕರಿಗೆ ಕೈದೀವಿಗೆಗಳಾಗಿದ್ದುವು.



ಶ್ರೀ ಗೋಕರ್ಣ ಮಠಾಧೀಶ ಶ್ರೀಮತ್ ಇಂದಿರಾಕಾಂತ ತೀರ್ಥರವರು ಮೊದಲಿನ ಅವರ ಶಿಷ್ಯರೊಡನೆ
(ಈ ಭಾವಚಿತ್ರವು ಸುಮಾರು 25 ವರ್ಷಗಳ ಹಿಂದೆ ತೆಗೆದ ಚಿತ್ರವಾಗಿದೆ. ಈ ಚಿತ್ರದಲ್ಲಿ ತೋರುವ ಶಿಷ್ಯರು ಗತ ಹೊಂದಿ ಬಹುಕಾಲವಾಯಿತು.)

ಕಾಲವನ್ನು ಗುಣಿಸಲು ಈ ಗ್ರಹಗಳು ಪ್ರಯೋಜನ ಬಿದ್ದುವು. ಈಗಲೂ ರಾತ್ರಿ ನಿಯಮಿತ ಕಾಲಕ್ಕೆ ಸರಿಯಾಗಿ ಬೆನ್ನಟ್ಟಿ ಬರುತಿದ್ದುವು. ಇತ್ತ ಚಂದ್ರನ ಆಕಾರವು ೧೫ ದಿವಸಗಳಲ್ಲಿ ಹೆಚ್ಚುವುದು. ೧೫ ದಿವಸಗಳಲ್ಲಿ ಕ್ಷೀಣವಾಗುವುದು. ಈ ಬದಲಾವಣೆಗಳು ೩೦ ದಿನಗಳಲ್ಲಿ ಉಂಟಾಗುವುದೆಂದು ಮಾನವನು ಕಂಡುಕೊಂಡನು. ಈ ರೀತಿ ತಿಂಗಳನ್ನು ಲೆಕ್ಕ ಹಾಕಿದರು. ತಿಂಗಳನ್ನು ಮೊದಲು ಭಾರತೀಯರು ಶೋಧಿಸಿದರು. ಗ್ರೀಕರು ಅದನ್ನು ಅಭ್ಯಸಿಸಿದರು. ಗ್ರೀಕರಿಂದ, ಬೇಬಿಲೋನಿಯನರು, ರೋಮನರು, ಹಿಬ್ರುಗಳು ಕಲಿತುಕೊಂಡರು. ಕ್ರಿಸ್ತ ಪೂರ್ವದ ಸಾವಿರಾರು ವರುಷಗಳ ಹಿಂದೆಯೇ ಭಾರತದ ರಾಜಸ್ಥಾನಗಳಲ್ಲಿ ಉದ್ದಾಮ ಖಗೋಲ ಪಂಡಿತರಿದ್ದರೆಂಬುದನ್ನು ಆಧಾರ ಗ್ರಂಥಗಳಿಂದ ಸಮರ್ಥಿಸಬಹುದಾಗಿದೆ.

ಹಿಂದುಗಳ ನಾನಾ ಹಬ್ಬ ಹುಣ್ಣಿಮೆಗಳೂ ಈ ನಾನಾ ಋತು, ಮಾಸ, ಪಕ್ಷಗಳಿಂದಲೇ ಜನ್ಮವೆತ್ತಿದೆಂಬುದು ಗಮನಾರ್ಹವಾಗಿದೆ. ಕ್ರಿಶ್ಚನರ್ ಈಸ್ಟರ್ ಮುಹಮ್ಮದೀಯರ್ ರಮ್ಜಾನ್ ಹಬ್ಬವೂ ಚಂದ್ರನ ಚಲನವಲನದಿಂದಲೇ ಗುರುತಿಟ್ಟುಕೊಳ್ಳಲಾಗುತ್ತಿದೆ.

ವಸಂತ ಮತ್ತು ಚಳಿಗಾಲಗಳು ಉಂಟಾಗಲು ಸೂರ್ಯನೇ ಕಾರಣನೆಂಬುದನ್ನು ಬಲ್ಲೆವು. ಇದಕ್ಕನುಗುಣವಾಗಿ ವ್ಯವಸಾಯ ಕ್ರಮವನ್ನು ಇಟ್ಟುಕೊಳ್ಳಲಾಯಿತು.

ನಕ್ಷತ್ರಗಳು ಹಗಲು ಹೊತ್ತಿನಲ್ಲೂ ಆಕಾಶದಲ್ಲೇ ಇರುವವು. ಆದರೆ ಸೂರ್ಯನ ಬಿಸಿಲಿನಿಂದ ಅವನ್ನು ನೋಡಲು ಸಾಧ್ಯವಾಗುವುದಿಲ್ಲ. ದುರ್ಬಿನಿಂದ ನೋಡಿದರೆ ಕೆಲವನ್ನು ಕಾಣಬಹುದು.

ಐಗುಪ್ತದ ಗುರುಗಳೂ ಈ ವರುಷ ಮೊದಲಾದುವುಗಳನ್ನು ನಕ್ಷತ್ರಗಳ ಆಧಾರದಿಂದಲೇ ಕಂಡುಹಿಡಿದರು.

ರೋಮನ್ ಚಕ್ರವರ್ತಿಯಾದ ಸೀಜರ್‌ನ ಕಾಲದಲ್ಲಿ ವರುಷದ ದಿನಗಳಲ್ಲಿ ಅಭಿಪ್ರಾಯಭೇದವುದ್ಭವಿಸಿತ್ತು. ಸೀಜರನು ತಿಂಗಳುಗಳ ದಿವಸಗಳಲ್ಲಿ ಹೆಚ್ಚು ಕಡಮೆ ಮಾಡಿ ಸರಿಯಾಗಿ ೩೬೫ ಬರುವಂತೆ ಏರ್ಪಡಿಸಿದನು.

(75ನೇ ಪುಟಕ್ಕೆ ಮುಂದುವರಿಸಿದೆ.)

ಜಯಪುರದ 'ರಾಜವಿಜ್ಞಾನಿ'

ಖಗೋಲ ಶಾಸ್ತ್ರದಲ್ಲಿ ಜೈಸಿಂಗರ

ಅತ್ಯಾಧುನಿಕ ಶೋಧನೆ

ಖಗೋಲ ಶಾಸ್ತ್ರದಲ್ಲಿ ಹಿಂದೂಸ್ಥಾನವು ಅತಿ ಪ್ರಾಚೀನ ಕಾಲದಲ್ಲೂ ತನ್ನ ವರ್ಚಸ್ಸನ್ನು ಬೀರಿದೆ. ಜೈಪುರ ಸಂಸ್ಥಾನ ಸ್ಥಾಪಕರಾದ ರಾಜಪುತ್ರ ಜೈಸಿಂಗರು ಅಂಥಾ ಘನಪಂಡಿತರ ಲ್ಲೊಬ್ಬರು. ಖಗೋಲ ಶಾಸ್ತ್ರವನ್ನಭ್ಯಾಸಿಸಲು ಇವರು ಜಯ ಪುರದಲ್ಲಿ ದೊಡ್ಡ ನಕ್ಷತ್ರ ಶಾಲೆಯನ್ನು ರಚಿಸಿ ಅತ್ಯಾಧುನಿಕ ಸಲಕರಣೆಗಳನ್ನು ಶೋಧಿಸಿದರು. ಇಂದು ಕಟ್ಟಡದ ಅವಶೇಷ ಗಳನ್ನು ದಿಟ್ಟಿಸಿದಾಗ ಅದರ ಗತ ವೈಭವದ ಊಹೆಯನ್ನು ಮಾಡಲು ಅಸಾಧ್ಯ.



ಜಯಸಿಂಗನ ರಾಜಧಾನಿಯಲ್ಲಿ ಆತನು ರಚಿಸಿದ ಶೋಧನಾಲಯದಲ್ಲಿ ಉಳಿದುದೆಂದರೆ ಇದು.
[ಬಿ. ಬಿ. ಸಿ. ಐ ರೈಲ್ವೆಯವರ ಫೋಟೊ ಸಂಗ್ರಹದಿಂದ]

ಭಾರತದ ಮಹಾ ವಿಜ್ಞಾನಿಗಳಲ್ಲಿ ಎರಡನೇ ಜೈಸಿಂಗರಿಗೊಂದು ಪ್ರಾಮುಖ್ಯ ಸ್ಥಾನವಿದೆ. ಜೈಸಿಂಗರು ಪ್ರಾಚೀನ "ದೌಂದರ್" ಸಂಸ್ಥಾನದ ನರೇಂದ್ರರಾಗಿದ್ದರಲ್ಲದೆ ನವಜೈಪುರದ ಸಂಸ್ಥಾಪಕರಾಗಿದ್ದರೆಂಬುದನ್ನು ಮರೆಯಲಾಗದು.

ಇವರನ್ನು ಸವಾಯಿ ಜೇಸಿಂಗ್ ಎಂಬ ನಾಮಾಂಕಿತದಿಂದಲೂ ಕರೆಯುವುದು ರೂಢಿಯಲ್ಲಿದೆ. ಜೇಸಿಂಗರು ೧೬೯೯ನೇ ಇಸವಿಯಲ್ಲಿ ಅಂಬಾರ್ ಸಂಸ್ಥಾನ ಗದ್ದುಗೆಗೇರಿದರು; ಮೊಗಲ್ ಸಾರ್ವಭೌಮರಾದ ಅವರಂಗಜೇಬರ ಗವರ್ನರರಾಗಿ ಜೇಸಿಂಗರು ರಾಜ್ಯಭಾರವನ್ನು ಮಾಡುತ್ತಿದ್ದರು. ಆದರೆ ಮುಂದೆ ನಡೆದ ರಾಜಪುತ್ರರ ಸಿಂಹಾಸನಾರೋಹಣ ಚಳವಳದಲ್ಲಿ ಜೇಸಿಂಗರು ಪ್ರಮುಖಭಾಗವನ್ನು ವಹಿಸಿದರು. ಆದರೆ ದುರ್ದೈವವಶಾತ್ "ದೋಲ್‌ಪುರ" ರಣಕ್ಷೇತ್ರದಲ್ಲಿ ಇವರು ಪರಾಜಯಹೊಂದುದರಿಂದ ವೈರಿಗಳು ಜೇಸಿಂಗರ ರಾಜ್ಯವನ್ನತಿಕ್ರಮಿಸಿ ವಶಪಡಿಸಿಕೊಂಡುವು. ಪುನಃ ಇದನ್ನು ಪಡೆಯಲು ಜೇಸಿಂಗರು ಗುಪ್ತವಾಗಿ ಅವಿಶ್ರಾಂತವಾಗಿ ಹೋರಾಡಿ ಶಹಾ ಆಲಮನ ಸೈನಿಕರನ್ನು ಕೋಟೆಯಿಂದ ಓಡಿಸಿ, ಪುನಃ ರಾಜ್ಯವನ್ನು ಪ್ರವೇಶಿಸಿದರು.

ಜೈಸಿಂಗರು ರಣರಂಗದಲ್ಲಿ ತೋರ್ಪಡಿಸಿದ ಅಸಾಧಾರಣ ಧೈರ್ಯಸ್ಥೈರ್ಯದಿಂದ ಅವರ ನಾಮವು ಭಾರತ ಇತಿಹಾಸದಲ್ಲಿ ಶಾಶ್ವತವಾಗಿ ಉಳಿದುದಲ್ಲ. ಜೇಸಿಂಗರು ಮಹಾ ಮುತ್ಸದ್ದಿ; ಜ್ಞಾನಿ; ಹಾಗೂ ಶಾಸನ ನಿರ್ಮಾಣಕರಾಗಿ ಪಂಡಿತರ ಮನ್ನಣೆಗೆ ಪಾತ್ರರಾದರು. ಈಗಿನ ಜೈಪುರ ಸಂಸ್ಥಾನಿಕರು ಜೇಸಿಂಗರಿಗೆ ಋಣಿಗಳಾಗಿದ್ದಾರೆ. ಮೊಗಲರ ರಾಜ ಮನೆತನದಲ್ಲಿ ಅಂತಃಕಲಹವೆದ್ದ ಸುಸಂದರ್ಭದ ಸದುಪಯೋಗವನ್ನು ಮಾಡಿಕೊಳ್ಳಲು ಜೇಸಿಂಗರು ನಿರ್ಧರಿಸಿ ತನ್ನ ಚಿಕ್ಕ ರಾಜ್ಯವನ್ನು ಭುಜಶಕ್ತಿಯಿಂದ ವಿಸ್ತರಿಸಿ ರಾಜಸ್ಥಾನದಲ್ಲೆಲ್ಲ ಅಜೇಯರಾದರು.

ನೂತನ ಸಾಮ್ರಾಜ್ಯ ವೈಭವದ ದೃಷ್ಟಿಯಿಂದ ಅಂಬಾರ್ ನಗರವು ರಾಜಧಾನಿಯಾಗಲು ಅಷ್ಟು ಯೋಗ್ಯವಲ್ಲವೆಂದು ಜೈಸಿಂಗರು ಅಸಮಾಧಾನ ತಾಳಿ, ವಿದ್ಯಾಧರನೆಂಬ ಬಂಗಾಳಿ ಜೈನ ಇಂಜಿನಿಯರನ ಸಹಾಯದಿಂದ ಜೈಪುರವೆಂಬ ನೂತನ ನಗರವನ್ನು ರಚಿಸಿ ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು.

ಜೈಪುರ ನಗರವು ಆಧುನಿಕ ರೀತಿಯ ಮೇರೆಗೆ ರಚಿಸಲ್ಪಟ್ಟು ಭವ್ಯವಾದ ಕಟ್ಟಡಗಳಿಂದಲೂ, ವಿಸ್ತಾರವಾದ ಮಾರ್ಗಗಳಿಂದಲೂ, ರಮಣೀಯ ಸರೋವರ ಉದ್ಯಾನವನಗಳಿಂದಲೂ ಸುಶೋಭಿಸುತ್ತಿದೆ; ಹಳೇ ರಾಜಧಾನಿಯಾದ ಅಂಬಾರದ ವರೆಗೂ ಕೋಟೆಕೊತ್ತಲುಗಳು ರಚಿಸಲ್ಪಟ್ಟುವು.

ರಜಪುತಾನದಲ್ಲಿ ಈ ಸಮಯ ಅನೇಕ ಚಿಕ್ಕ ಪುಟ್ಟ ಸ್ವತಂತ್ರ ರಾಜಪುತ್ರ ಸಂಸ್ಥಾನಗಳಿದ್ದುವು. ಜ್ಯೋತಿಶ್ಶಾಸ್ತ್ರವನ್ನು ಅಭ್ಯಾಸಿಸುವ ಹುಚ್ಚು ಇವರಲ್ಲಿ ಬಹಳ; ಇದರ ಫಲವಾಗಿ ಖಗೋಲಶಾಸ್ತ್ರದ ಜ್ಞಾನವೂ ಆ ರಾಜಪುತ್ರರಿಗಿದ್ದಿತು; ಜೇಸಿಂಗರು ಖಗೋಲಶಾಸ್ತ್ರವನ್ನು ಚಿಕ್ಕಂದಿನಲ್ಲಿ ಅಭ್ಯಾಸಿಸಿದ್ದುದರಿಂದ ಕಾಲವು ಕಳೆದಂತೆ ಅದರಲ್ಲಿ ಅಭಿರುಚಿ ಹೆಚ್ಚಿ, ಈ ಶಾಸ್ತ್ರದಲ್ಲಿ ಅದ್ವಿತೀಯನಾಗಬೇಕೆಂಬ ಮಹಾತ್ವಾಕಾಂಕ್ಷೆ ಉದ್ಭವಿಸಿತು. ಈ ಹಟವನ್ನು ಸಾಧಿಸಿಯೇ ಬಿಡಬೇಕು. ಮೊಗಲ್ ಸಾರ್ವಭೌಮರಾದ ಮಹಮ್ಮದ್ ಶಹಾರವರೂ ಜೇಸಿಂಗರಿಗೆ ಹೆಚ್ಚಿನ ಪ್ರೋತ್ಸಾಹವನ್ನಿತ್ತುದರಿಂದ ಹಿಂದೂ ಪಂಚಾಂಗದ ಪುನರ್‌ಶೋಧನೆಯಲ್ಲಿ ಇವರು ನಿರತರಾದರು.

ಈ ಸದುದ್ದೇಶವನ್ನು ಈಡೇರಿಸಿಕೊಳ್ಳಲು ಅಧಿಕಾರಕೇಂದ, ಧಿಲ್ಲಿ. ಉಜ್ಜಯಿನಿ. ಕಾಶಿ, ಮಥುರಾ, ಮತ್ತು ಜೈಪುರಗಳಲ್ಲಿ ನಕ್ಷತ್ರ ಶಾಲೆ (Observatory) ಗಳನ್ನು ರಚಿಸಿದರು. ಅವರಲ್ಲಿದ್ದ ಪರ್ಶಿಯನ್ ಸಲಕರಣೆಗಳು ಸಾಕಾಗದೆ ಇದ್ದುದರಿಂದ ನೂತನ ಯಂತ್ರಗಳನ್ನು ಶೋಧಿಸಲು ರಾತ್ರಿದಿವ "ತಪಸ್ಸು" ಮಾಡಿ ತನ್ನ ಪ್ರಯತ್ನದಲ್ಲಿ ಜಯಶೀಲರಾದರು. ಅವರು ಶೋಧಿಸಿದ ಯಂತ್ರಗಳು ಸರಿಯಾದ ಪ್ರತಿಫಲವನ್ನು ಕೊಡುತ್ತಿದ್ದುವಲ್ಲದೆ ಅಂದು ಪ್ರಚಾರದಲ್ಲಿದ್ದ ಎಲ್ಲ ಸಲಕರಣೆಗಳಿಗಿಂತಲೂ ಗಾತ್ರವಾಗಿದ್ದುವೆಂದು ತಿಳಿದಿದೆ.

ಖಗೋಲಶಾಸ್ತ್ರದಲ್ಲಿ ತಾನು ಶೋಧಿಸಿದ ಕೆಲವು ಮಹತ್ವದ ವಿಷಯಗಳನ್ನು ಜೈಸಿಂಗರು ರಿಕಾರ್ಡು ಮಾಡುತ್ತಿದ್ದಾಗ ಪೋರ್ಚುಗೀಸ್ ಮಿಶ್ನರಿಯೊಬ್ಬರು ಜೈಪುರಕ್ಕೆ ಆಗಮಿಸಿ ಪೋರ್ಚುಗಲ್‌ದಲ್ಲಿ ಖಗೋಲಶಾಸ್ತ್ರದಲ್ಲಿ ನಡೆದಿದ್ದ ಕೆಲವು ಹೆಚ್ಚಿನ ಶೋಧನೆಗಳನ್ನು ವಿವರಿಸಿದರಂತೆ. ಇದನ್ನು ಸೂಕ್ಷ್ಮವಾಗಿ ಅರಿಯಲು ಜೈಸಿಂಗರು ವೈಜ್ಞಾನಿಕ ರಾಯಭಾರಿಯೊಬ್ಬನನ್ನು ಪೋರ್ಚುಗಲ್ ದೇಶಕ್ಕೆ ಕಳುಹಿಸಿಕೊಟ್ಟರು.

ಪೋರ್ಚುಗಲ್ ದೊರೆಯಾದ "ಇಮ್ಮಾನ್ಯುವೆಲ್" ಈ ರಾಯಭಾರಿಯನ್ನು ಆದರದಿಂದ ಸ್ವೀಕರಿಸಿ, ಅವನೊಂದಿಗೆ "ಕ್ಸೇವಿಯರ್ ಡ ಸಿಲ್ವ" ಎಂಬ ಪಂಡಿತನನ್ನು ಜೈಪುರಕ್ಕೆ ಕಳುಹಿಸಿದರು. ಖಗೋಲಶಾಸ್ತ್ರ ಲಹೈರೆಯ ಶೋಧನೆಗಳನ್ನು ಜೈಸಿಂಗರು ಆ ಮೂಲಕ ತಿಳಿದುಕೊಂಡರು.

ಲಹೈರೆಯ ಶೋಧನೆಯನ್ನೂ ತನ್ನದನ್ನೂ ಜೈಸಿಂಗರು ವಿಮರ್ಶಿಸಿ ನೋಡಿದಾಗ ತನ್ನ ಶೋಧನೆಯಲ್ಲಿ ಅಲ್ಪ ಸ್ವಲ್ಪ ತಪ್ಪುಗಳಿದ್ದುದು ಕಂಡುಬಂದಿತಂತೆ. ಜೈಸಿಂಗರು ಶೋಧಿಸಿ ರಚಿಸಿದ್ದ ಯಂತ್ರಗಳು ತೃಪ್ತಿಕರವಿದ್ದು ಸಮಾಚೀನವಾಗಿವೆಯೆಂದು ಪೋರ್ಚುಗೀಸ ಪಂಡಿತರು ಅಭಿಪ್ರಾಯಪಟ್ಟರು. ಅವರ ಶೋಧನೆಗಳಲ್ಲಿದ್ದ ಅಲ್ಪ ಸ್ವಲ್ಪ ತಪ್ಪುಗಳನ್ನು ಹಿಡಿಯಲು ಪ್ರಸಿದ್ಧ ಆಂಗ್ಲ ಖಗೋಲಜ್ಞರಿಗೂ ಸಾಧ್ಯವಾಗಿಲ್ಲವಂತೆ.

ಮೊಗಲ್ ಸಾರ್ವಭೌಮರು ತನಗಿತ್ತ ಪ್ರೋತ್ಸಾಹಕ್ಕಾಗಿ ಜೈಸಿಂಗರು ಕೃತಜ್ಞತಾಭಾವದಿಂದ ತಮ್ಮೆಲ್ಲ ಶೋಧನೆಯ ಕೋಷ್ಟಕಗಳನ್ನು ಅವರಿಗಾಗಿ ಸಮರ್ಪಿಸಿದ್ದಾರೆ.

ಅವರ ಅಪ್ಪಣೆಯ ಮೇರೆಗೆ ಪ್ರಾಚೀನ ಹಾಗೂ ಆಧುನಿಕ ಗಣಿತ ಶಾಸ್ತ್ರ, ವಿಜ್ಞಾನ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸಲಾಯಿತು. ಜೈಸಿಂಗರು ಅಪ್ರತಿಮ ಸಂಸ್ಕೃತ ಪಂಡಿತರೆಂಬುದನ್ನು ಮರೆಯಲಾಗದು.

: ಈ ಜಾಹೀರಾತುಗಳು ! :

ಬರೆದವರು:—
ಎಸ್. ಎಸ್. ಆರ್.

> "ದೇವ! ತಾಯಿತ ಮತ್ತು ನೂರಾರು ಇನಾಂಗಳ ಜಾಹೀರಾತುಗಳಿಂದ ನಮ್ಮನ್ನು ಕಾಪಾಡು!" ಎಂದು ಈ ಲೇಖಕರು ಪ್ರಾರ್ಥಿಸುತ್ತಾರೆ. ಜಾಹೀರಾತುಗಳದೇ ಒಂದು ಪತ್ರಿಕೆಯಾಗಬೇಕೆಂದು ಇವರ ಇಚ್ಛೆ. ಪತ್ರಿಕೆ ನಡೆಸಿ ಅನುಭವವಿರಲಾರದ ಇವರು ಆ ಮೊದಲೇ ಜಾಹೀರಾತುಗಳದೇ ಪತ್ರಿಕೆಯಾಗಬೇಕೆಂಬುದನ್ನಪೇಕ್ಷಿಸುವಾಗ, ಪತ್ರಿಕಾ ಮ್ಹಾಲಕರ ಸ್ವಪ್ನಕ್ಕೂ ಇವರ ಆಶಯಕ್ಕೂ ವ್ಯತ್ಯಾಸವಿಲ್ಲವೆಂದು ಕಾಣುವುದು. ಜಾಹೀರಾತುಗಳು ಇವರ ಲಕ್ಷ್ಯವನ್ನು ಸೆಳೆದಿವೆಯೆಂಬುದರಿಂದಲೇ ಜಾಹೀರಾತುಗಳ ಬೆಲೆಯೇನೆಂದು ಸ್ಪಷ್ಟ!

ಈ ಜಾಹೀರಾತುಗಳು! ಈಗೀಗ, ಜಾಹೀರಾತುಗಳೆಂದರೆ ಸಾಕು; ಆ ಕ್ಷಣ ತಲೆಸಿಡಿತಕ್ಕಾರಂಭ. ನೋಡಿದಮಾತ್ರಕ್ಕೆ ಹೀಗಾದರೆ, ಜಾಹೀರಾತುಗಳನ್ನು ಸೃಷ್ಟಿಸಿದವರ ತಲೆ ಎಷ್ಟು ಸಿಡಿದಿರಬೇಕೋ ಎಂದೆನಿಸುತ್ತದೆ ಒಮ್ಮೊಮ್ಮೆ-ಆದರೆ ಮರುಕ್ಷಣ, ಕೆಲವೊಂದು ಜಾಹೀರಾತುಗಳನ್ನು ನೋಡಿದೊಡನೆ ಈ ವ್ಯವಸಾಯದಲ್ಲಿ ಹೆಚ್ಚಿನ ಹುರುಳಿಲ್ಲವೆಂದು ಮನವರಿಕೆಯಾಗುತ್ತದೆ. ಜಾಹೀರಾತು ಬರೆಯಬೇಕೆಂಬ ಉದ್ದೇಶದಿಂದ ಕುಳಿತು, ಮೆದುಳಿಗೆ ಯಾವುದು ಮೊದಲಾಗಿ ಹತ್ತುತ್ತದೋ, ಒಪ್ಪಲಿ, ಒಪ್ಪದಿರಲಿ, ಅದನ್ನೇ ಬರೆದು ಆ ಮೇಲೆ ಸುತ್ತು ಸುತ್ತು ತಿರುಗಿ, ಜಾಹೀರಾತಿನ ಉದ್ದೇಶದ ವಿಚಾರವನ್ನು ಸೂಚಿಸುವ ಜಾಹೀರಾತುಗಳನ್ನು ಬರೆವುದರಲ್ಲಿ ಕಷ್ಟವಿದೆಯೇ? ಇಂಥಹ ಜಾಹೀರಾತುಗಳೇ ನಮ್ಮಲ್ಲಿ ಬಹಳ. ಉದಾಹರಣೆಗಾಗಿ ಈ ಕೆಳಗಿನ ಜಾಹೀರಾತನ್ನು ನೋಡಿರಿ!

"ಗಣಿತಶಾಸ್ತ್ರದ ಅದ್ಭುತ ಘೋರಣೆ! ಮನುಷ್ಯ ವರ್ಗದ ವಿನೋದ ವಿಚಾರ!" ಇತ್ಯಾದಿ, ಇತ್ಯಾದಿ ಈ ಜಾಹೀರಾತಿನ ಶಿರೋನಾಮ. ಹೇಳಬಲ್ಲಿರಾ ನೀವು ಈ ಜಾಹೀರಾತು ಯಾವುದನ್ನು ಕುರಿತೆಂದು? ಗಣಿತದ ಅದ್ಭುತ ಘೋರಣೆಯೆಂದ ಬಳಿಕ, ಗಣಿತಶಾಸ್ತ್ರದ ಪುಸ್ತಕವಾಗಿರಬಹುದೆಂದು ಊಹಿಸಲಾಗದೇ? ಅಲ್ಲ, ವ್ಯಾಪಾರ ವಹಿವಾಟುಗಳ ವಿಚಾರವೆಂದು ತಿಳಕೊಳ್ಳಬಾರದೇ? ವಿನೋದ ವಿಚಾರವೆಂದ ಮೇಲೆ ರಸಿಕರಂಜನೆಯ ವಿಚಾರವಿರಬಹುದೆಂದು ಯೋಚಿಸಲಾಗದೇ?? ಪರಂತು ಈ ಮೇಲಣ ಶಿರೋನಾಮೆಯು ವಿಮಾಕಂಪೆನಿಯೊಂದರ ಕುರಿತು ಜಾಹೀರುಮಾಡುತ್ತಿರುವುದೆಂಬುದನ್ನು ತಿಳಿದುಕೊಳ್ಳಲು ಎಳ್ಳಷ್ಟಾದರೂ ದಾರಿಯಿದೆಯೇ?

ಮತ್ತೊಂದು ಜಾಹೀರಾತನ್ನು ನೋಡಿರಿ. "He came, he saw and he was satisfied" ಇದೊಂದು ಜಾಹೀರಾತು. ಯಾರು ನೋಡಿದರೇನು? ಯಾರು ಬಂದರೇನು? ಯಾರಿಗೆ ತೃಪ್ತಿಯಾದರೇನು? ಬಂದು ನೋಡಿ, ತೃಪ್ತಿಪಟ್ಟ ಸರತಿನ ವಿಚಾರ ತಿಳಿಯಬೇಕಾದರೆ ಮತ್ತಿನ್ನು ಉದ್ದುರುಟಿನ ಒಂದುವರೆ ಪುಠ ಓದಿತಿಳಕೊಳ್ಳಬಹುದಾದ ಈ ಜಾಹೀರಾತಿನ ವಿಚಾರ ನಿಮಗೆ ಹೇಗೆನ್ನಿಸೀತು? ಸೋಪಿನ ಗುಣಾವಗುಣಗಳನ್ನು ನಮ್ಮ ನಮ್ಮ ಅನುಭವದಿಂದಲೇ ತಿಳಕೊಳ್ಳಬೇಕಲ್ಲದೆ ಯಾರು ಬಂದು, ನೋಡಿ, ತೃಪ್ತಿಹೊಂದಿರುವರೆಂದರೆ ನಮಗೆ ಪ್ರಯೋಜನವೇನ.?

ಇನ್ನು ಕೆಲವು ಜಾಹೀರಾತುಗಳನ್ನು ಓದುವಾಗಲೇ ಮೈ 'ಜುಂ' ಅನ್ನುತ್ತಿದೆ, ನೋಡಿ:

"Warning—ಎಚ್ಚರಿಕೆ! ಉದರವೇದನೆ ಇರುವವರಿಗೆ ಎಚ್ಚರಿಕೆ!" ಯಾವದರಿಂದ, ಯಾತರಿಂದೆಂಬ ಪ್ರಶ್ನೆಯು ಮನುಷ್ಯನನ್ನು ಕದಡಿಸುತ್ತದಾದರೂ ಮುಂದಿನ ವಿಚಾರ ಓದುವಷ್ಟರ ಧೈರ್ಯ ಉಚೆಯವನಿಗಿದ್ದೀತೆ? ಉದರವೇದನೆಯನ್ನು ಸಹಿಸುವದೊಂದು—ಅದರ ಮೇಲೂ ಎಚ್ಚರಿಸಲ್ಪಡುವದೆಂದರೆ ಹೇಗಾದೀತು ಅವನ ಗತಿ? ಇನ್ನೂ ಕೆಲವು ಜಾಹೀರಾತುಗಳು "ನೀವು ಗೆಣಸನ್ನು ತಿನ್ನುವಿರಾ? ಅದನ್ನು ತಿನ್ನುವಿರಾ? ಇದನ್ನು ತಿನ್ನುವಿರಾ? ಹಾಗೆ ಮಾಡುವಿರಾ? ಹೀಗೆ ಮಾಡುವಿರಾ?" ಎಂದು ನಮ್ಮ ಪ್ರೀತಿಯ ಪದಾರ್ಥ ಮತ್ತು ಚಟಗಳ ವಿಚಾರ ನಮಸ್ಕಾರರೂಪಕ ಪ್ರಶ್ನೆಯನ್ನು ಕೇಳುತ್ತವೆ. ಹೇಗಾದೀತು ನಿಮಗಿವುಗಳ ಕೇಳಿಕೆಯಿಂದ?

ಹೀಗಾಗಿ ಜಾಹೀರಾತುಗಳನ್ನು ಬರೆಯುವದರಲ್ಲಿ ಏನೂ ಹುರುಳಿಲ್ಲವೆಂದು ಹೇಳಬಹುದೇ? ಇರಲಿ.

ಜಾಹೀರಾತುಗಳನ್ನು ಎರಡು ಜಾತಿಗಳಾಗಿ ವಿಂಗಡಿಸಬಹುದು. ಸಜೀವ ಮತ್ತು ನಿರ್ಜೀವ. ಸಜೀವ ಜಾಹೀರಾತುಗಳು ನಮ್ಮಲ್ಲಿ ತೀರ ಕಡಿಮೆ. ನಮ್ಮಲ್ಲಿ ಹೆಚ್ಚು ಕಡಿಮೆ ಎಲ್ಲಾ ಜಾಹೀರಾತುಗಳು ನಿರ್ಜೀವ ಜಾಹೀರಾತುಗಳು. ಜಾಹೀರಾತುಗಳ ಮುಖ್ಯ ಉದ್ದೇಶವೇನೆಂಬುದನ್ನು ಕಂಡುಕೊಂಡವರು ಮಾತ್ರ ಸಜೀವ ಜಾಹೀರಾತುಗಳಿಗೆ ಕೈಯೊಡ್ಡುವರು. ಈ ಜಾಹೀರಾತುಗಳಿಗೆ ಕೈಯೊಡ್ಡುವದೆಂದರೆ, ಕೈಯೊಡ್ಡುವವರು ತಮ್ಮ ಜಾಹೀರು ಪ್ರಚಾರಕ್ಕೆ ಬಂದು ಮಾರ್ಕೇಟಿನಲ್ಲಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸುವ ವರೆಗೂ ಕೈ ಸಡಿಲುಬಿಟ್ಟಿರಬೇಕಾಗುತ್ತದೆ. ವ್ಯಯದ ಖಾತೆಯನ್ನೇ ಬರಾಯಿಸಬೇಕಾಗುತ್ತದೆ. ಒಮ್ಮೆ ಜಾಹೀರು ಪ್ರತಿಷ್ಠೆಯಾಯಿತೆಂದನ್ನಿ; ಆ ಮೇಲೆ ವ್ಯಯಿಸಿದಕ್ಕಿಂತ ನೇಕಡಾ ೯೦ರಷ್ಟು ಹೆಚ್ಚಾದ ಆದಾಯ ಬಂದೇ ಬರುತ್ತದೆ. ಪ್ರತಿಷ್ಠೆಯಾಗಲಿಲ್ಲವೆಂದಾದರೆ ಈ ಜಾಹೀರಾತುಗಳಿಗೆ ಕೈಯೊಡ್ಡಿದವರ ಗತಿ ಹದಿನೆಂಡು ಮುಕ್ಕಾಲಾಣೆ. ಅಂದಮೇಲೆ ಈ ಸಜೀವ ಜಾಹಿರಾತುಗಳಲ್ಲಿನ ವಿಶಿಷ್ಟತೆಯೇನು? ಸಜೀವ

(74ನೇ ಪುಟದಿಂದ ಮುಂದುವರಿದುದು.)

ಚಂದ್ರಮಹಾಲ್ ಅರಮನೆಯ ಪೂರ್ವದಿಕ್ಕಿನಲ್ಲಿ ಜೈಸಿಂಗರು ಭವ್ಯವಾದ ನಕ್ಷತ್ರ ಶಾಲೆಯನ್ನ ಕಟ್ಟಿಸಿದರು. ಇಂದಿನ ವೈಜ್ಞಾನಿಕ ಶೋಧನೆಯ ದೃಷ್ಟಿಯಿಂದ ಈಗ ಈ ನಕ್ಷತ್ರ ಶಾಲೆಗೆ ಅಷ್ಟು ಮಹತ್ವವು ದೊರೆಯಲಾರದೆ ಹೋದರೂ, ಅವರು ಕಟ್ಟಿಸಿದ್ದ ಹಲವು ಕಟ್ಟಡಗಳೂ ಇಂದಿಗೂ ಅಚ್ಚಳಿಯದೆ ಉಳಿದಿವೆ. ಈ ಕಟ್ಟಡದ ಭಗ್ನಾವಶೇಷಗಳನ್ನು ಈಗಲೂ ಜೈಪುರದಲ್ಲಿ ಕಾಣಬಹುದಾಗಿದೆ. ಚಂದ್ರಕಾಂತ ಶಿಲೆಯಿಂದ ಕಟ್ಟಲ್ಪಟ್ಟ ವಿಚಿತ್ರ ಗಡಿಯಾರಾಕೃತಿಯ ನೆಲಗಟ್ಟು, ಅರ್ಧ ಚಂದ್ರಾಕೃತಿಯ ಕಟ್ಟಡವು ಇಂದಿಗೂ ದೃಷ್ಟಿಪಥಕ್ಕೆ ಬೀಳುವವು. ಹಳೇ ರಿಕಾರ್ಡುಗಳನ್ನು ನಾಶಮಾಡಲಾಗಿದೆ. ಹಲವು ತಾಮ್ರದ ಯಂತ್ರಗಳನ್ನು ಧನದಾಸೆಗಾಗಿ ವಿಕ್ರಯಮಾಡಲಾಗಿದೆ.

ಜೈಪುರದ ನರೇಂದ್ರರು ನಕ್ಷತ್ರ ಶಾಲೆಯನ್ನು ಪುನರ್ರಚಿಸಲು ಭಗೀರಥ ಯತ್ನಮಾಡಿದರೂ ಇಂದಿಗೂ ಸಫಲವಾಗಿಲ್ಲ. ಜೈಸಿಂಗರು ಕಟ್ಟಿಸಿದ್ದ ನಕ್ಷತ್ರ ಶಾಲೆಯ ಅವಶೇಷಗಳನ್ನು ನೋಡಿದರೆ ಅಂದು ಈ ಮಹಾಶಾಲೆಯು ಎಷ್ಟು ವೈಭವ ಸಂಪನ್ನವಾಗಿದ್ದಿರಬೇಕೆಂದು ಊಹಿಸಲೂ ಬಾರದು.

(73ನೇ ಪುಟದಿಂದ)

ಸೂರ್ಯಗ್ರಹಣ ಚಂದ್ರಗ್ರಹಣ ಯಾವ್ಯಾವ ತಿಂಗಳಲ್ಲಿ ಉಂಟಾಗುತ್ತವೆಂದು ಖಗೋಲ ಶಾಸ್ತ್ರಜ್ಞರು ತಮ್ಮ ಶೋಧನೆಗಳ ಆಧಾರದಿಂದ ಭವಿಷ್ಯ ನುಡಿದುದರಿಂದ, ಜನರು ಭವಿಷ್ಯದಲ್ಲಿ ನಂಬಿಕೆಯನ್ನಿಟ್ಟರು. ಭಾರತೀಯರಂತೆಯೇ ಬೆಬಿಲೋನಿಯರು ಸೂರ್ಯ ಚಂದ್ರ ಮೊದಲಾದ ಗ್ರಹಗಳನ್ನು ಆರಾಧಿಸುತ್ತ ಬಂದರು.

ಇನ್ನು ನಭೋಮಂಡಲವನ್ನು ಕೆಲವು ತಾರಾಗಣಗಳಿಂದ ವಿಭಾಗಿಸುವ ಪದ್ಧತಿಯನ್ನು ಖಗೋಲಜ್ಞರಿಟ್ಟುಕೊಂಡಿದ್ದರು. ಇವುಗಳನ್ನು ಹಿಂದೂ ಪುರಾಣ ದೇವತೆಗಳ ಹೆಸರಿಂದ ಕರೆಯಲಾಗುತ್ತಿದೆ. ಉದಾಹರಣೆಗಾಗಿ ಸಿಂಹ, ವಿಮಾನ, ಅಜ ಮೊದಲಾದ ನಾನಾ ಹೆಸರುಗಳನ್ನು ಕೊಡಲಾಗಿದೆ. ಸಿಂಹ, ಕರಡಿ ಮೊದಲಾದ ಗ್ರೀಕ್ ಹೆಸರುಗಳಿಗೂ ಭಾರತೀಯ ಖಗೋಲಜ್ಞರು ಕೊಟ್ಟ ಹೆಸರುಗಳಿಗೂ ನಿಕಟಸಂಬಂಧವಿದೆ. ಆಂಗ್ಲರು ಲೆಟಿನ್ ಹೆಸರುಗಳನ್ನಿಟ್ಟುಕೊಂಡಿದ್ದರು. ಇವುಗಳಿಂದ ಯುರೋಪಿನ ನಾನಾ ಭಾಷೆಗಳಿಗೆ ಭಾಷಾಂತರಗಳಾದುವು.

ಹಿಂದುಸ್ಥಾನದ ಮೇಲೆ ವಿದೇಶಿಯರ ದಾಳಿಯು ಹೆಚ್ಚಾದುದರಿಂದಲೂ, ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳುವುದೇ ಪ್ರಾಣಕ್ಕೆ ಬಂದುದರಿಂದಲೂ ಭಾರತದ ಖಗೋಲಜ್ಞರಿಗೆ ಪ್ರೋತ್ಸಾಹ ದೊರೆಯಲಿಲ್ಲ. ನಮ್ಮೊಳಗಿದ್ದ ಅಂತಃಕಲಹವು ಮತ್ತಷ್ಟು ಗಂಡಾಂತರವನ್ನು ತಂದೊಡ್ಡಿತು. ಬ್ರಿಟಿಷರು ಹಿಂದುಸ್ಥಾನವನ್ನು ವಶಪಡಿಸಿಕೊಂಡಮೇಲಂತೂ ಮೇಧಾವಿಗಳಿಗೆ ತಲೆ ಎತ್ತಲು ವಾತಾವರಣವೇ ದೊರೆಯಲಿಲ್ಲ. ಹೀಗಿದ್ದರೂ ಭಾರತದ ಹಲವು ಗ್ರಾಮಗಳಲ್ಲೂ ನಕ್ಷತ್ರಗಳ ಇಲ್ಲವೇ ಖಗೋಲ ಶಾಸ್ತ್ರವನ್ನು ಚೆನ್ನಾಗಿ ಬಲ್ಲ ಹಲವು ಘನಪಂಡಿತರಿರುವರೆಂದರೆ ತಪ್ಪಾಗಲಾರದು.

ಜಾಹಿರಾತುಗಳೆಂದರೆ, ಜಾಹಿರಾತು ಬೇರೆ + ಜಾಹೀರು ಪುಕ್ಕಟೆಯಾಗಿ ಮಾದರಿಗಾಗಿ ಕಳುಹಿಸುವದು ಬೇರೆ. ವಿವಿಧ ಆಕಾರ, ಬಣ್ಣ, ಮುಚ್ಚಿಕೆ, ಹೊದಿಕೆ, ಇವುಗಳಲ್ಲಿ ಮಾದರಿಗಳನ್ನು ಸಿದ್ಧಗೊಳಿಸಿ ಅವನ್ನು ದೊಡ್ಡ ದೊಡ್ಡ ದೊಡ್ಡಸ್ಥಿಕೆಯವರಿಗೆ, ವ್ಯಾಪಾರಿಗಳಿಗೆ, ಕೆಲವೊಂದು ಬಾರಿ ಸಿಕ್ಕ ಸಿಕ್ಕವರಿಗೆ ಹಂಚುವುದೆಂದರೆ ಸುಮ್ಮನಾಗುವದೇ? ಆ ಮೇಲೆ ಜಾಹೀರಾತುಗಳನ್ನು ಮೂರು ಬಣ್ಣಗಳಲ್ಲಿ, ಹದಿನಾರು ಭಾಷೆಗಳಲ್ಲಿ ದೊಡ್ಡ ಸ್ಕ್ರೀನು, ಹದ ಸ್ಕ್ರೀನು, ಸಣ್ಣ ಸ್ಕ್ರೀನುಗಳಲ್ಲಿ, ಸಿನಿಮಾ ನಾಟಕ ಇತ್ಯಾದಿಗಳ ಟಿಕೇಟುಗಳಲ್ಲಿ, ಊರ ಪರವೂರ ವಾರ್ತಾಪತ್ರಿಕೆಗಳಲ್ಲಿ, ದೀಪಸ್ತಂಭ, ಗಾಡಿಯ ಮಾಡು, ಮನೆಯ ಗೋಡೆ, ಸಾಲುಮರ, ಮೈಲು ಕಲ್ಲು, ಮದುವೆಯ ಮನೆ, ಮರಣದ ಕೊನೆ, ಅಲ್ಲಿ ಇಲ್ಲೆಂದಿಲ್ಲ, ಸಿಕ್ಕ ಸಿಕ್ಕಲ್ಲಿ ಸಿಕ್ಕೆಡೆಗಳಲ್ಲಿ, ಕೊನೆಗೆ ವಿಮಾನದ ಮೂಲಕ ಪ್ರಚಾರಗೊಳಿಸುವ ಯೋಜನೆ ಕಾಸು ಖರ್ಚುಮಾಡದೆ ಆಗುತ್ತದೆಯೇ? ಇನ್ನು ಪ್ರಚಾರಣಾಕಾರ್ಯ ನಡೆಸುವ ಮೆನೇಜರ್, ಮಾದರಿಯನ್ನು ಹಂಚುವ ಮಾದರಿ ಏಜಂಟ, ಇವರುಗಳಿಗೆಲ್ಲಾ ಪಗಾರಕೊಡಬೇಡವೇ?

ಮೇಲಾಗಿ ಮಾರ್ಕೆಟಿನ ಪರಿಳಿತಗಳಿಗೆ ಸರಿದೂಗಲು ಧಾರಣೆಯನ್ನು ಕೆಳಗಿನ ಅಂತಸ್ತಿಗೆ ಒಯ್ಯುವ ಸಂದರ್ಭ ಬರುತ್ತೆ. ಹೀಗಾಗಿ ಈ ಜಾಹೀರಾತಿನ ರೀತಿಯು ಅದೊಂದು ಪಗಡೆಯಾಟವೆನ್ನಬಹುದು. ಆದರೆ ನಿರ್ಜೀವ ಜಾಹೀರಾತುಗಳಿಂದಾಗಿ ಇಷ್ಟೊಂದು ಹಣ ವ್ಯಯಿಸುವ ಅಗತ್ಯ ಬೀಳುವದಿಲ್ಲ. ಕೆಲವೊಂದು ಪ್ರಮುಖ್ಯ ಪತ್ರಿಕೆಗಳಲ್ಲಿ ಬರೇ ಸ್ವಲ್ಪ ಖರ್ಚಿನಿಂದಾಗಿ ಈ ಜಾಹೀರಾತುಗಳು ಪ್ರಕಟವಾಗುವವು. ಓದುಗರು ಈ ಜಾಹೀರಾತುಗಳಿಗೆ ಗಮನಕೊಡುತ್ತಾರೋ ಎಂಬುದು ಸಂದೇಹಾಸ್ಪದ ವಿಚಾರ. ಅಂತೂ ಪತ್ರಿಕೆಗಳ ಪುಟ, ಸಂಪಾದಕರ ಜೇಬು ತುಂಬಲಿಕ್ಕಾಗುತ್ತದೆಯನ್ನಿ. ಇದಕ್ಕಾಗಿ ಜಾಹೀರಾತುಗಳಿಲ್ಲದೇ ಪತ್ರಿಕೆಯನ್ನು ಹೊರಡಿಸುವದೇ ತುಂಬಾ ಕಷ್ಟವಂತೆ. ಇದು ನನ್ನ ಸಂಪಾದಕ ಮಿತ್ರರೊಬ್ಬರ ಮಾತು. ಇರಲೂ ಬಹುದು. ಅಲ್ಲಗಳೆಯಲಾಗುವದಿಲ್ಲ ನುರಿತ ಕೋವಿದರ ಮಾತನ್ನು.

ನನ್ನ ಅಭಿಪ್ರಾಯವೇನೆಂದು ಕೇಳುವಿರಾದರೆ ಜಾಹೀರಾತುಗಳದೇ ಒಂದು ಪತ್ರಿಕೆಯನ್ನು ಹೊರಡಿಸಿದರಾಗದೇ ಎಂದು? ಹೀಗೆ ಮಾಡುವದರಿಂದ ಪ್ರಯೋಜನವೇನೆಂದು ಕೇಳುವಿರಾ? ಮೊದಲನೆಯದಾಗಿ ಪತ್ರಿಕೆಗಳಲ್ಲಂತೂ ಓದುವ ಬರೆಹಗಳೇ ತುಂಬುವಂತಾಗುತ್ತೆ. ಮೇಲಾಗಿ ಹೆದರಿಕೆ ಹುಟ್ಟಿಸುವ ಜಾಹೀರಾತುಗಳೂ ಪುಟ ಮಗುಚಿದೊಡನೆ ಕಣ್ಣಿಗೆ ಕುಕ್ಕದಂತಾಗಿ, ಜಾಹೀರಾತುಗಳು ಸಾರುತ್ತಿರುವ ವಿಚಾರಗಳ ಅಂಕೆಯಲ್ಲಿದ್ದ ಓದುಗರು ಕೆಲಮಟ್ಟಿಗಾದರೂ ಮನಸ್ವಾಸ್ಥ್ಯದಿಂದಿರಲು ಸಹಾಯಕವಾಗುತ್ತೆ. ಹೀಗೆ ನಾನು ಹೇಳಿದೆನಂತ ಪತ್ರಿಕೆಗಳ ಸಂಪಾದಕರೂ ಮೇಲಾಗಿ ಜಾಹೀರಾತುಗಳೆಂಬುದನ್ನು ಸೃಷ್ಟಿಸಿದ ಆ ಹಿರೇತಲೆಯೂ ಅಲ್ಲದೇ ಪ್ರಚಾರಕ್ಕೆ ತಂದ ತಲೆಗಳೆಲ್ಲಾ ನನ್ನ ಮೇಲೆ ರೇಗಿಬೀಳದೇ ಇರಲಾರರೆಂಬುದು ಖಂಡಿತ. ಒಮ್ಮೆಗೆ ರೇಗದಿದ್ದರೂ ಅಸಿಮಸಿ, ಕಿಡಿಕಾರದಿರಲಾರರು. ಮಾಡುವದೇನು? ಅವರ ಅಭಿಪ್ರಾಯಗಳನ್ನು ಕೇಳಲಿಕ್ಕೇ ಬೇಕು. 'ಹೊಗೆಯೇಳದೇ ಬೆಂಕಿ ಉರಿಯದು' ಎಂಬುದು ಹಿರಿಯರ ಮಾತು.

ಈ ಜಾಹೀರಾತುಗಳ ವಿಚಾರದಲ್ಲಿ ಇಷ್ಟೊಂದು 'ನಾಕುತಿ'ಯಾಗಲು ಕಾರಣವೇನೆಂದು ನೀವು ಕೇಳುವಿರಾದರೆ ಹೇಳಲೇ ಕಾರಣವನ್ನು?

ಮೊದ ಮೊದಲು, ಜಾಹೀರಾತುಗಳನ್ನು ಓದುವದೆಂದರೆ ನನಗೊಂದು ಹುಚ್ಚು. ಯಾವ ಜಾಹೀರಾತನ್ನೇಯಾಗಲೀ ಅಕ್ಷರಶಃ ಓದಿ ಸಜೀವ ಜಾಹೀರಾತು ಆದ ಪಕ್ಷ ಮರುಕ್ಷಣ ಮಾದರಿಗಾಗಿ ಬರಕೊಳ್ಳುವದು ಒಂದು ಛಲವಾಗಿತ್ತು ನನಗೆ. ಒಮ್ಮೆ ಅದೊಂದು ಪತ್ರಿಕೆಯಲ್ಲಿ "ತಾಯಿತ"–"ಧರ್ಮಾರ್ಥ ಸೇವೆ" ಬೇಗನೇ ಕೆಳಗಿನ ವಿಳಾಸಕ್ಕೆ ಬರೆಯಿರಿ ಎಂಬ ಒಂದು ಜಾಹೀರಾತನ್ನು ನೋಡಿದೆ. ಧರ್ಮಾರ್ಥ ಸೇವೆಮಾಡುವವರಿದ್ದ ಪಕ್ಷ ನಾವೇಕೆ ಮಾಡಿಸಿಕೊಳ್ಳಲಾಗದು? ಮಾಹಿತಿ ತಿಳಿಸಲು ಬರೆದೆ. ಮೂರು ನಾಲ್ಕು ದಿನಗಳಲ್ಲಿ, ಕಂಪೆನಿಯವರ ಪತ್ರ ಬಂದಿತು. "ಬರೇ ಲೋಹದ ಮತ್ತು ಟಪ್ಪಾಲಿನ ಖರ್ಚಿಗಾಗಿ ಮಾತ್ರ ಪ್ರತೀ ತಾಯಿತಕ್ಕೆ ರೂಪಾಯಿ ೨ ಕಿಮ್ಮತ್ತು ಇಟ್ಟಿರುತ್ತೇವೆ. ಗುಣಗಳನ್ನು ತಿಳಿದುಕೊಂಡ ಮೇಲೆ ಯಥಾಪುರಸ್ಕಾರ ದೊರೆಯದೇ ಇರಲಾರದೆಂಬ ಭರವಸೆಯಿಂದಲೇ ಇಂತಹ ಸಾಹಸಕ್ಕೆ ಕೈಹಚ್ಚಿರುವೆವು—ಕೂಡಲೇ 'ತಾಯಿತ'ಕ್ಕೆ ಬರಕೊಳ್ಳಿ'." ನೂರಾರು ಗುಣಗಳು ಸಿಗುವದೆಂದಾದರೆ, ಬರೆ ರೂಪಾಯಿ ೨ ಅಷ್ಟೇ? ಸರಿ. ವಿ. ಪಿ. ಯಾಗಿ ಕಳುಹಿಸಲು ಬರೆದೆ—ಕೆಲ ದಿನಗಳಲ್ಲಿ ವಿ. ಪಿ ಒಂದು ಕೈಸೇರಿತು–ಲಗ್ತಿಕರಿಸಿದ ಮಾಹಿತಿ ಪತ್ರದಲ್ಲಿದ್ದಂತೆ ಅಕ್ಷರಶಃ ವರ್ತಿಸಿದೆ.

ಅಂದು ಮಂಗಳವಾರ, ಬೆಳಿಗ್ಗೆ ಎದ್ದವನೇ ಮುಖಕ್ಷಾಲನಮಾಡಿಸಿ (ಮಾಡಿಸಲೇಬೇಕೆಂಬ ಕಡ್ಡಾಯವಿದ್ದ ಕಾರಣ) ಮಿಂದು, ಮಡಿಯುಟ್ಟು, ತುಳಸಿಕಟ್ಟೆಗೆ ೧೦೮ ಬಾರಿ ಪ್ರದಕ್ಷಿಣೆ ಬಂದು ತಾಯಿತವನ್ನು ದನದ ತಲೆಯ ಮೇಲಿರಿಸಿ ತೆಗೆದು, ದೇವರ ಕೋಣೆಯಲ್ಲಿ ದೇವರ ಮುಂದಿರಿಸಿ, ೧೦೮ ಬಾರಿ ಪ್ರಣಾಮಮಾಡಿ, ೧೦೮ ಬಾರಿ ಸೂಚಿಸಿದ ಮಂತ್ರವನ್ನು ಜಪಿಸಿ ತಾಯಿತವನ್ನು ಎಡತೋಳಿಗೆ ಕಟ್ಟಿಕೊಂಡೆನು—ಮೂರು ದಿವಸಗಳಾದವು! ಆರು ದಿವಸಗಳಾದವು!! ಹದಿನಾರು ದಿವಸಗಳಾದವು!!! ಪ್ರಯೋಜನವಿಲ್ಲ. ಬದಲಾಗಿ ಯಾವದೋ ಹಿಂದಿನ ಸಾಲ ಬಾಕಿಮಾಡಿರುವೆನಂತ ಸುಳ್ಳು ದಾವೆ ಕೋರ್ಟಿನಲ್ಲಿ! ನನ್ನ ಮೇಲೆ ತಾಯಿತವಿದ್ದ ಕಾರಣ, ದಾವೆಯಲ್ಲಿ ಖಂಡಿತ ಜಯವೆಂದು ನಂಬಿಕೆಯಿತ್ತು ಆದರೆ ಸೋಲೇ ಹಿಡಿಯಿತು. ನೂರು ದಿವಸಗಳು ಕಳೆದುಹೋದುವು. ಎಂದಿನಂತೇ ಹಿಂದಿನಂತೇ ನಮ್ಮ ಬಾಳು—ಹೆಚ್ಚು ಕಡಿಮೆಯಾಗಿರಬಹುದೇ? ಸಂದೇಹ ಬಂದ ಮೇಲಿನ್ನೇನಿ ಬರೆದು ವಿಚಾರಿಸಿದೆ ಕಂಪೆನಿಯವರೊಡನೆ—ಉತ್ತರ ಬಂದಿತು. 'ನಿರಾಶರಾಗಬೇಡಿರಿ—ತಾಯಿತವು ಫಲಕಾರಿಯಾಗದೇ ಇರಲಾರದು. ಒಮ್ಮೆಗೆ ಹೆಚ್ಚಿನ ಫಲ ಸಿಗದಿದ್ದರೂ ನಮ್ಮ 'ಯಾವತ್ಸಿದ್ಧಿ' ತಾಯಿತವು ಖಂಡಿತ ನಿಮ್ಮ ಮನಸಾಭೀಷ್ಟವನ್ನು ನೆರವೇರಿಸದೇ ಇರಲಾರದು—ವಿ. ಪಿಯಾಗಿ ಕಳುಹಿದರಾಗಬಹುದೇ?'—ಅಬ್ಬಾ—ಏನು ಮೋಜು!

ಮೂರು ವರ್ಷಗಳು ಕಳೆದವು; ಒಂದರ ಹಿಂದೆ ಒಂದಾಗಿ ಉರುಳಿದವು. ನನ್ನ ವಿಚಾರದಲ್ಲಿ "ತಾಯಿತ" ಯಾವದೊಂದೂ ಗೊಡವೆಗೆ ಬಂದಿಲ್ಲವೆಂಬುದು ಇಂದಿನ ವಸ್ತುಸ್ಥಿತಿ! ಸಿಟ್ಟಿನಿಂದ ಒಂದು ದಿನ ಆ ತಾಯಿತವನ್ನು ಕಿತ್ತು ಪುನಃ ಕಂಪೆನಿಗೇನೇ ರವಾನಿಸಿದೆ. ಅಲ್ಲದೇ ಒಂದು ಪತ್ರವನ್ನು ಬರೆದೆ—

ಸ್ವಾಮೀ,

"ತಮ್ಮ ಅಮೋಘವೆಂದು ಹೊಗಳಲ್ಪಟ್ಟಿರುವ ತಾಯಿತವನ್ನು ಧರಿಸಿದೆ. ನನ್ನ ವಿಚಾರದಲ್ಲಿ ಅದು ಸುಮ್ಮನೇ ಇದ್ದುದರಿಂದ ಅದನ್ನು ಪರತುಮಾಡಿದ್ದೇನೆ. ದಯಮಾಡಿ ವ್ಹಿ. ಪಿ.ಯನ್ನು ಸ್ವೀಕರಿಸಿ ಹಣ ಕಳುಹಿಸಿಕೊಡಿರಿ."—

ನಾಲ್ಕಾರು ದಿನಗಳ ನಂತರ ಹಿಂದಿನ ಜಾಹೀರಾತಿನ ಒಂದು ನಕಲು ನನಗೆ ಬಂದಿತು. ಉತ್ತರರೂಪವಾಗಿ: ಇನ್‌ಕಾರ್ ಮಾಡಿದ ವ್ಹಿ.ಪಿ.–ಜಾಹೀರಾತಿನಲ್ಲಾದರೋ ಮೊದಲನೇ ಶಿಫಾರಸು ಪತ್ರ ನನ್ನದು!

ಸ್ವಾಮೀ,

"ತಮ್ಮ ಅಮೋಘ ತಾಯಿತವನ್ನು ಧರಿಸಿದೆ. ನನ್ನ ವಿಚಾರ ಪರತುಮಾಡಿದ್ದೇನೆ. ದಯಮಾಡಿ ವ್ಹಿ. ಪಿಯನ್ನು ಕಳುಹಿಸಿಕೊಡಿರಿ."

ಹೀಗೆ? ಏನನ್ನುತ್ತೀರಿದಕ್ಕೆ?

ಇಷ್ಟೆಯೇ? ಇನ್ನೊಂದು ವಿಚಾರ ಕೇಳಿ. ಒಮ್ಮೆ ಅದೊಂದು ಪತ್ರಿಕೆಯಲ್ಲಿ ಬರೇ ಅಲ್ಪ ವ್ಯಯಕ್ಕೆ ವಿಶೇಷ ಲಭ್ಯವಾಗುವ ಒಂದು ಜಾಹೀರಾತನ್ನು ಕಂಡೆ.

[೭೭ನೇ ಪುಟಕ್ಕೆ ಮುಂದುವರಿಸಿಯದೆ]

ಹಿಂದುಸ್ಥಾನದ ಮೊದಲನೇ ಯುರೋಪಿಯನ್ ದೊರೆ

ಡೆಮೇಟ್ರಿಯಸನ ಸಾಮ್ರಾಜ್ಯ ಸ್ಥಾಪನೆ



ಪಂಜಾಬ-ಕಾಶ್ಮೀರ-ಸಿಂಧಗಳನ್ನು ವಶಪಡಿಸಿಕೊಂಡ ಗ್ರೀಕ್ ಅರಸು ಡೆಮೇಟ್ರಿಯುಸಿನ ಶಿರವಿದು,-ಆತನು ಹೊಡೆಸಿದ ನಾಣ್ಯಗಳಲ್ಲಿ ಈ ರೀತಿ ಇದೆ.

ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದ ಪಾಶ್ಚಾತ್ಯರಲ್ಲಿ ಅಲೆಕ್ಸಾಂಡರನೇ ಮೊದಲನೆಯವನೆಂದು ತಿಳಿದಿದೆ. ಅಂದಿನಿಂದ ಗ್ರೀಕ್ ಸಾಹಸಿಗಳ ಕಣ್ಣು ಪೂರ್ವದ ಕಡೆ ಹರಿಯಿತೆಂದೆನ್ನಬಹುದು. ಫಲವತ್ತಾದ ಹಾಗೂ ಲಕ್ಷ್ಮೀ ನಿವಾಸ ಸ್ಥಾನವಾದ ಭಾರತದಲ್ಲಿ ಸಾಮ್ರಾಜ್ಯವನ್ನೇ ಸ್ಥಾಪಿಸಿಬಿಡಬೇಕೆಂಬ ಕಲ್ಪನೆ, ಹಲವು ಕೆಚ್ಚೆದೆಯ ಸೈನ್ಯಾಧಿಕಾರಿಗಳಲ್ಲಿ ಉಂಟಾಯಿತು. ಅಲೆಕ್ಸಾಂಡರನ ದಂಡಯಾತ್ರೆ, ಜೀವನ, ಅಸಾಧಾರಣ ಧೈರ್ಯ ಈ ತರುಣರಿಗೆ ನವಚೈತನ್ಯವನು ಕೊಟ್ಟಿತೆಂದು ಹೇಳಿದರೆ ತಪ್ಪಾಗಲಾರದು. ಅಲೆಕ್ಸಾಂಡರನು ಪ್ರಾಬಲ್ಯಕ್ಕೆ ಬರುವ ಪೂರ್ವಕಾಲದಲ್ಲೇ ಗ್ರೀಕ್ ಮಹಾ ಕವಿಗಳಾದ ಸೋಮಂಗ ಮತ್ತು ಹೇಸಿಯೊಡ್‌ರ ಕಾವ್ಯ ಇತಿಹಾಸ ಇವು ಆಸಿಯಾಮೈನರ್‌ದ ವರೆಗೂ ಜನಜಂಗುಳಿಯ ವಾಚಾಲತೆಯ ಪಾಸು ಹೊಕ್ಕುಗಳಾಗಿದ್ದುವು. ಪರ್ಶಿಯದ ಪ್ರತಿಯೊಂದು ನಗರಗಳಲ್ಲೂ ಈ ಮಹಾ ಕಾವ್ಯಕ್ಕೆ ಸಂಬಂಧಪಟ್ಟ ಹಲವು ಶ್ರೇಷ್ಠ ಕೃತಿಗಳನ್ನು ಕಲಾವಿದರು ಶ್ಲಾಘಿಸುತ್ತಿದ್ದರು. ಗ್ರೀಕ್ ಭಾಷೆಯ ಸಾಮಾನ್ಯ ಪರಿಜ್ಞಾನವಿದ್ದವರು ಈ ಕಾವ್ಯದ ಅಲ್ಪಾಂಶವನ್ನಾದರೂ ಅರಿತಿದ್ದರು.

ಕ್ರಿಸ್ತಪೂರ್ವ ಮೂರನೇ ಶತಮಾನದಲ್ಲಿ ನಡೆದ ವಿದ್ಯಮಾನಗಳೆಲ್ಲವೂ ಅತ್ಯದ್ಭುತವಾಗಿವೆ. ಭಾರತೀಯ ಜನಾಂಗ, ಅವರ ಸಂಸ್ಕೃತಿ, ನಾಗರಿಕತೆಯ ಬಗ್ಗೆ ಗ್ರೀಕ್ ಜನರಲ್ಲಿ ಬಹಳ ಕುತೂಹಲವುಂಟಾಗಿದ್ದಿತು. ಇತ್ತ ಪೂರ್ವದಲ್ಲಿ ಹಲವು ಮಹತ್ವದ ಘಟನೆಗಳು ಒದಗಿದುವು. ಚಂದ್ರಗುಪ್ತ ಮೌರ್ಯನು ಸೆಲೂಕಸ್ ನಿಕೇಟರನ ಮಗಳನ್ನು ವಿವಾಹವಾದನಲ್ಲದೆ ೫೦೦ ಆನೆಗಳನ್ನು ಗ್ರೀಕ್ ಅರಸನಿಗೆ ಉಚಿತವಾಗಿತ್ತನು: ಕ್ರಿ. ಪೂರ್ವ (೩೦೫) ಆದರೆ ಇದೇ ಶತಮಾನದಂತ್ಯದೊಳಗಾಗಿ ಬರ್ಮದ ವರೆಗೆ ಚಾಚಿದ್ದ ಇಷ್ಟರ ಸಾಮ್ರಾಜ್ಯಗಳೂ ಬಿದ್ದುಹೋದುವು.

ಡೆಮೇಟ್ರಿಯಸನ ಉದಯ.

ಈ ಸುಸಂದರ್ಭದ ಸದುಪಯೋಗವನ್ನು ಮಾಡಿಕೊಳ್ಳಬೇಕೆಂಬ ಮಹಾಭಿಲಾಷೆಯು "ಬೇಕ್ಟ್ರಿಯಾ" ಅರಸನ ಮಗನಾದ "ಡೆಮೇಟ್ರಿಯಸ್ ಅನಿಕೇಟೋಸ್" ಇವನಲ್ಲಿ ಉದ್ಭವಿಸಿತು. ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸೆಲೂಕಸ್ ರಾಜಮನೆತನದಿಂದ ರಾಣಿಯನ್ನು ಮದುವೆಯಾದನು. ಇದರಿಂದ ಗ್ರೀಕ್ ಸಾಮ್ರಾಜ್ಯಕ್ಕೆ ಡೆಮೇಟ್ರಿಯಸ್ ಒಡೆಯನಾದನು. ಇವನ ರಾಜ್ಯಭಾರದಲ್ಲಿ ಗ್ರೀಕ್ ಪ್ರಭಾವವು ಹಿಂದುಸ್ಥಾನದಲ್ಲಿ ನೂರ್ಮಡಿ ಹೆಚ್ಚಿತೆಂದೆನ್ನಬಹುದು. ಭಾರತದಲ್ಲಿ ಸಾಮ್ರಾಜ್ಯಸ್ಥಾಪಿಸಿದ ಯುರೋಪಿಯನರಲ್ಲಿ ಮೊದಲನೇಸ್ಥಾನವು ಇವನಿಗೆ ದೊರೆಯುತ್ತದೆ. ಡೆಮೇಟ್ರಿಯಸ್ ಸುಜನಾದರಕ್ಕೆ ಪಾತ್ರನಾದನಲ್ಲದೆ, ಅವನ ಹೆಸರು ಪ್ರಾಚೀನ ಇತಿಹಾಸದಲ್ಲಿ ಶಾಶ್ವತವಾಗಿ ನೆಲೆಸಿದೆ. ಅಂದಿನ ದಿನವು ಅಶೋಕ ಮತ್ತು ಅಲೆಕ್ಸಾಂಡರ್ ಇವರು ಧ್ರುವತಾರೆಗಳೆರಡಂತೆ ಜನ ಹೃದಯದಲ್ಲಿ ಬೆಳಗುತಿದ್ದರು. ಮತ್ತೆ ಜನಪ್ರಿಯತೆಗೆ ಪಾತ್ರರಾದವರಿಬ್ಬರೆಂದರೆ ಡೆಮೇಟ್ರಿಯಸ್ ಮತ್ತು ಮಿನಾಂದರ್.

ಡೆಮೇಟ್ರಿಯಸ್ ಪಂಜಾಬ್, ಸಿಂಧ್, ಮತ್ತು ಕಾಶ್ಮೀರ ಪ್ರಾಂತಗಳ ಮೇಲೆ ಧಾಳಿಯಿಟ್ಟು (ಕ್ರಿ. ಪೂರ್ವ ೨೧೦ರಲ್ಲಿ) ವಶಪಡಿಸಿಕೊಂಡನು. ಇದು ಬರೀ ಕೆಚ್ಚೆದೆಯ ಸೈನ್ಯಾಧಿಕಾರಿಯ ಸಾಹಸವೆಂದು ಅಲಕ್ಷ್ಯದಿಂದ ಕಾಣಲಾಗದು. ಈ ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಲು ಪ್ರಾಚೀನ ಕಾಲದಲ್ಲಿ ಎಷ್ಟು ಜನ ಧನ ಸಹಾಯವಿರಬೇಕು, ಯಾವ ರೀತಿಯ ಚಟುವಟಿಕೆಯಿಂದ ವರ್ತಿಸಬೇಕು ಎಂಬುದನ್ನು ಗಂಭೀರವಾಗಿ ಪರ್ಯಾಲೋಚಿಸಿದರೆ ಡೆಮೇಟ್ರಿಯಸ್‌ನ ನಿಜವಾದ ಶಕ್ತಿಯ ಅರಿವುಂಟಾಗುವುದರಲ್ಲಿ ಸಂದೇಹವಿಲ್ಲ.

ಬೇಕ್ಟ್ರಿಯನ್ ಸಾಮ್ರಾಜ್ಯವು ಹಿಂದೂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟುದುದರ ಫಲವಾಗಿ ಗ್ರೀಕ್ ಮೊದಲಾದ ಹಲವು ಘನ ಪಂಡಿತರು ಭಾರತಕ್ಕೆ ಆಗಮಿಸಿ, ಹಿಂದೀಯರ ಸಂಸ್ಕೃತಿಯನ್ನು ಅಭ್ಯಸಿಸಲು ಪ್ರಯತ್ನಿಸಿದರು. ಈ ಕಾಲದಲ್ಲಿ ಧಾರ್ಮಿಕ ತತ್ವ ಘರ್ಷಣೆಯೂ ಉಂಟಾಯಿತೆಂಬುದನ್ನು ಮರೆಯಲಾಗುವುದಿಲ್ಲ.

ಇತ್ತ ಬೇಕ್ಟ್ರಿಯದಲ್ಲಿದ್ದ ಡೆಮೇಟ್ರಿಯಸ್‌ನ ತಂದೆಯಾದ ಯುತೀಡೇಮಸ್ ಹಾಗೂ ಸೀರಿಯದ ಅರಸನಾದ ಆಂಟ್ರಿಯಕಸ್ ಇವರೊಳಗೆ ವಾದವಿವಾದವೆದ್ದು ಯುದ್ಧವುಂಟಾಗುವ ಭಯಾನಕ ಪರಿಸ್ಥಿತಿಯೆದ್ದಿತು. ಡೆಮೇಟ್ರಿಯಸ್ ಈ ಸಮಯದಲ್ಲಿ ಒಪ್ಪಂದವನ್ನುಂಟುಮಾಡಲು ಒಪ್ಪಿಕೊಂಡು ಸೀರಿಯಕ್ಕೆ ತೆರಳಿದಾಗ, ಸೀರಿಯದ ದೊರೆಯು ಇವನನ್ನು ಆತ್ಮಾದರದಿಂದ ಸ್ವೀಕರಿಸಿದನಲ್ಲದೆ ಸಂಧಾನಕ್ಕೆ ಸಮ್ಮತಿಸಿದನು. ಅಷ್ಟೇ ಅಲ್ಲ ರಾಜಕುಮಾರನ ಅಸಾಧಾರಣ ಧೈರ್ಯ ಸ್ಥೈರ್ಯಗಳನ್ನು ಕಂಡು ಮನ ಮೆಚ್ಚಿ, ತನ್ನ ಮಗಳನ್ನು ಧಾರೆಯೆರೆದು ಕೊಟ್ಟನು. ಚಾಸರ್ ಮಹಾಕವಿಯು ಡೆಮೇಟ್ರಿಯಸ್‌ನ ಪ್ರಭಾವ ಪ್ರತಿಷ್ಠೆಯನ್ನು ಮುಕ್ತಕಂಠವಾಗಿ ಹೊಗಳಿ ಹಾಡಿದ ಗೀತೆಯು ಇಂದಿಗೂ ಅತ್ಯುತ್ತಮ ಕಲಾಕೃತಿಯಾಗಿದೆ.

ತನ್ನ ಉತ್ತರ ಸಾಮ್ರಾಜ್ಯದ ಗಡಿಪ್ರದೇಶದಲ್ಲಿದ್ದ ಒರಟು ಜನರು ಪದೇಪದೇ ದಾಳಿನಡೆಸಿ ಉಪಟಳ ಕೊಡುತ್ತಿರುವುದನ್ನು ಡೆಮೇಟ್ರಿಯಸ್ ಸಹಿಸಲಾರದೆ ಈ ಗಡಿಯಲ್ಲಿ ಅಭೇದ್ಯ ಕೋಟೆಗಳನ್ನೂ ರಚಿಸಲು ಪ್ರಯತ್ನಿಸಿದನು. ಹಾಗಿದ್ದರೂ ಕೊನೆಗೆ ಈ ರಣಪ್ರಿಯರು ಗ್ರೀಕರ ಮೇಲೆ ನಿರಂತರ ಧಾಳಿನಡೆಸಿ ಸಾಮ್ರಾಜ್ಯವನ್ನು ಅವಿಚ್ಛಿನ್ನವಾಗಿ ಮಾಡಿದರು.

[೭೬ನೇ ಪುಟದಿಂದ ಮುಂದುವರಿದುದು.]

ಮರುಕ್ಷಣ ಅವರಿಗೆ ಪತ್ರ ಬರೆದೆ—ಮರು ಟಪ್ಪಾಲಿಗೇನೇ ಕಂಪೆನಿಯವರಿಂದ ಉತ್ತರ ಬಂದಿತು—"ನಮ್ಮ ವಿಖ್ಯಾತವಾದ "ಸೆನ್‌ಟೆನ್" ಮಾತ್ರೆಗಳ ಪ್ರಚಾರಕ್ಕೆ ಇಂತಿಷ್ಟು ಏರ್ಪಾಡುಗಳನ್ನು ಇಟ್ಟಿರುತ್ತೇವೆ. ಬರೇ ಡಜನ್ ಸೀಸೆಗಳ ಬೆಲೆ (ಒಂದು ತಿಂಗಳವರೆಗೆ ಮಾತ್ರ) ೧ ರೂಪಾಯಿ—ತರಿಸಿಕೊಂಡವರಿಗೆ ಜಾಹೀರಾತಿನಲ್ಲಿ ಸೂಚಿಸಿದ ೩೬೫ ಇನಾಂಗಳು ಪುಕ್ಕಟೆಯಾಗಿ ಕೊಡಲ್ಪಡುತ್ತವೆ. ಆದುದರಿಂದ ತ್ವರೆಯಾಗಿ ರೂಪಾಯಿ ೧॥ನ್ನು ರವಾನಿಸಿ ಈ ಸವಲತ್ತಿನ ಪ್ರಯೋಜನವನ್ನು ಹೊಂದುವಿರಾಗಿ ನಂಬಿದ್ದೇವೆ."

ಬರೇ ೧॥ ರೂಪಾಯಿಗಳಿಗೆ ಇಷ್ಟೊಂದು ಇನಾಂಗಳು ಸಿಗುವದೆಂದಾದರೆ ಯಾಕಾಗಿ ನಾನೂ ತರಿಸಬಾರದೆಂದು ಯೋಚಿಸಿ ವ್ಹಿಪಿಯಾಗಿ ಕಳುಹಿರೆಂದು ಕಂಪೆನಿಗೆ ಬರೆದೆ. ಪುನಃ ಅವರ ಪತ್ರ ಬಂದಿತು. "ವ್ಹಿಪಿಯಾಗಿ ಕಳುಹಿದರೆ ಪೊಸ್ಟೇಜು-ಖರ್ಚು ಹೆಚ್ಚಾಗುತ್ತೆ. ಆದುದರಿಂದ ಮಣಿಯಾರ್ಡರ್ ಮೂಲಕ ಹಣ ರವಾನಿಸಿದರೆ ಮರು ಟಪ್ಪಾಲಿಗೇನೇ ಪಾರ್ಸೆಲ್ ರವಾನಿಸುತ್ತೇವೆ."

ಹೀಗೂ ಆಗಲೆಂದು ೧॥ ರೂಪಾಯಿಗಳನ್ನು ಮಣಿಯಾರ್ಡರ್ ಮಾಡಿ ಕಳುಹಿದೆ. ಕೆಲ ದಿನಗಳಲ್ಲಿ ಪಾರ್ಸೆಲ್ ಬಂದಿತು—ಬಿಚ್ಚಿ ನೋಡುತ್ತೇನೆ! ಬಂದಿರುವ ಇನಾಂಗಳು ಯಾವವೆಂದು ಗೊತ್ತೇ? –

ಜಾಹೀರುಪಡಿಸಿದ ಐದು ವರ್ಷಗಳ ಗ್ಯಾರೆಂಟಿಯ ಕೀಲೆಸ್‌ಲಿವರ್ ವಾಚು ೧, ಪಾಕೆಟ್ ವಾಚು ೧, ಟೇಬಲ್ ಟ್ಯಾಮ್‌ಪಿಸ್ ೧-!ಅದಾವದೋ ವಾಚ್ ಕಂಪೆನಿಯವರು ಮಾದರಿಗಾಗಿ ತಯಾರಿಸಿದ ಡಮ್ಮಿ ಗಡಿಯಾರಗಳು ಸ್ವಾಮೀ! ಆ ಮೇಲೆ-ಸಾಮಾಣಿಗೆ ಹತ್ತೊ ಹದಿನೆರಡೋ ಸಿಕ್ಕುತ್ತವಲ್ಲಾ, ಸಣ್ಣ ಪೇಪರ್ ಮಿಠಾಯಿಗಳು—ಒಂದು ಚಿಕ್ಕ ಸೀಸೆಯಲ್ಲಿ ೧೦೦; ಕತ್ತರಿ ೧; ಪೆನಾಕತ್ತಿ ೧; ಚಿಪ್ಪಿನ ಗುಂಡಿಗಳು ೧೫೦; ಗುಂಡುಸೂಜಿ ೫೦; ಸಣ್ಣ ನೂಲಿನ ಉಂಡೆ ೧೦; ಇನ್ನುಳಿದ ೫೦ ಏನೆಂಬುದನ್ನು ಹೇಳಬಲ್ಲಿರಾ? ಅಬ್ಬಾ! ಯಾವ ಯಾವ ಗಜೇಟುಗಳಿಂದ ಕತ್ತರಿಸಿ ತೆಗೆದ ನಕ್ಷೆಗಳು! ಸ್ವಾಮಿ, ನಕ್ಷೆಗಳು—ಇದೀಗ ಜಾಹೀರುಪಡಿಸಿದ್ದ Picture Album!

ಇದನ್ನು ಕಂಡರೆ ನಿಮಗೆ ಹೇಗಾದೀತು? ನನಗೆ ಹೇಗಾಗಬಹುದು? ದೇವ! ನನ್ನನ್ನು 'ತಾಯಿತ' ಮತ್ತು "ನೂರಾರು ಇನಾಂಗಳ" ಜಾಹೀರಾತುಗಳಿಂದ ರಕ್ಷಿಸು!

ಗುಂಗುರು ಕೂದಲಿನ ಸಮಸ್ಯೆ

ತರುಣಿಯರಿಗೆ ಪ್ರಾಣಕ್ಕಿಂತಲೂ ಹೆಚ್ಚು

ನೂತನ ರೀತಿಯಲ್ಲಿ ಗುಂಗುರು ಗುಂಗುರಾಗುವಂತೆ ಕೇಶರಾಶಿಯನ್ನು ಕತ್ತರಿಸಲು ಬಲ್ಲ ಅಮೆರಿಕನ್ ಕ್ಷೌರಿಕನು ಬ್ರಿಟನ್ನಿಗೆ ಬಂದುದರಿಂದ ಸ್ತ್ರೀಸಮೂಹದಲ್ಲಿ ದೊಡ್ಡ ವಿಸ್ಮಯವೇ ಉದ್ಭವಿಸಿತು.

ಈ ನೂತನ ಶೋಧೆಯು ಯಶಸ್ವಿಗೊಂಡಿದೆ; ಸಾವಿರಾರು ಸ್ತ್ರೀಯರು ಈ ಕೆಲಸಿಗನಲ್ಲಿ ಕ್ಷೌರಮಾಡಿಕೊಂಡು ಗುಂಗುರುಕೂದಲನ್ನು ಪಡೆದರೂ ಈ ಗುಟ್ಟನ್ನು ಕಂಡುಹಿಡಿಯಲು ಒಬ್ಬರಿಂದಲೂ ಸಾಧ್ಯವಾಗಲಿಲ್ಲ.

ಈ ಪದ್ಧತಿಯು ಸಾರ್ವತ್ರಿಕ ಪ್ರಚಾರವಾದರೆ, ಶಾಶ್ವತ ಗುಂಗುರುಕೂದಲ "ಪ್ಯಾಶನ್ನಿನ" ಪರಮಾವಧಿಯೇ ಸರಿ: ಇನ್ನೂರು ವರ್ಷಗಳ ಹಿಂದೆ ಗುಂಗುರುಕೂದಲನ್ನು ಶಾಶ್ವತವಾಗಿ ಗುಂಗುರಾಗಿಯೇ ಇರಿಸುವಂತೆ, ಅಂದು ಪ್ರಚಾರದಲ್ಲಿದ್ದ ನಾನಾ ಪೌಡರ್ ಮತ್ತು ಸಲಕರಣೆಗಳನ್ನು ಹಲವು ಲಂಡನ್ 'ಲೇಡಿಗಳು' ಪ್ರಯೋಗಿಸಿದ್ದರಂತೆ. ಆದರೆ ಈ ಪ್ರಯತ್ನವು ಸಫಲವಾಗದೆ ಹೋಯಿತು.

ಕೃತಕ ಗುಂಗುರು ಕೂದಲು.

ಗುಂಗುರು ಗುಂಗುರು ಕೇಶರಾಶಿಯಿರುವ ಸ್ತ್ರೀಪುರುಷರು ತಮ್ಮ ಈ ಸುಂದರ ಕೂದಲಿನ ಬಗ್ಗೆ ಹೆಚ್ಚಿನ ಕುತೂಹಲವುಳ್ಳರಾಗಿಲ್ಲ. ಗುಂಗುರು ಕೇಶವು ಹೇಗುಂಟಾಗುತ್ತದೆ ಎಂಬುದನ್ನು ತಿಳಿಯಲೂ ಇವರು ಇಚ್ಛಿಸುವುದಿಲ್ಲ. ಇಂದೂ ಎಷ್ಟೋ ತರುಣತರುಣಿಯರು ಹಿರಿಯರಂತೆಯೇ, ತಮಗೂ ಈ ಮನಮೋಹಕ ಗುಂಗುರು ಕೂದಲುಗಳಿರಬೇಕೆಂಬ ಆಶೆಯಿಂದ ತಲೆಗೆ ವೆಸ್ಲಿನ್, ಕೇಶತೈಲ, ಮೊದಲಾದುವುಗಳನ್ನು ಸವರಿ ಕೇಶವು ಗುಂಗುರಾಗಿ ನಿಲ್ಲುವಂತೆ ಬಲಾತ್ಕಾರ ನಡೆಸುವರು. 'ಹೇರ್'ಪಿನ್ನುಗಳನ್ನು ಅಲ್ಲಲ್ಲಿ ಚುಚ್ಚುವರು.

ಇದೇ ರೀತಿಯಲ್ಲಿ 'ಮೆಶಿನ್''ನ ಮೂಲಕ ಕೂದಲು ಗುಂಗುರಾಗುವಂತೆ ಮಾಡುತ್ತಾರೆ. ಮೊದಲು ತಲೆಗೊಂದು ತೈಲವನ್ನು ಸವರಿ, ಅಪಾರಶಕ್ತಿಯುಳ್ಳ ಯಂತ್ರವನ್ನು ಪ್ರಯೋಗಿಸುವರು.

ಯೋಗ್ಯ ತೈಲವನ್ನು ಆರಿಸುವುದರಲ್ಲಿ ಕ್ಷೌರಿಕನ ಜಾಣ್ಮೆಯಿದೆ. ಸುಲಭದರಕ್ಕೆ ಮರುಳಾಗುವುದು ಎಷ್ಟಕ್ಕೂ ಯೋಗ್ಯವಲ್ಲ. ಕೇಶರಾಶಿಯನ್ನು ಮೊದಲೇ ಪರೀಕ್ಷಿಸಿಕೊಂಡು ಈ ತೈಲವನ್ನು ಯೋಗ್ಯ ರೀತಿಯಲ್ಲಿ ತಯಾರಿಸಬೇಕಾಗಿದೆ.

ಹುಟ್ಟುಗುಂಗುರು ಕೂದಲುಗಳಿದ್ದರೂ ಅವನ್ನು ಆಗಾಗ ಸೊಗಸಾಗಿ ಬಾಚಿಕೊಳ್ಳಬೇಕು. ಇಲ್ಲದೆ ಹೋದರೆ ಕ್ರಮೇಣ ಜಲ ಹಾಗೂ ಗಾಳಿಗೆ ಸಿಕ್ಕಿ ಅದರ ಅಂದ ಕೆಡುವುದು.

ಮಧ್ಯ ಆಫ್ರಿಕದಲ್ಲಿ ಒಂದು ಜಾತಿಗೆ ಸೇರಿದ ಸ್ತ್ರೀಯರು ಕೂದಲನ್ನು ಗುಂಗುರು ಗುಂಗುರಾಗಿ, ಬಹು ರಮಣೀಯವಾಗಿ ಬಾಚಿ ಹೆರಳು ಹಾಕಿಕೊಳ್ಳುವರು.

ಗುಂಗುರಾಗುವಂತೆ ಮೊತ್ತಮೊದಲು ಇವರು ತಲೆಗೆ ಆಫ್ರಿಕದ ಕಾಡು ಮರಗಳಲ್ಲಿ ದೊರಕುವ ಎಣ್ಣೆಯನ್ನು ಪೂಸಿ, ಮತ್ತೆ ಕೂದಲು ಗುಂಗುರಾಗಿ ನಿಲ್ಲುವ ರೀತಿಯಲ್ಲಿ ಕೆಂಪು ಒದ್ದೆಮಣ್ಣನ್ನು ತಲೆಗೆ ಮೆತ್ತಿಕೊಳ್ಳುವರು. ಈ ಮಣ್ಣು ಸೂರ್ಯನ ತಾಪಕ್ಕೆ ಒಣಗಿ ಪುಡಿಪುಡಿಯಾಗಿ ಬಿದ್ದುಹೋದಾಗ ಕೇಶವು ಗುಂಗುರಾಗಿ ಮಾರ್ಪಡುವುದು. ಮತ್ತೆ ನೀರಿನಲ್ಲಿ ತಲೆಯನ್ನು ಸ್ವಚ್ಛವಾಗಿ ತೊಳೆದರೂ ಗುಂಗುರು ಕೂದಲು ಹಾಗೆಯೇ ಇರುವುದು.

ಆಂಗ್ಲ ರಮಣಿಯರು ತಮ್ಮ ಗುಂಗುರು ಕೂದಲು ಕೆಡಬಾರದೆಂಬ ಇಚ್ಛೆಯಿಂದ ಎರಡು ತಿಂಗಳ ವರೆಗೆ ತಲೆಯನ್ನು ನೀರಿನಲ್ಲಿ ತೊಯಿಸದೆ, ಇರುವರೆಂದರೆ ನೀವು ಆಶ್ಚರ್ಯಪಡುವಿರಿ.

ಆಫ್ರಿಕದ ಪುರುಷ ಕ್ಷೌರಿಕರು ಸ್ತ್ರೀಯರ ಕೇಶವನ್ನು ಕತ್ತರಿಸುವ ಸಂಪ್ರದಾಯವಿಲ್ಲ. ಹಾಗಿದ್ದರೂ ನವತರುಣಿಯರು ಗುಂಗುರು ಕೂದಲಿಗಾಗಿ ಪ್ರಾಣವನ್ನೇ ತೊರೆಯಲು ಸಿದ್ಧರಿರುವರು.

> ಮನಮೋಹನ ಗುಂಗುರು ಕೂದಲುಂಟಾಗಬೇಕೆಂದು ನಾನಾ ತೈಲಗಳನ್ನು ಹಚ್ಚಿ ದಿನವಿಡೀ ಕನ್ನಡಿಯ ಬಳಿ ಕುಳಿತು ಬಲಾತ್ಕಾರದಿಂದ ತಲೆ ಬಾಚುವ ತರುಣ ತರುಣಿಯರಿಗೆ ಕಡಿಮೆಯಿಲ್ಲ. ಕೇಶರಾಶಿಯು ಉಂಗುರಾಕೃತಿಯಾಗಲು ಮೆಶಿನ್‌ಗಳ ಶರಣು ಹೋಗುವವರು ಹಲವರು. ಗಾಳಿ ನೀರಿಗೆ ಸಿಕ್ಕಿ ಗುಂಗುರು ಕೂದಲು ಕೆಡಬಹುದೆಂದು ತಿಂಗಳುಗಟ್ಟಲೆ ತಲೆಗೆ ಸ್ನಾನ ಮಾಡದೆ ಮಾತ್ರ ಇರಬೇಡಿ!

ಬ್ರಿಟನದಲ್ಲಿ ಕ್ರಾಂವೆಲ್‌ನ ರಾಜ್ಯಭಾರದ ವರೆಗೆ ಪುರುಷರೂ ಸ್ತ್ರೀಯರಂತೆ ತಲೆಗೂದಲಿನ ಶೃಂಗಾರದಲ್ಲಿ ಬಹು ಎಚ್ಚರಿಕೆಯಿಂದಿದ್ದರು. ಸ್ವಲ್ಪ ಸಮಯದ ಮೇಲೆ ಫ್ರೆಂಚ್ ಕೇಶ ಶೃಂಗಾರವು ಬ್ರಿಟಿಶರಲ್ಲಿ ಸಹ ಜಾರಿಗೆ ಬಂದಿತು

ಅಂದಿನಿಂದ ವಿಕ್ಟೋರಿಯಾ ರಾಣಿಯವರೆಗೆ ಗಂಡಸರು ಕೂದಲುಳ್ಳ ಟೊಪ್ಪಿಯನ್ನು ಧರಿಸಿದರು. ಈ ರೀತಿಯ ಟೊಪ್ಪಿಗಳನ್ನು ಕ್ರಯಕ್ಕೆ ಕೊಳ್ಳಲು ಅಶಕ್ತರಾದ ಬಡವರು ತಮ್ಮ ತಲೆಗೂದಲು ಆ ರೀತಿ ಕಾಣುವಂತೆ ಕತ್ತರಿಸಿ ಬಾಚಿಕೊಳ್ಳುತ್ತಿದ್ದರು. ಕೆಲವು ವೇಳೆ ಇದು ಕೆನ್ನೆಯ ವರೆಗೆ ಜೋಲುತಿತ್ತು. ಈಗ ಆಂಗ್ಲಜನರು ಈ ರೀತಿಯ ಪದ್ಧತಿಗಳಿಗೆ ತಿಲಾಂಜಲಿಯನ್ನೆರೆದಿರುವರು.

ಅದೇನೇ ಇರಲಿ. ಈ ರೀತಿಯ ನಾನಾ ಪದ್ಧತಿಗಳು ಕ್ಷೌರಿಕನನ್ನೂ ಒಮ್ಮೊಮ್ಮೆ ಧೈರ್ಯಗೆಡಿಸುವವು. ಹಾಗಿದ್ದರೂ ಅನಾದಿಕಾಲದಿಂದ ಕ್ಷೌರಿಕನಿಗೆ ಸಮಾಜದಲ್ಲೊಂದು ಸ್ಥಾನವಿದೆ. ನಾಗರಿಕ ಜನಾಂಗವಿರುವ ವರೆಗೆ ಕತ್ತರಿ ಮೊದಲಾದ ಸಲಕರಣೆಗಳನ್ನು ಹಿಡಿದ ಕ್ಷೌರಿಕನು ಇರುವುದರಲ್ಲಿ ಏನೇನೂ ಸಂದೇಹವಿಲ್ಲ.

೨೦,೦೦೦ ವರ್ಷಪೂರ್ವದ ಚಿತ್ರಕಲೆ

ಪೂರ್ವಕಾಲದಲ್ಲಿ ಜಿರಾಫೆಗಳು ಸಹ ಹಿಂದೂಸ್ಥಾನದಲ್ಲಿದ್ದುವು!

ಮಧ್ಯಪ್ರಾಂತ್ಯದ ಹೊಶಂಗಾಬಾದ್ ಎಂಬಲ್ಲಿಂದ ಸುಮಾರು ಎರಡು ಮೈಲು ದಕ್ಷಿಣಕ್ಕೆ ಒಂದು ಬಂಜರು ಪ್ರದೇಶವಿದೆ. ಅಲ್ಲಿಯ ಒಂದು ಗವಿಯಲ್ಲಿ ಕೆಲವು ಕಲ್ಲುಗಳ ಮೇಲೆ ಆನೆ, ಕುದುರೆ, ಆಡು, ಮಂಗ, ಹಕ್ಕಿಗಳು, ಮತ್ತು ಕೆಲವು ಯುದ್ಧದ ಚಿತ್ರಗಳನ್ನು ಕೆಂಪು ಬಣ್ಣದಲ್ಲಿ ಬಿಡಿಸಿದ್ದು ನಾವು ಕಾಣಬಹುದು. ಅಲ್ಲಿಯ ಅಸುಪಾಸಿನ ಜನರಿಂದ ಈ ಚಿತ್ರಗಳ ವಿಷಯ ಯಾವುದೊಂದೂ ತಿಳಿಯಲು ಸಾಧ್ಯವಿಲ್ಲ. ಕಾರಣವೇನೆಂದರೆ ಈ ಚಿತ್ರಗಳು ಅವರ ಪೂರ್ವಜರ ಕಾಲದಿಂದ ಇತ್ತೆಂಬುದು ಮಾತ್ರ ಇವರಿಗೆ ಗೊತ್ತು. ವಿನಹಾ ಇವನ್ನು ಯಾರು ಬಿಡಿಸಿದರು—ಯಾವಾಗ ಬಿಡಿಸಿದರು ಇವೇ ಮುಂತಾದ ಪ್ರಶ್ನೆಗಳಿಗೆ ಅವರು ಉತ್ತರಕೊಡಲು ಅಸಮರ್ಥರು.

ಸಾವಿರಾರು ವರುಷಗಳ ಹಿಂದಿನ ಚಿತ್ರಕಲೆಯಿದು. ಆಗಿನ ಜನರ ವಾಸಸ್ಥಾನವನ್ನೂ, ಆಯುಧಗಳನ್ನೂ, ಆಹಾರವನ್ನೂ, ಮತವನ್ನೂ, ಸೂಚಿಸುತ್ತಿರಬಹುದು. ಈ ಚಿತ್ರಗಳನ್ನು ಚೆನ್ನಾಗಿ ಪರೀಕ್ಷಿಸಿದರೆ ಇವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. ಮಾತ್ರವಲ್ಲದೆ ಮೊದಲನೇ ವಿಭಾಗದವರ ಚಿತ್ರಗಳ ಮೇಲೆ ಎರಡನೇಯವರೂ, ಎರಡನೇಯವರ ಚಿತ್ರಗಳ ಮೇಲೆ ಮೂರನೇಯವರೂ ತಮ್ಮ ಚಿತ್ರಗಳನ್ನು ಬಿಡಿಸಿದ್ದು ಕಂಡು ಹಿಡಿಯಬಹುದು.

ಚಿತ್ರ ಬಿಡಿಸುವಿಕೆಯಲ್ಲಿ ಕಂಡು ಬರುವ ಭೇದದಿಂದಲೂ, ಆಯುಧಗಳಲ್ಲಿ ಕಂಡು ಬರುವ ಅಂತರದಿಂದಲೂ, ಮತ್ತು ಉಡುಪಿನಲ್ಲಿ ಕಂಡು ಬರುವ ಭೇದದಿಂದಲೂ ಈ ಚಿತ್ರಗಳು ಬೇರೆ ಬೇರೆ ಜನರಿಂದ ಬೇರೆ ಬೇರೆ ಕಾಲದಲ್ಲಿ ಬರೆಯಲ್ಪಟ್ಟವೆಂದು ನಿಸ್ಸಂಕೋಚವಾಗಿ ಹೇಳಬಹುದು. ಒಬ್ಬ ಶಾಸ್ತ್ರಜ್ಞನು ಇವನ್ನು ೨೦,೦೦೦ ವರುಷ ಹಿಂದಿನ ಚಿತ್ರಗಳು (Upper Palaislithic), ೯೦೦೦ ವರುಷ ಹಿಂದಿನ ಚಿತ್ರಗಳು (Neolithic) ಮತ್ತು ೩೦೦೦ ವರುಷ ಹಿಂದಿನ ಚಿತ್ರಗಳು (Historic) ಎಂದು ಮೂರು ರೀತಿಯಾಗಿ ವಿಂಗಡಿಸಿರುತ್ತಾನೆ.

ಈ ಚಿತ್ರಗಳಲ್ಲಿ ನಾವು ಆಫ್ರಿಕದಲ್ಲಿ ಕಾಣುವ ಜಿರಾಫೆಯನ್ನು ಸಹಾ ಕಾಣಬಹುದು. ೨೦,೦೦೦ ವರುಷ ಹಿಂದಿನ ಹಿಂದುಸ್ಥಾನದ ಒಂದು ಚಿತ್ರದಲ್ಲಿ ಜಿರಾಫೆಯು ಸಹಾ ಇದೆಯೆಂದರೆ ಹಿಂದುಸ್ಥಾನಕ್ಕೂ ಆಫ್ರಿಕಕ್ಕೂ ಅಂದಿನಿಂದಲೂ ನಿಕಟ ಸಂಬಂಧವಿದ್ದಿತೆಂದಾಯಿತು.

ಯಾರಾದರೂ ಮೃಗಾಲಯದಲ್ಲಿ ಇತ್ತೀಚೆಗೆ ನೋಡಿ ಬಂದ ಜಿರಾಫೆಯನ್ನು ಅಲ್ಲಿ ಏಕೆ ಬಿಡಿಸಬಾರದೆಂದು ಕೆಲವರು ತರ್ಕಿಸಬಹುದಾದರೂ ಈ ಚಿತ್ರವನ್ನು ಕಣ್ಣಾರೆ ಕಂಡು ಪರೀಕ್ಷಿಸಿದವರಿಗೆ ಇಂತಹ ಸಂಶಯವು ಎಂದೂ ಬರಲಾರದು.

ಪರೀಕ್ಷೆ

(ಒಂದು ದೃಶ್ಯ)

[ಮುಂಜಾನೆ ನಸುಗೆಂಪು Vನೇ ದರ್ಜೆಯ ಮಕ್ಕಳು ಶಾಲೆಯ ಆಟದ ಬಯಲಲ್ಲಿ ಸೇರುವರು. ಸಾಕಷ್ಟು ಚೆನ್ನಾಗಿ ಉಡುಪು ಧರಿಸಿ ಪಾಠದ ಎಲ್ಲಾ ಸರಂಜಾಮಗಳನ್ನು ಹಿಡಿದು ಕೊಂಡು ಬಂದಿರುವರು. ಪರೀಕ್ಷೆಯ ದಿನವಂತೆ]

1ನೇಯವ:—ಇಂದು ಪರೀಕ್ಷೆಯಂತೆ. ಈಗ ಘಂಟೆ ಬಡಿಯೋದೇ ನಮಗೆ ಪರೀಕ್ಷೆ

2 ನಿನ್ನೆ ಮೇಲಿನ ಕ್ಲಾಸಿನದಾಯಿತು. ಇಂದು ನಮ್ಮ ಸರತಿ.

3 ಒಳ್ಳೇ ದುಸ್ತು ಹಾಕಿಕೊಂಡು ಬರಬೇಕೆಂತ ನಿನ್ನೆಯೇ ಎಚ್ಚರಿಸಿದ್ದಾರೆ.

4 ಯಾರ ದುಸ್ತು ಹೇಗಿದೆಯೆಂದೋ ಪರೀಕ್ಷೆ?

5 ಹಾಗಾದ್ರೆ ನಾನು...............

6 ಇದ್ದಷ್ಟು ಚೊಕ್ಕವಾಗಿ ಬರುವುದು ಅಷ್ಟೆ—ಮತ್ತೇನು?

2 ರಥೋತ್ಸವಕ್ಕೆಂದು ಹೊಲ್ಸಿದ ಅಂಗಿಯಿದು. ಇದಕ್ಕಿಂತ ಚಲೋದು ಬೇರೆನನಗಿಲ್ಲ.

4 ಅಕ್ಕನಿಗೆ ಮದುವೆಯಾದಾಗ ನನಗೇ ಎಂದು ಈ ಟೊಪ್ಪಿ ತಂದಿದ್ದರು. ಬೇರೆ ಎಲ್ಲಿಂದ ತರಲಿ?

5 ನಿನಗೆ ಮಾತ್ರ....

1 ನಿನಗೇನೋ? ನೀನೇ ನಮ್ಮ ಹಿರೇ ಮಾಣಿ. ನಿನಗೊಂದು ದುಸ್ತು ಬೇಕೋ?

4 ಆನೆಗೊಂದು ಗಂಟೆ ಬೇಕೋ?

1 ಹೌದು, ಘಂಟೆಯ ನೆನಪಾಯ್ತು. ಅದಾಗೋದೋ ಪರೀಕ್ಷೆಗೆ ಆರಂಭ. ಅದುವರೆಗೆ ಆಡೋಣ!

4 ಆಡೋಣ ಎಂದೋ, ಆಟದಲ್ಲಿ ಮುಂದಾಗುವುದರಲ್ಲೇ ಗಂಟೆ ಬಾರಿಸುವುದು ಆ ಗಂಟೆಯ ಮಾಮನ ಕರ್ಮ. ಅವನೆಂತವನು ಬಲ್ಲಿರಾ?

1 ಆದರೂ ಪರೀಕ್ಷೆಯೆಂದ್ರೇನದು? ನೀನು ಹೋದ ವರ್ಷದ ಮಾಜಿ ಹುಡುಗ ಅದೇನೆಂದು ಹೇಳು ನೋಡುವ.

5 ನನ್ನ ದುಸ್ತು ಚೆನ್ನಾಗಿಲ್ಲ... ಪರೀಕ್ಷೆಯೆಂದು ಏನುಮಾಡುತ್ತಾರೋ ಹೇಳಣ್ಣಾ.

6 ನಾವು ಆಡುವುದಿಲ್ವೇ? ಹಾಗೆ ದೊಡ್ಡವರಿಗೆ ಅದೊಂದು ಆಟ.

2 ಎಂದರೆ? ನಮ್ಮ ಆಟ ಹೇಗಿದೆಯೆಂದು ನೋಡುವರೋ?

5 ಅಲ್ವೇ ಅಲ್ಲ. ದೊಡ್ಡವರು ನಮ್ಮೊಡನೆ ಆಡುವ ಆಟಕ್ಕೆ ಪರೀಕ್ಷೆಯೆಂದು ಹೆಸ್ರು.

3 ನೀನೇನೋ ಇದೂ ಒಂದು ಆಟವೆಂದೇ ಹಾರ್ಸಿಬಿಡುವೆ!

6 ನಾವು ಇಷ್ಟು ದಿನ ಓದಿದ್ದು ಬರೆದದ್ದು ಎಷ್ಟೆಲ್ಲಾಯಿದೆಯೆಂದು ನಮ್ಮೊಡನೆ ಅವರು ಆಡುವರು.

2 ಒಂದು ವರ್ಷವೂ ಓದಿದ್ದೂ ಬರೆದದ್ದೂ! ಎಲ್ಲವೂ?

5 ಹೌದು ಡಿಕ್ಟೇಶನ್, ಬಾಯಿಪಾಠ, ಲೆಕ್ಕ, ಸಾಮಾನ್ಯ ತಿಳುವಳಿಕೆಯೆಲ್ಲಾ ಕೇಳುತ್ತಾರೆ.

3 ನಮಗೆ ಗೊತ್ತಿರುವುದೆಲ್ಲಾ ಏನೆಂದು ಅವರಿಗೆ ಹೇಗೆ ತಿಳಿಯುವುದು?

6 ನಮಗೆ ಗೊತ್ತಿರುವುದೆಲ್ಲಾ ಅವರಿಗೆ ಬೇಡ. ಅವರಿಗೆ ಗೊತ್ತಿರುವುದು ನಮಗೆಗೊತ್ತಿರುವುದೋ ಎಂದು ನೋಡುವರು.

4 ಇದೇನು ತಂಟೆ? ಈ ತಂಟೆಯ ಹೆಸರೇ ಪರೀಕ್ಷೆಯೆಂದೋ?

5 ಅವರು ಡಿಕ್ಟೇಷನ್ನಲ್ಲಿ ತಪ್ಪಿಸನೋಡುವುದು ಬಹಳವಿದೆ.

2 ಅದಕ್ಕೆಲ್ಲಾ ನಾನು ಸಿದ್ಧನೆ! ಡಿಕ್ಟೇಶನೆಲ್ಲಾ ಬಾಯಿಪಾಠ ಮಾಡಿಯೇ ಬಂದಿದ್ದೇನೆ.

6 ಕೆಲವೇಳೆ ಡಿಕ್ಟೇಷನ್ನಿನ ಬದಲಾಗಿ ಸಾಮಾನ್ಯ ತಿಳುವಳಿಕೆಯೇ ಜೋರಾಗುವುದುಂಟು.

4 ಅದಕ್ಕೆ ನಾನು ಸಿದ್ಧ.

6 ಹೋದ ವರ್ಷ ನಮಗೆಲ್ಲ ಕೇಳಿದ ಲೆಕ್ಕವೇ ಲೆಕ್ಕ. ಒಬ್ಬರೂ ಸರಿಯಾಗಿಲ್ಲ.

3 ಅದೇನೆಂದು ಕೇಳೋಣ. ಅಂಥಾದ್ದನ್ನೇ ಕೇಳಿಯಾರು. ಉತ್ತರ ತಯಾರಿಸೋಣ.

6 ಅದಕ್ಕೆ ಉತ್ತರವೇಯಿಲ್ಲ.

4 ಹಾಗಾದರೆ ಏಕೆ ಕೇಳಿದರು?

6 ಲೆಕ್ಕ ಎಂದ್ರೆ ಏನೆಂದು ಗೊತ್ತುಂಟೋ ಇಲ್ಲವೋ ನೋಡುವರೆಂದು ಬಾಯಿಪಾಠ ಅವರಿಗಾಗದಂತೆ ಅದಕ್ಕೆ.

1 ಎಂದ್ರೆ?

6 ಹಿರೇ ಮಾಣಿ, ನೀನು ಹೇಳು ನೋಡುವ. ಎಷ್ಟೆಟ್ಟೆ ಎಷ್ಟೋ?

(ಎಲ್ಲ ಮೂರ್ಛೆಹೋಗುವರು.)

6 ಹೆದರಬೇಡಿ. ಮಗ್ಗಿ ಕೋಷ್ಟಕ ಕೇಳುವ ನಮೂನೆ ಅದು.

2 ನಾವು ದಿನಾಲು ಬಾಯಿಪಾಠಮಾಡಿದ ಮಗ್ಗಿಯೆಲ್ಲಾ ವ್ಯರ್ಥ. ಅದು ನಿಜವಾಗಿ ಆಟವೇ.

4 ಹೋಗಲಿ. ಬರೋದೆಲ್ಲಾ ಆ ವೇಳೆಗೇ ಬರ್ಲಿ. ಇನ್ನಾದರೂ ಆಡೋಣ. ನಮ್ಮ ಕರ್ಮ! ಅದಕ್ಕೂ ಒಂದು ಜನ ಕಡಮೆ... ನು ಶ್ಯಾಮು ಇನ್ನೂ ಬಂದಿಲ್ಲ?

3 ಶ್ಯಾಮುಗೆ ಈವತ್ತು ಹುಟ್ಟಿದ ದಿನವೆನ್ನುತ್ತಿದ್ದನಲ್ಲಾ! ಬರುತ್ತಾನೋ ಇಲ್ಲವೋ? ಬಾರದಿದ್ದರೆ ಅವನ ಈ ವರ್ಷದ ಬರಹವೆಲ್ಲಾ ನೀರಿನ ಮೇಲೆ ಬರೆದಂತಾಯ್ತು.

2 ಅಂದ್ರೆ ಕಲಿತದ್ದೆಲ್ಲಾ? ಈ ಪರೀಕ್ಷೆಯಾಗದಿದ್ರೆ ಕಲಿತಿಲ್ಲವೆಂತಾಯ್ತೋ?

6 ಹೂಂ. ಪರೀಕ್ಷೆಯಾಗದಿದ್ರೆ ನಡದೇಯಿರುವೆ ಬೀಜದ ಹಾಗೆ.

5 ಪರೀಕ್ಷೆಯಾದರೆ ನೇಜಿ ನೆಟ್ಟು ಪುನಃ ಕಿತ್ತು ಬೇರು ಎಷ್ಟು ಎಂದು ಲೆಕ್ಕ ಮಾಡಿದ ಹಾಗೆ.

4 ನಂಗೊತ್ತಿದೆ. ಬಾರದಿದ್ದಾನೇ? ಬಂದ ಶಾಮು, ಶಾಮು(ಶಾಮು ಬರುವನು) ಏನಣ್ಣಾ ತಡವಾಯ್ತು?

3 ತಡವಾದರೂ ದುಸ್ತು ಚೆನ್ನಾಗಿ ಉಂಟು. ಉಪನಯ್ನವಾಯ್ತೋ?

ಶಾಮು:— ಅಲ್ಲ. ನಾನು ಹುಟ್ಟಿದ ದಿನ. ಈವತ್ತು ಪರೀಕ್ಷೆಯ ದಿನವೆಂದು ಮಾತ್ರ ಉಪಾಯವಿಲ್ಲದೆ ಬಂದೆನಲ್ಲದೆ ಇಲ್ಲದಿದ್ದಲ್ಲಿ ಬರುತ್ತಲೇ ಇರಲಿಲ್ಲ.

4 ನಾವೆಲ್ಲಾ ಪರೀಕ್ಷೆಗೆ ಗಂಟೆ ಹೊಡೆಯುವ ಮೊದಲೇ ಆಡಬೇಕೆಂದು ಕಾಯುತ್ತಿದ್ದೇವೆ. ನೀನಿನ್ನೂ ಬಾರದೆ ಇಲ್ಲಿ ಪೂರ್ತಿಜನವಿಲ್ಲದೆ....

2 ಇಷ್ಟೆಲ್ಲಾ ಸೊಗಸು ಸಿಂಗಾರದ ದುಸ್ತು ಹಾಕಿಕ್ಕೊಂಡು ಅವನು ಆಡುವನೋ? ದುಸ್ತು ಕೆಟ್ಟರೆ?

ಶಾಮು:—ದುಸ್ತು ಹಾಕಿಕೊಂಡಾಗಲೇ ಕೆಟ್ಟದೆ. ದುಸ್ತು ನೋಡುವವರಿಗೆ ಆಡುವವರಿಗಲ್ಲ ಕಾಣೋ? ಇನ್ನೇನು ಜಾಗ್ರತೆ ಆಡೋಣ.

5 ಏನಾಡೋದು?

7 ನಾನು ಹೇಳ್ಲೇ?

6 ಇದೆಲ್ಲಾ ಒಂದೂ ಇಡೀ ಆಟವಾಗ್ಲಿಲ್ಲ. ನಾನು ಹೇಳ್ಲೇ? ನಾವು ಪರೀಕ್ಷೆಯ ಆಟ ಆಡೋಣ.

ಎಲ್ಲರೂ:—ಅದೇ ಉತ್ತಮ.

2 ಅಭ್ಯಾಸವಾಗ್ಲಿ.

3 ಮತ್ತೇನು ಭಯ?

4 ಹಳೇ ಅಪರಾಧ.

5 ಆಡಿಸು ನೋಡುವ.

7 (ಶಾ) ನಾವು ತಯಾರು.

ಎಲ್ಲರು ನಿಲ್ಲಿರಿ ಸಾಲಾಗಿಲ್ಲಿ
ಸ್ಲೇಟು ಕಡ್ಡಿ ಇಡಿ ಕಾಲ್ಬುಡದಲ್ಲಿ
ಕೈಕಟ್ಟಿರುತೊಂದೇ ಕಡೆ ನೋಡ್ಬೇಕ್
ಅತ್ತಿತ್ತೋಡ್ದೆ ಬೇಕ್ ಟು ಬೇಕ್
ಪ್ರಶ್ನೆ ಕೇಳುವೆನು—ನನ್ನುತ್ತ್ರ—
ಎನ್ನುತ್ತಲೇ ಸ್ಲೇಟಿನಲ್ಲಿ ಬರೆರಿ
ತೋರ್ ಎಂದೊಡನೆಯೇ ಸ್ಲೇಟಿಡ್ಬೇಕ್
ಅತ್ತಿತ್ನೋಡ್ದೆ ಬೇಕ್ ಟು ಬೇಕ್
ಎಷ್ಟೆಷ್ಟೆಷ್ಟೋ ವನ್ ಟು ತ್ರಿ.

(ಗಂಟೆಯಾಗುವುದು)

(ಎಲ್ಲರೂ:—"ಗಂಟೆಯ ಮಾಮಾ, ತಂಟೆಯ ಮಾಮಾ" ಎನ್ನುತ್ತ ಎಲ್ಲರೂ ಅಲ್ಲಿಂದಲೇ (ಪರೀಕ್ಷೆಗಾಯ್ತೋ ಬನ್ನಿ ಎಂದೋಡಿದರು.)

[ಐವರು ಹಯರ್ ಎಲಿಮೆಂಟರಿ ವಿದ್ಯಾರ್ಥಿಗಳು ಬರುವರು. ಇವರ ಪರೀಕ್ಷೆ ನಿನ್ನೆ ಮುಗಿದಿದೆ. ಇಂದಿನಿಂದ ಒಂದು ತಿಂಗಳ ರಜೆಯಂತೆ]

ರಾಮು:—ನಾವಷ್ಟು ಜನ ಬೆದರಿದ್ದ ಈ ಪರೀಕ್ಷೆಯ ದಿನ ಎಂತೂ ಕಳೆಯಿತು.

ಭೀಮ:—ಪರೀಕ್ಷೆಯೆಂದು ಓದಿ ಓದಿ ನಿದ್ದೆಗೆಟ್ಟಿತು. ಬಾಯಿಯ ರುಚಿಗೆಟ್ಟಿತು. ಸ್ವಪ್ನದಲ್ಲೂ ಪರೀಕ್ಷೆಯ ಭಯಾನಕ ದೃಶ್ಯ. ನೋಡು ನನ್ನ ರಟ್ಟೆ, ಎರಡು ಅಂಗುಲ ಸವೆದು ಹೋಗಿದೆ.

ಶ್ಯಾಮು:—ಆದರೂ ಪಾಸಾದರೆ ಸರ್ಟಿಫಿಕೇಟು ಇದೆಯಲ್ಲ! ರಟ್ಟೆ ಮತ್ತು ನಾಲ್ಕಂಗುಲ ತೋರವಾದೀತು. ಮುಖವಂತೂ ಅಷ್ಟು ಅಗಲ ಅರಳಿತು.

ಭೀಮು:—ಪಾಸಾದರೆ! ಯಾರಿಗೆ ಗೊತ್ತು?

ರಾಮು:—ಆದೇಕೋ ನಾವೇನು ಬರೆದುವು, ಹೇಗೆವಾಡಿದ್ದೇವೆ ಎಂದು ನಮಗೆ ಗೊತ್ತಿಲ್ಲೋ? ಮುಖನೋಡಿದರೆ ತಿಳಿಯುತ್ತದೆ

ಭೀಮು:—ರಾಮು, ನಮಗೆ ಗೊತ್ತಿದುದು ಏನು ಫಲ. ಅವರು ಏನು ಗೊತ್ತು! ಮಾಡಿಕೊಂಡರೋ ಅದು ಮಾತ್ರ ಫಲ. ಶ್ಯಾಮು:—ಆದರೂ ಸೋಮು ನಿಜವಾಗಿಯೂ ಪಾಸಾಗದೆ ಇರಲಾರ.

ಸೋಮು:—ಆದೇನು ಗೊತ್ತು, ನಿನಗೆ ಇನ್ನೂ ಇಲ್ಲಿ ಶಾಲೆ ಇಲ್ಲ ಎಂದು ಇನ್ನೇನ್ ಮಾಡುವುದೋ.

ಭೀಮು:—ನನ್ನನ್ನು ಕಂಡು ಅವರು ನಗಾಡಿದರು. ನಾನು ಹಾಗೆ ಕಾಣಿಸು ತ್ತೇನೋ!

ಸೋಮು:—ನಿನ್ನ ಕೈ ಮೈ ಚೆನ್ನಾಗಿದೆ ನಮ್ಮಂತಲ್ಲಾ ಎಂದು ಸಂತೋಷ ಪಟ್ಟಿರಬೇಕು.

ಭೀಮು:—ಕೈ ಮೈ ಚೆನ್ನಾಗಿದೆ ಎಂದು ಸಂತೋಷಪಟ್ಟರೆ ಇದು ಮೂರನೇ ವರ್ಷ ಅಲ್ಲವೋ ಇನ್ನೂ ಹಾಗೆಯೇ! ಎಂದಲ್ಲಾ.

ಶ್ಯಾಮು:—ಕದಿಮ ಅಂಥ ಶಿಫಾರಸು.

ರಾಮು:—ಅಂದರೆ ಭೀಮು ಪಾಸೋ?

ಶ್ಯಾಮು:—ಶಾಲೆಯೇ ಇಲ್ಲದ ಈ ಹಳ್ಳಿಗೆ ಈ ಶಾಲೆ ಸ್ಥಾಪನೆ ಮಾಡಲು ಬುನಾದಿಕಲ್ಲು ನಟ್ಟವ ಇವನ ಅಜ್ಜ ಕಾಣೋ. ಶಿಖರ ಇಡಲಿಕ್ಕೊಬ್ಬ ಮೊಮ್ಮಗನಿರಲಿ ಎಂತ ಈ ಶಾಲೆಯಲ್ಲಿ ಯಾವಾಗಲೂ ಇವನು ಪ್ಯಾಸಾಗುವುದೇ ಇಲ್ಲ.

ಭೀಮು:—ನಾನು ಪಾಸಾಗುವುದೇ ಇಲ್ಲವಾದರೆ ನನ್ನನ್ನೇಕೆ ಬೇಡವೆಂದ್ರೂ ಶಾಲೆಗೆ ಕಳುಹಿಸುತ್ತಾರೆ ಮತ್ತೆ?

ರಾಮು:—ಕುಟುಂಬದ ಪೀಡೆ ಪರಿಹಾರವಾಗಲೀ ಅಂತ!

ಭೀಮು:—ಇದೇ ಮೂರು ಕ್ಲಾಸಿಗೆ ಎಂಟು ವರ್ಷ ಕಳೆಯಿತು. ಇನ್ನೂ ಶಾಲೆಗೆ ಹೋಗು ಅಂತ ಒದ್ದಾಡುತ್ತಾರೆ. ಈ ಶಾಲೆ ಇನ್ನೂ ಯಾಕೆ ಹೋಗುವುದಿಲ್ಲ ಎಂತ ನಾನು ಒದ್ದಾಡುತ್ತೇನೆ ಸಂಬಳ ಸರಿಗ ಕೊಡುತ್ತಿರೋದು, ಶಾಲೆಗಂತ ಎತ್ತಲೋ ಹೋಗುತ್ತಿರೋದು, ಗ್ರಾಮದ ಗ್ರಾಮವನ್ನೇ ತಿರುಗಾಡುತ್ತ ಮೂರು ವರ್ಷ ಫೈಲಾದರೂ ಇನ್ನೂ ನಾನು ಇಲ್ಲಿ ಕಲಿಯಲಿಕ್ಕೆ ಏನೂ ಉಳಿದಿದೆ ಅಂತ?

ರಾಮು:—ಪಾಸಾದರೆ ಮಗ ಮುಂದೆ ದೊಡ್ಡ ಹುದ್ದೇದಾರನಾದಾನು ಎಂದು ಆಸೆ. ಆದೇ ಪುನಃ ಪುನಃ ಶಾಲೆಗೆ ಕಳುಹಿಸುತ್ತಾರೆ ಮಗ ಕತ್ತೆಯಾಗು ವವರೆಗೂ.

ಶ್ಯಾಮು:—ಇಲ್ಲಿದ್ದಾನೆ ನೋಡಿ ನಮ್ಮ ಸೋಮು. ಇನ್ನೂ ಹಾಗೆ ಕರೆಯೋ ಕ್ಕಿಲ್ಲ ಪ್ಯಾಸಾಗಿದ್ದಾನೆ. ಸೋಮುನಾಥಯ್ಯ ಎಂದು ಹೇಳಬೇಕ ಲ್ಲವೇ? ಆದರೆ ಮಾಡೋದೇನು ಸರ್ವಜ್ಞ ನಿಜ. ಕೈಕಾಲು ಮಾತ್ರ ಜ್ಞಾನದ ಭಾರ ಹೊರಲಾರದೆ ಸೊಟ್ಟಗಾದವೆ!

ಸೋಮು:—ಆದಕ್ಕೆ ನಾನೇನು ಮಾಡಲಿ. ತಲೆಯ ಹಾಗೆ ಹೊಟ್ಟೆಯೂ ಇದೆ ಯಲ್ಲಾ ನನಗೆ ಹೊಟ್ಟೆಗಿಲ್ಲ ಎಂದರೆ ಮೈ ನೆಟ್ಟಗಿಲ್ಲ [illegible] ಮೈ ಕೊಳೆತಿದೆ.

ಭೀಮು:—ನಮ್ಮ ಹಳ್ಳಿಲಿ ಇವನು ಜಾಣ. ಇವನ ಶಿಫಾರಸು ಮಾಡಿದವರು ಇವನ ಉಪವಾಸ ತಪ್ಪಿಸೋದಿಲ್ಲ. ಇವ ಮುಂದೆ ಪಾಸಾಗುತ್ತ ಹೋದರೆ ನಮ್ಮವ ಎಂದಾರು ಎದೆತಟ್ಟಿ ಎಲ್ಲರೂ, ನಮ್ಮವ ಎನ್ನುವ ವರು ಒಂದು ಕಾಸು ಬಿಟ್ಟಾರೆ ಇವನಿಗಾಗಿ! ಬೆಳಿಗ್ಗೆ ಇಷ್ಟು ಉಂಡು ಬಂದರೆ ಸಂಜೆಗೆ ಮನೆಮುಟ್ಟ ಬಳಸಿದರೆ ತಿಂತಾನೆ, ಇಲ್ಲದಿದ್ದರೆ ಕೇವಲ ಸೊಟ್ಟ ಜಗಿಯುವುದು.

ರಾಮು:—ಅದೇಕೋ ಹಾಗೆ ಸುಮ್ಮನೆ ಸಂಕಟಪಡಬೇಕೂ ಅಂತ? ಇಲ್ಲಿ ಶಾಲೆ ಬಳಿಲೇ ಉಂಟಲ್ಲ?

ಶ್ಯಾಮು:—ಜಾಣ ಅಂತ ಸಂಬಳ ಮಾಫಿ ಮಾಡಿದ್ದಾರೆ. ಹಣವಿದ್ದರಲ್ಲವೇ ಹೋಟ್ಲು.

ಭೀಮು:—ಜಾಣಾ ಜಾಣ ಅಂತೀರಲ್ಲ, ಎಷ್ಟೋ ಜನ ಇದ್ದಾರೆ. ಅವರು ಯಾವ ಪಾಸು ಮಾಡಿದವರಯ್ಯಾ? ಇಲ್ಲಿಗೆ ಬಂದಿತ್ತಲ್ಲ ಸರ್ಕಸ್ಸು! ಅವರ ಹುಡುಗರನ್ನು ಲೋಕವೆಲ್ಲಾ ಕೊಂಡಾಡುತ್ತದೆ ಎಂದು ಜಾಹೀರು ಛಾಪಿಸಿದ್ದರು. ನನ್ನನ್ನು ಕೇಳಿ. ಬೇಕಾದ್ದು ಮೈ ಬಲ! ತಲೆ ಇದ್ದಷ್ಟು ಇರುತ್ತದೆ. ಬೇಕಾದ್ದು ರಟ್ಟೆ. ಮನುಷ್ಯನಿಗೆ ಬೇಕಾದ್ದು ರೊಟ್ಟಿ ಮತ್ತು ರಟ್ಟೆ. ರೊಟ್ಟಿಯಿಂದ ರಟ್ಟೆ, ರಟ್ಟೆಯಿಂದ ರೊಟ್ಟಿ. ನೀನೇನಂತಿಯಾ?

ಸೋಮು:—ನಿಜವಣ್ಣಾ ನಿಜ. ನಾನೇನ್ ಮಾಡಲಿ. ದೇವರಿಟ್ಟಂತೆ ಇದ್ದೇನೆ.

ಶ್ಯಾಮು:—ಅಂತು ಇನ್ನೇನು ಮಾಡುವೆ? ಇನ್ನಿಲ್ಲಿ ಶಾಲೆ ನಿನಗಿಲ್ಲ. ನಿನಗಿರುವ ಶಾಲೆ ಇಲ್ಲಿಲ್ಲ. ಪಾಸಾದೆ ನಿಜ. ಊಟಕ್ಕೇನು ಮಾಡುವೆ? ಇಷ್ಟು ಮಾಡಿ ನಿನಗೆ ಸಿಕ್ಕಿದ್ದೇನು ಅಂತ?

ಭೀಮು:—ಪಾಸು, ಪಾಸು, ಸಾಕಾಯಿತು. ಸೋಮು ನಿನ್ನ ತಂದೆ ಏನು ಪಾಸ್ ಮಾಡಿದನಯ್ಯಾ? ಕಮ್ಮಾರ! ನೋಡು ಅವನ ರಟ್ಟೆ... ರಟ್ಟೆ ನೋಡಿಯೇ ಕವಿ ದಪ್ಪವಾದ ಪದ್ಯ ಕಟ್ಟಬಹುದು. ಅವನ ರಟ್ಟೆಯೇ ನಿಮ್ಮನ್ನೆಲ್ಲಾ ಸಾಕುವುದಿಲ್ಲವೇ?

ರಾಮು:—ಅವನು ಏನೂ ಪಾಸಾಗದೆ ನೀನು ಪಾಸಾಗುವಂತೆ ಸಾಕಿದನಲ್ಲ! ನೀನು ಅವನ ಹಾಗೆ ಕಮ್ಮಾರನಾಗಿದ್ದರೆ ಶಾಲೆಯಲ್ಲಿ ಸಂಬಳ ಮಾಫಿಯಾಗಿ ಪಾಸಾಗುತ್ತಿರಲಿಲ್ಲ ನಿಜ, ಕುಟುಂಬ ಸಾಕುವಷ್ಟು ದುಡಿಯುತ್ತಿದ್ದಿ.

ಸೋಮು:—ನೀವೆನ್ನೋದೆಲ್ಲಾ ನಿಜ. ಇನ್ನು ನಾನೇನು ಮಾಡಲಿ ಅಂತ ಹಿಡಿದಿದೆ ಯೋಚನೆ. ಮನೆಯವರ ವೃತ್ತಿ ನನಗೆ ಬಾರದು. ನಾನು ಕಲಿತುದು ಮನೆಗೆ ಬಾರದು. ಅದನ್ನು ಕಲಿತ್ರೆ ಬದುಕಬೇಕು ಎಂತಾಗಿದ್ರೆ ಇಷ್ಟು ವರ್ಷ ಮನೆಯುಲ್ಲಿದ್ದರೆ ಎಲ್ಲಾ ತರಬೇತಾ ಆಗ್ತಿತ್ತು. [illegible] ಕಳೆಯಿತು. ಇನ್ನು ಪೇಟೆಯ [illegible] ಸಾರ್ಥಕವಾಯಿತು. [illegible]!

ರಾಮು:—ಏಕೆ ಪಾಸಾದೆ ಎನಿಸುತ್ತದಲ್ಲವೇ? ಮನೆಯಲ್ಲಿ [illegible]

ಸೋಮು:—[illegible] ಎಂದೇ ಯೋಚನೆ. ಈ ಶಾಲೆ, ಈ [illegible] ನನಗೆ ಇನ್ನು [illegible]?

ಶ್ಯಾಮು:—ನಿಮ್ಮ [illegible] ಕೊಂಡರೆ?

ಭೀಮು:—ಒಕ್ಕಲು ಕಮ್ಮಾರನ ಮಗ. ಇವ ಕಲಿತರೆ ಒಂದು ಒಕ್ಕಲು ಕಡಿಮೆ ಯಾದೀತು ಎಂದಾರು. ಧನೀ ಮನೆಗೆ ಬಿಟ್ಟೇ ಕೆಲಸಕ್ಕೆ ಒಬ್ಬ ಕಮ್ಮಾರ ಕಡಿಮೆಯಾಗುವುದಿಲ್ಲವೆ?

ರಾಮು:—ಅದೇಕೆ? ಅವರ ಮಗನೇ ಕಲೀತಾನಲ್ಲ ಭಾರೀ ಶಾಲೆಲಿ? ನಮ್ಮ ಮೇಸ್ಟ್ರ ಸಂಬಳಕ್ಕಿಂತ ಆ ಹುಡುಗನ ಖರ್ಚೇ ಹೆಚ್ಚು. ಅವರಿಗೆ ಕಲಿ ಸೋದರ ಬೆಲೆ ತಿಳಿಯದೋ?

ಶ್ಯಾಮು:—ಆದೆಲ್ಲಾ ಗೊತ್ತೇ ಇದೆ. ಇವ ಇನ್ನು ಯಾವ ಕುಬೇರನ ಭಂಡಾರ ಲೂಟಿಯಿಸಲಿಕ್ಕಿದೆ ಎಂದು ಕೇಳಿಯಾರು.

ಭೀಮು:—ಮತ್ತೂ ಒಂದಿದೆ, ಅವರ ಮಗ ಕಲಿತಾನೆ, ಕಲಿತಾನೆ ಎಂತೀರಲ್ಲ, ಏನು ಕಲೀತಾನೋ! ಮನೆಯಲ್ಲಿ ಭೋಜನ ಶಾಲೆ ಚೆನ್ನಾಗಿದ್ದರೆ ಮತ್ತೆ ವಿದ್ಯಾಶಾಲೆ ಹಿಡಿಸ್ತದೋ ಎಂಥ? ನನ್ನನ್ ನೋಡಿಮುರಿಬೇಕು, ವಿದ್ಯೆ ಹಿಡಿಯೋದಿಲ್ಲ, ಅನ್ನ ದುಡೀಬೇಕಾಗಿಲ್ಲ, ಹೊತ್ತಿಗೆ ಸರಿ ಬಳಸುತ್ತಾರೆ, ನಾನು ಫೈಲ್ ಆಗ್ತೇನೆ, ಊಟಕ್ಕಿಲ್ಲ. ಇವೇ ಪಾಸೇ ಯಾವಾಗಲೂ!

ಸೋಮು:—ಪಾಸೇ ಆದರೂ ಮುಂದೆಯೂ ಉಪವಾಸೇ ಆಯಿತಲ್ಲ ನನಗೆ!

ಭೀಮು:—ಇಷ್ಟು ವರ್ಷ ಕಲಿತದ್ದು ಮಣ್ಣಿಗೂ ವ್ಯರ್ಥವಾಯಿತಲ್ಲ.

ಶ್ಯಾಮು:—ಇಷ್ಟೆಲ್ಲಾ ಆಲೋಚನೆಗೆ ಇನ್ನೊಂದು ತಿಂಗಳ ರಜೆ! ಹೇಗೂ ಉಂಟಲ್ಲ. ಈಗಲೇ ನಿಘಂಟಾಗಬೇಕೋ? ಹೋಗುವ ಪರೀ ಕ್ಷೆಯ ದಣಿ ಆರಲಿ! ಮತ್ತೆ ನೋಡೋಣ.

ಭೀಮು:—ಆ ರಜಾ ಯಾಕೆ ಗೊತ್ತೋ? ನನ್ನನ್ನು ಕೇಳಿ ಹನ್ನೊಂದು ತಿಂಗಳು ಕಲಿತದ್ದೆಲ್ಲಾ ಹನ್ನೊಂದು ತಾಸು ಪರೀಕ್ಷೆಗೆ ಮಾತ್ರ. ಒಂದು ತಿಂಗಳ ರಜೆ ಅದನ್ನೆಲ್ಲಾ ಮರೀಲಿಕ್ಕೆ ಪುರುಸೊತ್ತು. ಎಲ್ಲಾ ಮರೀತೋ, ಹೊಸ ವರ್ಷದಲ್ಲಿ ಹೊಸ ವಿದ್ಯೆ. ಹೊಸ ಪಾಠ, ಹೊಸ ಪುಸ್ತಕ, ಹೊಸ ಡ್ರೆಸ್ಸು, ಹೊಸ ಸಿಲೆಬಸ್ಸು. ಫೈಲ್ ಆದರೂ ಶಾಲೆಗೆ ಕಳಿಸುವುದು, ಅದಕ್ಕಾಗಿ ಒಂದು ತಿಂಗಳ ರಜಾ, ಒಂದು ವರ್ಷ ಕಲಿತ್ತದರ ವಜಾ.

ರಾಮು:—ಆದರೂ ಧನೀಮಗನ ಹತ್ತಿರ ಕೇಳಿ ನೋಡಬೇಕು. ಅವರು ಯಾವಾಗ ಬಂದಾರು?

ಸೋಮು:—ಅವರ ಹಳ್ಳಿ, ಅವರು ಧನೀಮಗ! ಒಳ್ಳೇ ಕಲಿತವರು.

ಶ್ಯಾಮು:—ಅವರು ಇಲ್ಲಿಗೇಕೆ ಬರಬೇಕು? ಇಷ್ಟೂವರೆಗೆ ಪ್ರಾಯಸ್ಥರಾಗುವ ವರೆಗೆ ನಡೆದು ಬಂದ ಅವರ ಜೀವನಕ್ಕೂ ಈ ಹಳ್ಳಿ ಜೀವನಕ್ಕೂ

ಸಂಬಂಧವೇ ಇಲ್ಲ. ಹಳ್ಳಿಯಿಂದ ಹೊರಟರೋ ಮತ್ತೆ ಯಾರೂ ಹಿಂದೆ ಬರುವ ಹಾಗಿಲ್ಲ. ಇಲ್ಲೇನು ಮಹಾ ಇದೆಯಂತೆ?

ಸೋಮು:—ಆದರೂ ಬರಹ ಕಲಿತವರು ಹಳ್ಳಿ ಗೌಡರು ತಾನೇ! "ಬರಹ ವಿಲ್ಲದವರು ಕುರುಡರು" ಎಂತಾರಲ್ಲ.

ಭೀಮು:—ನನಗೆ ಕುರುಡರಾದರೂ ಚಿಂತಿಲ್ಲ ಎನಿಸುತ್ತದೆ ಸರ್ಕಾರದವರೂ ಅವರಿಗಾಗಿ ಬೇರೆ ಶಾಲೆ ಇಡುತ್ತಾರೆ, ಆರೈಕೆ ನೋಡುತ್ತಾರೆ. ಅವರಿಗೆ ಏನೆಲ್ಲ ವೃತ್ತಿ ಕಲಿಸುತ್ತಾರೆ. ಅವರಿಗೆ ಬಿಕ್ಷೆಯಾದರೂ ದೊರೆಯುತ್ತದೋ ಇಲ್ಲವೋ! ಅವರಲ್ಲಿ ಕನಿಕರವಿದ್ದವರು ಬರಹ ಬರುವವರನ್ನು ಕಂಡರೆ ದೂರವಿಡುತ್ತಾರೆ. ಬುದ್ಧಿವಂತರು ಎಂದರೆ ಅರ್ಥಾನೇ ಬೇರೆ.

ಸೋಮು:—ಬರಹ ಕಲಿತು ಹೊಟ್ಟೆಗೆ ದುಡಿಲಾರದಿದ್ದರೆ ಅವಕುರುಡನಿಗೂ ಕಡೆ.

ಭೀಮು:—ಇದ್ಯಾರಯ್ಯ ಇಲ್ಲಿಗೆ ಬರೋದು? ಪರೀಕ್ಷಕರೊ. . . .

ರಾಮು:—ಅಭ್ಕಾರಿ "ಇನ್ಸ್ಪೇಟ್ರರು."

ಶ್ಯಾಮು:—ಅಲ್ಲಪ್ಪೋ ಅಲ್ಲ. ಇದು ಕಾಡು ಬಾಬ್ತು.

ಭೀಮು:—ಚೀ, ಸುಮ್ಮನಿರು ಇವರೊ! ನಮ್ಮಣ್ಣ! (ಅಣ್ಣ ಬರುವನು. ಎಲ್ಲರೂ ಭಕ್ತಿಯಿಂದ ನಮಸ್ಕರಿಸುವರು)

ರಾಜು:—ಏನು ನೀವೆಲ್ಲ ಇಲ್ಲಿ? ಇವತ್ತು ಶಾಲೆ ಇಲ್ಲೋ?

ಭೀಮು:—ಈ ವರ್ಷದ ಮಟ್ಟಿಗೆ ಶಾಲೆ ಮುಗಿಯಿತು. ನಿಮಗೂ ಹಾಗೆಯೇ ಏನು?

ಸೋಮು:—ನಮ್ಮ ಪರೀಕ್ಷೆ ಮುಗಿಯಿತು. ಒಂದು ತಿಂಗಳ ರಜಾ ಇದೆ. ರಜಾ ನಂತರ ಏನು ಗತಿಯೆಂದು-ಚಿಂತೆ!

ಭೀಮು:—ಅಣ್ಣಾ ನಮ್ಮ ಹಿರೇ ಮಾಣಿ ಇವ. ನಮ್ಮ ಮೂವತ್ತರಲ್ಲಿ ಇವ ಮೊದಲನೇ ಪಾಸ್. ನಮ್ಮ ಕಮ್ಮಾರ ಸಂತು ಇರುವನಲ್ಲ ಅವನ ಮಗ. ಮುಂದೆ ಇವನಿಗೇನು ಉಪಾಯ ಎಂತ ಮಾತಾಡುತಿದ್ದವು. ನೀವೇ ಅಷ್ಟರಲ್ಲಿ ಬಂದೇ ಬಿಟ್ಟಿರಿ. ಪಕ್ಕನೆ ನಮಗಾಗಿಯೇ ಬಂದೇ ಬಿಟ್ಟಿರಾ?

ರಾಜು:—ನನ್ನ ಪರೀಕ್ಷೆ ಮುಗಿಯಿತು. ಇನ್ನು ಮೂರು ತಿಂಗಳ ವರೇಗೆ ಕಾಲೇಜಿಲ್ಲ. ಅಲ್ಲಿದ್ದೇನು ಮಾಡೋಣ ಎಂದೇ ಇತ್ತ ಬಂದೆನು.

ರಾಮು:—ಮೂರು ತಿಂಗಳ ರಜೆ! ನೀವು ಕಲ್ತದ್ದನ್ನು ಮರಿಯಲಿಕ್ಕೆ ತುಂಬಾ ಅನುಕೂಲ.

ರಾಜು:—ಏನಂತಿಯಾ ನಮ್ಮ ಪರೀಕ್ಷೆಯೆಂದರೆ ಅಷ್ಟು ಕಷ್ಟ. ಆ ಸಂಕ್ರಾಂತಿಗೆ ಪ್ರಾರಂಭವಾದರೆ ಈ ಸಂಕ್ರಾಂತಿಗೆ ಮುಗಿತ್ತದೆ. ಇಲ್ಲಿಯ ದೇವರ ಜಾತ್ರೆ ಹಾಗೆ. ಈ ಸಂಕ್ರಾಂತಿಗೆ ಧ್ವಜವೇರುವುದು. ಆ ಸಂಕ್ರಾಂತಿಗೆ ಓಕುಳಿ.

ಶ್ಯಾಮು:—ಕೇಳಿದೆಯಪ್ಪಾ ಸೋಮು? ಪೇಟಿ ಶಾಲೆಯ ಬರಹದಲ್ಲಿ ಪರೀಕ್ಷೆಯೇ ಮುಖ್ಯ. ಕೆಲವೇ ದಿನ ಪಾಠ ಹಲವು ದಿನಪರೀಕ್ಷೆ. ಇವರು ವರ್ಷದಲ್ಲಿ ನಾಲ್ಕಾರು ಸಲ ರಜಾ ಎಂತ ಇಲ್ಲಿಗೆ ಬರುತ್ತಾರಲ್ಲ ತಿಳಿಯಿತೊ?

ಭೀಮು:—ಅಣ್ಣಾ ಪಾಸಾಯಿತೊ?

ರಾಜು:—ಪಾಸು? ಅದು ಈಗ ತಿಳಿದೀತೋ! ಒಂದು-ಒಂದುವರೆ ಎರಡು ತಿಂಗಳ ಮೇಲೆ ತಿಳಿದೀತು. ಎಲ್ಲಾ ಪತ್ರಿಕೆಯಲ್ಲಿ ಬರುತ್ತದೆ.

ಭೀಮು:—ನಿಮ್ಮ ಹೆಸರೂ ಬರುತ್ತದೆ.

ರಾಜು:—ಹೆಸರೆಲ್ಲಿಯೋ—ಎಲ್ಲಾ ನಂಬರು.

ರಾಮು:—ಎಂದರೆ, ಪೇಟಿ ಶಾಲೆಗೆ ಹೋಗೋದೆ, ಹೆಸರು ಹೋಗಿ ನಂಬರು ಬರುತ್ತದೆ!

ಶ್ಯಾಮು:—ನಮ್ಮೂರ ದೂಮನಿಗೆ ಜೈಲಿಗೆ ಕಳುಹಿಸಿದರು. ಅವನ ಮನೆ ಇಕ್ಕೇರಿಗೆ ಜಪ್ತಾಗುವಾಗ ನಮ್ಮ ತಂದೆ ಅಲ್ಲಿ ಅವನಿಗೆ ತಿಳಿಸಲಿಕ್ಕೆ ಹೋಗಿದ್ದರು. ಆಗ ಅವನೆಲ್ಲಿ ಅಂದರೆ ಜೈಲಿನಲ್ಲಿ ಯಾರೂ ಹೇಳಿಲ್ಲ. ಕಡೆಗೆ ದೂಮು ಎಂದರೆ ಎಪತ್ತಮೂರು ನಂಬರು ಎಂದರಂತೆ. ಹಾಗಾಯಿತು ಇದು.

ರಾಮು:—ಅದೇ ಏನೋ ಇವರು ಆಗಾಗ ರಜಾ ಎನ್ನುತ್ತ ಇತ್ತ ಬರೂದು. ಇವರ ಕೊಲೇಜು ಜೈಲಿನ ಹಾಗೆ ಇದೆಯೋ ಏನೋ?

ಭೀಮು:—ಅಣ್ಣಾ ನಿಮ್ಮ ಶಾಲೆ ಹೇಗಿದೆ? ಓದು ಬರಹ ಎಲ್ಲಾ ಹೇಗೆ ಎಂತ ಸೋಮುಗೆ ಹೇಳಬಾರದೆ?

ರಾಜು:—ನಮ್ಮ ಕೋಲೇಜು ಅಂದರೆ ದೊಡ್ಡದು. ನಮ್ಮ ಟಫಿನು ಕೋಣೆ ಈ ಶಾಲೆಯಷ್ಟು. ಒಂದೊಂದು ಕ್ಲಾಸೇ ಒಂದೊಂದು ಶಾಲೆಯಷ್ಟಿದೆ. ಎರಡು ಮಾಳಿಗೆಯಿದೆ. ಈ ಪಾಠವಾಗಿ ಆ ಪಾಠಕ್ಕೆ ಹೋಗೋದೆಂದರೆ ಒಂದು ಕುರಿಮಂದೆ ಓಡಿಸಿ ತರೋದು. ದೂರ ಸುತ್ತಾಡಬೇಕು.

ಶ್ಯಾಮು:—ಎರಡು ಪಾಠವಾಗೋದರೊಳಗೆ ಸೋಮು 8 ಕಡೆ ಕೂತಾನು. ನಿನಗೆ ಬೇಡಪ್ಪಾ ಈ ವ್ಯಾಧಿ.

ಭೀಮು:—ನಮ್ಮ ಉಪಾಧ್ಯಾಯರ ಹಾಗೆಲ್ಲಾ ಕಲಿಸ್ತಾರೆ ಅಲ್ಲವೆ?

ರಾಜು:—ಅಲ್ಲಿಗೆ ಹೋದರೇ ತಿಳಿದೀತು. ಆಫೀಸು ಜವಾನರನ್ನಲ್ಲಿ ಕಂಡರೇ ಅವರೂ ಉಪಾಧ್ಯಾಯರೋ ಎನಿಸುತ್ತದೆ. ಪ್ರತಿ ಘಂಟೆಗೆ ಒಬ್ಬೊಬ್ಬ ಉಪಾಧ್ಯಾಯರು. ಸಂಬಳ ಕೊಡೋದೆಲ್ಲಾ ಕೆಲೆಂಡರಿನಲ್ಲಿ ಬೂಕಿನ ಮೇಲೆ. ಗಂಟೆಗೊಮ್ಮೆ ಹಾಜರಿ.

ಶ್ಯಾಮು:—ಘಂಟೆಘಂಟೆಗೂ ಈ ವ್ಯಾಧಿ ಹಿಡಿದು ಜಾರೋರು ಇರಬಹುದು.

ರಾಜು:—ಹಾಗಲ್ಲ ಪಾಠಪಾಠಕ್ಕೆ ಹುಡುಗರೇ ಬೇರೆ ಮಾತ್ರವಲ್ಲ, ಗಂಡು ಹೆಣ್ಣು ಜಾತಿಗೀತಿ ಏನೂ ಇಲ್ಲ. ಎಲ್ಲರೂ ಅಲ್ಲೇ.

ರಾಮು:—ದೇವರೇ! ಹುಡುಗ ಪಾಠದಲ್ಲಿ ತಪ್ಪಿದ ಅಂದರೆ ಮುಖಕ್ಕೆ ಅವರೆದುರು ಮಂಗಳಾರತಿ.

ಭೀಮು:—ಸಂಬಳವೂ ಎಷ್ಟಿದೆಯೋ?

ರಾಜು:—ಒಳಗೆ ಕಾಲಿಡಬೇಕಾದರೆ 150 ರೂ. ಡಿಪಾಜಿಟು ಇಡಬೇಕು. ಬೇಕಾದ್ದೆಲ್ಲ ಅಲ್ಲೇ ತಕ್ಕೊಳ್ಳಬೇಕು. ಎರಡು ತಿಂಗಳಿಗೊಂದು ಸಲ ಸಂಬಳ ಕೊಡೋದು 40 ರೂಪಾಯಿ. ಪರೀಕ್ಷೆಗೆ ಬೇರೆ 40 ರೂ. ಕಟ್ಟಬೇಕು.

ಶ್ಯಾಮು:—ಕೇಳಿದೆಯಾ ಸೋಮು? 1ರಿಂದ 8ನೇ ಕ್ಲಾಸಿನವರೆಗೆ ನಾವು ಕೊಟ್ಟ ಸಂಬಳ ಒಟ್ಟು 40 ಆಗೂದಿಲ್ಲ. ಇಲ್ಲಿ ಎರಡು ತಿಂಗಳಿನಷ್ಟು ನೋಡೋದು ನೀನು ಮುಂದೆ ಕಲಿತಂತೆಯೇ ಇದೆ.

ರಾಮು:—ಅಂದರೆ ಅಲ್ಲಿ ಆಡುವುದಕ್ಕೆನೇ ಉಪಾಯವಿಲ್ಲ. ಗೋಳಿ, ಕುಟ್ಟಿ ದೊಣ್ಣೆ, ಕಾಲ್ಚೆಂಡು ಯಾವುದೂ ಇಲ್ಲ?

ರಾಜು:—ನಾವು ಸಾವಿರ ಹುಡುಗರು ಪ್ರತಿದಿನ ಆಡಲೇಬೇಕು ಅಂತಾರೆ. ಕ್ರಿಕೆಟ್, ಹೋಕ್ಕಿ, ಟೆನ್ನಿಸ್ ಇತ್ಯಾದಿ ಎಷ್ಟೋ ವಿಲಾಯಿತಿ ಆಟ ಇದೆ. ಆದರೆ ಆಡೋದ್ಕೆ ಸ್ಥಳಾನೇ ಇಲ್ಲ. ಅದಕ್ಕೆ ಬೇರೆ ೧೦ ರೂ. ಕೊಡಬೇಕು ಪ್ರತಿ ವರ್ಷ.

ಶ್ಯಾಮು:—ಅಂದರೆ ಸೋಮು, ಇವರ ಕೊಲೇಜು ಎಂದರಲ್ಲ. ಅದೇನ್ ಗೊತ್ತೋ? ಅದೊಂದು ದೊಡ್ಡ ಹಳ್ಳಿ. ಹಳ್ಳೀಲಿ ಹತ್ತೆಂಟು ಕುರಿ ಮಂದೆಗಳು ಘಂಟೆ ಬಾರಿಸಿದಂತೆ ಈ ಮಂದೆ ಆ ವಡಪಿಗೆ, ಅದು ಈ ಬಯಲಿಗೆ ಹೋಗಿ ಮೇಯುತ್ತಾ ಇರುವುದು. ಗೋಚರಾವಿನ ಫೀಸು ವಸೂಲಿ ಮಾಡುತ್ತಾರೆ. ಸಂಜೆಗೆಲ್ಲಾ ಅತ್ತಿತ್ತ ಓಡಾಡುವುದು, ರಾತ್ರಿಲಿ ದೊಡ್ಡಿ, ವರ್ಷಕ್ಕೊಮ್ಮೆ ಉಣ್ಣೆ ಕತ್ತರಿಸೋದು. ಧನೀ ಮನೆಗೇ ಕಳಿಸೋದು ಆಯಿತು.

ರಾಮು:—ನೀವೇನದು ಕಲಿಯೋದು?

ರಾಜು:—B Sc. ಅಂತ ಎಲ್ಲಾ ವಿಜ್ಞಾನ. ನಂದು ಬೊಟೆನಿ, ವನಸ್ಪತಿಶಾಸ್ತ್ರ.

ಶ್ಯಾಮು:—ತಿಳಿಯಿತೋ ಸೋಮು, ಒಳ ಹೊಕ್ಕಿದರೋ ಹೆಸರು ಹೋಗಿ ನಂಬ್ರ ಬರುತ್ತದೆ. ಒಳಗೆ ಹೊಕ್ಕರೋ B. C. ಅಂತ-ರಾಗೀನ. ಹ್ವ! ಹ್ವ ಕೊಲೇಜು ಒಂದು ಜೈಲೂ ಏನೋ?

ಭೀಮು:—ಊಟಕ್ಕೆಲ್ಲಾ ಏನು ಉಪಾಯ?

ರಾಜು:—400 ಮಂದಿ ಇದ್ದಾರೆ, ಊಟಕ್ಕೆ ಹೋಸ್ಟೆಲಿನಲ್ಲಿ. ಆಯಾ ಜಾತಿ ಆಯಾ ರುಚಿಗೆ ತಕ್ಕಂತೆ ಪಂಗಡ. ನಮ್ಮ ಪ್ರತಿನಿಧಿಗಳೆಂದಂತೆ ಊಟ ತಿಂಗಳಾಗೋದೇ ಬಿಲ್ಲು ಸುಮಾರು 20-25 ರೂಪಾಯಿ ಕೊಟ್ಟರಾಯಿತು.

ಶ್ಯಾಮು:—ಸೋಮೂ. ನಿನ್ನ ಒಂದು ವರ್ಷಕ್ಕೆ ಸಾಕು 20 ರೂಪಾಯಿ ಇಲ್ಲಿ. ಅಲ್ಲಿ ಒಂದು ತಿಂಗಳಲ್ಲಿ 20 ರೂ. ಕೊಟ್ಟು ನೀನೆಷ್ಟು ತಿನ್ನುವೆ? ಒಂದು ವರ್ಷ ಬೆಳೆವಷ್ಟು ಬೆಳೆತಿಯೇನು? ಸುಲಿಗೆ!

ಭೀಮು:—ಇದನ್ನೆಲ್ಲಾ ಕೇಳುವಾಗ ಏನ್ಮಾಡೋಣ, ನಮ್ಮ ಸೋಮೂಗೆ ಎನ್ನಿಸ್ತ್ತದೆ.

ರಾಜು:—ಇಂತವರಿಗೆ ಅಲ್ಲಿಯೂ ಹಾಗೇ ಸ್ಕೊಲರ್‌ಶಿಪ್ ಉಂಟು.

ಭೀಮು:—ಸೋಮೂ, ನಿನಗಿನ್ನು ಅದು ಸಿಕ್ಕೀತು.

ರಾಜು:—ಪುಸ್ತಕಗಳನ್ನು ಹಿಂದಿನ ಗೆಳೆಯರು ಕೊಡುತ್ತಾರೆ. ಊಟಕ್ಕೆ ಮಾತ್ರ...

ಭೀಮು:—ಅದಕ್ಕೇನು ಉಪಾಯ ಮಾಡೋಣ. ಆದಾದರೆ ಸೋಮು ಮುಂದೆ ಕಲಿಯಬಹುದು. ಇಲ್ಲದ್ರೆ ಇಲ್ಲಿಕೊಳಿತಾನೆ. ಇಷ್ಟು ಕಲಿತದ್ದು ವ್ಯರ್ಥ. ಮುಂದೆ ಮನೆಗೂ ಪ್ರಯೋಜನವಿಲ್ಲ ತನಗೂ ಇಲ್ಲ. ನಾವೆಲ್ಲಾ ಮೂರು ಮೂರು ವರ್ಷ ಫೈಲು. ಕಾಸಿಲ್ಲದ ಮಾಣಿ ಉತ್ತಮ ಫಾಸು! ನಮ್ಮ ಒಕ್ಕಲು, ನಾವೇನೂ ಮಾಡಲಾರೆವೇ.

ರಾಜು:—ಅವನು ಹೋಗುವವನು ಎಂತಾದರೆ ಉಪಾಯ ಮಾಡೋಣ. ನೀ ನಿನ್ನು ಕಲ್ತು ಮಾಡುವುದೇನು! ಹಿರಿಯರದ್ದೆಂತೂ ಇದೆ. ಈ ಪಾಠಗಳು ಮಾತ್ರ ನಿನಗಲ್ಲವು. ಮನೆದೆಲ್ಲಾ ಉಸ್ತುವಾರಿ ನೋಡೋದರಲ್ಲಿ ಅಂದಿನಿಂದಲೂ ಜಾಣ ನೀನು. ಅವರಿಗೂ ಮುಪ್ಪಾಗುತ್ತ ಬಂತು.

ನೀನು ಮನೆಯಲ್ಲೇ ಇದ್ದು ಆಚೆ ಈಚೆ ಜತನಾ ನೋಡ್ಕೋ. ನಾನಂತೂ ಪಾಸಾದರೂ ಫೈಲ್ ಆದರೂ ಸದ್ಯಕ್ಕಿಲ್ಲಿರಲಾರೆ. ಇನ್ನು ಎರಡು ವರ್ಷ ಅಲ್ಲೇ ಇರುತ್ತೇನೆ. ಸೋಮು ನನ್ನೊಡನೆ ಬರಲಿ. ಅವನ ಪುಸ್ತಕ, ದುಸ್ತು ನನ್ನ ಮೇಲಿರಲಿ. ಇಲ್ಲಿ ಉಸ್ತುವಾರಿ ನೋಡಿದಕ್ಕೆ ಹತ್ತು ರೂಪಾಯಿ ಮಟ್ಟಿಗೆ ನೀನು ತೆಗೆದುಕೊಂಡು ಅವನಿಗೆ ಕಳಿಸು. ಅವನ ಊಟಕ್ಕೆ ಸಾಕು.

ಸೋಮು:—ನಾನು ಪಾಸಾಗಿ ಮೋಸವಾಯಿತು. ಫೈಲಾಗಿದ್ದರೆ ಇಲ್ಲೇ ನಮ್ಮೂರು ನಿಮ್ಮ ಮನೆ, ನಿಮ್ಮ ಜತೆ, ನಮ್ಮ ಶಾಲೆ, ನಮ್ಮ ಆಟ ಎಲ್ಲಾ ಸೇರಿ ಸುಖವಾಗಿರುತ್ತಿದ್ದೆ. ಈಗ ನನ್ನ ಪಾಸು ಫೈಲಿಗೂ ಕಡೆಯಾಯಿತು. ಅಷ್ಟು ದುಃಖದಿಂದಿದ್ದೇನೆ. ಹೇಗೂ ಮಾಡಿ ನನ್ನನ್ನು ಕಾಪಾಡಿ. ಎಷ್ಟೆಂದರೂ ನಿಮ್ಮ ಕೂಳು ತಿಂದವ ಬದುಕುವಂತೆ ಬೆಳೆಯುವಂತೆ ಮಾಡಿ ಅಣ್ಣಾ.

ಭೀಮು:—ಈ ಶಾಲೆಯಲ್ಲಿ ನಾನು ಕಲಿಯೋದಕ್ಕೇನು ಉಳಿದಿದೆ. ಶಾಲೆಯೆಂದರೆ ಬೇಸರವಾದ ಮೇಲೆ ಕಲಿತದ್ದು ಹಿಡಿಯುತ್ತದೆಯೇ? ರುಚಿ ಕೆಟ್ಟ ಮೇಲೆ ಯಾವ ಊಟ ಹೇಗಾದರೇನು? ಮೈಗೆ ಹಿಡಿಯುತ್ತದೆಯೆ? ನಾನು ಇಷ್ಟರಲ್ಲೇ ಮನೆವಾರ್ತೆ ನೋಡುತ್ತಿದ್ದೆ. ಅಣ್ಣಾ, ನೀವು ಯಜಮಾನರಿಗೆ ತಿಳಿಸಿರಿ. ಅವರು ಅಪ್ಪಣೆಕೊಡಲಿ. ಎಲ್ಲಾನೂ ನನ್ನ ಮೇಲೆ. ಹತ್ತು ಜನ ಊಳಿಗಕ್ಕಿಟ್ಟುಕೊಳ್ಳುವ ಬದಲು ನಾನೊಬ್ಬ ಸಾಕು. ಸೋಮುವಿನ ಊಟದ ಖರ್ಚೆಲ್ಲಾ ನನ್ನ ಮೇಲಿರಲಿ; ಶಾಲೆಯ ಫೀಸು ಪುಸ್ತಕ ಒಟ್ಟೆ ನೀವೇ ನೋಡ್ಕೊಳ್ಳಿ. ಸೋಮು ಕಲಿಯಲಿ. ನಾನು ಕಲಿತಿದ್ದರೆ 20-25 ಕೊಡುತ್ತಿದ್ದರಲ್ಲ. ನನ್ನ ಬೇಸರವು ಹೋಗಲಿ. ಅವನ ಬೇಸರವೂ ಕಲಿಲಿ.

ರಾಜು:—ಈ ಶಾಲೆಗೆ ಬುನಾದಿ ನಮ್ಮ ಅಜ್ಜನದು. ನಮಗೆ ಇದರಿಂದ ಮತ್ತೇನೂ ಅಷ್ಟು ಉಪಯೋಗವಾಗಿಲ್ಲ. ಶಾಲೆ ಉಳಿಬೇಕೋ? ಇದರ ಹೆಸರು ಹರಡಬೇಕು. ನಮ್ಮವನೊಬ್ಬ ಹೆಸರಾಂತಾ ಅಂದರೆ ಈ ಶಾಲೆಯವ ಎಂತ ಎಲ್ಲಾ ಕೊಂಡಾಡುತ್ತಾರೆ. ಅಜ್ಜನಿಗಷ್ಟು ತೃಪ್ತಿಯಾದೀತು. ನಾವು ಅವನ ಹೆಸರು ಮರೆಸೋದು. ಇವನಾದರೂ ಅದರಲ್ಲಿ ಮೆರೆಸಲಿ.

ರಾಮು:—ಅಂತೂ ನಮ್ಮ ಶಾಲೆ ನಮ್ಮೆಲ್ಲರ ಮನೆಗೂ ದೊಡ್ಡದು. ಎಲ್ಲ ಮನೆಯವರೂ ಇಲ್ಲಿ ಸೇರಿ ಒಂದಾಗಿ ಬೆಳೆದವರು. ಈ ವರ್ಷ ವರ್ಧಂತಿ ಕಾಲಕ್ಕೆ ಇವನ ಹೆಸರು ಓದೋದೇ ನಮ್ಮಲ್ಲಿಂದ ಬಿಟ್ಟು ಮುಂದಕ್ಕೆ ಕಲೀತಾನೆ. ನಮ್ಮ ಸಹಾಯದಿಂದ ಎಂದು ಹೊಗಳೋರು. ನಾವೆಲ್ಲಾ ಶಾಲೆ ಬಿಟ್ಟರೂ ಆದಿನ ಒಂದಾಗುತ್ತೇವೆ. ಅದು ನಮ್ಮ ಹುಟ್ಟಿದ ದಿನದ ಹಾಗಾಗುವುದು.

ಶ್ಯಾಮು:—ಆಗ ಎಲ್ಲಾ ಅನುಭವ ಸಮಾಚಾರ ಆಡ್ಕೊಳ್ಳೋಣಂತೆ. ಶಾಲಾ ವರ್ಧಂತಿಗೆ ಸೇರಬೇಕು, ಅದಕ್ಕಾಗಿಯೇ ನಮ್ಮ ತಾಯಿನ ಕಾಲಿಗೆ ನಾವು ಮನಹ ಕೊಂಡಾಡುತ್ತ ಶರಣವೆನ್ನಬೇಕು.

ಭೀಮು:—ಕಾಲೇಜಿನಲ್ಲೇನು ಮಾಡುತ್ತಾರೆ?

ರಾಜು:—ಅದನ್ನೆಲ್ಲಾ ಹೇಳೋ ಬದಲಿಗೆ ನಾವು ಇಂದು ಚೆನ್ನಾಗಿ ಇಲ್ಲೇ ಮಾಡಿ ತೋರಿಸೋಣ. ಶಾಲಾ ವರ್ಧಂತಿ ಬರಲಿ ನಾವೆಲ್ಲಾ ಒಂದಾಗಲಿ, ಶಾಲೆಯನ್ನು ಕೊಂಡಾಡುವ ಆಗ ಎಲ್ಲರ ಎದುರಲ್ಲೂ ಮೆರೆಸುವ.

ಸೋಮು:—ಶಾಲೆಯ ಹಾಡು ಹಾಡೋಣ.

ಮೀರೆಯ ಚಿಕ್ಕಿ



ನಿತ್ಯವೂ ಕಚ್ಚುತ್ತಿದ್ದ ಸೊಳ್ಳೆಗಳು ಫಕ್ಕನೆ ತಲೆಸೂರೆರಂತೆ ಹೆತ್ತು ನನ್ನ ನೈತ್ರಿಕೊಂಡು ಹೋದ ಸ್ವಪ್ನ! ಹಿಂದಿನ ರಾತ್ರೆ ಯಾರೋ ಒಬ್ಬ "ಭಾಗವದರ್" ಮಹಾಶಯರು, ನನಗರಿಯದ ಊರಿಂದ ಗ್ರಾಮಫೋನ್ ರಿಕಾರ್ಡಿನಲ್ಲಿ ಮಡಗಿಕೊಂಡು ಬಂದು ನಾವಾರೂ ತಿಳಿದಿರದ ಭಾಷೆಯಲ್ಲಿ ಹಾಡಿ ನನ್ನನ್ನು ಪೀಡಿಸಿ ತೆರಳಿದ್ದರು. ಅತಿ ಭಯಂಕರ ಶಬ್ದ ಮಾಡುವ ಆ ಗ್ರಾಮಫೋನನ್ನು ನಮ್ಮ ನೆರೆಕರೆಯವರು ಎಲ್ಲಿಂದ ತಂದರೆಂದು ಮೀರೆಯೊಡನೆ ಕೇಳಿದೆ. ತನಗರಿಯದೆಂದಳು. ನಾನು ಹಾಗೇಕೆ ಕೇಳಿದೆನೆಂದೂ ಅವಳದೊಂದು ಪ್ರಶ್ನೆ. "ನಮಗೊಂದು ಗ್ರಾಮಫೋನು ಮುಂದೆ ಯಾವಾಗಲೂ ಬೇಕಾದರೆ ಈ ಜಾತಿಯನ್ನು ನಾವು ಕೊಂಡುಕೊಳ್ಳದಂತೆ ಎಚ್ಚರವಿರಬೇಕು"! ಎಂದೆ. ನಮ್ಮ ನೆರೆಕರೆಯವರು ಬಾಡಿಗೆಯನ್ನು ಕ್ರಮವಾಗಿ ಕೊಡುತ್ತಿರುವರೇ? ದಶಾವತಾರ ಆಟದಲ್ಲಿ ಅವರಿಗೆ ಅಭಿರುಚಿ ಉಂಟೇ? ಮುಂತಾಗಿ ಪ್ರಶ್ನಿಸಿ, ಎಲ್ಲದಕ್ಕೂ "ಇಲ್ಲ"ವೆಂಬ ಉತ್ತರ ಬರಲು, "ಭಾಗವದರ್" ಮಹಾಶಯರೊಡನೆ ಸ್ನೇಹಕ್ಕಾಗಿ ಯತ್ನಿಸಿ ನಿದ್ದೆ ಹೋದೆ. ಆಗ, ಭಾಗವದರ್ ಮಹಾಶಯರಾರೂ ಕನಸಿನಲ್ಲಿ ಬಾರದೆ ಸೊಳ್ಳೆಗಳು ಬಂದು, ಹೆತ್ತು, ಹೊತ್ತವು.

ವಿಚಿತ್ರ ಪ್ರಯಾಣವಾಗುತಿತ್ತು. ಆಗಲೇ, ಆಕಾಶದಲ್ಲಿ ಹೋಗುತಿದ್ದ ಪಾರ್ವತಿಗೆ ಭೂಲೋಕದಲ್ಲಿನ ರೋದನ ಕೇಳಿದಂತೆ ನನಗೆ "ಹಾರಿ ಹಾರಿ" ಎಂದು ಯಾರೋ ಹಾಡಿದುದು ಕೇಳಿಸಿತು. ಎಚ್ಚರವಾಯಿತು. ಯಾರೋ ಹಾಡುತಿದ್ದರು. "ರಾಮಕೃಷ್ಣ ಹಾಕರೀ".

ಮೀರೆ ಅಷ್ಟು ಅಸಹ್ಯವಾಗಿ ಹಾಡಲಾರಳು ಎಂದು ನನಗೆ ಗೊತ್ತು. ಕಾಗೆಗಳಿಗೆ ಶಬ್ದೋಚ್ಚಾರಣೆ ಬಾರದು; ಮನುಷ್ಯರಿಗೆ ಆದಷ್ಟೂ ಹಾಡುವ ಹೆಂಗುಸರಿಗೆ, ಬೆಳಿಗ್ಗೆ ಒಮ್ಮೊಮ್ಮೆ ಕಫವು ಗಂಟಲಲ್ಲಿ ಅಂಟಿಸಿಂತಾಗ ಹಾಡುವ ಪ್ರೇರಣೆಯಾದರೆ ಇಂತಹ ಸ್ವರಗಳು ಹೊರಡಲಾರವೇ?

"ಮೀರಾ, ಇನ್ನು ಹೀಗೆ ಹಾಡಿದರೆ ನಾನು 'ಕರ್ಕಶಗಾನದಂಶ'ವೆಂಬ ಒಂದು ಅನಾರ್ಯ ರೋಗದಿಂದ ಪೀಡಿತನಾಗಿ, ಯಾವ ಮಲೆಯಾಳಿ ವೈದ್ಯನ ಅಥವಾ ಲೆಫ್ಟ್‌ನೆಂಟ್ ಕರ್ನಲ್ ಡಾಕ್ಟರನ ಕೈಗಳಿಗೂ ನಾಡಿಕೊಡಲು ಪುರುಸೊತ್ತಿಲ್ಲದೆ ದಿವಂಗತನಾಗುವೆನು" – ಎಂದು ಗಟ್ಟಿಯಾಗಿ ಕೂಗಿದೆ. ಹಾಡು ಫಕ್ಕನೆ ನಿಂತಿತು!

ಮೀರೆ ಓಡಿಬಂದು "ಶೂಶ್?" ಎಂದಳು. ಆದರೆ, ಆಕೆಯ ಮುಖ ನೋಡಿ ನನಗೆ ವೈ ಝುಮ್ಮಾಯಿತು.

"ನಾನು ಈಗ ಸೌಖ್ಯದಲ್ಲಿದ್ದೇನೆ ಮೀರಾ! ಬೇರೇನು?" ಎಂದು ಕೇಳಿದೆ.

"ಎಂತಹ ಅನರ್ಥಮಾಡುತ್ತೀರಿ ನೀವು! ಈಗ ಹಾಡುತಿದ್ದುದು ಚಿಕ್ಕಿ ಅಲ್ಲವೇ? ದೇವಾ, ಈ ಗಂಡುಸರೇ!" ಎಂದು ಕಣ್ಣೀರಿಳಿದೆ ರೋದಿಸಿದಳು.

ಚಿಕ್ಕಿ!

ಕಾಲು ತಾಸು ನನಗೆ ಎಚ್ಚರ ತಪ್ಪಿರಬೇಕು. ಮತ್ತೆ, ಕೆಲವರ ಆಗಮನದ ವಾರ್ತೆ ಕೇಳಿಯೇ ಮೂರ್ಛೆಹೋಗುವುದು ಗಂಡುಸುತನದ ಲಕ್ಷಣಗಳಲ್ಲವೆಂದು ವಿವೇಕ ಮೂಡಿ, ಹಾಸಿಗೆಯಲ್ಲಿ ಎದ್ದು ಕುಳಿತೆ. ಚಿಕ್ಕಿ ಬಂದುದು ನನಗೆ ನಿಜವಾಗಿ ಮಹದಾನಂದವನ್ನುಂಟು ಮಾಡಿದೆ ಎಂದು ಹೇಳಿ, ಗಂಡುಸರಿಂದ ಪ್ರಮಾದವುಂಟಾದರೂ ಲೋಕದಲ್ಲಿ ನಾರಿಗಳ ಅಬಲತೆಯ ಸಂಕಟಗಳುಂಟಾಗುವ ಅನರ್ಥಗಳುಂಟಾಗವೆಂದು ಆಶ್ವಾಸನೆಯಿತ್ತು, ಚಿಕ್ಕಿಗೆ "ಇಲೆಕ್ಟ್ರಿಕ್‌ಲೂಮ್" ಸೀರೆ ಕೊಟ್ಟರೆ ಆಕೆ ಯಾವುದಾದರೂ ಅಜ್ಞಾತ ಊರಿಗೆ ಹೋಗಲಾರಳೇ ಎಂದು ಕೇಳಿದೆ.

ಮೀರೆ ಕೂಡಲೇ ಸಿಡಿದೆದ್ದಳು. ಗಂಡುಸರು ಅತಿ ಅಗಲಕಿರಿದೆದೆಯವರೆಂದು ಪ್ರಕೃತಿ ವಿರುದ್ಧವಾದ ಪ್ರಕಟಣೆಕೊಟ್ಟಳು; ಪುರುಷ ಜಾತಿಗೆ ತಂತಮ್ಮ ಹೆಂಡಿರ ಕಡೆಯ ಯಾವ ಹೆಂಗುಸನ್ನು ನೋಡಿದರೂ ಸೇರುವುದಿಲ್ಲವೆಂದಳು: ನನ್ನಿಂದಾದರೂ ಆಕೆ ವಿಶಾಲ ಹೃದಯ, ಜಾಗತಿಕ ಭ್ರಾತೃಭಾವ, ಪತ್ನಿ ಕುಟುಂಬ ಪ್ರೇಮಗಳನ್ನು ನಿರೀಕ್ಷಿಸಿದ್ದಳೆಂದಳು. ಇಂದಿನ ಆಕೆಯ ಶೋಧವು ಪ್ರಪಂಚದ ಯಾವುದಾದರೊಬ್ಬ ವಿಜ್ಞಾನಿಯು ವಿದ್ಯುಚ್ಛಕ್ತಿ ಅಥವಾ ಸಸ್ಯಜೀವ ವಿಷಯವನ್ನು ಕಂಡುಹಿಡಿದಷ್ಟೆ ಮಹತ್ವಪೂರ್ಣವಾದುದೆಂಬಂತೆ ಹೆಮ್ಮೆಯಿಂದ "ನನಗೆ ತಿಳಿಯಿತು!" ಎಂದಳು.

"ನಿನಗೆ ತಿಳಿದರೆ ನನಗೆ ಸಂತೋಷ!" ಎಂದೆ. "ಗಂಡುಸರು ಇತರರ ದುಃಖವನ್ನು ನೋಡಿಯೇ ಸಂತೋಷ ಪಡುವರು!" ಎಂದಳು ಮೀರೆ.

"ನಿನಗೆ ನಿಜವಾದ ದುಃಖವುಂಟಾಗಿದ್ದರೆ ಅದು ಚಿಕ್ಕಿಯ ಹಾಡಿನಿಂದವಾದರೆ, ನಾನೂ ನೀನೂ ಒಂದೇ ತರದ ಸಂಕಷ್ಟದಲ್ಲಿರುವವರು" ಎಂದೆ.

ಮೀರೆ ದೊಡ್ಡ ಸ್ವರದಲ್ಲಿ ಅರಚುತಿದ್ದಳು. ಆದರೆ ಅಷ್ಟರಲ್ಲೆ ಚಿಕ್ಕಿ ಮತ್ತೊಂದು ಕೋಣೆಯಲ್ಲಿ "ತ್ಯಾಗರಾಜಗುಣ ಕೋಣ ಸಾಂಗಪಿತ" ಎಂದು ಕನ್ನಡದಿಂದ ಮರಾಠಿಗೆ ವರ್ಗಾಯಿಸಿಕೊಂಡು ಪುನಹ ಕಫಮಿಶ್ರಣ ಸಂಗೀತವನ್ನಾರಂಭಿಸಿದಳು. ನಾನು ಕಣ್ಮುಚ್ಚಿ, ಹಿಂದಿನ ರಾತ್ರೆಯ ಭಾಗವದರ್ ಮಹಾಶಯರನ್ನು ಆಲೋಚಿಸಿ ಚಿಕ್ಕಿಯನ್ನೂ ಭಾಗವದರ್ ಮಹಾಶಯರನ್ನೂ ತುಲನೆ ಮಾಡಲು ಯತ್ನಿಸಿ ಸಫಲವಾಗದೆ ಇಬ್ಬರೂ ಈ ಗೋಳಿದವರಲ್ಲವೆಂದು ತೀರ್ಮಾನಿಸಿದೆ.

ಸಂಗೀತವು ಹತ್ತಿರ ಹತ್ತಿರಕ್ಕೆ ಬಂತು. ನನ್ನ ಎದೆಯೊಳಗೂ ಬಡಿದಾಟ ಹೆಚ್ಚುತ್ತ ಬಂತು. ನಾಟಕದಲ್ಲಿ ಹಾಡಿ ಬರುವ ಪಾತ್ರವು ಒಳಗಿಂದಲೇ ಹಾಡುತ್ತ ಬರುವಾಗ ತೆರೆಯು ಎತ್ತಲ್ಪಡುವಂತೆ—ಚಿಕ್ಕಿಯ "ತ್ಯಾಗರಾಜ ಗುಣ"ವು ವಾತಾವರಣದಲ್ಲಿ ತೇಲುತ್ತ ಬಂದಂತೆ ಮೀರೆ ನನ್ನ ಕೋಣೆಯ ಬಾಗಿಲುಗಳನ್ನು ಭಕ್ತಿಯ ಮುಖವಾಡಿ ವಿಶಾಲವಾಗಿ ತೆರೆದು ದೂರ ನಿಂತಳು. ಮೀರೆಯೂ ನನ್ನ ಬಳಿಯಿಂದ ದೂರ ಸರಿಯುತ್ತಲೇ, ನಿನ್ನ ಹಾಯತೆ ಭಾಸವಾಗಿ ಹೆದರಿದ ನಾನು, ಈಗ ಒಂದು ಅನರ್ಥ ಸಂಭವಿಸುತ್ತದೆಂದು ಎದೆ ಗಟ್ಟಿಮಾಡಿಕೊಳ್ಳುವಷ್ಟರಲ್ಲೇ— ಮೀರೆಯಲ್ಲಿ ಭಕ್ತಿಭಾವ—ವಾತ್ಸಲ್ಯ ಭಾವ—ತರ್ಕಭಾವ ಇತ್ಯಾದಿ ಭಾವಗಳನ್ನು ಹುಟ್ಟಿಸಿದ ಯೋಗೀಶ್ವರರೊಬ್ಬರು ". .. ರಾಜಗುಣ ಕೋಣ. . . . ." ಎನ್ನುತ್ತಾ ಒಳಗೆ ಪ್ರವೇಶಿಸಿದರು. ನಾನು "ಉಗ್ಗ್!" ಎಂದೆ. ಯೋಗೀಶ್ವರರು "ಕೋಣ" ಎಂಬಲ್ಲೆ ಹಾಡು ನಿಲ್ಲಿಸಿ ಮಡಿಲಿಂದ ಕನ್ನಡಕ ತೆಗೆದು ಕಣ್ಣಿಗಿಟ್ಟು ನನ್ನತ್ತ ನೋಡುತ್ತ "ಇವನೇ ನಿನ್ನ ಗಂಡ" ಎಂದರು.

ಮೀರೆ ಭಕ್ತಿಯಿಂದ ತಲೆಯಲ್ಲಾಡಿಸಿದಳು. ನಾನು ಏಳಲಿಕ್ಕೆ ಯತ್ನಿಸಿದೆ. ಆದರೆ ಯೋಗೀಶ್ವರರು ಬಾಗಿಲಲ್ಲಿ ನಿಂತಿದ್ದರು. ದೇಹವೇನೋ ಕೃಶ. ಆದರೆ ನಮ್ಮ ಬಾಗಿಲೂ ಅಗಲ ಕಿರಿದಾದ ಕಾರಣ, ಯೋಗೀಶ್ವರರಂತಹ ತೆಳ್ಳಗಿನ ದೇಹದವರಿಂದಲೂ ನಿರಪರಾಧಿಗಳಿಗೆ ಈ ಬಗೆಯ ಅಪಕಾರವಾಗಬೇಕೆಂಬುದಕ್ಕಾಗಿಯೇ ರಚಿಸಲ್ಪಟ್ಟಂತಿತ್ತು. ನನ್ನ ನರಗಳ ನಿತ್ರಾಣ, ಕೈಕಾಲು ನಡುಗುವುದು—ಹಸಿವು ಇಂಗುವುದು—ಕಣ್ಣಲ್ಲಿ ಬಿಳುಪೇರುವುದು ಮೊದಲಾದ 'ಪ್ರೀತಾಪಹಾರಿಣಿ' ಔಷಧದ ಜಾಹೀರಾತಿನ ಚಿಹ್ನಗಳು ಇಷ್ಟರೊಳಗೆ ಸ್ವಲ್ಪ ಶಾಂತವಾಗಿ ನಾನು ಯೋಗೀಶ್ವರರ ದೇಹಸೌಂದರ್ಯವನ್ನು ನೋಡಲು ಉದ್ಯುಕ್ತನಾದೆ.

ಯೋಗೀಶ್ವರರು (ಮೀರೆಯ ಚಿಕ್ಕಿ) ನಾಲ್ಕೂವರೆ ಅಡಿ ಎತ್ತರವೂ ಹನ್ನೊಂದು ಇಂಚು ಅಗಲವೂ ಉಳ್ಳ ಒಬ್ಬಳು ಹೆಂಗುಸಾಗಿದ್ದರು. ಅವರ ಕುತ್ತಿಗೆಯಲ್ಲಿ "ಆದಮನ ಸೇಬುಹಣ್ಣು" (ಇಂಗ್ಲಿಷರು ಕಲಿಸಿದ ಶಬ್ದ!) "ಪಾಂಡ್ಸ್ ಕ್ರೀಮ್" ಲೇಪದ ಜಾಹೀರಾತಿನಲ್ಲಿ ಒಣಗಿ ಹೋದ ಹಣ್ಣಿನಂತೇ ಒಣಗಿ, ಇವರು "ಪಾಂಡ್ಸ್‌ಕ್ರೀಮ್" ಅಥವಾ ಇನ್ನಾವುದಾದರೂ "ಸ್ನೋ"ವನ್ನು ಉಪಯೋಗಿಸುವುದಿಲ್ಲವೆಂಬುದನ್ನು ಸ್ಪಷ್ಟ ಸಾರುತಿತ್ತು. ಅವರ ಕಣ್ಣುಗಳಿಗೆ ಗುಳಿ ಬಿದ್ದಿಲ್ಲ. ಆದರೆ "ಸೀಲ್" ಎಂಬ ಉತ್ತರ ಧ್ರುವದ ಸಮುದ್ರ ಪ್ರಾಣಿಯ ಕಣ್ಣುಗಳಂತೆ ಅಮಾನುಷ ರಚನೆಯದಾಗಿದ್ದುವು. ಯಾರಾದರೂ ಈ ಚಿಕ್ಕಿ ಯೋಗೀಶ್ವರರಿಗೆ ಅತಿ ಉದ್ದ ಮೂಗು ಇದೆಯೆಂದು ಭಾವಿಸುವುದಾದರೆ ಅವರನ್ನು ನಾನು ನಿರಾಶೆಗೊಳಿಸಬೇಕಾಗಿದೆ. ಮೂಗು ಅತಿ ಸಣ್ಣದಾಗಿದ್ದು, ಇದು ಗಾಳಿ ಸೇದಲು ಇರದೆ ಕೇವಲ ಅಲಂಕಾರಕ್ಕಾಗಿ ಉಂಟಾದುದು ಎಂಬ ಭಾವನೆ ಕೊಡುತಿತ್ತು. ಆ ಮೂಗಿನೊಳಗೂ ಚಿಕ್ಕಿಯೋಗಿನಿಯವರು (ಇನ್ನು ಇವರನ್ನು ಯೋಗಿನಿ ಎನ್ನಬೇಕಾಗಿದೆ.) ದಿನಕ್ಕೆ ಒಂದೊಂದು ಪೆಕೆಟ್. ಪಾರ್ಸೆಲ್ ನಸ್ಯವನ್ನು ತುಂಬಿ ಆಕಾರವನ್ನು ಹೆಚ್ಚಿಸಲು ನೋಡಿ ಸಫಲವಾಗದೆ, ತೊಲೆಯ ಡಬ್ಬಿಯೊಳಗೆ ರಾತ್ಲ ನಸ್ಯವನ್ನು ತುಂಬಿಸಿದಂತೆ ಮಾಡಿಬಿಟ್ಟಿದ್ದರು. ಅವರ ಮೂಗಿನಡಿ ಕಾಲುಶತಮಾನದ ನಸ್ಯದ ಅನುಭವದ ಸ್ಪಷ್ಟ ಚಿಹ್ನವಿತ್ತು. ಈ ನಸ್ಯದ ಜಾಹೀರಾತಿನ ಮೇಲ್ಪಟ್ಟಿಯ ಕೆಳಗೆ ದೇಹವೆಂಬ ಕೋಟೆಯನ್ನು ಕಾವಲು ಮಾಡುವ ಸೈನಿಕರು ಪುಷ್ಟವಾಗಿ ಬೆಳೆದು, ಸಾಮಾನ್ಯ ಮನುಷ್ಯರ ಕಾವಲುಗಾರರಂತೆ ಹೆದರಿ ಒಳಗೇ ಅಡಗಿಕೊಂಡಿರದೆ, ಯಾರೋ ಶತ್ರುಗಳನ್ನು ಕೊಂದು ರಕ್ತ ಮಾಂಸಗಳನ್ನು ಮೈಗೆ ಪೂಸಿಕೊಂಡು, ಸ್ನಾನ ಮಾಡದೆ ಪುನಃ ರಣೋತ್ಸಾಹದಿಂದ ಹೊರಗೆ ಸಿಡಿದು ನಿಂತಿದ್ದರು! ಇವರಲ್ಲಿ ಕೆಲವರು ಯುದ್ಧ ಮಾಡಿ ಮಾಡಿ ದಣಿದು ದಿವಂಗತರಾಗಿದ್ದರು. ಈ ಮಹಾಯೋಧರನ್ನು ತಪ್ಪಿಸಿಕೊಂಡು

ಭಿಕಾರಿ



ಈಕೆಯನ್ನು ನೋಡಿ ನಿಮಗಾದರೂ ಅಯ್ಯೋ **ಪಾಪ!** ಎನಿಸುವುದಿಲ್ಲವೇ? ಈಕೆಯ ಗಂಡನು ಜಾರಿಯಾಗಿ ಲೇವಾದೇವಿ ಮಾಡುತ್ತ ಬಹಳ ಶ್ರೀಮಂತನಾಗಿದ್ದನು, ಆದರೆ ಅವನಿಗೆ ಮುಂದಿನ ಆಲೋಚನೆಯೇ ಇರಲಿಲ್ಲ. ಕೇಳಿದವರಿಗೆಲ್ಲಾ ಸಿಕ್ಕಾಪಟ್ಟೆ ಸಾಲಕೊಟ್ಟು ತನ್ನ ಕೈಲಿ ಕುರುಡು ಕಾಸೂ ಇಲ್ಲದಂತೆ ಮಾಡಿಕೊಂಡಿದ್ದನು. ಈಗ್ಗೆ ಕೆಲವು ದಿನಗಳ ಹಿಂದ ಬಾಕಿ ವಸೂಲಿಗಾಗಿ ರೈಲಿನಲ್ಲಿ ಹೋಗುತ್ತಿದ್ದಾಗ, ಎರಡು ರೈಲುಗಳು ಢಿಕ್ಕಿ ಹೊಡೆದು ಅನೇಕರ ಜೊತೆಯಲ್ಲಿ ಈತನೂ ಸತ್ತುಹೋದನು. ಶ್ರೀಮಂತ ಗಂಡನಿದ್ದಾಗ ಈಕೆಗೆ ಮುಂದಿನ ಯೋಚನೆ ಸುತರಾಂ ಇರಲಿಲ್ಲ. ಆದರೆ ಇಂದು?— ನಿರ್ಗತಿಕಳಾಗಿ ನಡುಬಗ್ಗಿಸಿ, ಮನಕುಗ್ಗಿಸಿ, ಏನೇನೂ ಅರಿಯದ ಹಸುಳೆಯನ್ನು ಬಿಸಿಲಲ್ಲಿ ಬಾಡಿಸುತ್ತ, ಮಳೆಯಲ್ಲಿ ನೆನೆಸುತ್ತ, ಹೋಗುತ್ತಿದ್ದಾಳೆ. ಮನೆಯ ಬಾಗಿಲನ್ನು ಕೂಡ ಬಿಟ್ಟು ಹೊರಗೆಬಾರದಿದ್ದ ಸ್ತ್ರೀಯು ಇಂದು ಮೈಸೂರಲ್ಲಿ ಕೆಲಸ ಹುಡುಕಿಕೊಂಡು ಹೊರಟಿದ್ದಾಳೆ. ಅದು ಇನ್ನೂ ೩೦ ಮೈಲು ಇದೆ. ಅಲ್ಲಿ ಯಾರು ಗತಿ? ಕೆಲಸಮಾಡಿ ಅಭ್ಯಾಸವಿಲ್ಲದೆ ಈಕೆಯನ್ನು ಯಾರು ತಾನೆ ಕೆಲಸಕ್ಕೆ ಸೇರಿಸಿಕೊಂಡಾರು?—ಯೋಚಿಸಿ—?

ಮಹನೀಯರೆ! ಇಂಥಾ ದುಃಖ ಮೂರ್ತಿಯನ್ನು ಪ್ರಪಂಚದಲ್ಲಿ ಪ್ರತಿಷ್ಟಿಸಿ ಹೋಗಬೇಡಿರಿ, ನಿಮ್ಮ ಧರ್ಮಕ್ಕೆ! ಎಷ್ಟೇ ವೈಭವವಿರಲಿ, ಅದನ್ನು ನಂಬಿ ಕುಳಿತುಕೊಳ್ಳಬೇಡಿ! ನಿಮ್ಮ ಕುಟುಂಬದ ಭವಿಷ್ಯ ಯೋಜನೆಯನ್ನು ಮಾಡಿರಿ!—ಇದಕ್ಕಾಗಿ ನೀವು ಮಾಡಬೇಕಾದುದೇನು ಬಲ್ಲಿರಾ? ? ? ?

ನಿಮ್ಮ ಕುಟುಂಬದ ಭವಿಷ್ಯ ರಕ್ಷಣೆಗಾಗಿ ಹಣಸೇರಿಸಿ ನಿಮಗೆ ಅಥವಾ ನಿಮ್ಮ ಕುಟುಂಬಕ್ಕೆ ಆಪತ್ಕಾಲದಲ್ಲಿ ಕೊಡಲು ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿಯವರು ಏರ್ಪಡಿಸಿರುವರು. ಅದಕ್ಕಾಗಿ ಇಂದೇ ಕೆಳಗಿನ ವಿಳಾಸಕ್ಕೆ ಪತ್ರಬರೆದು ತಿಳಿದುಕೊಳ್ಳಿರಿ.

ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ: To To ಉಪಕಛೇರಿ:

ಶ್ರೀ ನರಸಿಹ್ಮರಾಜಾ ರೋಡ್, ಬೆಂಗಳೂರು ಸಿಟಿ.

INSURE or REPRESENT

ಷಹರಾ-ಏ-ಉಸ್ಮಾನಿಯಾ, ಹೈದರಾಬಾದ್-ಡೆಕ್ಕನ್.

The Mysore Insurance Co., Ltd.

ಹೊರಬರುವ ಸಂಗೀತವು ಹೆದರಿಯೇ ಇರುವ ಕಾರಣ ನಾನು ಸ್ವಲ್ಪ ಹಿಂದೆ ಕೇಳಿದ ಸಂಗೀತವು ಅಷ್ಟು ಅಸಹ್ಯವಿದ್ದುದು ಆಶ್ಚರ್ಯವಲ್ಲವೆಂದು ತಿಳಿದೆ. ನನ್ನ ಎದೆಯಳತೆ, ನಿರ್ದಯ ಭಾವ ಮೊದಲಾದುವುಗಳನ್ನು ವಿಾರೆ ಶೋಧ ಮಾಡಿದ ಒಬ್ಬ ಬೋಸ್ ತರಗತಿಯ ವಿಜ್ಞಾನಿಯಾಗಿದ್ದರೆ ನಾನು ಡಾರ್ವಿನ್ ತರಗತಿಯ ಮಹಾಪುರುಷನೆಂದುಕೊಳ್ಳುವುದರಲ್ಲಿ ಹಿಂಜರಿಯಲಾರೆ.

ಗಾನದೇವತೆಯು ನನ್ನನ್ನೂ ನಾನು ಗಾನದೇವತೆಯನ್ನೂ ನೋಡಿದೆವು. ಇಬ್ಬರ ದೃಷ್ಟಿಗಳೂ ಒಂದಾದುವು. ಗಾನದೇವತೆಗೆ ಹೇಗಾಯಿತೊ! ನನಗೆ ಎದೆಗೆ ತೂತುಮಾಡಿ ಒಂದು ರೈಲುಬಂಡಿಯನ್ನು ಒಳಗೆ ಕಳಿಸಿದಂತಾಯಿತು. ಆದರೂ ಕೇವಲ ಒಂದು ಸೈಕಲು ಒಳಗೆ ಹೊಕ್ಕಷ್ಟು ಚಿಕ್ಕ ಪ್ರಮಾಣದಲ್ಲಿ ನಡುಗಿ, ಮುಂದೆ ಬರುವ ಮಹಾಕಂಪನಗಳಿಗೆ ಸಿದ್ಧನಾದೆ.

"ಕೇವಲ ಹುಡುಗ!" ಎಂದಿತು ಗಾನದೇವತೆ.

ನನ್ನ ಪುರುಷಸ್ಥಾನಕ್ಕಿದು ಅಗೌರವವೆಂದು ತಿಳಿದರೂ ಚಿಕ್ಕಿಯೋಗಿನಿಯು ನನಗೆ "ಕೇವಲ ಹುಡುಗಿ!" ಎನ್ನಲಿಲ್ಲ ಎಂಬ ಒಂದು ಸಂತೋಷದ ತೆರೆಯೆದ್ದಿತು. ವಿಾರೆ ನಕ್ಕಳು. ಆಕೆಯ ಗಂಡ ಹುಡುಗನೆಂದರೆ ಆಕೆಗೆ ನಾಲ್ಕೂರು ದೊರೆತಂತೆ. ನನ್ನ ವಿಷಯ ಆಕೆ ಈ ಮೊದಲು ಆ ಅಭಿಪ್ರಾಯವನ್ನು ಹಲವು ಬಾರಿ ಪ್ರಕಟಿಸಿದವಳು. ಬುದ್ಧಿಯಲ್ಲಿಯೂ ಪ್ರಾಯದಲ್ಲಿಯೂ ನಾನು ಹುಡುಗನೆಂದು ಆಕೆ ತೀರ್ಮಾನಿಸಿ, ಆಗಾಗ್ಗೆ ಸಮರ್ಥಿಸಿ, ಇತರರಿಂದಲೂ ಶಿಫಾರಸುಗಳನ್ನೂ ಅನುಮೋದನೆಗಳನ್ನೂ ಪಡೆಯುತಿದ್ದಳು.

ನಾನು ಧೈರ್ಯಗೊಂಡು "ಯಾವಾಗ ಬಂದಿರಿ?" ಎಂದೆ.

ನಾನು ಮಾತಾಡುತ್ತಿರುವೆನೆಂದು ಚಿಕ್ಕಿಗೆ ಸ್ವಲ್ಪ ಭರವಸೆಯುಂಟಾಯಿತು. "ನಿನ್ನೆಯ ಮೋಟಾರಿನಲ್ಲಿ ಬಂದೆ, ಕಾಮಾಕ್ಷಿಯ ಅತ್ತೆಯ ತಂಗಿ ಗೋದುವಿನ ಮನೆಯಲ್ಲಿ ಒತ್ತಾಯಮಾಡಿದರೆಂದು ನಿನ್ನೆ ಅಲ್ಲಿ ನಿಂತು, ಈ ದಿನ ಬೆಳಿಗ್ಗೆ ಐದು ಘಂಟೆಗೆ ಇಲ್ಲಿ ಬಂದೆ!" ಎಂದಳು ಚಿಕ್ಕಿ.

"ಸೌಖ್ಯವೇ?" (ನಾನು.)

"ಎಂತಹ ನುಸಿ ಗೋದುವಿನ ಮನೆಯಲ್ಲಿ! ನಿನ್ನೆ ನನಗೆ ಐದಾರು ನುಸಿಗಳು ಕಚ್ಚಿ . . . ಸೂ . . . ಈಗಲೂ ಅಲ್ಲಲ್ಲಿ ಒಳಗೆ ಹೊಕ್ಕಿ. ಕುಳಿತಂತಾಗಿದೆ" ಎಂದಳು ಚಿಕ್ಕಿ!

ಭಗವಂತ! ಐದಾರು ನುಸಿ? ಈ ದಿನ ರಾತ್ರೆ ನಮ್ಮ ಮನೆಯಲ್ಲಿ ಚಿಕ್ಕಿಯ ಗತಿಯೇನು? "ತ್ಯಾಗರಾಗುಣ ಕೋಣ . . "ಎಂದು ಹಾಡುತಿದ್ದ ಈ "ಹಾಡುವ ಅದ್ಭುತ"ಕ್ಕೆ ಗುಣವಿಲ್ಲದ ನಮ್ಮ ಐದಾರು ಅಬ್ಜ ನುಸಿಗಳು ಕೊಲೆಮಾಡಿದರೆ ಮತ್ತೆ ನಮ್ಮ ವಿಾರೆಗೆ ಹಾಡುವ ಚಿಕ್ಕಿಗಳೆಲ್ಲಿಂದ?

"ನಮ್ಮ ಮನೆಯಲ್ಲೂ ಐದಾರು ನುಸಿಗಳಿವೆ" ಎಂದೆ.

"ಸುಳ್ಳೇಕೆ ಹೇಳುವಿರಿ?" ಎಂದಳು ವಿಾರೆ.

"ಈಗಿನ ಹುಡುಗರಿಗೆ ಸತ್ಯ ಕಲಿಸಿದವರಾರಂತೆ?" ಎಂದು ಚಿಕ್ಕಿ ಮೊದಲನೆ ಬಾಣಬಿಟ್ಟಳು.

"ನಮ್ಮ ಮೊದಲಿನವರೇ" ಎನ್ನುತ್ತಿದ್ದೆ. ಆದರೆ, ವಿಾರೆಯ ಚಿಕ್ಕಿಯನ್ನು ಪ್ರಥಮ ದರ್ಶನದಲ್ಲೆ ಅಪಮಾನಮಾಡುವುದೇ?

"ಬಂಧು—ಬಳಗ—ತಂದೆ—ತಾಯಿ—ಯಾರೂ ಈಗಿನ ಹುಡುಗರಿಗೆ ಇಲ್ಲ" ಎಂದಳು ಚಿಕ್ಕಿ.

ಇವರೆಲ್ಲ ಏಕೆ ಅಸ್ತಂಗತರಾದರೆಂದು ಆಶ್ಚರ್ಯಪಟ್ಟೆ.

"ಹಿರಿಯರಿಗೆ ಕುಚೇಷ್ಟೆಮಾಡುವುದು ಈಗಿನವರ ಸುಖದ ವೃತ್ತಿ" ಎಂದಳು ಚಿಕ್ಕಿ.

ಈಕೆ ನಿರುದ್ಯೋಗ ಖಾನೇಸುಮಾ[illegible] ಇಲಾಖೆಯಲ್ಲಿ ಕೆಲಸನೋಡಿಕೊಂಡಿದ್ದಳೇ ಎಂದೆಣಿಸಿದೆ.

"ದೇವರ ನಾಮವನ್ನು ಹಾ[illegible]ರೆ ಈಗಿನವರಿಗೆ ಕರ್ಕಶವಾಗುತ್ತದೆ; ಸಿನೆಮಾ ಹಾಡುಗಳನ್ನು ನರಿ ಕೂ[illegible]ಂತೆ ಹಾಡುತ್ತಾರೆ" ಎಂದಳು.

ನನಗೆ ಮೃಗದ—ಅದರಲ್ಲೂ ಚತುಷ್ಪಾದ ಪ್ರಾಣಿಗಳಲ್ಲಿ ಅತಿ ಹೇಡಿಯೆಂದು ಹೆಸರಾದ ಮೃಗದ—ಹೆಸರಿಡುತ್ತಲೇ ನನ್ನ ತಾಳ್ಮೆಯೆಲ್ಲ ಮುಗಿಯಿತು. ಚಿಕ್ಕಿಯ ಮಹಾಯೋದ್ಧರು ನನ್ನನ್ನು ಹಿಡಿಯಲು ಬರುವರೆಂಬ ಭಯವನ್ನೆಲ್ಲ ನೀಗಿ, ಆ ಕೊಠಡಿಯಿಂದ ಪ್ರಚಂಡ ರೀತಿಯಲ್ಲಿ ನಿಷ್ಕ್ರಮಣ ಮಾಡಿದೆ.

ನಾನು ಹಿಂದೆರಳುವಾಗ ಚಿಕ್ಕಿ ನಮ್ಮ ಅಡುಗೆ ಕೋಣೆಯಲ್ಲಿ ಒಲೆಯ ಬಳಿ ಕುಳಿತು "ಕಂಡು ಕಂಡು ನೀಯೆನ್ನ ಕೈಬಿಡುವರೇ ರಾಮಾ" ಎನ್ನುತಿದ್ದಳು. ವಿಾರೆ ಅಂತಃಪುರದಲ್ಲಿ ಕುಳಿತು "ಜ್ಞಾನಸಿಂಧು"ವನ್ನೋದುತಿದ್ದಳು.

ನಾನು ಮುಖವನ್ನುಜ್ಜುತ್ತ—"ಚಿಕ್ಕಿಯವರು 'ಕೈಬಿಡುವರೇ ಕೃಷ್ಣಾ' ಎನ್ನದೆ "ರಾಮಾ" ಎನ್ನುವರೇಕೆ?" ಎಂದು ಕೇಳಿದೆ.

"ಅವಳ ಗಂಡನ ಹೆಸರು ಕೃಷ್ಣ ಎಂದಾಗಿತ್ತು" ಎಂದಳು ವಿಾರೆ.

"ಅವಳ ಗಂಡನಿಗೆ ಯಾವ ಕಾಯಿಲೆಯಾಗಿ ತೀರಿಹೋದರು?" ಎಂದು ಕೇಳಿದೆ.

ವಿಾರೆ ತಲೆಯೆತ್ತಿ "ಏಕೆ?" ಎಂದಳು.

"ಅವರು ಗಾನಪ್ರಿಯರಾಗಿದ್ದರೋ ಎಂದು! ಕೆಲವರನ್ನು ಗಾಯನವೇ ಕೊಲ್ಲದೇ?"

"ಪಶುಗಳಿಗಿಂತಲೂ ಕೀಳಾದವರನ್ನು ಗಾಯನವು ಕೊಲ್ಲಬಹುದು."

"ಪಶುವಿಗಿಂತ ಕೀಳಾದ ಜೀವಿಯನ್ನು ಯಾಕೆ ಚಿಕ್ಕಿಗೆ ಲಗ್ನಮಾಡಿ ಕೊಟ್ಟರು?" ಎಂದು ಕೇಳಿದೆ.

ವಿಾರೆಗೆ ರೇಗಿತು. "ನೀವು ಚಿಕ್ಕಿಗೆ ಒತ್ತಾಯದಿಂದ ಅಪಮಾನಮಾಡುವುದಾದರೆ ನಾನೂ ಚಿಕ್ಕಿಯೂ ಇಲ್ಲಿಂದ ಹೋಗುವೆವು" ಎನ್ನುತ್ತ, ಚಿಕ್ಕಿಯು ಆಕೆಯ ಕುಟುಂಬದಲ್ಲೊಂದು ರತ್ನವೆಂದೂ, ಚಿಕ್ಕಿಗೆ ಮದುವೆಯಾದ ಏಳು ದಿನಗಳಲ್ಲೆ ಗಂಡನು ಆಕಸ್ಮಿತವಾಗಿ ಮೈಯೆಲ್ಲ ಕಪ್ಪೇರಿ ಕಾಲವಾದುದರಿಂದ ಚಿಕ್ಕಿಯು ಅಖಂಡ ವೈರಾಗ್ಯತಾಳಿ; ದೇವರ ಕೀರ್ತನೆಗಳನ್ನು ಕಲಿತು, ಮಾನವ ಜೀವನದಲ್ಲಿ ಸಾರವಿಲ್ಲವೆನ್ನುತ್ತ, ತೀರ್ಥಯಾತ್ರೆಗಳನ್ನು ಮಾಡುತ್ತಾ; ವರ್ಷವಿಡೀ ಬೇರೆ ಬೇರೆ ನಂಟರಲ್ಲಿ ಹೋಗಿ ಎರಡೆರಡು ತಿಂಗಳು ನಿಂತು;—ಎಲ್ಲ ಮನೆಗಳಲ್ಲಿ ಸುವ್ಯವಸ್ಥೆ ಸ್ಥಾಪಿಸುತ್ತಿರುವಳೆಂದೂ; ಆಕೆಗೆ ಸ್ವಾರ್ಥವಿಲ್ಲವೆಂದೂ; ತನ್ನವರ ಉನ್ನತಿಯೇ ಆಕೆಯ ಇಹದ ಕಾಂಕ್ಷೆಯೆಂದೂ; ಮೂರು ಫಲಾಹಾರ–ಒಂದೂಟಗಳೊಳಗೆ ಆಕೆಯ ದಿನದ ವ್ಯಯ ಮುಗಿಯುತ್ತಿದೆಯೆಂದೂ, ಜಿಲ್ಲೆಯ ಆರು ಮನೆತನಗಳಲ್ಲಿ ಚಿಕ್ಕಿಗಾಗಿ ವರ್ಷವೆಲ್ಲ ಬೇಡಿಕೆ(demand) ಇದೆಯೆಂದೂ; ಬಾಲಯೋಗಿನಿಯನ್ನು ತುಚ್ಛೀಕರಿಸುವ ಪುರುಷರು ಹೃತ್ಕೋಶದಲ್ಲಿ ಮೃದುಭಾವನೆಯು ದಿವಾಳಿಯಾದ ದುರ್ಭಾಗಿಗಳೆಂದೂ ಹೇಳಿ, ನಾನು ಅದನ್ನೆಲ್ಲ ಅಲ್ಲಗಳೆವ ಧೈರ್ಯ ಇದ್ದರೆ ಮುಂದೆಬರಬೇಕೆಂದು ಕಣ್ಣುಗಳಿಂದಲೇ ಆಹ್ವಾನಕೊಟ್ಟಳು.

"ನಾನು ಅಪಮಾನಮಾಡಿಲ್ಲ ವಿಾರಾ! ಕೆಲವು ಸತ್ಯಸಂಗತಿಗಳನ್ನು ತಿಳಕೊಳ್ಳುವ ಆಸೆಯಾಯಿತು, ಅಷ್ಟೆ. ಚಿಕ್ಕಿ ನನಗೆ ನರಿಯೆಂದಿದ್ದಾಳೆ. ಹಿರಿಯರಿಗೆ ದ್ರೋಹಮಾಡುವವನೆಂದಿದ್ದಾಳೆ; ನಾನೇನು ಮನೆಬಿಡುವೆನೆಂದಿರುವೆನೇ? ನಿಜವಾಗಿ ಚಿಕ್ಕಿಯನ್ನು ನೋಡಿದರೆ ನನಗೆ ವಿಾನಾಕ್ಷಿ ದೇವಸ್ಥಾನಕ್ಕೆ ಹೋದಂತೆ ಆಗುತ್ತದೆ. ಚಿಕ್ಕಿಯೊಬ್ಬಳನ್ನೇ ನೀನು ಒಲೆಯ ಬಳಿಯೇಕೆ ಬಿಟ್ಟಿರುವೆ?"

"ಆಕೆಗೆ ತಾನೇ ಅಡುಗೆ ಮಾಡಬೇಕು. ನಾನು ಮುಟ್ಟಿದರೆ ತಿನ್ನಲೊಲ್ಲಳು."

"ಅದೊಂದು ಸುಖ. ಆದರೆ, ಒಳ್ಳೆ ಪಕ್ವ ಮಾಡುವಳೇ?... ಅರರೆ, ಇದೇನು ನನ್ನ ಮಂಚ, ನಕ್ಷೆಗಳು ... ಇವೆಲ್ಲ ಎಲ್ಲಿ? ಈ ಹೊಸ ನಕ್ಷೆಗಳೇನು?" (ನನ್ನ ಕೋಣೆಯಿಂದ ಮಂಚ ಮಾಯವಾಗಿತ್ತು. ಒಳ್ಳೊಳ್ಳೆಯ ನಕ್ಷೆಗಳು ಮಾಯವಾಗಿ ಕೋದಂಡರಾಮ ... ತಿರುಪತಿ ದೇವರು ... ಬಂದು ಅಲ್ಲಿ ಕುಳಿತಿದ್ದರು.)

"ಚಿಕ್ಕಿ ಕೋಣೆಯಲ್ಲೆಲ್ಲ ಹೀಗಿರಬಾರದೆಂದಳು!" ಎಂದು ವಿವರಿಸಿದಳು ವಿಾರೆ.

ಕಂಗಾಲಾದೆ. ಚಿಕ್ಕೀ ಮಹಾತ್ಮ್ಯೆಗಾರಂಭವಾಯಿತೆಂದೆಣಿಸಿದೆ. ಚಿಕ್ಕಿಯೇ ನನಗೆ ಮೃತ್ಯುವಲ್ಲವಾದರೆ ನನ್ನನ್ನು ಕೊಲ್ಲುವವರು ಯಾರೂ ಇರರೆಂದೆಣಿಸಿದೆ. ವಿಾರೆ ಈ ಕುಟುಂಬದಲ್ಲಿ ಜನ್ಮತಾಳಿದುದಕ್ಕೆ ಮರುಗಿದೆ. ಚಿಕ್ಕಿಯನ್ನು ದಸ್ತಗಿರಿ ಮಾಡಿಸುವುದು ಸಾಧ್ಯವಿಲ್ಲ; ನುಸಿಗಳಿಗೆ ಒಯ್ಯಿರೀಕೆಯನ್ನು ಎಂದರೆ ಹೆದರದೆ ಇರಲಾರವು; ನಡುರಾತ್ರೆ ಭೂತ ಚೇಷ್ಟೆಮಾಡಿ ಹೆದರಿಸೋಣವೆಂದರೆ—ಕತ್ತಲಲ್ಲಿ ಚಿಕ್ಕಿಯ ಹಲ್ಲುಗಳು ಹೊಳೆದರೆ ಭೂತದ ಎಲ್ಲ ಚೇಷ್ಟೆಗಳಿಗೂ ವಿರಾಮ; ಕೊಂದರೆ ಈ ಕೊಡಲಿರಾಮನನ್ನು ಕೊಡಲಿ ಮತ್ತು ಜನಿವಾರ ಸಹಿತ ಫಾಸಿಗೇರಿಸುವರು; "ಹೋಗು!" ಎಂದು ಗಟ್ಟಿಯಾಗಿ ಕೂಗಿದರೆ "ವಿಾರೆಯ ಮನೆ; ನಿನಗೇನು ಮುಸುಡು!" ಎಂದಾಳು. "ಹೋಗಬೇಡ!" ಎಂದರೆ ಇಲ್ಲೆ ಶಾಶ್ವತವಾಗಿ ಇದ್ದು ನಂಜು ನುಡಿಗಳನ್ನಾಡ ಬೆಳೆದು, ಸಮಾಧಿಹೊಂದುವ ದಿನಗಳನ್ನು ದೂರವಿರಿಸಿಯಾಳು; ನಡು ರಾತ್ರೆ ಕೈಕಾಲು ಕಟ್ಟಿ ಕಾರ್ಗಳಕ್ಕೆ ಹೋಗುವ ದಾರಿಗೊಯ್ದು ಬಿಡುವೆನೆಂದರೆ ಚೀರಿ ಭೂಕಂಪವನ್ನುಂಟು ಮಾಡಿಯಾಳು; ನಾನೇ ಹೋದರೆ, ವಿಾರೆ ನನ್ನೊಂದಿಗೆ ಹೊರಡಲಾರಳು. ದೇವ, ನೀನು ಅನಾಥರಕ್ಷಕನಾದರೆ ನನ್ನನ್ನೇಕೆ ಬಿಡುವೆ? ಎಂದೆನಿಸಿತು.

ಫಲಾಹಾರಕ್ಕಾಯಿತು ಎಂದಳು ಚಿಕ್ಕಿ. ಸ್ವರವೇನೂ ಸುಧಾರಿಸಿರಲಿಲ್ಲ. "ವಿಾರಾ, ಫಲಾಹಾರ ಮಾಡಬೇಕೆ?" ಎಂದೆ.

"ಹೆದರ ಬೇಡಿ, ಬನ್ನಿ!" ಎನ್ನುತ್ತ ವಿಾರೆ ನನಗೆ ಉತ್ತೇಜನ ಕೊಟ್ಟಳು. ಅಡುಗೆ ಕೋಣೆಗೆ ಹೋಗಿ ಕುಳಿತೆ. ವಿಾರೆ ನನ್ನ ಬಳಿಯೆ ಕುಳಿತಳು.


ಬುದ್ಧನಿಗೆ ಏಳುವರ್ಷಗಳ ಮಹಾ ತಪಸ್ಸಿನಿಂದ ಅಹಿಂಸೆಯೇ ಮಾನವ ಸುಖಜೀವನದ ಮೂಲವೆಂದು ಹೊಳೆದಂತೆ–ನನಗೆ ಚಿಕ್ಕಿಯ ಏಳು ನಿಮಿಷಗಳ ತಾಪದಿಂದೊಂದು ಆಲೋಚನೆಯಾಯಿತು. "ಚಿಕ್ಕಿ" ಎಂದೆ.

ಏನದ್ಭುತ! ಚಿಕ್ಕಿಯ ಮುಖವು ಕಾಡಿನಲ್ಲಿ ಬೆಳದಿಂಗಳು ಬಿದ್ದಂತೆ ಬೆಳಗಿತು! "ಏನು ಮಗನೇ" ಎಂದಳು.

ಪುನಃ ಎದೆಯೊಳಗೆ ರೈಲುಬಂಡಿಯನ್ನು ಬಿಟ್ಟಂತಾಯಿತು. ಪುನಃ ಅದು ರೈಲಲ್ಲ, ಸೈಕಲೇ ಆಗಿರಬೇಕು ಎಂದು ಸಮಾಧಾನ ಮಾಡಿಕೊಂಡು,– "ಚಿಕ್ಕಿ, ಈ ದೋಸೆಯ ಚಟ್ನಿ ಬಹಳ ಚೆನ್ನಾಗಿದೆ"ಎಂದೆ.



ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಯು. ಶ್ರೀನಿವಾಸ ಮಲ್ಯರು.



ಮದರಾಸಿನ ಮುಖ್ಯಮಂತ್ರಿ ನಾಮದಾರ ಶ್ರೀ ಸಿ. ರಾಜಗೋಪಾಲಾಚಾರ್ಯರು